ವಿಶ್ವವಾಣಿ
ವಿಶ್ವಾಸವೇ ವಿಶ್ವ


ಚಿತ್ರ: ಸುಧಾಕರ ದೇವರಾಜ್

ಬೋಪಣ್ಣಗೆ ಸನ್ಮಾನ

ಭಾರತ ಟೆನಿಸ್ ಕಂಡ ಖ್ಯಾತನಾಮರಲ್ಲಿ ಒಬ್ಬರಾಗಿರುವ, ಕರ್ನಾಟಕದ ರೋಹನ್ ಬೋಪಣ್ಣ ಅವರಿಗೆ ಶನಿವಾರ ಬೆಂಗಳೂರಿನ ಕೆಎಸ್‌ಎಲ್‌ಟಿಎ ಆವರಣದಲ್ಲಿ ಸನ್ಮಾನಿಸಲಾಯಿತು. ಟೆನಿಸ್‌ಗೆ ನಿವೃತ್ತಿ ಹೇಳಿರುವ ಹಿನ್ನೆಲೆಯಲ್ಲಿ 'ಬೋಪಣ್ಣ ಪರಂಪರೆ' ಕಾರ್ಯಕ್ರಮದ ಮೂಲಕ ರಾಜ್ಯ ಟೆನಿಸ್ ಸಂಸ್ಥೆಯ ಸದಸ್ಯರು ಗೌರವ ಸಲ್ಲಿಸಿದರು.

ಜ.5ರಿಂದ ನರೇಗಾ ಬಚಾವೋ: ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧಾರ
ಯೋಜನೆಗೆ ಕೇಂದ್ರದಿಂದ ಅನುದಾನ ಕಡಿತ: ಖರ್ಗೆ, ರಾಹುಲ್ ಕೆಂಡ

ಮನರೇಗಾ ಪರ ಕೈ ಸಮರ

ದೆಹಲಿ: ದೆಹಲಿಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳಲಾಯಿತು. ಯುಪಿಎ ಅವಧಿಯಲ್ಲಿ ಜಾರಿಯಾಗಿದ್ದ ಮಹಾತ್ಮ ಗಾಂಧಿ ನರೇಗಾ (ಗ್ರಾಮೀಣ ಉದ್ಯೋಗ ಖಾತ್ರಿ) ಯೋಜನೆಯನ್ನು ರದ್ದು ಮಾಡಿ, ಅದರ ಬದಲು ಜಿ ರಾಮ್ ಜಿಯನ್ನು ಜಾರಿ ಮಾಡಿದ್ದರ ವಿರುದ್ಧ ಜ.5ರಿಂದ ರಾಷ್ಟ್ರಾದ್ಯಂತ ನರೇಗಾ ಬಚಾವೋ ಅಭಿಯಾನ ನಡೆಸಲು ಕಾಂಗ್ರೆಸ್ ಸಿದ್ಧವಾಗಿದೆ. ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಪತ್ರಿಕಾಗೋಷ್ಠಿ ನಡೆಸಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು.

ಖರ್ಗೆ ಮಾತನಾಡಿ, ಜನವರಿ 5ರಿಂದ 'ನರೇಗಾ ಬಚಾವೋ ಅಭಿಯಾನ' ಪ್ರಾರಂಭಿಸುವುದಾಗಿ ಘೋಷಿಸಿದರು. ಯುಪಿಎ ಸರಕಾರದ ಅವಧಿಯ ಈ ಐತಿಹಾಸಿಕ ಯೋಜನೆಯನ್ನು ರದ್ದುಗೊಳಿಸಿ, ಅದರ ಹೆಸರಿನಿಂದ ಮಹಾತ್ಮ ಗಾಂಧಿಯ ಹೆಸರನ್ನು ತೆಗೆದುಹಾಕಿರುವುದು ಬಡವರ ಹಕ್ಕುಗಳ ಮೇಲಿನ ದಾಳಿ. ನರೇಗಾ ಬದಲಿಗೆ ತರಲಾದ 'ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜಗಾರ್ ಆ್ಯಂಡ್ ಆಜೀವಿಕಾ ಮಿಷನ್ (ಗ್ರಾಮೀಣ್) ಕಾಯ್ದೆ' (ಜಿ ರಾಮ್ ಜಿ) ಬಡವರನ್ನು ಹತ್ತಿಕ್ಕುವ ಉದ್ದೇಶ ಹೊಂದಿದೆ ಎಂದು ಟೀಕಿಸಿದರು. ಹೊಸ ಕಾಯ್ದೆಯಡಿ ಯೋಜನೆಗೆ ಕೇಂದ್ರ ನೀಡುವ ಹಣ ಶೇ.60, ರಾಜ್ಯಗಳು ಶೇ.40 ಆಗಲಿದೆ (ಹಿಂದೆ ಕೇಂದ್ರ ಶೇ.90, ರಾಜ್ಯ ಶೇ.10). ಇದು ರಾಜ್ಯ ಸರಕಾರಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಹೇರಲಿದೆ ಎಂದು ಖರ್ಗೆ ಎಚ್ಚರಿಸಿದರು.

ರಾಹುಲ್ ಗಾಂಧಿ ಮಾತನಾಡಿ, ನರೇಂದ್ರ ಮೋದಿ ತಮ್ಮ ಸಂಪುಟ ಸಹೋದ್ಯೋಗಿಗಳ ಅಭಿಪ್ರಾಯವನ್ನೂ ಪಡೆಯದೇ ಏಕಪಕ್ಷೀಯವಾಗಿ ನರೇಗಾವನ್ನು ರದ್ದು ಮಾಡಿದ್ದಾರೆ. ನೋಟು ಅಮಾನ್ಯದ ವೇಳೆ ಮಾಡಿದಂತೆಯೇ ಈಗಲೂ ಏಕಪಕ್ಷೀಯವಾಗಿ ವರ್ತಿಸಿದ್ದಾರೆ. ಮನರೇಗಾ ಕೇವಲ ಉದ್ಯೋಗ ನೀಡುವ ಯೋಜನೆಯಲ್ಲ. → 4

ಸಿದ್ದು ಸೇರಿ 3 ಸಿಎಂ ಭಾಗಿ

ಸಭೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಹಾಗೂ ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು ಭಾಗವಹಿಸಿದ್ದರು. ಹಾಗೆಯೇ ರಾಜ್ಯ ಕಾಂಗ್ರೆಸ್ ಅಧ್ಯಕ್ಷರು ಪಾಲ್ಗೊಂಡಿದ್ದರು. ಕಾಂಗ್ರೆಸ್‌ನ ಹಿರಿಯ ನಾಯಕಿ ಸೋನಿಯಾ ಗಾಂಧಿ ಉಪಸ್ಥಿತರಿದ್ದರು.

ಪಕ್ಷದಿಂದ ದೂರವಿದ್ದ ತರೂರ್ ಹಾಜರ್

ಇತ್ತೀಚೆಗೆ ಕಾಂಗ್ರೆಸ್‌ನ ಮೂರು ಪ್ರಮುಖ ಸಭೆಗಳಲ್ಲಿ ಕಾಣಿಸಿಕೊಂಡಿರದ ಪ್ರಮುಖ ನಾಯಕ ಶಶಿ ತರೂರ್ ಸಭೆಯಲ್ಲಿ ಹಾಜರಿದ್ದರು. ದೆಹಲಿಯಲ್ಲಿ ಕಾಂಗ್ರೆಸ್ ನಡೆಸಿದ್ದ ಮತಗಳವು ವಿರುದ್ಧ ಬೃಹತ್ ರ‍್ಯಾಲಿಯಲ್ಲೂ ಇರಲಿಲ್ಲ. ಆದರೆ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾರತಕ್ಕೆ ಬಂದಿದ್ದಾಗ ಮೋದಿ ಜೊತೆಗೆ ರಾಷ್ಟ್ರಪತಿ ಭವನದಲ್ಲಿ ಭೋಜನಕೂಟದಲ್ಲಿ ಪಾಲ್ಗೊಂಡಿದ್ದರು. ಮೋದಿಯನ್ನೂ ಹೊಗಳಿದ್ದು ಕಾಂಗ್ರೆಸ್ ನಾಯಕರ ಆಕ್ರೋಶಕ್ಕೆ ಕಾರಣವಾಗಿತ್ತು.

ಯುಪಿಎ ಸರಕಾರದ ಅವಧಿಯ ಈ ಐತಿಹಾಸಿಕ ಯೋಜನೆಯನ್ನು ರದ್ದುಗೊಳಿಸಿ, ಅದರ ಹೆಸರಿನಿಂದ ಮಹಾತ್ಮ ಗಾಂಧಿಯ ಹೆಸರನ್ನು ತೆಗೆದು ಹಾಕಿರುವುದು ಬಡವರ ಹಕ್ಕುಗಳ ಮೇಲಿನ ದಾಳಿ. ರಾಜ್ಯಗಳ ಮೇಲಿನ ಆರ್ಥಿಕ ಹೊರೆ ಹೆಚ್ಚಿಸುತ್ತದೆ.
- ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ನರೇಂದ್ರ ಮೋದಿ ತಮ್ಮ ಸಂಪುಟ ಸಹೋದ್ಯೋಗಿಗಳ ಅಭಿಪ್ರಾಯವನ್ನೂ ಪಡೆಯದೇ ಏಕಪಕ್ಷೀಯವಾಗಿ ನರೇಗಾವನ್ನು ರದ್ದು ಮಾಡಿದ್ದಾರೆ. ನೋಟು ಅಮಾನ್ಯದ ವೇಳೆ ಮಾಡಿದಂತೆಯೇ ಈಗಲೂ ಏಕಪಕ್ಷೀಯವಾಗಿ ವರ್ತಿಸಿದ್ದಾರೆ.
- ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷ ನಾಯಕ

ಕೇಂದ್ರ ಸರಕಾರ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ವಿಬಿ ಜಿ ರಾಮ್ ಜಿ ಎಂದು ಬದಲಾಯಿಸಿದೆ. ಇದನ್ನು ವಿರೋಧಿಸಿ ಜ.5ರಿಂದ ದೇಶಾದ್ಯಂತ ಮನರೇಗಾ ಬಚಾವೋ ಆಂದೋಲನ ಕೈಗೊಳ್ಳುತ್ತಿದ್ದೇವೆ.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಹುಲ್ ವಿದೇಶದಿಂದ ಮರಳಿದ ಬಳಿಕ ದಿಲ್ಲಿಗೆ ಬನ್ನಿ
ವೇಣುಗೋಪಾಲ್ ಮೂಲಕ ಸಿದ್ದು, ಡಿಕೆಗೆ ಸೂಚನೆ

ಜ.7ರ ಬಳಿಕ ರಾಜ್ಯ ಕಾಂಗ್ರೆಸ್ ನಾಯಕತ್ವ ಬಿಕ್ಕಟ್ಟು ಪರಿಹಾರ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ನಾಯಕತ್ವದಲ್ಲಿನ ಗೊಂದಲಕ್ಕೆ ಸಂಬಂಧಿಸಿದಂತೆ ಕೊನೆಗೂ ಮೌನ ಮುರಿಯುವ ಮುನ್ಸೂಚನೆ ನೀಡಿರುವ ಪಕ್ಷದ ಹೈಕಮಾಂಡ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಳ್ಳಲು ಮುಂದಾಗಿದೆ. ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದಂತೆ ಕಳೆದ ಎರಡೂವರೆ ತಿಂಗಳಿನಿಂದ ರಾಜ್ಯದಲ್ಲಿ ನಡೆಯುತ್ತಿರುವ ಚರ್ಚೆಗೆ ತಾರ್ಕಿಕ ಅಂತ್ಯ ಹಾಡಲು ಮುಂದಾಗಿರುವ ಪಕ್ಷದ ಹೈಕಮಾಂಡ್, ಜ.7ರ ಬಳಿಕ ಇಬ್ಬರನ್ನೂ ದೆಹಲಿಗೆ ಕರೆಸಿಕೊಂಡು ಸಮಸ್ಯೆ ಇತ್ಯರ್ಥಪಡಿಸಲು ತೀರ್ಮಾನಿಸಿದ್ದಾರೆ. ಈ ಸಂಬಂಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕರೆ ಮಾಡಿ ವಿಷಯ ಮುಟ್ಟಿಸಿದ್ದಾರೆ ಎನ್ನಲಾಗಿದೆ. ಸೋನಿಯಾ, ರಾಹುಲ್ ಸೇರಿದಂತೆ ಇಡೀ ಗಾಂಧಿ ಕುಟುಂಬ ಹೊಸ ವರ್ಷದ ಹಿನ್ನೆಲೆಯಲ್ಲಿ ವಿದೇಶ ಪ್ರವಾಸ ಕೈಗೊಳ್ಳಲಿದೆ. → 4

ಡಿಕೆಶಿ ಸಂದೇಶ ತಿಳಿಸಿದ ಖರ್ಗೆ?

ಖರ್ಗೆ ದೆಹಲಿಗೆ ತೆರಳುವ ಮೊದಲು ಶಿವಕುಮಾರ್ ಖರ್ಗೆಯೊಂದಿಗೆ ಚರ್ಚಿಸಿದ್ದರು. ಈ ಭೇಟಿಯ ವೇಳೆ ಹೈಕಮಾಂಡ್ ನಾಯಕರು 'ಸೂತ್ರ'ದ ಚರ್ಚೆ ಹಾಗೂ ಗೊಂದಲ ಪರಿಹರಿಸುವುದಕ್ಕೆ ಕ್ರಮವಹಿಸಬೇಕು ಎನ್ನುವ ಮನವಿಯನ್ನು ಡಿಕೆ ಮಾಡಿದ್ದರು. ಇದೇ ವಿಷಯವನ್ನು ಕಾರ್ಯಕಾರಿ ಸಭೆ ಆರಂಭಕ್ಕೂ ಮೊದಲು ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರೊಂದಿಗೆ ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ.

ಸಂಪುಟ ಪುನಾರಚನೆ ಪ್ರಸ್ತಾಪಿಸಿದ ಸಿಎಂ

ಈ ನಡುವೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ಚರ್ಚಿಸಲು ವಿಷಯ ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ. ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿದ ಸಿದ್ದರಾಮಯ್ಯ ಅವರು, ಅನೌಪಚಾರಿಕವಾಗಿ ವಿಷಯ ಪ್ರಸ್ತಾಪಿಸಿದ್ದಾರೆ. ಆದರೆ ಗಾಂಧಿ ಕುಟುಂಬ ವಿದೇಶ ಪ್ರವಾಸ ಕೈಗೊಳ್ಳುತ್ತಿರುವುದರಿಂದ ಈ ವಿಷಯದಲ್ಲಿ ಯಾವುದೇ ಪ್ರಗತಿ ಸಿಗುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ಸೊಂಪಾದ ಪುಟಗಳು

52 ವರ್ಷಗಳ ನಂತರವೂ ನೆನಪಾಗುವ, ಪ್ರಸ್ತಾಪವಾಗುವ, ಪ್ರಸ್ತುತವಾಗುವ ಆ ಮಾತು!
ಇದೇ ಅಂತರಂಗ ಸುದ್ದಿ – ವಿಶ್ವೇಶ್ವರ ಭಟ್ 6

ಪರೋಪಕಾರಿ ಪುಣ್ಯವಂತೆಗೆ ಪಿಎಚ್‌ಡಿ ಪದವಿ ಪುರಸ್ಕಾರ
ತಿಳಿರು ತೋರಣ – ಶ್ರೀವತ್ಸ ಜೋಶಿ 6

ದಾರಿದೀಪೋಕ್ತಿ

ವ್ಯಾವಹಾರಿಕ ಚತುರತೆ ಎಂದರೆ ಕೇವಲ ಲಾಭ ಗಳಿಸುವುದಲ್ಲ. ಬದಲಿಗೆ ಅನಿವಾರ್ಯತೆಗಳ ನಡುವೆ ಅವಕಾಶಗಳನ್ನು ಹುಡುಕುವ ಮತ್ತು ಸವಾಲುಗಳನ್ನು ಯಶಸ್ಸಿನ ಮೆಟ್ಟಿಲುಗಳನ್ನಾಗಿ ಬದಲಿಸುವ ಕಲೆ. ಸಂಪನ್ಮೂಲಗಳ ಕೊರತೆಯಿದ್ದಾಗ ಕೊರಗುವ ಬದಲು, ಲಭ್ಯವಿರುವ ಶಕ್ತಿಯನ್ನೇ ಬಂಡವಾಳವಾಗಿಸಿಕೊಂಡು ಸೃಜನಶೀಲವಾಗಿ ಯೋಚಿಸುವವನೇ ನಿಜವಾದ ಚತುರ.

ವಕ್ರತುಂಡೋಕ್ತಿ



ಒಂಟಿಯಾಗಿದ್ದಾಗ ಇಲ್ಲದ ಸಮಸ್ಯೆಯನ್ನು ಇಬ್ಬರು ವ್ಯಕ್ತಿಗಳು ಸೇರಿ ಸೃಷ್ಟಿಸುವುದಕ್ಕೆ ಅಥವಾ ಪರಿಹರಿಸುವುದಕ್ಕೆ ದಾಂಪತ್ಯ ಎನ್ನಬಹುದು.

ಜ.20ರೊಳಗೆ ನಬಿನ್ ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷ?

ದೆಹಲಿ: ಇತ್ತೀಚೆಗಷ್ಟೇ ಬಿಜೆಪಿ ಕಾರ್ಯಾಧ್ಯಕ್ಷರಾಗಿ ಆಯ್ಕೆಯಾಗಿದ್ದ ಬಿಹಾರದ 45 ವರ್ಷದ ನಿತಿನ್ ನಬಿನ್ ಮುಂದಿನ ಅಧ್ಯಕ್ಷರಾಗಿ ಆಯ್ಕೆಯಾಗುವ ನಿರೀಕ್ಷೆಯಿದೆ. ನಡ್ಡಾ ಜಾಗದಲ್ಲಿ ಪಕ್ಷದ ನೂತನ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಗೆ ಜ.15ರ ನಂತರ ದಿಲ್ಲಿಯಲ್ಲಿ ಸಭೆ ಸೇರುವ ಸಾಧ್ಯತೆಯಿದ್ದು, ಜ.20ರೊಳಗೆ ನಬಿನ್ ಆಯ್ಕೆ ಆಗಬಹುದು.

ಹಿರಿಯ ಲೇಖಕಿ ಸರಿತಾ ಜ್ಞಾನಾನಂದ ವಿಧಿವಶ

ಬೆಂಗಳೂರು: ಹಿರಿಯ ಲೇಖಕಿ, ಖ್ಯಾತ ಅನುವಾದಕಿ, ಕವಯಿತ್ರಿ ಸರಿತಾ ಜ್ಞಾನಾನಂದ ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ. ಬೆಂಗಳೂರಿನ ಆರ್.ಆರ್.ನಗರದಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಅವರಿಗೆ 82 ವರ್ಷ ವಯಸ್ಸಾಗಿತ್ತು. ಸರಿತಾ ವಿವಿಧ ಭಾಷೆಗಳ ಕಥೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡುತ್ತಿದ್ದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಮನೆಯಲ್ಲಿ ಪುರುಷರು ಕಸ ಗುಡಿಸುವುದರಿಂದ ಮನೆಯವರಿಗೆ ಅಪಾರ ಲಾಭ – ಜ್ಯೋತಿಷಿ



ಬುರುಡೆ ಪ್ರಕರಣ: ವಿಚಾರಣೆಗೆ ಸತತ ಗೈರು

ತಿಮರೋಡಿ ಬಂಧನಕ್ಕೆ ವಾರಂಟ್

ಬೆಳ್ತಂಗಡಿ: ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಸ್ಥಳೀಯ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆಗೆ ಸತತವಾಗಿ ಗೈರುಹಾಜರಾದ ಹಿನ್ನೆಲೆಯಲ್ಲಿ, ಆರೋಪಿ ಮಹೇಶ್ ಶೆಟ್ಟಿ ವಿರುದ್ಧ ನ್ಯಾಯಾಲಯವು ಬಂಧನ ವಾರಂಟ್ ಜಾರಿಗೊಳಿಸಿ ಆದೇಶಿಸಿದೆ. ಬೆಳ್ತಂಗಡಿಯ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಕಿಶೋರ್ ಕುಮಾರ್ ಮಹೇಶ್ ವಿರುದ್ಧ ದೂರು ದಾಖಲಿಸಿದ್ದರು. ಇತ್ತೀಚೆಗೆ ನಡೆದ ವಿಚಾರಣೆಯ ಸಂದರ್ಭದಲ್ಲಿ ಮಹೇಶ್ ನ್ಯಾಯಾಲಯಕ್ಕೆ ಹಾಜರಿರಲಿಲ್ಲ. ಈ ವೇಳೆ ಅವರ ಪರ ವಕೀಲರು ಹಾಜರಾತಿಯಿಂದ ವಿನಾಯಿತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶರು ತಿರಸ್ಕರಿಸಿದ್ದಾರೆ. ಗೈರುಹಾಜರಿಯನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಲಯವು, ಆರೋಪಿಯನ್ನು ಬಂಧಿಸಿ ಹಾಜರುಪಡಿಸುವಂತೆ ತಿಳಿಸಿದೆ.

ಮಂಗಳೂರು ಕಂಬಳ ಆರಂಭ

ತುಳುನಾಡಿನ 9ನೇ ವರ್ಷದ ಮಂಗಳೂರು ಕಂಬಳಕ್ಕೆ ಬಂಗ್ರಕೂಳೂರಿನ ಗೋಲ್ಡ್ ಫಿಂಚ್ ಸಿಟಿಯಲ್ಲಿ ಶನಿವಾರ ಅದ್ದೂರಿಯಾಗಿ ಚಾಲನೆ ನೀಡಲಾಗಿದೆ. ಸಂಸದ ಮತ್ತು ಕಂಬಳ ಸಮಿತಿ ಅಧ್ಯಕ್ಷ ಕ್ಯಾಪ್ಟನ್ ಬ್ರಿಜೇಶ್ ಚೌಟ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಕಂಬಳ ಉದ್ಘಾಟನೆಗೊಂಡಿದೆ.

ಮೈಸೂರು: ಹೀಲಿಯಂ ಸಿಲಿಂಡರ್‌ಗೆ ಹೈಡ್ರೋಜನ್ ಬಳಕೆ
ಹೀಲಿಯಂ ದುಬಾರಿ, ಹೈಡ್ರೋಜನ್ ಅಗ್ಗ: ಎಡಿಜಿಪಿ ಸುಳಿವು

ಸ್ಫೋಟಕ್ಕೆ ಹೈಡ್ರೋಜನ್ ಕಾರಣ?

ಮೈಸೂರು: ಮೈಸೂರು ಅರಮನೆ ಎದುರು ಇತ್ತೀಚೆಗೆ ಸಂಭವಿಸಿದ ಸ್ಫೋಟಕ್ಕೆ ಹೈಡ್ರೋಜನ್ ಬಳಕೆ ಕಾರಣವಿರಬಹುದು ಎನ್ನಲಾಗಿದೆ. ಬಲೂನಿಗೆ ಅನಿಲ ತುಂಬುವ ಸಿಲಿಂಡರ್‌ಗೆ ಹೀಲಿಯಂ ಅನಿಲಕ್ಕೆ ಬದಲಾಗಿ ಹೈಡ್ರೋಜನ್ ಅನಿಲ ಬಳಸಿರುವುದರಿಂದ ಸ್ಫೋಟಗೊಂಡಿದೆ ಎಂದು ರಾಜ್ಯದ ಕಾನೂನು-ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ತಿಳಿಸಿದ್ದಾರೆ.



ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಾಥಮಿಕ ತನಿಖೆಯಿಂದ ಈ ಅಂಶ ಕಂಡುಬಂದಿದೆ. ಹೀಲಿಯಂ ಅನಿಲದ ಬೆಲೆ ದುಬಾರಿ. ಹಾಗಾಗಿ ಕಡಿಮೆ ಬೆಲೆಯ ಹೈಡ್ರೋಜನ್ ಅನಿಲ ಬಳಸಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಬಲೂನ್‌ಗೆ ಗ್ಯಾಸ್ ತುಂಬಲು ಹೆಚ್ಚು ಒತ್ತಡ ಹಾಕಿದ್ದರಿಂದ ಸ್ಫೋಟಗೊಂಡು ದುರಂತ ಸಂಭವಿಸಿರಬಹುದು ಎಂದಿದ್ದಾರೆ.

ಸ್ಫೋಟದ ರಭಸಕ್ಕೆ ಸಿಲಿಂಡರ್ ಒಡೆದುಕೊಂಡು ಚೂರು ಚೂರುಗಳಾಗಿ ಸಿಡಿದಿರುವುದರಿಂದ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸ್ಫೋಟದಿಂದಾಗಿ ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟ ಬಲೂನ್ ಮಾರುವ ಸಲೀಂ ಬಗ್ಗೆಯೂ ಸಹ ಹೆಚ್ಚಿನ ಮಾಹಿತಿಗಳನ್ನು ಕಲೆಹಾಕುತ್ತಿದ್ದೇವೆ ಎಂದಿದ್ದಾರೆ. ಸ್ಫೋಟದ ಬೆನ್ನಲ್ಲೇ ಹಲವು ಆಯಾಮಗಳಲ್ಲಿ ತನಿಖೆ ನಡೆಯುತ್ತಿದೆ. → 4

ಮೈಸೂರು ಅರಮನೆ ಬಳಿ ಬಲೂನಿಗೆ ಹೀಲಿಯಂ ಅನಿಲ ತುಂಬುವ ವೇಳೆ ಸಿಲಿಂಡರ್ ಸ್ಫೋಟಗೊಂಡಿದೆ. ಈ ಘಟನೆಯ ಕುರಿತು ಎಲ್ಲಾ ಆಯಾಮಗಳಲ್ಲಿ ಮೈಸೂರು ಪೊಲೀಸರು ತನಿಖೆ ಮಾಡುತ್ತಿದ್ದಾರೆ.
-ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತೆ

ತಂಗಿಯ ಸಾವಿನ ಸುದ್ದಿ ಕೇಳಿ ಅಣ್ಣ ಕೂಡ ನಿಧನ

ಮೈಸೂರಿನ ಅಂಬಾವಿಲಾಸ ಅರಮನೆಯ ಹೆಬ್ಬಾಗಿಲು ಜಯಮಾರ್ತಾಂಡ ದ್ವಾರದ ಬಳಿ ಗುರುವಾರ ಹೀಲಿಯಂ ತುಂಬಿದ ಸಿಲಿಂಡರ್ ಸ್ಫೋಟದ ನಂತರ ಸಾವಿನ ಸಂಖ್ಯೆ 4ಕ್ಕೇರಿದೆ. 3 ಸಾವುಗಳು ಸ್ಫೋಟದಿಂದಲೇ ಸಂಭವಿಸಿದ್ದರೆ, ಇನ್ನೊಂದು ಸಾವು ಪ್ರೀತಿಯ ತಂಗಿಯ ಸಾವಿನ ಸುದ್ದಿ ಕೇಳಿ ಸಂಭವಿಸಿದೆ ಎನ್ನಲಾಗಿದೆ. ಹೀಲಿಯಂ ಸಿಲಿಂಡರ್ ಸ್ಫೋಟ ದುರಂತದಲ್ಲಿ ಗಂಭೀರವಾಗಿ ಗಾಯಗೊಂಡು ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಮಂಜುಳಾ ಮೃತಪಟ್ಟಿದ್ದರು. ಇದರಿಂದ ಆಘಾತಕ್ಕೊಳಗಾದ ಅಣ್ಣ ಪರಮೇಶ್ವರ್ (60) ಶನಿವಾರ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಪರಮೇಶ್ವರ್ ನಂಜನಗೂಡಿನ ಚಾಮಲಾಪುರದ ನಿವಾಸಿಗಳಾಗಿದ್ದಾರೆ.

ಲಾಡ್ಜ್‌ಗಳ ಮೇಲೆ ನಿಗಾ

ಅರಮನೆ ಮುಂಭಾಗ ಸಂಭವಿಸಿದ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣ ಬೆನ್ನಲ್ಲೆ ಮೈಸೂರಿನ ಎಲ್ಲಾ ಲಾಡ್ಜ್‌ಗಳ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದು, ಹೊರಗಡೆಯಿಂದ ಬಂದಿರುವ ವ್ಯಕ್ತಿಗಳ ಮಾಹಿತಿ ಪಡೆದು ರೂಮ್ ಕೊಡುವಂತೆ ಲಾಡ್ಜ್ ಮಾಲೀಕರಿಗೆ ಸೂಚನೆ ನೀಡಿದ್ದಾರೆ. ಆಧಾರ್ ಕಾರ್ಡ್ ಇಲ್ಲದೆ ರೂಮ್ ಕೊಡುವ ಲಾಡ್ಜ್‌ಗಳ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

ಮೈತ್ರಿ ವರಿಷ್ಠರ ನಿರ್ಧಾರ: ಬಿವೈವಿ

ಬೆಂಗಳೂರು: ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೈತ್ರಿಯಿಲ್ಲ ಎಂದು ಜೆಡಿಎಸ್ ಬಹಿರಂಗ ಹೇಳಿಕೆ ನೀಡಿದ್ದರೂ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸ್ಥಳೀಯ ಸಂಸ್ಥೆ ಚುನಾವಣೆಯ ಮೈತ್ರಿಗೆ ಸಂಬಂಧಿಸಿದಂತೆ ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದಿದ್ದಾರೆ. ಈ ಮೂಲಕ ಮೈತ್ರಿಯ ವಿಷಯವನ್ನು ವರಿಷ್ಠರ ಅಂಗಳದಲ್ಲಿಯೇ ಇತ್ಯರ್ಥಪಡಿಸಿಕೊಳ್ಳಲು ತೀರ್ಮಾನಿಸಿದ್ದಾರೆ. ಅಂತಿಮವಾಗಿ ಬಿಜೆಪಿ ವರಿಷ್ಠರು ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಕುಮಾರಸ್ವಾಮಿಯವರ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ. ಆ ತೀರ್ಮಾನಕ್ಕೆ ನಾವು ಬದ್ಧರಾಗಿರುತ್ತೇವೆ ಎಂದರು.

ಇಂದು ಮ್ಯಾನ್ಮಾರ್ ಚುನಾವಣೆ

ಬ್ಯಾಂಕಾಕ್: ಮ್ಯಾನ್ಮಾರ್‌ನಲ್ಲಿ ಐದು ವರ್ಷಗಳ ಬಳಿಕ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು, ಮೊದಲ ಹಂತದ ಚುನಾವಣೆಯು ಡಿಸೆಂಬರ್ 28ರಂದು ನಡೆಯಲಿದೆ. ಸೇನೆಯು ಈ ಚುನಾವಣೆಯನ್ನು ಪ್ರಜಾಪ್ರಭುತ್ವಕ್ಕೆ ಮರಳುವಿಕೆಯ ಪ್ರಕ್ರಿಯೆ ಎಂದು ವರ್ಣಿಸಿದೆ. ದೇಶದ ವಿವಿಧ ಭಾಗಗಳಲ್ಲಿ ಮೂರು ಹಂತಗಳಲ್ಲಿ ಮತದಾನ ನಡೆಯಲಿದ್ದು, ಎರಡನೇ ಹಂತ ಜನವರಿ 11ರಂದು ಮತ್ತು ಮೂರನೇ ಹಂತ ಜನವರಿ 25ರಂದು ನಡೆಯಲಿದೆ. 2021ರಲ್ಲಿ ಆಂಗ್ ಸಾನ್ ಸೂಕಿ ನೇತೃತ್ವದ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ ಸೇನೆಯು ಅಧಿಕಾರ ವಹಿಸಿಕೊಂಡಿತ್ತು.

ಹುಲಿ ದಾಳಿ: 45 ಲಕ್ಷ ಪರಿಹಾರ

ಚಾಮರಾಜನಗರ: ಗಸ್ತು ತಿರುಗುತ್ತಿದ್ದ ವೇಳೆ ಹುಲಿ ದಾಳಿ ನಡೆಸಿ ಅರಣ್ಯ ಇಲಾಖೆ ಸಿಬ್ಬಂದಿಯನ್ನು (ವಾಚರ್) ಕೊಂದು ಹಾಕಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮರಳಳ್ಳ ಕ್ಯಾಂಪ್ ಬಳಿ ಶನಿವಾರ ಮಧ್ಯಾಹ್ನ ನಡೆದಿದೆ. ಕಸುವಿನಹಳ್ಳಿಯ ಸಣ್ಣಹೈದ (55) ಹುಲಿ ದಾಳಿಯಿಂದ ಮೃತಪಟ್ಟ ಅರಣ್ಯ ಸಿಬ್ಬಂದಿ. ಈತನ ಕುಟುಂಬಸ್ಥರಿಗೆ ಸರಕಾರ 45 ಲಕ್ಷ ರು. ಪರಿಹಾರ ಘೋಷಣೆ ಮಾಡಿದೆ. ಮರಳಳ್ಳ ಕ್ಯಾಂಪನಿಂದ ಗಸ್ತು ತಿರುಗುವ ಸಂದರ್ಭದಲ್ಲಿ ಹುಲಿ ದಾಳಿ ನಡೆಸಿ ಸಣ್ಣಹೈದರನ್ನು ಕೊಂದಿದೆ.

ಬೆಂಗಳೂರಿನ ಕೋಗಿಲು ಬಳಿ ಅಕ್ರಮ ನಿವಾಸಿಗಳ ತೆರವುಗೊಳಿಸಿದ್ದಕ್ಕೆ ಕೇರಳ ಸಿಎಂ ಕ್ಯಾತೆ
ನಿರಾಶ್ರಿತರಿಗೆ ಬದಲಿ ಜಾಗ ನೀಡುತ್ತೇವೆ: ಸಿಎಂ | ಪಿಣರಾಯಿ ಮಧ್ಯಪ್ರವೇಶ ಬೇಕಿಲ್ಲ: ಡಿಸಿಎಂ

ಪಿಣರಾಯಿ ಬುಲ್ಡೋಜರ್: ರಾಜ್ಯದಲ್ಲಿ ಸಂಚಲನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇತ್ತೀಚೆಗೆ ಬೆಂಗಳೂರಿನ ಫಕೀರ್ ಕಾಲೋನಿ, ವಸೀಮ್ ಲೇಔಟ್‌ನಲ್ಲಿದ್ದ ಅಕ್ರಮ ನಿವಾಸಗಳನ್ನು ಕೆಡವಿರುವ ಪ್ರಕರಣ ಈಗ ವಿವಾದದ ಸ್ವರೂಪ ಪಡೆದುಕೊಂಡಿದೆ. ಕರ್ನಾಟಕದಲ್ಲೂ ಉತ್ತರ ಪ್ರದೇಶದ ರೀತಿ ಬುಲ್ಡೋಜರ್ ಸಂಸ್ಕೃತಿ ಆರಂಭವಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೋಪಿಸಿದ್ದಾರೆ. ಎಡಪಕ್ಷಗಳ ನೇತೃತ್ವದ ಕೇರಳ ಸರಕಾರದ ಮುಖ್ಯಮಂತ್ರಿ ಪಿಣರಾಯಿ ಹೇಳಿಕೆಗೆ ರಾಜ್ಯದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಕೇರಳದ ಎಲ್‌ಡಿಎಫ್ ಸರಕಾರಕ್ಕೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪ್ರಮುಖ ಎದುರಾಳಿ. ಮುಂದಿನ ವರ್ಷದ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. → 4

ಪಿಣರಾಯಿ ವಿಜಯನ್ ರಂತಹ ಹಿರಿಯ ನಾಯಕರು ಸತ್ಯಾಸತ್ಯತೆ ಅರಿಯದೇ ಮಾತನಾಡಿರುವುದು ದುರಾದೃಷ್ಟಕರ. ಬೆಂಗಳೂರಿನ ವಿಚಾರ ಏನು ಎಂದು ಅವರು ತಿಳಿಯಬೇಕು. ಲ್ಯಾಂಡ್ ಮಾಫಿಯಾದವರು ಸ್ಲಮ್‌ಗಳನ್ನು ನಿರ್ಮಿಸಲು ನಾವು ಬಿಡುವುದಿಲ್ಲ. ನಾವು ನಮ್ಮ ಭೂಮಿಯನ್ನು ರಕ್ಷಣೆ ಮಾಡಿಕೊಳ್ಳುತ್ತೇವೆ. ಅರ್ಹರಿಗೆ ರಾಜೀವ್ ಗಾಂಧಿ ಯೋಜನೆಯಲ್ಲಿ ಮನೆ ನೀಡಲು ಬದ್ಧ.
- ಡಿ.ಕೆ.ಶಿವಕುಮಾರ್ ಡಿಸಿಎಂ

ಪಿಣರಾಯಿ ಹೇಳಿದ್ದೇನು?

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, ಕರ್ನಾಟಕ ಸರಕಾರಕ್ಕೂ ಉತ್ತರಪ್ರದೇಶ ಸರಕಾರದ ಗಾಳಿ ಬಿಸಿದೆ. ಅಲ್ಲಿನ ಬುಲ್ಡೋಜರ್ ನೀತಿಯನ್ನು ಇಲ್ಲೂ ತರುವ ಕೆಲಸ ನಡೆಯುತ್ತಿದೆ. ಬೆಂಗಳೂರಿನ ಯಲಹಂಕದ ಕೋಗಿಲು ಗ್ರಾಮದ ಫಕೀರ್ ಕಾಲೋನಿ ಮತ್ತು ವಸೀಮ್ ಲೇಔಟ್‌ನಲ್ಲಿರುವ ಮುಸ್ಲಿಂ ವಸತಿಗಳನ್ನು ನೆಲಸಮ ಮಾಡಿರುವುದು ತುಂಬಾ ದುಃಖಕರ ವಿಚಾರ, ಅಲ್ಲಿ ಮುಸ್ಲಿಂ ಕುಟುಂಬಗಳು ಹಲವು ವರ್ಷಗಳಿಂದ ವಾಸಿಸುತ್ತಿದ್ದವು. ಇದೀಗ ಏಕಾಏಕಿ ಈ ಚಳಿಗಾಲದಲ್ಲಿ ಮನೆಗಳನ್ನು ನೆಲಸಮ ಮಾಡಿದರೆ ಅವರು ಎಲ್ಲಿಗೆ ಹೋಗಬೇಕು? ದುಃಖಕರ ವಿಚಾರವೆಂದರೆ ಸಂಘ ಪರಿವಾರದ ಅಲ್ಪಸಂಖ್ಯಾತ ವಿರೋಧಿ ರಾಜಕೀಯವನ್ನು ಈಗ ಕರ್ನಾಟಕದ ಕಾಂಗ್ರೆಸ್ ಸರಕಾರ ಕೂಡ ಮಾಡುತ್ತಿದೆ. ಭಯ ಮತ್ತು ಕ್ರೂರತೆಯ ಬಲದ ಮೂಲಕ ಆಡಳಿತ ನಡೆಸುವಾಗ, ಸಾಂವಿಧಾನಿಕ ಮೌಲ್ಯಗಳು ಮೊದಲ ಬಲಿಪಶುಗಳಾಗುತ್ತವೆ ಎಂದಿದ್ದಾರೆ.

ಕಲಬುರಗಿಯ ಆಳಂದದಲ್ಲಿ ಭೀಕರ ಘಟನೆ
ಕುಸಿದು ಬಿದ್ದಾಕೆಗೆ ಕಟ್ಟಿಗೆಯಿಂದ ತೀವ್ರ ಹಲ್ಲೆ?

ದೆವ್ವ ಬಿಡಿಸುತ್ತೇವೆಂದು ಥಳಿತ, ಮಹಿಳೆ ಸಾವು!

ಕಲಬುರಗಿ: ದೆವ್ವ ಬಿಡಿಸುವ ನೆಪದಲ್ಲಿ ಮಹಿಳೆಯೊಬ್ಬರಿಗೆ ಮಾರಣಾಂತಿಕವಾಗಿ ಹಲ್ಲೆ ಮಾಡಲಾಗಿದ್ದು, ಈ ವೇಳೆ ಮಹಿಳೆ ಸಾವನ್ನಪ್ಪಿದ್ದಾಳೆ ಎನ್ನಲಾಗಿದೆ.

ಕಲಬುರಗಿಯ ಆಳಂದದಲ್ಲಿ ಈ ಘಟನೆ ನಡೆದಿದೆ. ದೆವ್ವ ಹಿಡಿದಿದೆ ಎಂದು ಬೇವಿನ ಕಟ್ಟಿಗೆಯಿಂದ ಹಲ್ಲೆ ನಡೆಸಿದ ಪರಿಣಾಮ ಗಂಭೀರ ಗಾಯಗೊಂಡು ಮಹಿಳೆ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ. ಸಂತ್ರಸ್ತ ಮಹಿಳೆಯನ್ನು ಆಳಂದ ಮೂಲದ ಮುಕ್ತಾಬಾಯಿ (26) ಎಂದು ಗುರುತಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಕಲಬುರಗಿಯ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ಝೀರೋ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಮುಂದಿನ ಕಾನೂನು ಕ್ರಮ ಹಾಗೂ ತನಿಖೆಗಾಗಿ ಪ್ರಕರಣವನ್ನು ಮಹಾರಾಷ್ಟ್ರದ ಮುರುಮ್ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ.

ಮೃತಳ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. → 4

ಸಮಾಚಾರ ಸಣ್ಣದಲ್ಲ

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಹೊಸಕೋಟೆ: ತಾಲೂಕಿನ ನಂದಗುಡಿ ಹೋಬಳಿಯ ಸೂಲಿಬೆಲೆ, ಏಕರಾಜಪುರ, ನಂದಗುಡಿ, ಪಿಲ್ಲಗುಂಪಾದ ವಿದ್ಯುತ್ ವಿತರಣಾ ಕೇಂದ್ರಗಳಿಂದ ಪೂರೈಕೆ ಆಗುವ ವಿವಿಧ ಗ್ರಾಮಗಳ ಪ್ರದೇಶಗಳಲ್ಲಿ ಡಿ. 28ರಂದು ಭಾನುವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಇರುವುದಿಲ್ಲ. ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ಎ.ಎಲ್. ಶ್ರೀಧರ್ಮೂರ್ತಿ ಅವರು ವಿನಂತಿಸಿದ್ದಾರೆ.

ಪ್ರದೇಶಗಳು: ಮುತ್ತಂದ್ರ, ಬೇಗೂರು, ಕಂಬಳೀಪುರ, ಸೊಣ್ಣಳ್ಳಿಪುರ, ಎಂ.ಸತ್ಯವಾರ, ಮುತ್ತಕದಹಳ್ಳಿ, ಬಾಗಲೂರು, ಗುಳ್ಳಹಳ್ಳಿ, ಭೀಮಕನಹಳ್ಳಿ, ಸುಗಣ ಫುಡ್, ಸೂಲಿಬೆಲೆ, ಗಿಡ್ಡಪ್ಪಹಳ್ಳಿ, ರಾಂಪುರ, ವಳಗೆರೆಪುರ, ಅತ್ತಿಬೆಲೆ, ಕಮ್ಮಸಂದ್ರ, ಬೆಟ್ಟಹಳ್ಳಿ, ಚಿಕ್ಕಹರಳಗೆರೆ, ದೊಡ್ಡಹರಳಗೆರೆ, ಬೆಂಡಿಗಾನಹಳ್ಳಿ, ನಂದಗುಂಡಿ, ಚೊಕ್ಕಸಂದ್ರ, ಮೋತಕದಹಳ್ಳಿ, ಶಿವನಾಪುರ, ಬೀರಹಳ್ಳಿ, ಬೈಲನರಸಾಪುರ, ಓಬಳಹಳ್ಳಿ, ಕೋಡ್ರಹಳ್ಳಿ, ನಡುವಿನಪುರ, ಎನ್.ಹೊಸಹಳ್ಳಿ, ಕೊರಟಿ, ಹೆಡಕನಹಳ್ಳಿ, ಕಾರಹಳ್ಳಿ, ನೆಲವಾಗಿಲು, ದಳಸಗೆರೆ, ಚಿಕ್ಕೊಂಡಹಳ್ಳಿ, ಹೆತ್ತಕ್ಕಿ, ಹಿಂಡಿಗನಾಳ, ಇಟ್ಟಸಂದ್ರ, ಅನುಪಹಳ್ಳಿ, ಹಳೇವೂರು, ಕೆ.ಸತ್ಯವಾರ, ಕರಪನಹಳ್ಳಿ, ಡಿ. ಶೆಟ್ಟಿಹಳ್ಳಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆ.ವಿ.ಕಂ.ನಂದಗುಡಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎ.ಎಲ್. ಶ್ರೀಧರಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೆಂಕಟೇಶ್ವರ ದೇಗುಲದಲ್ಲಿ ವೈಕುಂಠ ಏಕಾದಶಿ ಡಿ.30ಕ್ಕೆ

ಶಿರಾ: ನಗರದ ಶ್ರೀ ವೆಂಕಟೇಶ್ವರ ಬಾಲಾಜಿ ದೇವಸ್ಥಾನದಲ್ಲಿ ಶ್ರೀ ಬಾಲಾಜಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಡಿಸೆಂಬರ್30ನೇ ತಾರೀಖು ಮಂಗಳವಾರದಂದು ವೈಕುಂಠ ಏಕಾದಶಿ ಹಾಗೂ 31ರ ಬುಧವಾರ ದಂದು ವೈಕುಂಠ ದ್ವಾದಶಿ ಪ್ರಯುಕ್ತ ಪೂಜಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಮಂಗಳವಾರ ಬೆಳಗ್ಗೆ 5 ಗಂಟೆಗೆ ಸುಪ್ರಭಾತ ಸೇವೆ, 5.30ಕ್ಕೆ ಮೂಲ ವಿಗ್ರಹಕ್ಕೆ ಅಭಿಷೇಕ, ಎಂಟು ಗಂಟೆಗೆ ಗರುಡಸಮೇತ ಸ್ವಾಮಿಗೆ ಪ್ರಾಕಾರೋತ್ಸವ, 8.30 ಕ್ಕೆ ಅಷ್ಟಾವಧಾನ ಸೇವೆ, ಮಂಗಳಾರತಿ ನಂತರ ವೈಕಂಠ ದ್ವಾರದಲ್ಲಿ ಪ್ರವೇಶ ಮಾಡಿ ಸ್ವಾಮಿಯ ದರ್ಶನಕ್ಕೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು. ಪ್ರತಿ ವರ್ಷದಂತೆ ಈ ವರ್ಷವೂ ಸಹಾ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವರ ದರ್ಶನ ಪಡೆದು ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಟ್ರಸ್ಟಿ ಬಲಶಾಮ್ ಸಿಂಗ್ ಹಾಗೂ ಸದಸ್ಯರುಗಳು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಗಿಡ ನೆಟ್ಟು ವಾಜಪೇಯಿ ಜನ್ಮದಿನ ಆಚರಣೆ

ಗುಡಿಬಂಡೆ: ಪಟ್ಟಣದ ಅಂಬೇಡ್ಕರ್ವೃತ್ತದ ಬಳಿ ಗಿಡಗಳನ್ನು ನೆಡುವ ಮೂಲಕ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನ ಹಾಗೂ ಕ್ರಿಸ್ಮಸ್ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪಟ್ಟಣ ಪಂಚಾಯತಿಯ ಮಾಜಿ ಉಪಾಧ್ಯಕ್ಷರಾದ ಎಂ. ಎನ್. ರಾಜಣ್ಣ ಅವರು ಮಾತನಾಡಿ, ಯಾವುದೇ ವಿಶೇಷ ದಿನವಿರಲಿ, ಗಿಡ ನೆಡುವ ಮೂಲಕ ಆಚರಿಸುವ ಹವ್ಯಾಸವನ್ನು ಪರಿಸರ ವೇದಿಕೆ ಬೆಳೆಸಿಕೊಂಡಿದೆ. ವಾಜಪೇಯಿ ಅವರ ಜನ್ಮದಿನ ಹಾಗೂ ಕ್ರಿಸ್ಮಸ್ ಸಂದರ್ಭದಲ್ಲಿ ಇಂತಹ ಪರಿಸರ ಸ್ನೇಹಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು. ರಾಜ್ಯ ಪ್ರಶಸ್ತಿ ವಿಜೇತರಾದ ಡಾ. ಗುಂಪು ಮರದ ಆನಂದ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಪರಿಸರವಾದಿಗಳಾದ ರಂಗನಾಥ್, ಬೇಬಿ ನಿಶ್ಚಿತ, ಅಮ್ಜದ್ ಖಾನ್, ಚಾಂದ್ ಪಾಷಾ, ಬಾಬಜಾನ್, ತನ್ವೀರ್, ಅಬ್ದುಲ್, ಅಂಜನಪ್ಪ, ಮಂಜುನಾಥ್ ಸೇರಿದಂತೆ ಹಲವರು ಇದ್ದರು.

ವಿರಾಮ
ಪ್ರತಿ ಭಾನುವಾರ

17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಾಳೆಯಿಂದ

ಅಧ್ಯಕ್ಷರಾಗಿ ಡಾ.ಕರೀಗೌಡ ಬೀಚನಹಳ್ಳಿ ಆಯ್ಕೆ | ಎಂಜಿ ರಸ್ತೆಯಿಂದ ಗಾಜಿನ ಮನೆಯವರೆಗೂ ಸಮ್ಮೇಳನಾಧ್ಯಕ್ಷರ ಮೆರವಣಿಗೆ | ಡಿಸಿ ಶುಭ ಕಲ್ಯಾಣ್ ಹೇಳಿಕೆ

ತುಮಕೂರು: ನಗರದ ಗಾಜಿನ ಮನೆಯಲ್ಲಿ ಡಿ.29 ಹಾಗೂ 30ರಂದು 17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿಜೃಂಭಣೆಯಿಂದ ನಡೆಸಲು ಸಕಲ ಸಿದ್ಧತೆಗಳು ನಡೆದಿವೆ ಎಂದು ಜಿಲ್ಲಾಧಿಕಾರಿ ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರಾದ ಶುಭ ಕಲ್ಯಾಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 17ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಡಾ.ಕರೀಗೌಡ ಬೀಚನಹಳ್ಳಿ ಅವರನ್ನು ಆಯ್ಕೆ ಮಾಡಲಾಗಿದೆ. ಸಮ್ಮೇಳನ ಅಂಗವಾಗಿ ಡಿಸೆಂಬರ್29ರ ಬೆಳಗ್ಗೆ 7.30 ಗಂಟೆಗೆ ಗಾಜಿನ ಮನೆ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಹಾಗೂ 8 ಗಂಟೆಗೆ ನಗರದ ಮಹಾನಗರ ಪಾಲಿಕೆ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆ ಪ್ರಾರಂಭವಾಗಿ ಎಂ.ಜಿ.ರಸ್ತೆ, ಗುಂಚಿ ಚೌಕ, ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದ ಮಾರ್ಗವಾಗಿ ಗಾಜಿನ ಮನೆಯವರೆಗೂ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಹಾಗೂ ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರಾದ ಶುಭ ಕಲ್ಯಾಣ್ ಅವರು ಮಾತನಾಡಿದರು.

ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ ಅವರು ಡಿಸೆಂಬರ್29ರ ಬೆಳಗ್ಗೆ 10 ಗಂಟೆಗೆ ಗಾಜಿನ ಮನೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ನವದೆಹಲಿ ವಿಶೇಷ ಪ್ರತಿನಿಧಿ ಹಾಗೂ ಶಿರಾ ಶಾಸಕ ಟಿ.ಬಿ.ಜಯಚಂದ್ರ ಅವರು ಸಮ್ಮೇಳನದ ನೆನಪಿನ ಸಂಚಿಕೆಯನ್ನು ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲೆಯ ಸಚಿವರು, ಸಂಸದರು, ಶಾಸಕರು, ಲೇಖಕರು, ಕಲಾವಿದರು, ಸಾಹಿತಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ಸರಕಾರಿ ನೌಕರರು, ಸಾರ್ವಜನಿಕರು ಸೇರಿದಂತೆ 4,000 ಮಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಡಿಸೆಂಬರ್29ರಂದು ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಅಂಗವಾಗಿ ಹಿರಿಯ ಲೇಖಕರಾದ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ನಂತರ ಕುವೆಂಪು ಅವರ ಜೀವನ ಮತ್ತು ಸಾಹಿತ್ಯ ಕುರಿತಾಗಿ ಉಪನ್ಯಾಸ ನೀಡಲಿದ್ದಾರೆ.

ಎರಡು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ, ದಲಿತ ಸಾಹಿತ್ಯ ಕವಿಗೋಷ್ಠಿ ಹಾಗೂ ಮಕ್ಕಳ ಗೋಷ್ಠಿ ಸೇರಿದಂತೆ ಆರು ವಿಚಾರ ಗೋಷ್ಠಿಗಳು ಇರಲಿವೆ. ಮಕ್ಕಳ ಕವಿ ಗೋಷ್ಠಿ ಇದೆ ಮೊದಲ ಬಾರಿಗೆ ಏರ್ಪಡಿಸಿರುವುದು ವಿಶೇಷವಾಗಿದೆ ಎಂದರು.

ಅಲ್ಲದೆ ಸುಗಮ ಸಂಗೀತ, ನೃತ್ಯ ಕಾರ್ಯಕ್ರಮ, ರಂಗಗೀತೆಗಳ ಗಾಯನ, ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಹರಿಕಥೆ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಅವರು ತಿಳಿಸಿದರು.

ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರು, ಸರಕಾರಿ ನೌಕರರಿಗೆ 2 ದಿನಗಳು ಒ.ಒ.ಡಿ. ಸೌಲಭ್ಯ ನೀಡಲಾಗುವುದು. ಸಮ್ಮೇಳನಕ್ಕೆ ಎಲ್ಲಾ ಜನಪ್ರತಿನಿಧಿಗಳು, ಅಧಿಕಾರಿ-ಸಿಬ್ಬಂದಿ, ಸಾಹಿತಿಗಳು, ಕಲಾವಿದರು, ಲೇಖಕರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಎನ್.ತಿಪ್ಪೇಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ ಇದ್ದರು.

ಪ್ರೊ.ಬರಗೂರು ಅವರಿಂದ ಉಪನ್ಯಾಸ

ಡಿಸೆಂಬರ್29ರಂದು ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಅಂಗವಾಗಿ ಹಿರಿಯ ಲೇಖಕರಾದ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ನಂತರ ಕುವೆಂಪು ಅವರ ಜೀವನ ಮತ್ತು ಸಾಹಿತ್ಯ ಕುರಿತಾಗಿ ಉಪನ್ಯಾಸ ನೀಡಲಿದ್ದಾರೆ.

ನಾಗಲಮಡಿಕೆ ಶ್ರೀ ಸುಬ್ರಮಣ್ಯೇಶ್ವರ ರಥೋತ್ಸವ

ಪಾವಗಡ: ತಾಲೂಕಿನ ನಾಗಲಮಡಿಕೆ ಗ್ರಾಮದಲ್ಲಿರುವ ಪ್ರಸಿದ್ಧ ಅಂತ್ಯ ಸುಬ್ರಮಣ್ಯೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ಮಧ್ಯಾಹ್ನ 12.20 ಗಂಟೆಗೆ ಅಭಿಜಿತ್ ಮೀನಾ ಲಗ್ನದಲ್ಲಿ ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಪಾವಗಡ ಶಾಸಕ ಎಚ್.ವಿ. ವೆಂಕಟೇಶ್ ಅವರು ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವ ಆರಂಭವಾಗುತ್ತಿದ್ದಂತೆ ಭಕ್ತರು ಬಾಳೆಹಣ್ಣುಗಳನ್ನು ರಥದತ್ತ ಎಸೆಯುತ್ತಾ "ಜೈ ಸುಬ್ರಮಣ್ಯೇಶ್ವರ" ಎಂಬ ಜೈಕಾರ ಕೂಗಿದರು. ತುಮಕೂರು ಜಿಲ್ಲೆ ಸೇರಿದಂತೆ ಆಂಧ್ರ ಪ್ರದೇಶ ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

ರಥೋತ್ಸವದ ಬಳಿಕ ನಾಗಲಮಡಿಕೆಯ ಉತ್ತರ ಪಿನಾಕಿನಿ ನದಿ ದಡದಲ್ಲಿ ಭಕ್ತರು ಪುಲಗಂ ಹಾಗೂ ಬದನೆಕಾಯಿ ಬಜ್ಜಿ (ಕಿಚಡಿ) ತಯಾರಿಸಿ ಊಟ ಮಾಡುವ ಮೂಲಕ ಉಪವಾಸ ಮುಕ್ತಾಯಗೊಳಿಸಿದರು. ಬೆಳಗ್ಗೆಯಿಂದಲೇ ಭಕ್ತ ಸಾಗರ ಹರಿದು ಬಂದ ಕಾರಣ, ಜನಸಂದಣಿ ನಿಯಂತ್ರಿಸಲು ಪೊಲೀಸ್ ಇಲಾಖೆ ಹರಸಾಹಸ ಪಡಬೇಕಾಯಿತು.

ಈ ವೇಳೆ ಮಾತನಾಡಿದ ಶಾಸಕ ಎಚ್.ವಿ. ವೆಂಕಟೇಶ್, ಇನ್ನೆರಡು ತಿಂಗಳಲ್ಲಿ 34 ಕೋಟಿ ರು.. ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣ ಹಾಗೂ ಜೀರ್ಣೋದ್ಧಾರಕ್ಕೆ ಟೆಂಡರ್ಕರೆಯಲಾಗುವುದು ಎಂದು ತಿಳಿಸಿದರು.

ನಾಗಲಮಡಿಕೆ ಗ್ರಾಮದಲ್ಲಿರುವ ಪ್ರಸಿದ್ಧ ಅಂತ್ಯ ಸುಬ್ರಮಣ್ಯೇಶ್ವರ ಸ್ವಾಮಿಯ ರಥೋತ್ಸವ ಅದ್ದೂರಿಯಾಗಿ ಜರುಗಿತು.

ಪಾವಗಡದಿಂದ ನಾಗಲಮಡಿಕೆ ಜಾತ್ರೆಗೆ ತೆರಳಲು ರಾಜ್ಯ ರಸ್ತೆ ಸಾರಿಗೆ ಬಸ್ಗಳು ಹಾಗೂ ಖಾಸಗಿ ಬಸ್ಗಳ ವ್ಯವಸ್ಥೆ ಕಲ್ಪಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ತಿಪ್ಪೇಸ್ವಾಮಿ, ಎ.ಎಸ್ಪಿ ಕೆ. ಪುರುಷೋತ್ತಮ್, ಮಾಜಿ ಸಚಿವ ವೆಂಕಟರಮಣಪ್ಪ, ತುಮಕೂರು ಎಸ್ಪಿ ಕೆ.ವಿ. ಅಶೋಕ್, ಎಸಿ ಗೋಟೂರಿ ಶಿವಪ್ಪ, ತಹಸೀಲ್ದಾರ್ವೈ. ರವಿ, ಗ್ರೇಡ್-2 ತಹಶೀಲ್ದಾರ್ಪ್ರಸಾದ್, ಮಾಜಿ ಪುರಸಭಾ ಅಧ್ಯಕ್ಷ ಪಿ.ಹೆಚ್. ರಾಜೇಶ್, ಕಲ್ಪವೃಕ್ಷ ರವಿ, ದೇವಸ್ಥಾನದ ನಿರ್ದೇಶಕ ಅಶ್ವತ್ ನಾರಾಯಣ, ಅರ್ಚಕ ಬದರಿನಾಥ್, ಡಿವೈಎಸ್ಪಿ ಮಂಜುನಾಥ್, ಪಾವಗಡ ಸಿಪಿಐ ಸುರೇಶ್, ಗ್ರಾಮಾಂತರ ಸಿಪಿಐ ಗಿರೀಶ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

2ನೇ ದಿನದ ಹಾಕಿ ಪಂದ್ಯಾವಳಿ

ಚೆಪ್ಪುಡಿರ, ಪರದಂಡ, ಕುಪ್ಪಂಡ ತಂಡಗಳು ಗೆಲುವು

ಮಡಿಕೇರಿ: ಕೊಡವ ಹಾಕಿ ಅಕಾಡೆಮಿ ವತಿಯಿಂದ ಮೂರ್ನಾಡಿನ ಬಾಚೆಟ್ಟೀರ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿ'' ಯ ಎರಡನೇ ದಿನದ ಪಂದ್ಯಾಟದಲ್ಲಿ ಚೆಪ್ಪುಡಿರ, ಪರದಂಡ, ಕುಪ್ಪಂಡ ಹಾಗೂ ಕುಲ್ಲೇಟಿರ ಗೆಲುವು ದಾಖಲಿಸಿದವು.

ಚೆಪ್ಪುಡಿರ ಮತ್ತು ಮುಕ್ಕಾಟಿರ ತಂಡಗಳ ನಡುವಿನ ಪಂದ್ಯದಲ್ಲಿ ಚೆಪ್ಪುಡಿರ ತಂಡ 9-0 ಗೋಲುಗಳ ಅಂತರದಲ್ಲಿ ಭರ್ಜರಿ ಗೆಲುವು ದಾಖಲಿಸಿತು. ಚೆಪ್ಪುಡಿರ ಪ್ರಣವ್ ಹಾಗೂ ನರೇನ್ ತಲಾ ಎರಡು, ಸೋಮಣ್ಣ, ಚೇತನ್, ಅಯ್ಯಪ್ಪ, ನಾಚಪ್ಪ, ದಿವನ್ ತಲಾ ಒಂದು ಗೋಲು ಬಾರಿಸಿದರು.

ಕೋಣೇರಿರ ಮತ್ತು ಪರದಂಡ ನಡುವಿನ ಪಂದ್ಯದಲ್ಲಿ ಪರದಂಡ ತಂಡ 6-0 ಗೋಲುಗಳ ಅಂತರದಲ್ಲಿ ಜಯ ಸಾಧಿಸಿತು. ಪರದಂಡ ಚೆಶ್ವಿನ್ ಹಾಗೂ ರಂಜನ್ ಅಯ್ಯಪ್ಪ ತಲಾ ಎರಡು, ಪ್ರಧಾನ್, ಧೀರಜ್ ಮುತ್ತಣ್ಣ ತಲಾ ಒಂದು ಗೋಲು ದಾಖಲಿಸಿದರು.

ಕೂತಂಡ ಮತ್ತು ಕುಪ್ಪಂಡ ನಡುವಿನ ಪಂದ್ಯದಲ್ಲಿ ಕುಪ್ಪಂಡ ತಂಡ 3-2 ಗೋಲುಗಳ ಅಂತರದಲ್ಲಿ ಗೆಲುವು ದಾಖಲಿಸಿತು. ಕುಪ್ಪಂಡ ಪರ ಚಂಗಪ್ಪ, ಶ್ಯಾನ್ ಹಾಗೂ ಜಗತ್ ತಲಾ ಒಂದು ಗೋಲು ಬಾರಿಸಿದರು. ಕೂತಂಡ ಪರ ಬೋಪಣ್ಣ ಕೆ.ಸಿ ಎರಡು ಗೋಲು ದಾಖಲಿಸಿದರು.

ಕುಲ್ಲೇಟಿರ ಮತ್ತು ಮಾಚಮಾಡ ನಡುವಿನ ಪಂದ್ಯದಲ್ಲಿ ಕುಲ್ಲೇಟಿರ ತಂಡ 5-0 ಗೋಲುಗಳ ಅಂತರದಲ್ಲಿ ಜಯ ಸಾಧಿಸಿತು. ಕುಲ್ಲೇಟಿರ ಮಂದಪ್ಪ ತಲಾ ಎರಡು, ಚಿಟ್ಟಿಯಪ್ಪ, ಮುತ್ತಣ್ಣ ಹಾಗೂ ತಿಮ್ಮಯ್ಯ ತಲಾ ಒಂದು ಗೋಲು ಬಾರಿಸಿದರು.

ಪ್ರತಿಭಟನೆಗೆ ಅಶ್ವತ್ಥ್ ನಾರಾಯಣ್ ಬೆಂಬಲ

ಮದ್ದೂರು: ಗೆಜ್ಜಲಗೆರೆ, ಗೊರವನಹಳ್ಳಿ, ಸೋಮನಹಳ್ಳಿ ಹಾಗೂ ಚಾಮನಹಳ್ಳಿ ಗ್ರಾ.ಪಂ. ಗಳನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿ ತಾಲೂಕಿನ ಗೆಜ್ಜಲಗೆರೆ ಗ್ರಾಮಸ್ಥರು ಕಳೆದ ಐದು ದಿನಗಳಿಂದ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಸ್ಥಳಕ್ಕೆ ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ್ ಹಾಗೂ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಭೇಟಿ ನೀಡಿ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾ.ಪಂ. ಕಚೇರಿ ಬಳಿ ಸ್ಥಳೀಯ ನಿವಾಸಿಗಳು ಕಳೆದ ಐದು ದಿನಗಳಿಂದಲೂ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಕೈಗೊಂಡು ಪಂಚಾಯಿತಿಯನ್ನು ನಗರಸಭೆಯಿಂದ ಕೈಬಿಡುವಂತೆ ಒತ್ತಾಯಸಿದರಲ್ಲದೆ ಈ ಸಂಬಂಧ ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ್ ರವರಿಗೆ ಮನವಿ ಪತ್ರ ಸಲ್ಲಿಸಿದರು.

ಸ್ಥಳೀಯ ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸದೆ ಮತ್ತು ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತಾರದೆ ಏಕಾಏಕಿ ನಗರಸಭೆಯನ್ನಾಗಿಸಲು ಮುಂದಾಗಿದ್ದು ಇದರಿಂದಾಗಿ ಸ್ಥಳೀಯ ನಿವಾಸಿ ಗಳು ಹಲವಾರು ಸಮಸ್ಯೆಗಳನ್ನು ಎದುರಿಸುವಂತಾ ಗಲಿದ್ದು ಮತ್ತು ಮೂಲ ಸೌಲಭ್ಯಗಳು ವಂಚಿತವಾಗಬೇಕಾದ ಸ್ಥಿತಿ ನಿರ್ಮಾಣವಾಗ ಲಿದೆ ಎಂದು ಪ್ರತಿಭಟನಾಕಾರರು ಅಶ್ವತ್ಥ್ ನಾರಾಯಣ್ ರವರಿಗೆ ತಮ್ಮ ಅಳಲು ತೋಡಿಕೊಂಡರು.

ಆಶ್ರಯ ವಸತಿ ಯೋಜನೆ, ನರೇಗಾ, ಕೃಪಾಂಕ ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹಲವಾರು ಯೋಜನೆಗಳು ಕೈತಪ್ಪಲಿದ್ದು ಮತ್ತು ಆಸ್ತಿ ತೆರಿಗೆ ದುಪ್ಪಟವಾಗುವ ಜತೆಗೆ ಪ್ರತಿಯೊಂ ದಕ್ಕೂ ನಗರಸಭೆಯನ್ನೇ ಆಶ್ರಯಿಸಬೇಕಾದ ಸ್ಥಿತಿ ನಿರ್ಮಾಣವಾಗಲಿದ್ದು ಕೂಡಲೇ ತಮಗೆ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ್ ನಾರಾಯಣ್ ಜನಾಭಿಪ್ರಾಯದ ವಿರುದ್ಧವಾಗಿ ಯಾವುದೇ ನಿರ್ಣಯಗಳನ್ನು ಶಾಸಕರು ತೆಗೆದುಕೊಳ್ಳದೆ ನ್ಯಾಯಸಮ್ಮತವಾಗಿ ಜನರ ಅಹವಾಲುಗಳನ್ನು ಪರಿಗಣಿಸಬೇಕೆಂದು ಈ ಸಂಬಂಧ ಮುಂದಿನ ದಿನಗಳಲ್ಲಿ ಸದನದಲ್ಲಿ ಚರ್ಚಿಸಿ ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿದರು. ಈ ವೇಳೆ ಬಿ.ಜೆ.ಪಿ ಜಿಲ್ಲಾಧ್ಯಕ್ಷ ಇಂದ್ರೇಶ್ಕುಮಾರ್ ,ಡಿ.ಸಿ.ಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಪಿ. ಉಮೇಶ್, ಮನ್ಮುಲ್ ನಿರ್ದೇಶಕ ಎಸ್.ಪಿ. ಸ್ವಾಮಿ, ತಾ.ಪಂ. ಮಾಜಿ ಅಧ್ಯಕ್ಷ ಯೋಗೇಶ್, ರೈತ ನಾಯಕಿ ಸುನಂದ ಜಯರಾಮು, ಎ.ಪಿ.ಎಂ.ಸಿ ಮಾಜಿ ಅಧ್ಯಕ್ಷ ಜಿ.ಸಿ.ಮಹೇಂದ್ರ, ಮುಖಂಡರಾದ ಲಿಂಗಪ್ಪಾಜಿ, ಜಿ.ಎಸ್.ಶಂಕರ್,ಪ್ರಸನ್ನ, ಮೋಹನ್ಕುಮಾರ್, ಕೃಷ್ಣ ಮಹಿಳೆಯರು ಹಾಜರಿದ್ದರು.

ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದ ವೇಳೆ ಮಾಜಿ ಡಿಸಿಎಂ ಅಶ್ವತ್ಥ್ ನಾರಾಯಣ ಅವರಿಗೆ ಪ್ರತಿಭಟನಾನಿರತರು ಮನವಿ ಪತ್ರ ಸಲ್ಲಿಸಿದರು.

ಎಐನಿಂದ ನಿರುದ್ಯೋಗ ಹೆಚ್ಚು ಎನ್ನುವುದು ಅಪಕಲ್ಪನೆ

ಚಿಕ್ಕಬಳ್ಳಾಪುರ : ಎಐ ತಂತ್ರಜ್ಞಾನ ವಿಶ್ವವನ್ನು ಮುನ್ನಡೆಸುತ್ತಿದ್ದರೂ ಇದೊಂದು ಮಾನವ ಜನ್ಯ ತಂತ್ರಜ್ಞಾನವಾಗಿದೆ. ಯುವಜನತೆ ಈ ತಂತ್ರಜ್ಞಾನ ಕೌಶಲ್ಯದ ಜತೆಗೆ ಪ್ರಯಾಣಿಸುವುದು ಕಲಿತರೆ ಯಾವ ಕ್ಷೇತ್ರದಲ್ಲಿಯೂ ನಿರುದ್ಯೋಗ ಸೃಷ್ಟಿಯಾಗುವುದಿಲ್ಲ ಎಂದು ಎ.ಐ ತಂತ್ರಜ್ಞಾನದ ಪಿತಾಮಹ ಅಮೆರಿಕಾ ಫ್ಲೋರಿಡಾ ಇಂಟರ್ನ್ಯಾಷನಲ್ ಯೂನಿವರ್ಸಿಟಿ ಪ್ರಾಧ್ಯಾಪಕ ಎಸ್.ಎಸ್. ಅಯ್ಯಂಗಾರ್ ತಿಳಿಸಿದರು.

ನಗರ ಹೊರವಲಯ ನಾಗಾರ್ಜುನ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಏರ್ಪಡಿಸಿದ್ದ ಎಐ ಇಂಪ್ಯಾಕ್ಟ್ಪೂರ್ವಭಾವಿ ಶೃಂಗಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಐ ತಂತ್ರಜ್ಞಾನದ ಕ್ರಾಂತಿಯು ಜಗತ್ತನ್ನು ಆಳುತ್ತಿರುವ ಈ ಹೊತ್ತಿನಲ್ಲಿ ವಿಶ್ವದ ಅತಿಹೆಚ್ಚು ಯುವ ಶಕ್ತಿಯನ್ನು ಹೊಂದಿರುವ ಭಾರತವು ಕೂಡ ಇದರ ಜತೆಗೆ ಮುನ್ನಡೆಯುವುದು ಅನಿವಾರ್ಯವಾಗಿದೆ.ಕೈಗಾರಿಕೆ,ಕೃಷಿ ಇರಲಿ,ಶಿಕ್ಷಣವೇ ಸೇರಿದಂತೆ ಯಾವುದೇ ಕ್ಷೇತ್ರವಿರಲಿ ಅಲ್ಲೆಲ್ಲಾ ಎಐ ಹಾಜರಾಗಿದೆ.ಎಐ ಕಲಿಯದಿದ್ದರೆ ಖಂಡಿತವಾಗಿ ಇದರ ಗುಲಾಮರಾಗಬೇಕಾಗುತ್ತದೆ.ಹೀಗಾಗಿ ಇದರ ಮಹತ್ವವನ್ನು ಅರಿತು ಇದರೊಟ್ಟಿಗೆ ಪ್ರಯಾಣಿಸುವುದೇ ನಮಗಿರುವ ಏಕೈಕ ಮಾರ್ಗವಾಗಿದೆ ಎಂದರು.

ಡೀಪ್ ಫೇಕ್ ಬಗ್ಗೆ ಇನ್ನೂ ಆಳದ ಸಂಶೋಧನೆ ಆಗಬೇಕಿದೆ.ಇದಾಗಬೇಕಾದರೆ ಇದನ್ನು ಬಳಸಲು ಅನುವಾಗುವ ಶಕ್ತಿಶಾಲಿ ಸಾಧನಗಳನ್ನು ತರಬೇಕು. ವಿದ್ಯಾರ್ಥಿಗಳು,ಉಪನ್ಯಾಸಕರು, ಸಮಾಜ ಒಟ್ಟುಗೂಡಿ ಇಂತಹ ಸವಾಲಿನ ತಂತ್ರಜ್ಞಾನವನ್ನು ಸಾಧುವಾಗಿಸುವತ್ತ ಕೆಲಸ ಮಾಡಬೇಕಿದೆ.ಅಲೆಕ್ಸಾ ಎಂಬುದು ಕೂಡ ಆಶ್ಚರ್ಯಕಾರಕ ಸಂಶೋಧನೆಯಾಗಿದೆ.ಹೀಗಾಗಿ ಎಐ ಅನ್ನು ಸರಿಯದ ರೀತಿಯಲ್ಲಿ ಬಳಿಸಿದರೆ ಒಳ್ಳೆಯದೇ ಆಗಲಿದೆ. ತಪ್ಪಾಗಿ ಬಳಸಿದರೆ ಕೆಡುಕು ಖಚಿತ ಎಂದು ಎಚ್ಚರಿಸಿದರು.

ಸ್ವಂತಿಕೆ ನಾಶ:

ಯುವ ಜನತೆ ಮತ್ತು ವಿದ್ಯಾರ್ಥಿವರ್ಗ ಎಐ ತಂತ್ರಜ್ಞಾನದ ಫಲಿತವಾದ ಚಾಟ್ಜಿಪಿಟಿ, ಜೆಮಿನಿ ಜತೆ ಮಾಡುತ್ತಾ ಕುಳಿತರೆ ಸಾಲದು.ಈ ತಂತ್ರಜ್ಞಾನವು ನನ್ನ ಮೆದುಳು ಏನನ್ನು ಚಿಂತಿಸುತ್ತಿದೆ ಎಂಬುದನ್ನು ಅರಿತು ಕೆಲಸ ಮಾಡುತ್ತದೆ.ಇದಕ್ಕೆ ಕಟ್ಟು ಬಿದ್ದರೆ ಸ್ವಂತಿಕೆ ಇಲ್ಲದಾಗುತ್ತದೆ. ಅಂತಹ ಸಮಯದಲ್ಲಿ ಮಾನವ ತನ್ನ ಬುದ್ಧಿಮತ್ತೆಯನ್ನು ಇದರೊಂದಿಗೆ ಬಳಸಬೇಕಾಗುತ್ತದೆ. ಇಲ್ಲದಿದ್ದರೆ ಅಪಾಯಕಾರಿ ಫಲಿತಾಂಶ ಹೆಚ್ಚು. 30 ವರ್ಷಗಳ ಹಿಂದೆ ನಾನು ಎಐ ಸಂಶೋಧನೆ ಮಾಡಿದಾಗ ಈ ಮಟ್ಟಿಗಿನ ಫಲಿತಾಂಶ ನಿರೀಕ್ಷೆ ಮಾಡಲಾಗುತ್ತಿರಲಿಲ್ಲ. ಈಗ ನಾನು ಊಹೆ ಮಾಡಲಾಗದಷ್ಟು ಬೆಳೆದಿದ್ದು ನನ್ನ ಬ್ರೈನ್ ತದ್ರೂಪ ಸೃಷ್ಟಿಸುವ ಹಂತದಲ್ಲಿದ್ದೇವೆ ಎಂದರು.

ನಿರುದ್ಯೋಗ ಸುಳ್ಳು:

ಎಐ ತಂತ್ರಜ್ಞಾನ ನಿರುದ್ಯೋಗ ಸೃಷ್ಟಿ ಮಾಡಲಿದೆ ಎಂಬುದೆಲ್ಲಾ ಸುಳ್ಳು. ಶಿಕ್ಷಣ ಕ್ರಮ ಬದಲಾಗಬೇಕು. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಸರಿಯಾದ ರೀತಿಯಲ್ಲಿ ತರಬೇತುಗೊಳಿಸಬೇಕು. ಎ.ಐ ಏನೇನು ಮಾಡುತ್ತೋ ಅದು ಸೃಷ್ಟಿ ಮಾಡುವ ಸ್ಪರ್ಧೆಯ ವಿರುದ್ಧ ಪ್ರೋಗ್ರಾಮಿಂಗ್ ಮಾಡಿ ತೋರಿಬೇಕು.ಪೈಥಾನ್ ಲಾಂಗ್ವೇಜ್ ಹೈಸ್ಕೂಲ್ ಹಂತದಿಂದ ಕಾಲೇಜುವರೆಗೆ ಎಲ್ಲರಿಗೂ ಕಲಿಸಬೇಕು.ಆಗ ಮಾತ್ರ ಎಐ ತಂತ್ರಜ್ಞಾನದೊಟ್ಟಿಗೆ ಈಜುಲು ಸಾಧ್ಯ ಎಂದರು. 90ರ ದಶಕದಲ್ಲಿ ಕಂಪ್ಯೂಟರ್ಕ್ರಾಂತಿ ಆದಾಗಲೂ ಕೂಡ ಜನರಲ್ಲಿ ಅನುಮಾನ ಇತ್ತು.ತಂತ್ರಜ್ಞಾನದ ಬಳಕೆ ಗೊತ್ತಿಲ್ಲ ಎಂದರೆ,ಈ ಕ್ಷೇತ್ರದಿಂದ ಅನಾನುಕೂಲವನ್ನೇ ಪಡೆಯುತ್ತೇವೆ ಎಂದರು.

55 ವರ್ಷಗಳ ಹಿಂದೆ ನಾನು ಅಮೆರಿಕಾದಲ್ಲಿ ಹೋಗಿ ಸೆಟಲ್ ಆಗಿರುವುದರಿಂದ ನನ್ನ ಮನಸ್ಸು ಯಾವಾಗಲೂ ಕೂಡ ಜನ್ಮಭೂಮಿ ಇಂಡಿಯಾ ಅದರಲ್ಲೂ ಬೆಂಗಳೂರನ್ನು ನೆನೆಸುತ್ತದೆ.ನನ್ನ ಹೆಂಡತಿ ಮಕ್ಕಳನ್ನು ಕೇಳಿದರೆ ಹೀಗೆ ಹೇಳುತ್ತಾರೆ ಎಂದು ಹೇಳಲಾಗದು.ನನ್ನ ಸೇವೆಯನ್ನು ದೇಶ ಬಯಸಿದಾಗಲೆಲ್ಲಾ ಕೊಡಲು ಸಿದ್ಧನಿದ್ದೇನೆ ಎಂದರು.

ವೇದಿಕೆಯಲ್ಲಿ ನಾಗಾರ್ಜುನ ಶಿಕ್ಷಣ ಸಂಸ್ಥೆಗಳ ಸಿಒಒ ಭಾನುಚೈತನ್ಯವರ್ಮ,ನಿರ್ದೇಶಕ ಗೋಪಾಲಕೃಷ್ಣ, ಪ್ರಾಂಶುಪಾಲ ಡಾ.ತಿಪ್ಪೇಸ್ವಾಮಿ, ಡಾ.ಲೋಹಿತ್, ಡಾ.ಸಂಜೀವಕುಮಾರ್ಅತುರೆ ಮತ್ತಿತರರು ಇದ್ದರು.

ನಾಗಾರ್ಜುನ ಕಾಲೇಜಿನಲ್ಲಿ ನಡೆದ ಎಐ ಶೃಂಗಸಭೆಯಲ್ಲಿ ಅಮೆರಿಕಾ ಫ್ಲೋರಿಡಾ ಯೂನಿವರ್ಸಿಟಿ ಪ್ರಾಧ್ಯಾಪಕ ಎಸ್.ಎಸ್. ಅಯ್ಯಂಗಾರ್, ನಾಗಾರ್ಜುನ ಸಂಸ್ಥೆಗಳ ಸಿಒಒ ಭಾನುಚೈತನ್ಯವರ್ಮ, ನಿರ್ದೇಶಕ ಗೋಪಾಲಕೃಷ್ಣ, ಪ್ರಾಂಶುಪಾಲ ಡಾ.ತಿಪ್ಪೇಸ್ವಾಮಿ, ಡಾ.ಲೋಹಿತ್, ಡಾ.ಸಂಜೀವಕುಮಾರ್ಅತುರೆ ಮತ್ತಿತರರು ಇದ್ದರು.

ಭಾರತೀಯ ಸ್ಟೇಟ್ ಬ್ಯಾಂಕ್
ಮಂಡ್ಯ ಶಾಖೆ (03916)
ಪಿ.ಬಿ. ಸಂಖ್ಯೆ 58, 1978-19-78/1, ಕೆಂಪಯ್ಯ ಬಿಲ್ಡಿಂಗ್, ಆರ್.ಪಿ. ರಸ್ತೆ, ಮಂಡ್ಯ-571401. E-mail: sbi.03916@sbi.co.in

ನಿಯಮ 8(1) ಸ್ವಾಧೀನದ ಸೂಚನೆ (ಸ್ಥಿರಾಸ್ಥಿಗಳಿಗಾಗಿ)

ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್ಫೋರ್ಸ್ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ.
ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತ್ತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧಿನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.
• ಡಿಮ್ಯಾಂಡ್ ನೋಟಿಸ್ನ ದಿನಾಂಕ: 16.08.2025 • ಸ್ವಾಧೀನ ಪಡೆದುಕೊಂಡ ದಿನಾಂಕ: 23.12.2025
• ಒಟ್ಟು ಸಾಲದ ಮೊತ್ತ: ರೂ. 62,08,100/- (ಅರವತ್ತೆರಡು ಲಕ್ಷದ ಎಂಟು ಸಾವಿರದ ನೂರು ರೂಪಾಯಿಗಳು ಮಾತ್ರ) ದಿನಾಂಕ 18-12-2025 ರವರೆಗೆ+ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
• ಸಾಲಗಾರರ ಹೆಸರು ಮತ್ತು ವಿಳಾಸ: ಮೆ॥ ಲಿಷಾ ಕಾಂಕ್ರೀಟ್ ಪ್ರಾಡಕ್ಟ್ಸ್, ಪ್ರೊ. ಲೇಟ್ ಮೆಲ್ವಿನ್ ಫ್ರಾನ್ಸಿಸ್ ಸಿಕ್ವೇರ, Ass. No. 152100408800120158, ಪ್ಲಾಟ್ ನಂ. 275/ಎ & 275/ಎ1, ಕಾಳೇನಹಳ್ಳಿ ಗ್ರಾಮ, ಯಲಿಯೂರು ಗ್ರಾಮ ಪಂಚಾಯತ್, ಕೊತ್ತತಿ ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ-571402,
• ತೀರಿದಿರುವ ಕಾನೂನು ಉತ್ತರಾಧಿಕಾರಿಗಳ ಹೆಸರು ಮತ್ತು ವಿಳಾಸ: 1) ಜಯಮ್ಮ ಜಯಂತಿ ಸಿಕ್ವೇರ W/o ಲೇಟ್ ಮೆಲ್ವಿನ್ ಫ್ರಾನ್ಸಿಸ್ ಸಿಕ್ವೇರ 2) ಲಿಷಾ ಮರ್ಲಿನ್ ಸಿಕ್ವೇರ D/o ಲೇಟ್ ಮೆಲ್ವಿನ್ ಫ್ರಾನ್ಸಿಸ್ ಸಿಕ್ವೇರ ಇಬ್ಬರ ವಿಳಾಸ ನಂ. 06, ಲಿಷಾ, ಮಂಟಿ ಮೊಗರಹಳ್ಳಿ ಗ್ರಾಮ, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ-571438.
• ಅಡಮಾನವಿಟ್ಟ ಆಸ್ತಿಯ ವಿವರಗಳು: ಆಸ್ತಿ ಸಂಖ್ಯೆ-1: ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ವಸತಿ ಕಟ್ಟಡ ನಿವೇಶನ ಸಂಖ್ಯೆ 19, ಖಾತಾ ಸಂಖ್ಯೆ: 362/1/19, ಗ್ರಾಮ ಪಂಚಾಯತಿ ಕೋಡ್ ಸಂಖ್ಯೆ 152100700600320047, ಪೂರ್ವದಿಂದ ಪಶ್ಚಿಮಕ್ಕೆ: 9.14 ಮೀ., ಉತ್ತರದಿಂದ ದಕ್ಷಿಣಕ್ಕೆ: 15.24 ಮೀ., ಒಟ್ಟು 139.29 ಚ.ಮೀ., ವಿಳಾಸ: ಮೊಗರಹಳ್ಳಿ ಗ್ರಾಮ, ಹೊಸಹಳ್ಳಿ ಗ್ರಾಮ ಪಂಚಾಯತ್, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಲೇಟ್ ಮೆಲ್ವಿನ್ ಫ್ರಾನ್ಸಿಸ್ ಸಿಕ್ವೇರ S/o ಲೇಟ್ ಆಲ್ಫ್ರೆಡ್ ಸಿಕ್ವೇರರವರ ಹೆಸರಿನಲ್ಲಿ ಪೂರ್ವಕ್ಕೆ: ನಿವೇಶನ ಸಂ. 20, ಪಶ್ಚಿಮಕ್ಕೆ: ನಿವೇಶನ ಸಂ. 18, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ಸಂ. 16. ಆಸ್ತಿ ಸಂಖ್ಯೆ-2: ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ವಸತಿ ಕಟ್ಟಡ ನಿವೇಶನ ಸಂಖ್ಯೆ 20, ಖಾತಾ ಸಂಖ್ಯೆ: 362/1/20, ಗ್ರಾಮ ಪಂಚಾಯತಿ ಕೋಡ್ ಸಂಖ್ಯೆ 152100700600320048, ಪೂರ್ವದಿಂದ ಪಶ್ಚಿಮಕ್ಕೆ: 9.14 ಮೀ., ಉತ್ತರದಿಂದ ದಕ್ಷಿಣಕ್ಕೆ: 15.24 ಮೀ., ಒಟ್ಟು 139.29 ಚ.ಮೀ., ವಿಳಾಸ: ಮೊಗರಹಳ್ಳಿ ಗ್ರಾಮ, ಹೊಸಹಳ್ಳಿ ಗ್ರಾಮ ಪಂಚಾಯತ್, ಬೆಳಗೊಳ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಲೇಟ್ ಮೆಲ್ವಿನ್ ಫ್ರಾನ್ಸಿಸ್ ಸಿಕ್ವೇರ S/o ಲೇಟ್ ಆಲ್ಫ್ರೆಡ್ ಸಿಕ್ವೇರರವರ ಹೆಸರಿನಲ್ಲಿ ಪೂರ್ವಕ್ಕೆ: ನಿವೇಶನ ಸಂ. 21, ಪಶ್ಚಿಮಕ್ಕೆ: ನಿವೇಶನ ಸಂ. 19, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ಸಂ. 16.
ದಿನಾಂಕ: 28.12.2025 ಸಹಿ/- ಅಧಿಕೃತ ಅಧಿಕಾರಿ
ಸ್ಥಳ: ಮಂಡ್ಯ ಭಾರತೀಯ ಸ್ಟೇಟ್ ಬ್ಯಾಂಕ್, (SARFAESI ಕಾಯಿದೆ-2002 ಅಡಿಯಲ್ಲಿ)

ಸರಕಾರಿ ಪ್ರಾಥಮಿಕ ಶಾಲೆ ಜ್ಞಾನ ಹರಡುವ ದೇಗುಲ

ಗೌರಿಬಿದನೂರು: ನಗರಕ್ಕೆ ಕೂಗಳತೆಯ ದೂರದಲ್ಲಿ ಇದ್ದರೂ ಗೋಟಕಣಾಪುರ ಸರಕಾರಿ ಹಿರಿಯ ಪ್ರಾಥ ಮಿಕ ಶಾಲೆಯಲ್ಲಿ ಪ್ರಸ್ತುತ 94 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆದುಕೊಳ್ಳುತ್ತಿರುವುದು ನಿಜಕ್ಕೂ ಗ್ರಾಮಸ್ಥ ರಾದ ನಾವೆಲ್ಲರೂ ಹೆಮ್ಮೆ ಪಡುವ ವಿಚಾವೆಂದು ಪ್ರಾಂಶುಪಾಲರಾದ ಶ್ರೀನಿವಾಸ್ ತಿಳಿಸಿದರು. ನಗರದ ಗೋಟ ಕಣಾಪುರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಾ, ಗೋಟಕಾಣಾಪುರ ಗ್ರಾಮಸ್ಥರು ಹಾಗೂ ಇದೇ ಶಾಲೆಯಲ್ಲಿ ಓದಿದ ಹಳೆಯ ವಿದ್ಯಾರ್ಥಿಗಳ ಕ್ಷೇಮಾಭಿ ವೃದ್ಧಿ ಟ್ರಸ್ಟ್ ಪದಾಧಿಕಾರಿಗಳ ಕಾಳಜಿ ಹಾಗೂ ಪ್ರಯ ತ್ನದಿಂದಾಗಿ ನಮ್ಮೂರಿನ ಶಾಲೆಯು ಎಲ್ಲಾ ರೀತಿಯ ಮೂಲ ಸೌಲಭ್ಯಗಳನ್ನು ಒಳಗೊಂಡ ಜ್ಞಾನ ದೇಗುಲವಾ ಗಿದೆ ಎಂದರು. ಸಮಾರಂಭದಲ್ಲಿ ಶಾಲಾ ವಿದ್ಯಾರ್ಥಿ ಗಳಿಂದ ವಿವಿಧ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳನ್ನು ನಡೆಸಿಕೊಡಲಾಯಿತು. ನಂತರ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಹಳೆ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ನೆರವೇರಿಸಲಾಯಿತು. ಕಾರ್ಯಕ್ರ ಮದ ಅಧ್ಯಕ್ಷತೆಯನ್ನು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಮುರುಳಿ ವಹಿಸಿದ್ದರೆ ಸಮಾರಂಭದ ವೇದಿಕೆಯಲ್ಲಿ ಸರಕಾರಿ ನೌಕರರ ಸಂಘದ ಅಧ್ಯಕ್ಷ ಎನ್ ಆರ್. ಮಂಜುನಾಥ್, ಜಿಲ್ಲಾ ಪಂಚಾಯತಿ ಮಾಜಿ ಉಪಾಧ್ಯಕ್ಷ ಜಿಕೆ.ರಮೇಶ್, ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ದೇವರಾಜ್,ಕೋಚಿಮುಲ್ ಮಾಜಿ ಅಧ್ಯಕ್ಷ ಎಸ್.ರಮೇಶ್ ಉಪಸ್ಥಿತರಿದ್ದರು.

'ತಲ್ಲಣಿಸದಿರುವ ಮನವೇ ಸಂಸ್ಕೃತಿ-ಚಿಂತನ- ಚಾರಣ' ಕಾರ್ಯಕ್ರಮ | ಸಚಿವ ಪರಮೇಶ್ವರ್

ಮಾನವೀಯತೆ ಕಲಿಸುವ ಕೆಲಸ ಆಗಬೇಕು

ತುಮಕೂರು: ನಮ್ಮಲ್ಲಿ ಆದರ್ಶ, ವಿಚಾರಧಾರೆಗಳಿಗೆ ಕೊರತೆಯಿಲ್ಲ. ಆದರೆ ಅವುಗಳನ್ನು ಪಾಲಿಸುತ್ತಿಲ್ಲ. ಮನುಷ್ಯತ್ವ ಮಾನವೀಯತೆ ಕಲಿಸುವ ಕೆಲಸ ಆಗಬೇಕು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದ ಶ್ರೀದೇವಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕಾಗಿನೆಲೆ ಕನಕ ಗುರುಪೀಠ ಆಯೋಜಿಸಿದ್ದ 'ತಲ್ಲಣಿಸದಿರುವ ಮನವೇ ಸಂಸ್ಕೃತಿ-ಚಿಂತನ- ಚಾರಣ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಾವು ವೇದಿಕೆಗಳಲ್ಲಿ ಮಾತನಾಡುವ ರೀತಿ ನಡೆದುಕೊಳ್ಳುತ್ತಿಲ್ಲ. ನಮ್ಮ ನಡತೆ ಸರಿ ಹೋಗದ ಸಮಾನತೆ ಎಂಬುದು ಸಾಧ್ಯವಿಲ್ಲ. ಕೆಳ ಜಾತಿಯ ವ್ಯಕ್ತಿಯನ್ನು ಮದುವೆಯಾದಳು ಎಂಬ ಕಾರಣಕ್ಕೆ ತಂದೆಯೇ ಗರ್ಭಿಣಿ ಮಗಳನ್ನೇ ಕೊಲ್ಲುವಾಗ, ಭಾರತದ ಸಂಸ್ಕೃತಿ, ಪರಂಪರೆ ಎಷ್ಟು ಎತ್ತರಕ್ಕೆ ಬೆಳೆದು ಏನು ಪ್ರಯೋಜನ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಮಾಜದಲ್ಲಿ ಸಮಾನತೆ ತರಲು ಹಲವರು ನಿರಂತರವಾಗಿ ಶ್ರಮಿಸಿದ್ದಾರೆ. ಅವರ ಸಾಲಿಗೆ ಕಾಗಿನೆಲೆ ಕನಕ ಗುರುಪೀಠ ಸಹ ಒಂದು ಹೆಜ್ಜೆ ಮುಂದಿರಿಸಿದೆ. ಇದು ಕಠಿಣ ಹಾದಿ, ಇಂತಹ ಸ್ವಾಮೀಜಿಗಳ ಸಂಖ್ಯೆ ಹೆಚ್ಚಬೇಕು. ಸಮಾಜದ ಪರಿವರ್ತನೆಯಲ್ಲಿ ತೊಡಗುವವರನ್ನು ನಾನು ಎಂದಿಗೂ ಗೌರವಿಸುತ್ತೇನೆ. ಹಾಗಾಗಿ ಕಾಗಿನೆಲೆ ಗುರುಪೀಠದ ಎಲ್ಲ ಕಾರ್ಯಗಳಿಗೆ ನನ್ನ ಬೆಂಬಲವಿದೆ ಎಂದರು. ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಮಾತನಾಡಿ, ಧರ್ಮ ತಪ್ಪಲ್ಲ, ಆದರೆ ಧರ್ಮದ ಹೆಸರಿನಲ್ಲಿ ಕೋಮುವಾದಿಯಾಗುವುದು ತಪ್ಪು. 1927ರಲ್ಲಿ ಮನುಸ್ಮೃತಿಯನ್ನು ಅಂಬೇಡ್ಕರ್ಸುಟ್ಟು ಹಾಕಿದರು. ಅದರ ಸ್ಥಾನದಲ್ಲಿ ಸಂವಿಧಾನ ತಂದು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಕನಸು ಕಂಡರು. ಆದರೆ ಮನುಸ್ಮೃತಿಯನ್ನು ಮತ್ತೆ ಹುಟ್ಟು ಹಾಕುವ ಪ್ರಯತ್ನ ಈ ದೇಶದಲ್ಲಿ ನಡೆಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಪ್ರೊ. ನಾಗೇಂದ್ರಕುಮಾರ್ ಮಾತನಾಡಿ, ಭಕ್ತಿಗಳಲ್ಲಿ ಎರಡು ವಿಧ, ಶ್ರೀಮಂತರದ್ದು ಮತ್ತು ಬಡವರದ್ದು. ಕನಕದಾಸರ ಪ್ರಕಾರ ಭಕ್ತಿ ಎಂಬುದು ಏಕತೆ, ಭವ ಮೀರಿದ ಭಕ್ತಿ ಎಂದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ನಗರದ ಶ್ರೀದೇವಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕಾಗಿನೆಲೆ ಕನಕ ಗುರುಪೀಠ ಆಯೋಜಿಸಿದ್ದ 'ತಲ್ಲಣಿಸದಿರುವ ಮನವೇ ಸಂಸ್ಕೃತಿ-ಚಿಂತನ- ಚಾರಣ' ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್ ನ ಡಾ.ರಮಣ್ ಹುಲಿನಾಯ್ಕರ್,ಸಮಾಜವನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದೆ ತರಬೇಕೆಂಬ ಉದ್ದೇಶದಿಂದ ಶ್ರೀದೇವಿ ಶಿಕ್ಷಣ ಸಮೂಹ ಸಂಸ್ಥೆಗಳ ಸಹಯೋಗದಲ್ಲಿ ಪ್ರತಿವರ್ಷ 1.50-2 ಕೋಟಿ ರೂಗಳ ಸ್ಕಾಲರ್ಶಿಫ್ ನೀಡುತ್ತಾ ಬಂದಿದ್ದೇವೆ. ಈ ವರ್ಷ 22 ವಿದ್ಯಾರ್ಥಿಗಳಿಗೆ ಈ ಪುರಸ್ಕಾರ ಲಭಿಸಿದೆ ಎಂದರು. ರಾಮಕೃಷ್ಣ ವಿವೇಕಾನಂದ ಆಶ್ರಮದ ಡಾ.ವೀರೇಶಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾಗಿನೆಲೆ ಕನಕಗುರುಪೀಠದ ಶ್ರೀನಿರಂಜನಾನಂದಪುರಿ ಸ್ವಾಮೀಜಿ ಮತ್ತಿತರರಿದ್ದರು.

ಸಮಾಚಾರ ಸಣ್ಣದಲ್ಲ

ಸ್ಫೋಟದಲ್ಲಿ ತಂಗಿ ಮರಣ: ಆಘಾತಕ್ಕೆ ಅಣ್ಣನೂ ಸಾವು

ಮೈಸೂರು: ಹೀಲಿಯಂ ಗ್ಯಾಸ್ ಸ್ಫೋಟದ ದುರಂತದಲ್ಲಿ ಗಂಭೀರ ಗಾಯಗೊಂಡು ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಮಂಜುಳಾ ಸಾವನ್ನಪ್ಪಿದ ಸುದ್ದಿ ತಿಳಿದು ಅಘಾತಕ್ಕೊಳಗಾದ ಅಣ್ಣನೂ ಸಹ ಮೃತಪಟ್ಟಿದ್ದಾರೆ.ತಂಗಿ ಮಂಜುಳ ಸಾವಿನ ಸುದ್ದಿ ಕೇಳಿ ಅಣ್ಣ ಪರಮೇಶ್ವರ್(60) ಸಾವನ್ನಪ್ಪಿದ್ದಾರೆ. ಅವರು ನಂಜನಗೂಡಿನ ಚಾಮಲಾಪುರದ ನಿವಾಸಿಗಳಾಗಿದ್ದಾರೆ. ಮೈಸೂರು ಅರಮನೆ ಮುಂಭಾಗ ಸಂಭವಿಸಿದ ಹೀಲಿಯಂ ಸಿಲಿಂಡರ್‌ಬ್ಲಾಸ್ಟ್ ದುರಂತದಲ್ಲಿ ಮಹಿಳೆ ಮಂಜಳ ಸಿಲುಕಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮೃತ ಮಂಜುಳ ಅಣ್ಣ ಪರಮೇಶ್ವರ್‌ಇದೀಗ ತಂಗಿಯ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಮೃತಪಟ್ಟಿದ್ದು, ಇಡೀ ಕುಟುಂಬದಲ್ಲಿ ಶೋಕದಲ್ಲಿ ಮುಳುಗಿದೆ.

ಸ್ಫೋಟಕ ವಸ್ತುಗಳ ಬಳಕೆ ನಿಷೇಧಕ್ಕೆ ಆಗ್ರಹ

ಮೈಸೂರು: ಮೈಸೂರಿನ ಅಂಬಾವಿಲಾಸ ಅರಮನೆ ಮುಂಭಾಗ ಬಲೂನ್ಗೆ ಹೀಲಿಯಂ ತುಂಬುವ ಸಿಲಿಂಡರ್ ಸ್ಫೋಟ ಪ್ರಕರಣ ಅತ್ಯಂತ ಗಂಭೀರವಾದುದಾಗಿದ್ದು, ಸರಕಾರ ತಕ್ಷಣವೇ ಸಾರ್ವಜನಿಕ, ಪ್ರವಾಸಿ ತಾಣಗಳಲ್ಲಿ ಇಂತಹ ಸ್ಫೋಟಕ ವಸ್ತುಗಳ ಬಳಕೆಯನ್ನು ನಿಷೇಧಿಸಬೇಕು ಎಂದು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಗ್ರಹಿಸಿದ್ದಾರೆ.ಮೈಸೂರು ನಗರ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಅದರಲ್ಲೂ ಅಂಬಾವಿಲಾಸ ಅರಮನೆ ನೋಡಲು ದೇಶ-ವಿದೇಶಗಳಿಂದ ಲಕ್ಷಾಂತರ ಜನ ಆಗಮಿಸುತ್ತಾರೆ. ಅಂತಹ ಅರಮನೆ ಮುಂಭಾಗವೇ ಈ ದುರಂತ ನಡೆದಿರುವುದು ವಿಪರ್ಯಾಸ. ವರ್ಷಾಂತ್ಯದಲ್ಲಿ ಮೈಸೂರು ಅರಮನೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಿರುತ್ತದೆ. ಜತೆಗೆ ಅರಮನೆ ಆವರಣದಲ್ಲಿ ಮಾಗಿ ಉತ್ಸವ ನಡೆಯುತ್ತಿದೆ. ಇಂತಹ ಹೊತ್ತಿನಲ್ಲಿ ಈ ರೀತಿಯ ಅವಘಡ ಸಂಭವಿಸಿದೆ. ಮುಂದಿನ ದಿನಗಳಲ್ಲಿ ಇಂತಹ ಅವಘಡಗಳ ಬಗ್ಗೆ ಎಚ್ಚರ ವಹಿಸಬೇಕಿದೆ. ಈ ಬಗ್ಗೆ ರಾಜ್ಯ ಸರಕಾರ ತುರ್ತು ಗಮನಹರಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ, ಪ್ರವಾಸಿ ತಾಣಗಳಲ್ಲಿ ಇಂತಹ ಸ್ಫೋಟಕಗಳ ಬಳಕೆಯನ್ನು ನಿಷೇಧಿಸಬೇಕು.ಬೀದಿ ಬದಿ ವ್ಯಾಪಾರಿಗಳಿಗೆ ಸುರಕ್ಷತಾ ನೀತಿ ರೂಪಿಸಿ ಆ ಬಗ್ಗೆ ವ್ಯಾಪಾರಿಗಳಲ್ಲಿ ಅರಿವು ಮೂಡಿಸಬೇಕಿದೆ. ಈ ಬಗ್ಗೆ ಸ್ಥಳೀಯಾಡಳಿತ, ನಗರ ಪಾಲಿಕೆ ಹಾಗೂ ಜಿಲ್ಲಾಡಳಿತ ತುರ್ತು ಗಮನಹರಿಸಬೇಕು.ಅಸಂಘಟಿತ ವ್ಯಾಪಾರಿ ವಲಯದವರಿಗೆ ರಕ್ಷಣೆ ನೀಡುವ ಜತೆಗೆ ಪ್ರವಾಸಿಗರು, ಸಾರ್ವಜನಿಕರ ರಕ್ಷಣೆಗೂ ಮುಂದಾಗಬೇಕಿದೆ ಎಂದು ಒತ್ತಾಯಿಸಿದ್ದಾರೆ.

ಈಶ್ವರ ಖಂಡ್ರೆ ಸಂತಾಪ

ಚಾಮರಾಜನಗರ: ಬಂಡೀಪುರ ಮರಳಳ್ಳ ಶಿಬಿರದ ಬಳಿ ಹುಲಿ ದಾಳಿಗೆ ಎಪಿಸಿ ವಾಚರ್‌ಸಣ್ಣಹೈದ (56) ಮೃತಪಟ್ಟಿರುವ ಬಗ್ಗೆ ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಸಂತಾಪ ವ್ಯಕ್ತಪಡಿಸಿದ್ದಾರೆ. ಈ ದುಃಖದ ಸಂದರ್ಭದಲ್ಲಿ ಸಣ್ಣ ಹೈದ ಅವರ ಕುಟುಂಬದೊಂದಿಗೆ ಇಲಾಖೆ ನಿಲ್ಲುತ್ತದೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಕುಟುಂಬದವರಿಗೆ ಅಗಲಿಕೆಯ ನೋವು ಸಹಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದ್ದಾರೆ.

ಹುಲಿ ದಾಳಿಗೆ ವಾಚರ್ ಸಾವು

ಚಾಮರಾಜನಗರ: ಗಸ್ತು ತಿರುಗುತ್ತಿದ್ದ ವೇಳೆ ಹುಲಿ ದಾಳಿ ನಡೆಸಿ ವಾಚರ್‌ಅನ್ನು ಕೊಂದು ಹಾಕಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಂಡೀಪುರ ವಲಯದ ಕಳ್ಳಬೇಟೆ ಶಿಬಿರ ಮರಳಳ್ಳ ಕ್ಯಾಂಪ್ ಬಳಿ ಶನಿವಾರ ಮಧ್ಯಾಹ್ನ ನಡೆದಿದೆ. ಮೂಲತಃ ಕಸುವಿನಹಳ್ಳಿಯ ಸಣ್ಣಹೈದ(55) ಹುಲಿ ದಾಳಿಯಿಂದ ಮೃತಪಟ್ಟ ಅರಣ್ಯ ಸಿಬ್ಬಂದಿ. ಮರಳಳ್ಳ ಕ್ಯಾಂಪನಿಂದ ಮೂವರು ಸಿಬ್ಬಂದಿಗಳ ಜೊತೆಗೆ ಗಸ್ತು ತಿರುಗುವಾಗ ಹುಲಿ ಏಕಾಏಕಿ ದಾಳಿ ನಡೆಸಿ ಸಣ್ಣಹೈದ ಅವರನ್ನು ಕೊಂದು ಹಾಕಿದೆ. ಉಳಿದ ಇಬ್ಬರು ಓಡಿ ಹೋಗಿದ್ದು, ಅವರಿಗೂ ಸಹ ಗಾಯಗಳಾಗಿದೆ ಎಂದು ವಲಯಾರಣ್ಯಾಧಿಕಾರಿ ಮಹದೇವು ತಿಳಿಸಿದ್ದಾರೆ.

ಅಗಲಿದ ಜೀವ

ಪ್ರೀತಿ ಸುಮಂತ್ ಶರ್ಮಾ

ಚಾಮರಾಜನಗರ : ಗುಂಡ್ಲುಪೇಟೆ ತಾಲೂಕಿನ ಬೊಮ್ಮಲಾಪುರ ಗ್ರಾಮದ ಜ್ಯೋತಿಷಿ, ಪುರೋಹಿತರಾದ ಸುಮಂತ್ ಶರ್ಮಾ ಅವರ ಧರ್ಮಪತ್ನಿ ಪ್ರೀತಿ (29) ಅವರು ಅನಾರೋಗ್ಯದ ಕಾರಣದಿಂದ ನಿಧನರಾಗಿದ್ದಾರೆ. ಕಳೆದ ಕೆಲ ದಿನಗಳಿಂದ ಅನಾರೋಗ್ಯಕ್ಕೀಡಾಗಿದ್ದರು. ಮೃತರ ಅಂತ್ಯಕ್ರಿಯೆ ಬೆಂಗಳೂರಿನ ಚಾಮರಾಜಪೇಟೆ ರುದ್ರಭೂಮಿಯಲ್ಲಿ ನೆರವೇರಿತು. ಮೃತರು ಪತಿ ಸುಮಂತ ಶರ್ಮ,ತಂದೆ ನರಸಿಂಹಶಾಸ್ತ್ರಿ, ಪತ್ರಕರ್ತ ಸುರೇಂದ್ರ ಹಾಗೂ ಅಪಾರ ಬಂಧು-ಬಳಗ ಅಗಲಿದ್ದಾರೆ. ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

{ ಪ್ರತಾಪ ಸಿಂಹ } ಮಾಜಿ ಸಂಸದ

ಹನುಮ ಜಯಂತಿ ಎಲ್ಲ ಸಮುದಾಯಗಳನ್ನ ಒಂದುಗೂಡಿಸುವ ಸಂಕೇತ. ಇದು ನಮ್ಮ ಜನರಲ್ಲಿ ಧಾರ್ಮಿಕ ಜಾಗೃತಿ, ಬದ್ಧತೆ. ಅರಿವು ಮೂಡುತ್ತಿರುವ ಸಂಕೇತ. ಹಳೇ ಮೈಸೂರು ಭಾಗದಲ್ಲಿ ಮಹಾರಾಜರು ಕುಸ್ತಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು. ಇವತ್ತಿಗೂ ದಸರಾದಲ್ಲಿ ಕುಸ್ತಿ ನಡೆಯುತ್ತದೆ. ಬಹಳಷ್ಟು ಕಡೆ ಹನುಮ ಗರಡಿ ಮನೆಗಳಿವೆ.

ಗಡಿ ಜಿಲ್ಲೆಯ ಮೊದಲ ಸರಕಾರಿ ಕಾನೂನು ಕಾಲೇಜು | ಶಾಸಕ ಪುಟ್ಟರಂಗಶೆಟ್ಟಿ ಅವರಿಂದ ಉದ್ಘಾಟನೆ

ಪರಿಶ್ರಮದಿಂದ ಲಾ ಪದವಿ ಪಡೆದು ಕೀರ್ತಿ ತನ್ನಿ

ಚಾಮರಾಜನಗರ : ಹಲವು ವರ್ಷಗಳ ಸತತ ಪ್ರಯತ್ನ ಫಲವಾಗಿ ಸರಕಾರಿ ಕಾನೂನು ಕಾಲೇಜು ಇಂದು ಉದ್ಘಾಟನೆಗೊಂಡಿದ್ದು, ಜಿಲ್ಲೆಯ ವಿದ್ಯಾರ್ಥಿಗಳು ಪರಿಶ್ರಮದಿಂದ ಅಧ್ಯಯನ ಮಾಡಿ ಕೀರ್ತಿ ತರಬೇಕೆಂದು ಎಂ.ಎಸ್.ಐ.ಎಲ್ ಅಧ್ಯಕ್ಷ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ನಗರದ ಸರಕಾರಿ ಕಾನೂನು ಕಾಲೇಜಿನಲ್ಲಿ ನೂತನ ಕಾನೂನು ಕಾಲೇಜು ಉದ್ಘಾಟಿಸಿ ಮತ್ತು ಸಾಂಸ್ಕೃತಿಕ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಹಿಂದೆಯೇ ಕಾನೂನು ಕಾಲೇಜು ಸ್ಥಾಪನೆಗೆ ಪ್ರಕ್ರಿಯೆ ಆರಂಭಗೊಂಡಿದ್ದು, ಸಂಸದರಾಗಿದ್ದ ದಿ. ಧ್ರುವನಾರಾಯಣ್ ಅವರು ವಿಶೇಷವಾಗಿ ಪರಿಶ್ರಮಪಟ್ಟರು. ಸತತ ಪ್ರಯತ್ನದ ಫಲವಾಗಿ ಜಿಲ್ಲೆಯಲ್ಲಿ ಮೊದಲ ಕಾನೂನು ಕಾಲೇಜು ಆರಂಭಗೊಂಡಿದೆ. ವಿದ್ಯಾರ್ಥಿಗಳು ಯಶಸ್ವಿಯಾಗಿ ಕಾನೂನು ಪದವಿ ಮುಗಿಸಿ ಮುಂದೆ ಉನ್ನತ ಅವಕಾಶಗಳನ್ನು ಪಡೆಯುವಂತಾಗಬೇಕು ಎಂದರು.

ಜಿಲ್ಲೆಯಲ್ಲಿ ಎಂಜಿನಿಯರಿಂಗ್, ವೈದ್ಯಕೀಯ, ಐಟಿಐ, ವಸತಿ ಪದವಿ ಕಾಲೇಜು, ಮಹಿಳಾ ಪದವಿ ಕಾಲೇಜು, ಆದರ್ಶಶಾಲೆ, ವಿಶ್ವವಿದ್ಯಾನಿಲಯ, ಕೃಷಿ ವಿಜ್ಞಾನ ಕಾಲೇಜು ಇದೆ. ಜಿಲ್ಲೆಯನ್ನು ಶೈಕ್ಷಣಿಕವಾಗಿ ಅಭಿವೃದ್ದಿಗೊಳಿಸುವ ಉದ್ದೇಶದಿಂದ ಈ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ವಿಜ್ಞಾನ ತರಬೇತಿ ಕೇಂದ್ರ ತರಲಾಗುವುದು. ಕಾನೂನು ಕಾಲೇಜಿಗೆ ಸ್ವಂತ ಕಟ್ಟಡವನ್ನು ಒಂದೆರೆಡು ವರ್ಷದಲ್ಲಿಯೇ ನಿರ್ಮಾಣ ಮಾಡಲಾಗುವುದು ಎಂದು ಶಾಸಕರು ತಿಳಿಸಿದರು.

ನಗರಕ್ಕೆ ಕುಡಿಯುವ ನೀರಿನ ಸೌಕರ್ಯ ಒದಗಿಸಲು 143 ಕೋಟಿ ರೂ. ವೆಚ್ಚದಲ್ಲಿ ಟೆಂಡರ್‌ಆಗಿದೆ. ಒಳಚರಂಡಿಗೆ 163 ಕೋಟಿ ರೂ., ಕ್ರೀಡಾಂಗಣ ಅಭಿವೃದ್ದಿಗಾಗಿ 15 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಹೀಗೆ ಹಲವಾರು ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಹೇಳಿದರು.

ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್‌ಮುನ್ನಾ ಅವರು ಮಾತನಾಡಿ, ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ವಿವಿಧ ವಿಷಯಗಳ ಕಾಲೇಜುಗಳು ಇವೆ. ಬಹಳ ವರ್ಷಗಳ ನಂತರ ವಿದ್ಯಾರ್ಥಿಗಳಿಗೆ ಜಿಲ್ಲೆಯಲ್ಲೇ ಕಾನೂನು ವ್ಯಾಸಂಗ ಮಾಡುವ ಅವಕಾಶ ಲಭಿಸಿದೆ. ವಿದ್ಯಾರ್ಥಿಗಳು ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಓದಿನ ಕಡೆ ಹೆಚ್ಚು ಗಮನ ನೀಡಬೇಕು ಎಂದು ಸಲಹೆ ಮಾಡಿದರು. ಕಾನೂನು ಕಾಲೇಜು ಪ್ರಾಂಶುಪಾಲರಾದ ಡಾ. ಕೆ.ಎಸ್. ಲಲಿತಾಬಾಯಿ ಅವರು ಮಾತನಾಡಿ, ಕಾನೂನು ಕಾಲೇಜಿಗೆ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು 13 ಲಕ್ಷ ರೂ. ಮೌಲ್ಯದ ಪೀಠೋಪಕರಣಗಳನ್ನು ನೀಡಿದ್ದಾರೆ. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು 5 ಲಕ್ಷ ರೂ. ಮೌಲ್ಯದ ಕಾನೂನು ಪುಸ್ತಕಗಳನ್ನು ಕೊಡುಗೆಯಾಗಿ ಕಾಲೇಜಿಗೆ ನೀಡಿದ್ದಾರೆ. ಎಲ್ಲರ ಸಹಕಾರ ಕಾಳಜಿಯಿಂದ ಕಾನೂನು ಕಾಲೇಜು ಸಾಕಾರಗೊಂಡಿದೆ ಎಂದರು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಕುಮಾರ್‌ನಾಯಕ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಎಂ.ಎಸ್.ಐ.ಎಲ್ ಅಧ್ಯಕ್ಷ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಚಾಮರಾಜನಗರದಲ್ಲಿ ನೂತನ ಕಾನೂನು ಕಾಲೇಜು ಉದ್ಘಾಟಿಸಿದರು

ಮೂರು ವರ್ಷದ ಕಾನೂನು ಪದವಿ ಕೋರ್ಸ್ ಆರಂಭ

ಪ್ರಾಸ್ತವಿಕ ನುಡಿಗಳನ್ನಾಡಿದ ಸಹಾಯಕ ಪ್ರಾಧ್ಯಾಪಕರಾದ ಅಶ್ವಿನಿ ಅವರು, ಪ್ರಸ್ತುತ ಮೂರು ವರ್ಷದ ಕಾನೂನು ಪದವಿ ಕೋರ್ಸ್‌ಗಳನ್ನು ಆರಂಭಿಸಿದ್ದು, ಮುಂಬರುವ ವರ್ಷಗಳಲ್ಲಿ ಐದು ವರ್ಷದ ಕಾನೂನು ಪದವಿ ಪ್ರಾರಂಭ ಮಾಡಲು ಎಲ್ಲರು ಬೆಂಬಲ ನೀಡಬೇಕು. ಜಿಲ್ಲೆಯಲ್ಲಿ ಕಾನೂನು ಕಾಲೇಜನ್ನು ಮಾದರಿ ಕಾಲೇಜಾಗಿ ರೂಪುಗೊಳ್ಳಲು ಸರ್ವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ವಿಶ್ವಮಾನವ ದಿನಾಚರಣೆ

ಮಂಡ್ಯ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶ್ವಮಾನವ ದಿನಾಚರಣೆಯನ್ನು ಡಿ.29ರಂದು ಬೆಳಿಗ್ಗೆ 11 ಗಂಟೆಗೆ ಅರ್ಕೇಶ್ವರ ನಗರದ ಬಾಲಕಿಯರ ಪಿಯು ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಕೇಂದ್ರ ಕೈಗಾರಿಕಾ ಸಚಿವ ಹೆಚ್.ಡಿ .ಕುಮಾರಸ್ವಾಮಿ ಘನ ಉಪಸ್ಥಿತಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ.

ಶಾಸಕ ಎ.ಬಿ ರಮೇಶ ಬಂಡಿಸಿದ್ದೇಗೌಡ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಪಿ ಎಂ ನರೇಂದ್ರಸ್ವಾಮಿ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಮಂಡ್ಯ ಶಾಸಕರಾದ ಪಿ.ರವಿಕುಮಾರ ಗಣಿಗ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ವಿಧಾನ ಸಭಾ ಶಾಸಕರುಗಳಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ. ಎಂ ಉದಯ, ರಾಜ್ಯ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್ ಆತ್ಮಾನಂದ ಭಾಗವಹಿಸಲಿದ್ದಾರೆ. ಕವಿಗಳಾದ ಕೆ.ಪಿ ಮೃತ್ಯುಂಜಯ ಅವರು ಉಪನ್ಯಾಸ ನೀಡಲಿದ್ದಾರೆ.

ಕುಶಾಲನಗರದಲ್ಲಿ ಜ.2ರಿಂದ 8ರವರೆಗೆ ವಾಸವಿ ಸಪ್ತಾಹ

ಮಡಿಕೇರಿ: ಕುಶಾಲನಗರದ ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಬ್ರಹ್ಮ ಕಳಶೋತ್ಸವಕ್ಕೆ ''ವಾಸವಿ ಸಪ್ತಾಹ-2026'' ಜ.2ರಿಂದ 8ರವರೆಗೆ ವಿವಿಧ ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ಟ್ರಸ್ಟ್ ಅಧ್ಯಕ್ಷರಾದ ಬಿ.ಆರ್. ನಾಗೇಂದ್ರ ಪ್ರಸಾದ್ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

1947ರಲ್ಲಿ ಶ್ರೀ ಮೈಲಾರ ಶೆಟ್ಟರ ಅಧ್ಯಕ್ಷತೆಯಲ್ಲಿ ಪ್ರತಿಷ್ಠಾಪನೆಗೊಂಡ ಶ್ರೀ ವಾಸವಿ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಪುನರ್‌ಪ್ರತಿಷ್ಠಾಪನಾ ಕಾರ್ಯ 2014ರಲ್ಲಿ ನಡೆಯಿತು. ಈ ದೇವಸ್ಥಾನದಲ್ಲಿ 12 ವರ್ಷಗಳಿಗೊಮ್ಮೆ ನಡೆಯಬೇಕಾದ ಕುಂಭಾಭಿಷೇಕ, ಬ್ರಹ್ಮ ಕಳಶೋತ್ಸವ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಜರುಗಲಿದೆಯೆಂದು ತಿಳಿಸಿದರು.

''ವಾಸವಿ ಸಪ್ತಾಹ''ವನ್ನು ಕುಶಾಲನಗರದಲ್ಲಿ ಆಯೋಜಿಸಲಾಗುತ್ತಿದೆ. ಸಪ್ತಾಹದ ಆರಂಭಿಕ ದಿನವಾದ ಜ.2ರಂದು ಬೆಳಿಗ್ಗೆ ''ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ''ಕ್ಕಾಗಿ ವಾಕಥಾನ್ ಮತ್ತು ಸೈಕಥಾನ್ಗಳನ್ನು ಆಯೋಜಿಸಲಾಗಿದೆ. ಇದು ಬೆಳಗ್ಗೆ 7 ಗಂಟೆಗೆ ಹೋಟೆಲ್ ಅತಿಥಿ ಕಂಫರ್ಟ್ಸ್ ಬಳಿ ಆರಂಭಗೊಳ್ಳಲಿದೆ.ಅದೇ ದಿನ ಉಚಿತ ಆರೋಗ್ಯ ತಪಾಸಣಾ ಮತ್ತು ರಕ್ತದಾನ ಶಿಬಿರ ಹೋಟೆಲ್ ಕನ್ನಿಕಾ ಇಂಟರ್ನ್ಯಾಷನಲ್ನ ಕನ್ನಿಕಾ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿದೆಯೆಂದು ಮಾಹಿತಿ ನೀಡಿದರು.

.3ರಂದು ಬೆಳಗ್ಗೆ ಕುಶಾಲನಗರದ ಸಮುದಾಯ ಆರೋಗ್ಯ ಕೇಂದ್ರದ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಮಧ್ಯಾಹ್ನ ಕೂಡಿಗೆಯ ಶಕ್ತಿ ವೃದ್ಧಾಶ್ರಮದ ಹಿರಿಯರಿಗೆ ಭೋಜನದ ವ್ಯವಸ್ಥೆಯಿದೆ. ಅದೇ ದಿನ ಸಂಜೆ ಕಾವೇರಿ ಮಹಾ ಆರತಿ ಬಳಗದೊಂದಿಗೆ ಕಾವೇರಿಗೆ 181ನೇ ಮಹಾ ಆರತಿ ಹಮ್ಮಿಕೊಳ್ಳಲಾಗಿದೆ. ಜ.7ರಂದು ಎಂಎಸ್ ಎಇ ಕಾರ್ಯಾಗಾರ ನಗರದ ಪಾಳ್ಯಂ ಎಮರಾಲ್ಡ್ ನಲ್ಲಿದೆ. ಜ.8ರಂದು ಸದೃಢ ಭಾರತಕ್ಕಾಗಿ ವಿದ್ಯಾರ್ಥಿಗಳ ಪಾತ್ರ ವಿಷಯದ ಬಗ್ಗೆ ಭಾಷಣ ಸ್ಪರ್ಧೆ ಮತ್ತು ಹಳ್ಳಿ ಜೀವನ ವಿಷಯದ ಬಗ್ಗೆ ಚಿತ್ರಕಲಾ ಸ್ಪರ್ಧೆಯನ್ನು ಆಯ್ದ ಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದೆಯೆಂದರು.

ಗೋಷ್ಠಿಯಲ್ಲಿ ಶ್ರೀ ವಾಸವಿ ಕನ್ನಿಕಾಪರಮೇಶ್ವರಿ ಟ್ರಸ್ಟ್ ಮತ್ತು ಆರ್ಯವೈಶ್ಯ ಮಂಡಳಿಯ ಕಾರ್ಯದರ್ಶಿ ಕೆ.ಪ್ರವೀಣ್, ಖಜಾಂಚಿ ಪಿ. ಎಸ್.ಪ್ರಶಾಂತ್, ಕನ್ನಿಕಾ ಸಹಕಾರ ಸಂಘದ ಅಧ್ಯಕ್ಷರಾದ ಬಿ.ಅಮೃತ್ ರಾಜ್, ವಾಸವಿ ಸಪ್ತಾಹದ ಯೋಜನಾ ನಿರ್ದೇಶಕರಾದ ಎ.ಎಸ್.ಕುಮಾರ್ ಉಪಸ್ಥಿತರಿದ್ದರು.

ಸಂಪ್ರದಾಯದಂತೆ ಪೂಜೆಪುನಸ್ಕಾರಗಳಿಗೆ ಅವಕಾಶ

ತಿ.ನರಸೀಪುರ: ಯುಗಾದಿ ಹಬ್ಬದಂದು ಶ್ರೀ ಕ್ಷೇತ್ರ ರಾಜಬೊಪ್ಪೇಗೌಡನ ಪುರದ ಗದ್ದುಗೆಯಲ್ಲಿ ನಡೆಯುವ ಜಾತ್ರೆಯಲ್ಲಿ ಸ್ಥಳೀಯ ನೀಲಗಾರರಿಗೆ ಹಿಂದೆ ನಡೆಯುತ್ತಿದ್ದ ಸಂಪ್ರದಾಯದಂತೆ ಪೂಜೆ ಪುನಸ್ಕಾರಗಳನ್ನು ನಡೆಸಲು ಅವಕಾಶವನ್ನು ಕಲ್ಪಿಸುವಂತೆ ಸೋಸಲೆ ಹೋಬಳಿ ನೀಲಗಾರರು ಆಗ್ರಹಿಸಿದರು.

ಪಟ್ಟಣದ ಕಬಿನಿ ಅತಿಥಿಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ರೈತ ಮುಖಂಡ ಚಿದರವಳ್ಳಿ ನಾಗೇಂದ್ರ, ಮಾತನಾಡಿ, ಪ್ರಸ್ತುತ ದಿನಗಳಲ್ಲಿ ರಾಜ ಬೊಪ್ಪೇಗೌಡನಪುರದಲ್ಲಿ ಸಾಕಷ್ಟು ಗೊಂದಲಕಾರಿ ಸಂಗತಿಗಳು ನಡೆಯುತ್ತಿದ್ದು, ಈ ಹಿಂದೆ ಗದ್ದುಗೆಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ನಡೆಯುವ ಜಾತ್ರೆಯಲ್ಲಿ ವಿವಿಧ ಗ್ರಾಮಗಳ ಭಕ್ತರಿಗೆ ದೇವಸ್ಥಾನ ಆಡಳಿತ ಮಂಡಳಿ ತನ್ನದೇ ಆದ ಸೇವೆ ಮತ್ತು ಜವಾಬ್ದಾರಿಯ ಕಾರ್ಯಗಳನ್ನು ನಡೆಸಲು ಜವಾಬ್ದಾರಿ ವಹಿಸಿತ್ತು. ಈ ವರ್ಷ ನಡೆಯುವ ಜಾತ್ರೆಯಲ್ಲೂ ವಿವಿಧ ಕಡೆಯಿಂದ ಬರುವ ನೀಲಗಾರರ ಭಕ್ತರಿಗೆ ಹಿಂದೆ ನೀಡಿದ್ದ ಜವಾಬ್ದಾರಿಯನ್ನು ನಡೆಸಲು ಅವಕಾಶ ನೀಡಬೇಕು ಎಂದರು.

ಭಕ್ತರು ಹಲವಾರು ವರ್ಷಗಳಿಂದ ಕುಟುಂಬ ಸಮೇತರಾಗಿ ದೇವಾಲಯಕ್ಕೆ ಬಂದು ದೇವರಿಗೆ ಪೂಜೆ ಸಲ್ಲಿಸಿ ಪುನೀತರಾಗುತ್ತಾರೆ. ಆದರೆ ಕೆಲವರು ಇದನ್ನು ಸಹಿಸದೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿರುವುದಕ್ಕೆ ಭಕ್ತರು ಕಿವಿ ಕೊಡಬಾರದು ಎಂದು ಮನವಿ ಮಾಡಿದರು.

ಈ ವೇಳೆ ಕಳ್ಳಿಪುರ ನಾರಾಯಣ್ ,ಮೊಳ್ಳಯ್ಯ, ಸಿದ್ದಪ್ಪಾಜಿ,ಮಾದೇಗೌಡ ಇತರರು ಹಾಜರಿದ್ದರು.

ಅತಿಥಿಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ರೈತ ಮುಖಂಡ ಚಿದರವಳ್ಳಿ ನಾಗೇಂದ್ರ ಮಾತನಾಡಿದರು.

ಎಪಿಎಂಸಿ ಮಳಿಗೆ ಹರಾಜಿಗೆ ಕರವೇ ಆಗ್ರಹ

ಕೆ.ಆರ್.ಪೇಟೆ : ಪಟ್ಟಣದ ಎಪಿಎಂಸಿ ಮಳಿಗೆಗಳನ್ನು ನಿಯಮಾನುಸಾರ ಬಹಿರಂಗ ಹರಾಜು ಮಾಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಡಿ.ಎಸ್. ವೇಣು ಹೋರಾಟದ ಎಚ್ಚರಿಕೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಎಪಿಎಂಸಿ ವಾಣಿಜ್ಯ ಮಳಿಗೆಗಳನ್ನು ಬಲಾಡ್ಯರು,ಉಳ್ಳವರು ಹಲವಾರು ವರ್ಷಗಳಿಂದ ಇಲಾಖೆಯ ನಿಯಮ ಮೀರಿ ಹರಾಜು ಪ್ರಕ್ರಿಯೆ ನಡೆಸಿಕೊಂಡು ಬಂದಿದ್ದಾರೆ ಇದರ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಕರ್ನಾಟಕ ರಕ್ಷಣಾ ವೇದಿಕೆ ಹಲವು ಬಾರಿ ಮನವಿ ಮಾಡಿದರೂ ಬಹಿರಂಗ ಹರಾಜು ಮಾಡದೆ,ಬಾಡಿಗೆ ವಸೂಲಾತಿ ಆಗದೇ ಇಲಾಖೆಗೆ ಸರಿಯಾದ ಆದಾಯವೂ ಇಲ್ಲದಂತಾಗಿದೆ. ಅಧಿಕಾರಿಗಳು ಗೌಪ್ಯವಾಗಿ ಬಾಡಿಗೆ ಕಡಿಮೆ ಪ್ರಮಾಣದಲ್ಲಿ ಹೆಚ್ಚಿಸಿ ಇಲಾಖೆಗೆ ವಂಚಿಸುತ್ತಿದ್ದಾರೆ ಎಂಬ ಸಂಶಯ ಕಾಡುತ್ತಿದೆ ಎಂದು ಆರೋಪಿಸಿದರು. ಅಧಿಕಾರಿಗಳು ಮುತುವರ್ಜಿವಹಿಸಿ ತಮ್ಮ ಪ್ರಾಗಂಣದಲ್ಲಿರುವ ವಾಣಿಜ್ಯ ಮಳಿಗೆಗಳನ್ನು ನಿಯಮದ ಪ್ರಕಾರ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಕೈಗೊಂಡು ಹಲವು ವರ್ಷಗಳಿಂದ ಬಲಾಢ್ಯರ ಕೈಯಲ್ಲಿ ಇರುವ ಬಳಕೆಗಳನ್ನ ಅರ್ಹ ಫಲಾನುಭವಿಗಳಿಗೂ ಅನುಕೂಲವಾಗುವಂತೆ ಪತ್ರಿಕೆ ಪ್ರಕಟಣೆ ತಿಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಕರವೇ ಜಿಲ್ಲಾ ಅಧ್ಯಕ್ಷ ಡಿ.ಎಸ್ ವೇಣು ಆಗ್ರಹಿಸಿ ಹೋರಾಟದ ಎಚ್ಚರಿಕೆ ನೀಡಿದರು.

ನಗರ ಘಟಕದ ಅಧ್ಯಕ್ಷ ಮದನ್,ಕಸಬಾ ಹೋಬಳಿ ಅಧ್ಯಕ್ಷ ಕೊಮ್ಮನಹಳ್ಳಿ ಅನಿಲ್ ,ಹೊಸಹೊಳಲು ಗೋಪಿ , ಸೇರಿದಂತೆ ಉಪಸ್ಥಿತರಿದ್ದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಡಿ.ಎಸ್.ವೇಣು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ವನ್ಯಜೀವಿ ಚಿತ್ರಗಳ 2026ರ ಹೊಸ ವರ್ಷದ ಕ್ಯಾಲೆಂಡರ್‌ಬಿಡುಗಡೆ

ಪ್ರಾಣಿಗಳ ರಕ್ಷಣೆ ನಮ್ಮ ಹೊಣೆ ಆಗಲಿ: ಕೃಪಾಕರ

ಮೈಸೂರು: ಪತ್ರಿಕಾ ಹಾಗೂ ವನ್ಯಜೀವಿ ಛಾಯಾಗ್ರಾಹಕರಾದ ಎಸ್.ಆರ್. ಮಧುಸೂದನ್ ಹಾಗೂ ರವಿಶಂಕರ್‌ಹೊರ ತಂದಿರುವ ವನ್ಯಜೀವಿ, ಮೈಸೂರು ಸುತ್ತಮುತ್ತಲಿನ ಪ್ರಾಣಿಗಳು ಹಾಗೂ ಅಪರೂಪದ ಪಕ್ಷಿಗಳನ್ನು ಒಳಗೊಂಡಿರುವ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣ್ಯರು ಬಿಡುಗಡೆಗೊಳಿಸಿದರು.

ಈ ವೇಳೆ ಅಂತಾರಾಷ್ಟ್ರೀಯ ಖ್ಯಾತಿಯ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ್ ಮಾತನಾಡಿ, ಕ್ಯಾಲೆಂಡರ್‌ಸಂಸ್ಕೃತಿಗೆ ಬಹು ದೊಡ್ಡ ಇತಿಹಾಸವಿದೆ. ಮೊದಲು ದೇವರ ಫೋಟೋಗಳು ಇದ್ದ ಕ್ಯಾಲೆಂಡರ್ಗಳೇ ಎಲ್ಲೆಲ್ಲೂ ಕಾಣಿಸುತ್ತಿದ್ದವು. ಆದರೆ ಈಗ ಕಾಲ ಬದಲಾಗಿದೆ. ಕ್ಯಾಲೆಂಡರ್ಗಳಲ್ಲಿ ಈಗ ಇರುವ ವಿಷಯಗಳೇ ಬೇರೆಯಾಗಿವೆ ಎಂದರು.

ಸದ್ಯದಲ್ಲಿ ಮಾನವ- ಹುಲಿ ಸಂಘರ್ಷ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಆದರೆ ವನ್ಯಜೀವಿಗಳನ್ನೂ ವೈಜ್ಞಾನಿಕ ಮನೋಭಾವದಿಂದ ನೋಡಬೇಕಾಗ ಅಗತ್ಯವಿದೆ. ಮಾನವ- ಹುಲಿ ಸಂಘರ್ಷಕ್ಕೆ ಕಾರಣವೇನು ಎಂಬ ಬಗ್ಗೆಯೂ ಚಿಂತನೆ ನಡೆಸಬೇಕಾಗಿದೆ. ಪ್ರಾಣಿಗಳ ಸಂರಕ್ಷಣೆಯಲ್ಲಿ ನಮ್ಮ ಹೊಣೆಗಾರಿಕೆ ಏನು ಎಂಬ ಬಗ್ಗೆಯೂ ಯೋಚಿಸಬೇಕು. ಈಗ ಬಿಡುಗಡೆಗೊಳಿಸಿರುವ ಕ್ಯಾಲೆಂಡರ್ನಲ್ಲಿನ ವನ್ಯಜೀವಿ, ಪಕ್ಷಿಗಳ ಚಿತ್ರಗಳು ಅಂತಹ ಕೆಲಸ ಮಾಡುತ್ತವೆ ಎಂದರು. ವನ್ಯಜೀವಿ ತಜ್ಞ ಸೇನಾನಿ ಮಾತನಾಡಿ, ಇಂದಿನ ದಿನಗಳಲ್ಲಿ ಹುಲಿಯನ್ನು ಖಳ ಎಂದು ಬಿಂಬಿಸಲಾಗುತ್ತಿದೆ. ಆದರೆ, ಈ ಕ್ಯಾಲೆಂಡರ್ ಹುಲಿಯ ಬಗ್ಗೆ ಪ್ರೀತಿ ಮೂಡಿಸುವ ಕೆಲಸ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಿವೃತ್ತ ಅರಣ್ಯಾಧಿಕಾರಿ ಕಾಂತರಾಜು ಮಾತನಾಡಿ, ಹುಲಿ ಎಂದಿಗೂ ನರಭಕ್ಷಕ ಆಗುವುದಿಲ್ಲ. ಆದರೆ, ತನ್ನ ರಕ್ಷಣೆಗಾಗಿ ಮಾತ್ರ ದಾಳಿ ಮಾಡುತ್ತದೆ. ಹೀಗಾಗಿ ಪ್ರಾಣಿಗಳಿಗೂ ಸಹಾ ನಮ್ಮಷ್ಟೇ ಪ್ರಾಧಾನ್ಯತೆ ನೀಡಬೇಕೆಂದರು.

ಛಾಯಾಗ್ರಹಕ ಎಸ್.ಆರ್. ಮಧುಸೂದನ್ ಮಾತನಾಡಿ, ಮಾನವ-ವನ್ಯಜೀವಿ ಸಂಘರ್ಷ ಚರ್ಚೆಗೆ ಒಳಗಾಗುತ್ತಿರುವ ಈ ದಿನಗಳಲ್ಲಿ ಪ್ರಾಣಿಗಳ ಬಗ್ಗೆ ಕಾಳಜಿ, ದಯೆ ಮೂಡಿಸುವಂತೆಯೂ ಕ್ಯಾಲೆಂಡರ್‌ರೂಪುಗೊಂಡಿದೆ ಎಂದರು.

ರವಿಶಂಕರ್,ಸ್ನೇಕ್ ಶ್ಯಾಮ್, ಮಹೇಶ್ಕುಮಾರ್‌ಇನ್ನಿತರರು ಇದ್ದರು.

ಅಂತಾರಾಷ್ಟ್ರೀಯ ಖ್ಯಾತಿಯ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ್ ನೂತನ ವರ್ಷದ ಕ್ಯಾಲೆಂಡರನ್ನು ಬಿಡುಗಡೆ ಮಾಡಿದರು. ವನ್ಯಜೀವಿ ತಜ್ಞ ಸೇನಾನಿ ಇತರರು ಇದ್ದರು.

ಸಂಪದ ಫೌಂಡೇಷನ್ ಉದ್ಘಾಟನೆ ಇಂದು

ಮಂಡ್ಯ: ಸಂಪದ ಫೌಂಡೇಶನ್ ಮತ್ತು ಪ್ರಗತಿ ಸೇವಾ ಟ್ರಸ್ಟ್ ವತಿಯಿಂದ, ಸಂಪದ ಫೌಂಡೇಶನ್ ಉದ್ಘಾಟನೆ ಮತ್ತು ಕ್ಯಾಲೆಂಡರ್‌ಬಿಡುಗಡೆ ಸಮಾರಂಭ , ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಉಚಿತ ಪಂಚಗವ್ಯ ಚಿಕಿತ್ಸಾ ಶಿಬಿರವನ್ನು ಡಿ.28 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಕೆ ಆರ್‌ಪೇಟೆ ತಾಲೂಕು ಬೆಡದಹಳ್ಳಿಯಲ್ಲಿರುವ ಪಂಚಭೂ ತೇಶ್ವರ ಮಠದ ಆವರಣದಲ್ಲಿ ನಡೆಯಲಿದೆ ಎಂದು ಪ್ರಗತಿ ಸೇವಾ ಟ್ರಸ್ಟ್‌ನ ಸಂಸ್ಥಾಪಕರಾದ ಡಾ.ನಾಗೇಶ್ ತಿಳಿಸಿದರು. ಸಾನಿಧ್ಯವನ್ನು ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಶ್ರೀ ಡಾ.ನಿಶ್ಚಲಾನಂದ ಸ್ವಾಮೀಜಿ, ಪಂಚಭೂತೇಶ್ವರ ಮಠದ ಶ್ರೀ ಶ್ರೀ ರುದ್ರಮುನಿ ಸ್ವಾಮೀಜಿ ವಹಿಸುವರು. ದಕ್ಷಿಣ ಪ್ರಾಂತ ಗೋ ಸೇವಾ ಗತಿವಿಧಿಯ ಪ್ರವೀಣ್ ಸರಳಾಯ ಉದ್ಘಾಟಿಸುವರು, ಪ್ರಗತಿ ಸೇವಾ ಟ್ರಸ್ಟ್‌ನ ಸಂಸ್ಥಾಪಕರಾದ ಡಾ.ನಾಗೇಶ್ ಅಧ್ಯಕ್ಷತೆವಹಿಸುವರು ಎಂದು ಹೇಳಿದರು.ಸಂಪದ ಫೌಂಡೇಶನ್ ಸಂಸ್ಥಾಪ'ಕರಾದ ಪುನೀತ್, ಜೈಮಾರುತಿ ಸೇವಾ ಟ್ರಸ್ಟ್ ಸಂಸ್ಥಾಪಕರಾದ ಮಾದೇಗೌಡ , ಕರ್ನಾಟಕ ಸೇನಾ ಪಡೆಯ ರಾಜ್ಯಾ ಧ್ಯಕ್ಷರಾದ ಚಾ.ರಂ.ಶ್ರೀನಿವಾಸಗೌಡ ಪಾಂಡವಪುರ ನೌಕರರ ಸಂಘದ ಮಾಜಿ ಅಧ್ಯಕ್ಷ ಎಂ.ಎನ್.ವೆಂಕಟೇಶ್, ಕ್ಯಾನ್ಸರ್‌ರೋಗ ತಜ್ಞರಾದ ಡಾ.ಡಿ.ಪಿ. ರಮೇಶ್, ಉಪಸ್ಥಿತರಿ ರುವರು ಎಂದು ವಿವರಿಸಿ ದರು. ಸುದ್ದಿಗೋಷ್ಠಿಯಲ್ಲಿ ಸಿ.ಜಿ.ಪು ನೀತ್, ಮಂಜುನಾಥ್, ಮಾದೇಗೌಡ ಇದ್ದರು.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸೋಣ

ಮದ್ದೂರು: ಸ್ಥಳಿಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಲು ಈಗಿನಿಂದಲೇ ಕಾರ್ಯಯೋಜನೆ ರೂಪಿಸುವಂತೆ ಜಿ.ಪಂ. ಮಾಜಿ ಅಧ್ಯಕ್ಷ ಸುರೇಶ್ಕಂಠಿ ತಿಳಿಸಿದರು.

ಪಟ್ಟಣದ ಶಿವಪುರದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ಎಸ್.ಟಿ/ಎಸ್.ಟಿ ಮುಖಂಡರ ಹಾಗೂ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಜಿ.ಪಂ. ತಾ.ಪಂ. ಗ್ರಾ.ಪಂ. ಹಾಗೂ ನಗರಸಭೆಯ ಮತ್ತು ಸ್ಥಳೀಯ ಸಂಸ್ಥೆ ಚುನಾವಣೆಗಳು ಘೋಷಣೆಯಾಗಲಿದ್ದು ಪ್ರತಿಯೊಬ್ಬ ಕಾರ್ಯಕರ್ತರು ಭೂತ್ ಮಟ್ಟದಿಂದಲೇ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರಲು ಶ್ರಮಿಸುವಂತೆ ತಿಳಿಸಿದರು.

ಪ್ರತಿ ಗ್ರಾಮ ಪಂಚಾಯಿತಿಯಿಂದ 12 ಮಂದಿ ಕಾಂಗ್ರೆಸ್ ಸದಸ್ಯರನ್ನು ಹಾಗೂ ನಗರಸಭೆಯ ಪ್ರತಿಯೊಂದು ವಾರ್ಡಿನಿಂದ 12 ಮಂದಿ ಪರಿಶಿಷ್ಟರ ಸದಸ್ಯರನ್ನು ನಿಯೋಜಿಸಿಕೊಳ್ಳಲು ಮುಂದಾಗಿದ್ದು ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಶಾಸಕರ ಕೈಬಲಪಡಿಸಿ ಅಧಿಕಾರಕ್ಕೆ ತರಲು ಪ್ರತಿಯೊಬ್ಬರೂ ಒಗ್ಗಟ್ಟಿನಿಂದ ಕಾರ್ಯತಂತ್ರ ರೂಪಿಸಬೇಕೆಂದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಲು ಶಕ್ತಿಮೀರಿ ಶ್ರಮಿಸಬೇಕೆಂದು ಮತ್ತು ರಾಜ್ಯಾಧ್ಯಕ್ಷರ ನಿರ್ದೇಶನದ ಮೇರೆಗೆ ಪ್ರತಿ ವಿಧಾನಸಭಾ ವ್ಯಾಪ್ತಿಯನ್ನು ಸಭೆಗಳನ್ನು ಆಯೋಜಿಸಿ ಪಕ್ಷ ಸಂಘಟನೆಗೆ ಕ್ರಮ ವಹಿಸಲಾಗಿದೆ ಎಂದರು.

ತಾಲೂಕು ಅಧ್ಯಕ್ಷ ಮಹದೇವಯ್ಯ ಮಾತನಾಡಿ, ಶಾಸಕ ಕೆ.ಎಂ.ಉದಯ್ ಸರಕಾರದಿಂದ ಹೆಚ್ಚು ಅನುದಾನ ತಂದು ಕ್ಷೇತ್ರದ ಅಬಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತಿದ್ದು ಮುಂದಿನ ದಿನಗಳಲ್ಲೂ ಶಾಶ್ವತ ಯೋಜನೆಗಳನ್ನು ರೂಪಿಸಲಿದ್ದಾರೆಂದರು.

ಅಭಿನಂದನೆ:ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುವ ಜತೆಗೆ ಶಾಶ್ವತ ಯೋಜನೆಗಳನ್ನು ರೂಪಿಸಲು ಸರಕಾರದಿಂದ ಸಾವಿರಾರು ಕೋಟಿ ಅನುದಾನ ತಂದು ಮಾದರಿ ಕ್ಷೇತ್ರವನ್ನಾಗಿಸುತ್ತಿರುವ ಶಾಸಕ ಕೆ.ಎಂ.ಉದಯ ಅವರಿಗೆ ಮುಂದಿನ ದಿನಗಳಲ್ಲಿ ಸಮುದಾಯದ ವತಿಯಿಂದ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಸಭೆ ವೇಳೆ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ದೊರೆಸ್ವಾಮಿ, ನಗರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷೆ ವನಿತಾ, ಸದಸ್ಯ ಮರಿದೇವರು, ಮುಖಂಡರಾದ ರಾಜೇಂದ್ರ, ಅರುವನಹಳ್ಳಿ ಸಿದ್ದರಾಜು ಸೇರಿದಂತೆ ಇತರರಿದ್ದರು.

ಪಟ್ಟಣದ ಶಿವಪುರದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಎಸ್.ಟಿ/ಎಸ್.ಟಿ ಮುಖಂಡರ , ಕಾರ್ಯಕರ್ತರ ಸಭೆಯಲ್ಲಿ ಮಾಜಿ ಅಧ್ಯಕ್ಷ ಸುರೇಶ್ಕಂಠಿ ಮಾತನಾಡಿದರು.

ಡಿ.30ರಂದು ವೈಕುಂಠ ಏಕಾದಶಿ

ಮಂಡ್ಯ: ಮದ್ದೂರು ತಾಲ್ಲೂಕಿನ ಭಾರತೀ ನಗರದಲ್ಲಿರುವ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿಶೇಷ ಪೂಜೆ ಹಾಗೂ ವೈಕುಂಠದ ದ್ವಾರ ಪ್ರವೇಶ ಧಾರ್ಮಿಕ ಕಾರ್ಯವನ್ನು ಡಿ.30ರಂದು ಆಯೋಜಿಸಲಾಗುತ್ತದೆ ಎಂದು ದೇವಾಲಯದ ಟ್ರಸ್ಟಿ ವೆಂಕಟೇಶ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ದೇವಾಲಯ ನಿರ್ಮಾಣಗೊಂಡು 4 ವರ್ಷಗಳು ಸವಿನೆನಪಿಗೆ ವಿಶೇಷ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಬೆಳಗ್ಗೆ 4.30 ರಿಂದ ರಾತ್ರಿ 10 ರವರೆಗೆ ವೈಕುಂಠ ದ್ವಾರ ಪ್ರವೇಶ, ಭಕ್ತರಿಗೆ ಸಮರ್ಪಣೆ ಆಗಲಿದೆ ಎಂದರು.ಡಿ.29 ರಂದು ಸಂಜೆ 6.30 ಗಂಟೆಗೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಆಭರಣ ಹಾಗೂ ಹೂವಿನ ಆಲಂಕಾರ ಆಯೋಜಿಸಲಾವುದು ಎಂದರು. ಕೆಂಗೇರಿಯ ವಿಶ್ವ ಒಕ್ಕಲಿಗರ ಸಂಘದ ಪೀಠಾಧಿಪತಿ ಶ್ರೀನಿಶ್ಚಲಾನಂದ ಸ್ವಾಮೀಜಿ ಮೇಲುಕೋಟೆಯ ಆಗಮ ಪ್ರವೀಣ ಡಾ.ಸೆಲ್ವಪಿಳ್ಳೇ ಅಯ್ಯಂಗಾರ್ ,ದೇವಾಲಯದ ಅರ್ಚಕ ಅನಂತ ಕೃಷ್ಣಭಟರ್,ನರಸಿಂಹಭಟ್, ವಾಸ್ತು ಪ್ರವೀಣ ಯು.ವಿ.ಗಿರೀಶ್ ಆಗಮಿಸಲಿದ್ದಾರೆಂದು ತಿಳಿಸಿದರು.ಸುಮಾರು 25 ಸಾವಿರ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ಭಕ್ತರಿಗೆ ಕಜ್ಜಾಯ, ಬಾಳೆಹಣ್ಣು ಹಾಗೂ ಹಾಲಿನ ಫಲಾಮೃತ ವಿತರಿಸಲಾಗುವುದು ಎಂದರು.ಗೋಷ್ಠಿಯಲ್ಲಿ ದೇವಾಲಯ ಸಮಿತಿ ಅಧ್ಯಕ್ಷ ವೆಂಕಟೇಗೌಡ, ಕಾರ್ಯದರ್ಶಿ ನಾಗಪ್ಪ, ಟ್ರಸ್ಟಿಗಳಾದ ಶ್ರೀನಿವಾಸ್, ತಿಮ್ಮರಾಜು ಉಪಸ್ಥಿತರಿದ್ದರು.

ಮನರೇಗಾ ಪರ ಕೈ ಸಮರ

← ಮೊದಲ ಪುಟದಿಂದ

ಇದು ಅಭಿವೃದ್ಧಿ ವ್ಯವಸ್ಥೆ. ಇದಕ್ಕೆ ವಿಶ್ವಾದ್ಯಂತ ಮೆಚ್ಚುಗೆ ಬಂದಿದೆ ಎಂದಿದ್ದಾರೆ. ಮನರೇಗಾ ಯೋಜನೆ ರದ್ದುಗೊಳಿಸಿರುವುದರಿಂದ ರಾಜ್ಯಗಳ ಸ್ವಾಯತ್ತತೆ, ಮೂಲಸೌಕರ್ಯಗಳ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಹೊಸ ಕಾನೂನು ರಾಜ್ಯಗಳ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಕಸಿದುಕೊಳ್ಳುತ್ತದೆ. ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸಲು ಮತ್ತು ಗ್ರಾಮೀಣ ಉದ್ಯೋಗವನ್ನು ಬೆಂಬಲಿಸಲು ರಾಜ್ಯಗಳು ಐತಿಹಾಸಿಕವಾಗಿ ನರೇಗಾದಂತಹ ಕಾರ್ಯಕ್ರಮಗಳನ್ನು ಅವಲಂಬಿಸಿವೆ. ಈ ಕಾರ್ಯಕ್ರಮಗಳು ಸ್ಥಳೀಯ ಆಡಳಿತ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಅವಿಭಾಜ್ಯ ಅಂಗ ಎಂದಿದ್ದಾರೆ.

ಕೇರಳ ಸೇರಿ 4 ರಾಜ್ಯಗಳ ಚುನಾವಣೆಗೆ ಸಿದ್ಧತೆ: ಮುಂದಿನ ವರ್ಷ ಅಸ್ಸಾಂ, ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಪುದುಚೆರಿಯಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು. ಈ ರಾಜ್ಯಗಳಲ್ಲಿ ಪಕ್ಷದ ಸಾಂಘಿಕ ಬಲವರ್ಧನೆ ಮತ್ತು ಚುನಾವಣಾ ತಂತ್ರಗಳ ಬಗ್ಗೆ ನಾಯಕರು ಚರ್ಚಿಸಿದರು. ಈಗಾಗಲೇ ದೇಶದಲ್ಲಿ 500 ಜಿಲ್ಲೆಗಳ ಪದಾಧಿಕಾರಿಗಳ ನೇಮಕ ಮಾಡಲಾಗಿದೆ. ಬಾಕಿ ನೇಮಕಾತಿಯನ್ನು ಮುಂದಿನ 120 ದಿನಗಳಲ್ಲಿ ನಡೆಸಲಾಗುವುದು ಎಂದು ಖರ್ಗೆ ಹೇಳಿದ್ದಾರೆ.

ಬಾಂಗ್ಲಾ ಹಿಂದೂಗಳ ಮೇಲಿನ ದಾಳಿಗೆ ಖಂಡನೆ: ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಯನ್ನು ಸಭೆಯು ತೀವ್ರವಾಗಿ ಖಂಡಿಸಿತು. ಇದು ಇಡೀ ದೇಶಕ್ಕೆ ಕಳವಳಕಾರಿ ವಿಷಯವಾಗಿದೆ ಎಂದು ಖರ್ಗೆ ಹೇಳಿದರು. ಇದೇ ವೇಳೆ ಕ್ರಿಸ್ಮಸ್ ಆಚರಣೆ ವೇಳೆ ಕೆಲವು ಸಂಘಟನೆಗಳು ಚರ್ಚ್‌ಗಳ ಮೇಲೆ ನಡೆಸಿದ ದಾಳಿಯು ಭಾರತದ ಜಾಗತಿಕ ವರ್ಚಸ್ಸಿಗೆ ಧಕ್ಕೆ ತಂದಿದೆ ಎಂದರು.

ಮತಗಳವು, ಎಸ್‌ಐಆರ್ ವಿರುದ್ಧವೂ ಆಕ್ರೋಶ

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಖರ್ಗೆ, ಪ್ರಜಾಪ್ರಭುತ್ವದ ಹಕ್ಕುಗಳನ್ನು ಮೊಟಕುಗೊಳಿಸುವ ಯೋಜಿತ ಸಂಚು ಎಂದು ಕರೆದರು. ಬಡವರು, ದಲಿತರು ಮತ್ತು ಅಲ್ಪಸಂಖ್ಯಾತರ ಮತಗಳನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕಲಾಗುತ್ತಿದೆ ಎಂದು ಆರೋಪಿಸಿದ ಅವರು, ಬೂತ್ ಮಟ್ಟದ ಕಾಂಗ್ರೆಸ್ ಏಜೆಂಟರು ಜಾಗರೂಕರಾಗಿರಲು ಸೂಚಿಸಿದರು.

ದೆವ್ವ ಬಿಡಿಸುತ್ತೇವೆಂದು ಥಳಿತ, ಮಹಿಳೆ ಸಾವು!

← ಮೊದಲ ಪುಟದಿಂದ

ಮೂಲಗಳ ಪ್ರಕಾರ ಮುಕ್ತಾಬಾಯಿ ಕುಟುಂಬಸ್ಥರೇ ಆಕೆಗೆ ದೆವ್ವ ಹಿಡಿದಿದೆ ಎಂದು ಆರೋಪಿಸಿದ್ದರು. ಅದರಂತೆ ಗಂಡನ ಮನೆಯವರು, ಬೇವಿನ ಕಟ್ಟಿಗೆಯಿಂದ ಆಕೆ ಮೇಲೆ ಭೀಕರವಾಗಿ ಹಲ್ಲೆ ನಡೆಸಿದ ಪರಿಣಾಮ ಮುಕ್ತಾಬಾಯಿ (26) ಎಂಬವರು ಗಂಭೀರವಾಗಿ ಗಾಯಗೊಂಡಿದ್ದರು. ಈ ವೇಳೆ ತಾಯಿ ತಿಪ್ಪವ್ವ ಹೊಡೆಯಬೇಡಿ ಎಂದು ಎಷ್ಟೇ ಬೇಡಿಕೊಂಡರೂ, ಹೊಡೆಯುವುದನ್ನು ನಿಲ್ಲಿಸಿಲ್ಲ. ಅವರನ್ನು ಅವರನ್ನು ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಜಿಮ್ಸ್ ಆಸ್ಪತ್ರೆಯಲ್ಲಿ ಮುಕ್ತಾಬಾಯಿ ಕೊನೆಯುಸಿರೆಳೆದಿದ್ದಾರೆ.

ಕುಟುಂಬಸ್ಥರು ಹೇಳುವಂತೆ ಆಳಂದ ಪಟ್ಟಣದ ವೆಂಕಟೇಶ್ವರ ನಗರದ ನಿವಾಸಿಯಾದ ಮುಕ್ತಾಬಾಯಿ ಅವರನ್ನು ಆರು ವರ್ಷಗಳ ಹಿಂದೆ ಮಹಾರಾಷ್ಟ್ರದ ಮುರುಮ್ ಗ್ರಾಮದ ಗಿಡ್ಡೆಪ್ಪ ಎಂಬಾತನಿಗೆ ವಿವಾಹ ಮಾಡಿಕೊಡಲಾಗಿತ್ತು. ಈ ದಂಪತಿಗೆ ಐದು ವರ್ಷದ ಮಗನಿದ್ದಾನೆ. ಆದರೆ, ಕಳೆದ ಕೆಲವು ದಿನಗಳಿಂದ ಮುಕ್ತಾಬಾಯಿಗೆ ದೆವ್ವ ಹಿಡಿದಿದೆ ಎಂದು ಗಂಡನ ಮನೆಯವರು ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ಮಗಳಿಗೆ ಯಾವುದೇ ದೆವ್ವ ಹಿಡಿದಿಲ್ಲ, ಆಕೆಯನ್ನು ಹೊಡೆಯಬೇಡಿ ಎಂದು ತಾಯಿ ತಿಪ್ಪವ್ವ ಎಷ್ಟೇ ಮನವಿ ಮಾಡಿದರೂ ಗಂಡನ ಮನೆಯವರು ಕೇಳಿರಲಿಲ್ಲ ಎಂದು ಆರೋಪಿಸಲಾಗಿದೆ.

ಆಸ್ಪತ್ರೆಗೆ ಸೇರಿಸುವ ಬದಲು ದೇಗುಲಕ್ಕೆ ಒಯ್ದರು

ತೀವ್ರ ಹಲ್ಲೆ, ಆಸ್ಪತ್ರೆಗೆ ದಾಖಲು: ಶುಕ್ರವಾರ ಮುಕ್ತಾಬಾಯಿ ಮನೆಯಲ್ಲಿ ಕುಸಿದು ಬಿದ್ದಾಗ, ದೆವ್ವದ ಅಬ್ಬರ ಎಂದು ಭಾವಿಸಿದ ಸಂಬಂಧಿಕರು ಐದು ವರ್ಷದ ಮಗನ ಎದುರಲ್ಲೇ ಬೇವಿನ ಕಟ್ಟಿಗೆಗಳಿಂದ ಆಕೆಗೆ ಮನಬಂದಂತೆ ಹೊಡೆದಿದ್ದಾರೆ. ತಲೆ ಮತ್ತು ದೇಹದ ಭಾಗಗಳಿಗೆ ತೀವ್ರ ಪೆಟ್ಟು ಬಿದ್ದಿದ್ದರೂ, ಆಕೆಯನ್ನು ಆಸ್ಪತ್ರೆಗೆ ಸೇರಿಸುವ ಬದಲು ಗಾಣಗಾಪುರದ ಸಂಗಮ ನದಿಯಲ್ಲಿ ಸ್ನಾನ ಮಾಡಿಸಿ ದತ್ತನ ಸನ್ನಿಧಿಯಲ್ಲಿ ಪೂಜೆ ಮಾಡಿಸಿದ್ದಾರೆ. ಈ ವೇಳೆ ಆಕೆ ಇನ್ನೂ ಅಸ್ವಸ್ಥಗೊಂಡಿದ್ದಾರೆ.

ಮಾಗಿ ಉತ್ಸವಕ್ಕೆ ಕ್ರಿಸ್‌ಮಸ್ ಸಂಭ್ರಮ ಸಾಥ್

ಇತ್ತ ವರ್ಷಾಂತ್ಯ, ಅತ್ತ ಹೊಸ ವರ್ಷದ ಸ್ವಾಗತಕ್ಕೆ ಪ್ರವಾಸಿಗರಿಂದ ಕಿಕ್ಕಿರಿದ ಅರಮನೆ ನಗರಿ ಮೈಸೂರು

ಮಾಗಿ ಉತ್ಸವದ ಹಿನ್ನೆಲೆ ಅರಮನೆ ಮೈದಾನದಲ್ಲಿ ವಿವಿಧ ಹೂಗಳಲ್ಲಿ ಅರಳಿದ ಶೃಂಗೇರಿ ಶಾರದಾಂಬೆ ದೇಗುಲದ ಕಲಾಕೃತಿ.

ವಿವಿಧ ಹೂಗಳಲ್ಲಿ ಅರಳಿದ ಸಂವಿಧಾನ ಕಲಾಕೃತಿ.

ಕೆ.ಜೆ.ಲೋಕೇಶ್ ಬಾಬು ಮೈಸೂರು

ಮೈ ಕೊರೆಯುವ ಚಳಿ ಹಾಗೂ ಇಬ್ಬನಿಯ ನಡುವೆಯೂ ಮೈಸೂರು ಮುದುಡಿಕೊಂಡಿಲ್ಲ. ಒಂದು ವಾರದಿಂದ ಎಲ್ಲಿ ನೋಡಿದರಲ್ಲಿ ಜನವೋ ಜನ, ವಾಹನಗಳ ದಟ್ಟಣೆ ಇಡೀ ಮೈಸೂರನ್ನು ಆವರಿಸಿದೆ.

ಒಂದೆಡೆ ಅರಮನೆ ಅಂಗಳದಲ್ಲಿ ಮಾಗಿ ಉತ್ಸವ, ಮತ್ತೊಂದೆಡೆ ಕ್ರಿಸ್ ಮಸ್ ರಜೆ, ಮಗದೊಂದು ಕಡೆ ಕೈಬೀಸಿ ಕರೆಯುವ ವಸ್ತು ಪ್ರದರ್ಶನ, ಚಾಮುಂಡಿ ಬೆಟ್ಟ, ಮೃಗಾಲಯ ಸೇರಿದಂತೆ ಮೈಲಾರಿ ದೋಸೆ, ಹನುಮಂತು ಪಲಾವ್ ನಂತಹ ಬಾಯೂರಿಸುವ ತಿಂಡಿ ತಿನಿಸು ಮೈಸೂರಿನಲ್ಲಿ ಪ್ರವಾಸಿಗರನ್ನು ಹಿಡಿದಿಟ್ಟುಕೊಂಡಿದೆ. ಪರಿಣಾಮ, ಇಡೀ ನಗರ ಜನಜಾತ್ರೆಯಾಗಿದೆ.

ಚಳಿಯ ಸಂಜೆಗಳು: ನಗರದ ಎಲ್ಲಾ ಪಾರ್ಕಿಂಗ್ ಪ್ರದೇಶದಲ್ಲಿ ಬೆಂಕಿಪೊಟ್ಟಣ ಜೋಡಿಸಿಟ್ಟಂತೆ ವಾಹನಗಳ ನಿಲುಗಡೆ, ಮೈಸೂರಿನ ಹೃದಯ ಭಾಗದ ಹೋಟೆಲುಗಳಲ್ಲಿ ತಿಂಡಿ, ಊಟದ ಸಮಯದಲ್ಲಿ ಕಿಕ್ಕಿರಿದ ಜನಸಂದಣಿ ಸಾಮಾನ್ಯವಾಗಿಬಿಟ್ಟಿದೆ. ಚಳಿಯ ಸಂಜೆಯಲ್ಲಿ ಅರಮನೆಗೆ ಬಂದ ನಾಗರಿಕರು, ಪ್ರವಾಸಿಗರು ಅರಳಿ ನಳನಳಿಸುತ್ತಿದ್ದ ಹೂವಿನ ಲೋಕಕ್ಕೆ ವಿಸ್ಮಿತರಾಗುತ್ತಿದ್ದಾರೆ. ಶೃಂಗೇರಿಯ ವಿದ್ಯಾಶಂಕರ ದೇಗುಲದ ಸೌಂದರ್ಯಕ್ಕೆ ಅಚ್ಚರಿ ಪಟ್ಟರೆ, ಸಾಲುಮರ ತಿಮ್ಮಕ್ಕನ ಪ್ರತಿಕೃತಿ ನೋಡಿ ಪುಳಕಿತಗೊಳ್ಳುತ್ತಿದ್ದಾರೆ.

ಅರಳಿದ ಹೂವಿನ ಲೋಕ: ಸುಮಾರು 25 ಸಾವಿರ ವಿಭಿನ್ನ ರೀತಿಯ ಅಲಂಕಾರಿಕ ಹೂವಿನ ಕುಂಡಗಳು, ಮರಿಗೋಲ್ಡ್, ಸಾಲ್ವಿಯ, ತೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯ, ಫ್ರೆಂಚ್ ಮಂಗೋಲ್ಡ್, ಜಿನಿಯಾ ಪೆಲಂಬೂಡಿಯ ಸೇರಿ 35 ಜಾತಿಯ ಹೂವಿನ ಗಿಡಗಳು, ಅಂದಾಜು 4 ಲಕ್ಷ ನಾನಾ ಹೂವುಗಳನ್ನು ಪ್ರದರ್ಶನಕ್ಕೆ ಬಳಸಲಾಗಿದೆ. ಗುಲಾಬಿ, ಕ್ರೈಸಾಂಥಿಮಮ್, ಪಿಂಗ್ ಪಾಂಗ್, ಕಾರ್ನೆಷನ್, ಆಸ್ಟಮೇರಿಯ, ಜರ್ಬೇರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂಡ್ಡೆಸಿ ಹೂಗಳನ್ನು ಅಲಂಕರಿಸಲಾಗುವುದು. ಶೃಂಗೇರಿ ದೇವಸ್ಥಾನದ ಮಾದರಿಯನ್ನು ಹೂವಿನಿಂದ ಅಲಂಕರಿಸಲಾಗಿದೆ.

ಆಪರೇಷನ್ ಸಿಂಧೂರ: ಮುಮ್ಮಡಿ ಕೃಷ್ಣರಾಜ ಒಡೆಯರ್ ಪ್ರತಿಕೃತಿ, ಸಂವಿಧಾನ ಪ್ರಸ್ತಾವನೆ, ಕಾಳಿಂಗ ಮರ್ಧನ, ವಿಶ್ವಕಪ್ ವಿಜೇತ ಮಹಿಳಾ ಕ್ರಿಕೆಟ್ ತಂಡ, ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಸೇನಾ ಪರಿಕರಗಳ ಮಾದರಿಗಳು ಆಕರ್ಷಿಸಿದರೆ, ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ದೇಶಕ್ಕೆ ಸುದ್ದಿಗೋಷ್ಠಿಯಲ್ಲಿ ವಿವರಿಸಿದ ವಾಯುಪಡೆ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮತ್ತು ಕರ್ನಲ್ ಸೋಫಿಯಾ ಖುರೇಷಿ ಶೌರ್ಯದಿಂದ ನಿಂತಿದ್ದಾರೆ.

ಮಕ್ಕಳಿಗೆ ವಿಶೇಷ ಆಕರ್ಷಣೆ: ಮಕ್ಕಳ ಆಕರ್ಷಣೆಗೆ ವಿವಿಧ ಮಾದರಿಯ 2 ಕೊಕ್ಕರೆಗಳು, ಕೊಂಬೆಯಲ್ಲಿ ಕುಳಿತಿರುವ 2 ಪಕ್ಷಿಗಳು, ಒಂದು ಲೇಡಿ ಬಗ್ (ದುಂಬಿ), ಒಂದು ಕ್ಯಾರೆಟ್ ಹಿಡಿದಿರುವ ಮೊಲ, ಎರಡು ಮೊಲದ ನಗುವಿನ ಮುಖ, ಒಂದು ಹುಳುವಿನ ಆಕಾರ, ಮಾವಿನ ಹಣ್ಣಿನ ಮಾದರಿ, ಮಾತಾ ಮತ್ತು 'ಕರಡಿ ಮಾದರಿ ರೂಪುಗೊಳ್ಳುತ್ತಿವೆ.

ಔಷಧ ಗಿಡಗಳ ವಿತರಣೆ: ಪುಷ್ಪ ಪ್ರದರ್ಶನವನ್ನು ವೀಕ್ಷಿಸಲು ಬರುವ ಗಣ್ಯರಿಗೆ, ಸಾರ್ವಜನಿಕರಿಗೆ ಸಾಂಕೇತಿಕವಾಗಿ ಔಷಧಿಯುಕ್ತ ಗಿಡಗಳಾದ ಅಲೋವೆರಾ, ತುಳಸಿ, ಮಲ್ಲಿಗೆ, ವೀಳ್ಯದೆಲೆ ಹಾಗೂ ಚಕ್ರಮುನಿ ಗಿಡಗಳನ್ನು ವಿತರಿಸಲಾಗುತ್ತಿದೆ.

ಛಾಯಾಚಿತ್ರ ಪ್ರದರ್ಶನ: ಮೈಸೂರು ಅರಮನೆ ಆವರಣದ ಫಲಪುಷ್ಪ ಪ್ರದರ್ಶನದಲ್ಲಿ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿದ್ದು, ದಸರಾ ಅಂದು-ಇಂದು ಗಮನ ಸೆಳೆದಿದೆ. ಹಳೆಯ ದಸರಾದ ವಿಡಿಯೋ ಚಿತ್ರೀಕರಣ, ಸಾಕ್ಷ್ಯಚಿತ್ರ ಪ್ರದರ್ಶನವೂ ಇದೆ. ಮಾತ್ರವಲ್ಲ, ಅತ್ಯುತ್ತಮವಾಗಿ ಬೊಂಬೆಗಳನ್ನು ಪ್ರದರ್ಶಿಸುವ ಆಯ್ದ ಐವರನ್ನು ಆಹ್ವಾನಿಸಿ, ಅರಮನೆಯ ಆವರಣದಲ್ಲಿ ಬ್ಲಾಕ್‌ಗಳಲ್ಲಿ ಭವ್ಯ ಬೊಂಬೆ ಪ್ರದರ್ಶನ ಏರ್ಪಡಿಸಲಾಗಿದೆ.

ವಿಶೇಷ ಆಕರ್ಷಣೆ: ಡಿ.31ರಂದು ಅರಮನೆಯ ವಿದ್ಯುತ್ ದೀಪಾಲಂಕಾರವನ್ನು ಸಂಜೆ 7ರಿಂದ 9ರವರೆಗೆ ವಿಸ್ತರಿಸಲಾಗಿದೆ. ಸಂಜೆ 5ರಿಂದ ರಾತ್ರಿ 9.30ರವರೆಗೆ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಅಂದು ರಾತ್ರಿ 11 ರಿಂದ 12ರವರೆಗೆ ಪೊಲೀಸ್ ಬ್ಯಾಂಡ್ ಆಯೋಜಿಸಲಾಗಿದೆ. 12ರಿಂದ 15 ನಿಮಿಷ ಬಣ್ಣಗಳ ಚಿತ್ತಾರಗಳಿಂದ ಕೂಡಿದ ಕಬ್ಬ ರಹಿತ ಹಸಿರು ಪಟಾಕಿ ಸಿಡಿಸಲಾಗುತ್ತದೆ.

4 ಲಕ್ಷ ಹೂವುಗಳ ಮಾದರಿ

ಉಯ್ಯಾಲೆಯಲ್ಲಿ ರಾಧೆಯೊಂದಿಗೆ ಕುಳಿತ ಕೃಷ್ಣ, ಸಿರಿಧಾನ್ಯಗಳನ್ನು ಮೈವೆತ್ತು ನಿಂತ ಸಾಲುಮರದ ತಿಮ್ಮಕ್ಕ ಸೆಳೆದರೆ, ಶೃಂಗೇರಿ ದೇವಾಲಯ ಸೂಜಿಗಲ್ಲಿನಂತೆ ಆಕರ್ಷಿತ್ತಿದೆ. 4 ಲಕ್ಷ ಹೂವುಗಳಿಂದ ವಿವಿಧ ಮಾದರಿಗಳನ್ನು ಅರಳಿಸಲಾಗಿದೆ. ಶೃಂಗೇರಿ ದೇಗುಲವು 50 ಅಡಿ ಅಗಲ, 16 ಅಡಿ ಉದ್ದ ಹಾಗೂ 25 ಅಡಿ ಎತ್ತರ ಹೊಂದಿದ್ದು, ಗುಲಾಬಿ, ಸೇವಂತಿಗೆ ಸೇರಿದಂತೆ ವಿವಿಧ ಹೂಗಳಿಂದ ಅಲಂಕರಿಸಲಾಗಿದೆ. ದ್ವಾರಗಳನ್ನು ಹೂವು ಹಾಗೂ ತೆಂಗಿನ ಗರಿಗಳ ಚಪ್ಪರದಿಂದ ಸಿಂಗರಿಸಲಾಗಿದೆ.

ಹತ್ತು ದಿನಗಳ ಉತ್ಸವ

ಅರಮನೆ ಮಂಡಳಿಯು ಕ್ರಿಸ್‌ಮಸ್ ರಜೆ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಅರಮನೆ ಮಂಡಳಿ ಆಯೋಜಿಸಿರುವ 10 ದಿನಗಳ ಮಾಗಿ ಉತ್ಸವ ಫಲಪುಷ್ಪ ಪ್ರದರ್ಶನದಲ್ಲಿ ಘಮ್ಮೆನ್ನುವ ಪುಷ್ಪಗಳ ಸುವಾಸನೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹೃದಯರ ಮನ ತಣಿಸುತ್ತಿವೆ.

25 ಸಾವಿರ ಹೂಕುಂಡಗಳು

ಚಾಂಪಿಯನ್ ಆದ ಮಹಿಳಾ ಕ್ರಿಕೆಟಿಗರು, ಕೊಕ್ಕೊ, ಕಬಡ್ಡಿ, ಅಂಧ ಕ್ರಿಕೆಟಿಗರು ಭಾವಚಿತ್ರವನ್ನು ಡಿಜಿಟಲ್ ಬೋರ್ಡ್‌ನಲ್ಲಿ ಪ್ರದರ್ಶಿಸಿ ಸಾಧಕರನ್ನು ಅಭಿನಂದಿಸಲಾಗಿದೆ. 25 ಸಾವಿರಕ್ಕೂ ಹೆಚ್ಚಿನ ಅಲಂಕಾರಿಕ ಹೂಕುಂಡಗಳು, ಬೋನ್ಸಾಯ್ ಗಿಡಗಳು, 35 ಜಾತಿಯ ಹೂವು ಗಿಡಗಳು ನಳನಳಿಸುತ್ತಿವೆ. ಎರಡು ದ್ವಾರಗಳಲ್ಲಿ ನವಿಲು, ಮಕ್ಕಳನ್ನು ಆಕರ್ಷಿಸಲು ಛೋಟಭೀಮ್, ಕಾಳಿಂಗ ಮರ್ಧನ, ಅಳಿಲು ಸೈಕಲ್, ಹಂಸ ಮಾದರಿಯ ಸೆಲ್ಫಿ ಪಾಯಿಂಟ್ ನಿರ್ಮಿಸಲಾಗಿದೆ. ವಿವಿಧ ಹಣ್ಣು ಮತ್ತು ತರಕಾರಿ ಕೆತ್ತನೆಗಳಿಂದ ಗಣ್ಯ ವ್ಯಕ್ತಿಗಳು ಮತ್ತು ಪ್ರಾಣಿ ಪಕ್ಷಿಗಳು ಸಾಧನೆಯ ಕತೆಗಳನ್ನು ಹೇಳುತ್ತಿವೆ. ಮಕ್ಕಳ ಕಾರ್ಟೂನ್ ತಾರೆಗಳಾದ ಛೋಟಾ ಭೀಮ್, ಮಾಶಾ ಕರಡಿ ಸೇರಿದಂತೆ ವಿವಿಧ ಮಾದರಿಗಳು ಸೆಳೆಯುತ್ತಿವೆ.

ದೀಪದ ಕಷ್ಟ ಗೊತ್ತಾಗುವುದಿಲ್ಲ

ಬೆಂಗಳೂರು: ಕಳೆದೊಂದು ವಾರದಿಂದ ವೈರಾಗ್ಯ ಹಾಗೂ ಗೂಡಾರ್ಥದ ಮಾತುಗಳ ಮೂಲಕವೇ ಗಮನ ಸೆಳೆಯುತ್ತಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಮತ್ತೊಮ್ಮೆ 'ಶ್ರಮಕ್ಕೆ' ಸಂಬಂಧಿಸಿದಂತೆ ಮಾರ್ಮಿಕ ಮಾತುಗಳಾಗಿರುವುದು ಇದೀಗ ಚರ್ಚೆಗೆ ಗ್ರಾಸವಾಗಿದೆ.

ಜಿಕೆವಿಕೆ ಕಾರ್ಯಕ್ರಮದಲ್ಲಿ ಮತ್ತೊಮ್ಮೆ ಮಾರ್ಮಿಕ ಮಾತಾಡಿದ ಡಿಕೆ

ಶನಿವಾರ ಜಿಕೆವಿಕೆ ಸಭಾಂಗಣದಲ್ಲಿ ನಡೆದ ರೈತ ಸಂತೆ ಮತ್ತು ರೈತ ದಿನಾಚರಣೆಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ದೀಪದ ಬೆಳಕು ಇಡೀ ಜಗತ್ತಿಗೆ ತಿಳಿಯುತ್ತದೆ. ಆದರೆ ದೀಪದ ಕಷ್ಟ ಯಾರಿಗೂ ತಿಳಿಯುವುದಿಲ್ಲ. ಅದೇ ರೀತಿ ಕೊಳಲು ವಿಶ್ವಮಾನ್ಯ, ವಿಶ್ವಕ್ಕೆ ಪರಿಚಯವಿರುತ್ತದೆ. ಆದರೆ ಅದನ್ನು ಮಾಡಲು ಬಳಲು ಬಿದುರು ಯಾರಿಗೆ ತಿಳಿಯುತ್ತದೆ? ಕುರಿ ಕೋಣದ ಚರ್ಮದಿಂದ ತಮಟೆ ಮಾಡುತ್ತೇವೆ. ಸಗಣಿ ಬಿಸಾಕುತ್ತೇವೆ ಹುಲ್ಲು ಸೇರಿಸಿದರೆ ಪಿಳ್ಳಾರತಿ ಆಗುತ್ತೆ. ಬೆವರು ಶ್ರಮಕ್ಕೆ ಯಾರೂ ಬೆಲೆ ಕಟ್ಟಲು ಸಾಧ್ಯವಿಲ್ಲ. ದೀಪದ ಬೆಳಕು ಮಾತ್ರ ಗೊತ್ತಾಗುತ್ತದೆ. ಆದರೆ ದೀಪದ ಕಷ್ಟ ಗೊತ್ತಾಗಲ್ಲ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

> ಕಾಂಗ್ರೆಸ್ ಮೊದಲಿನಿಂದಲೂ ರೈತ ಪರವಾಗಿದೆ. ಭೂಮಿ ಎನ್ನುವ ಯೋಜನೆಯನ್ನು ಎಸ್. ಎಂ ಕೃಷ್ಣ ಅವರ ಕಾಲದಲ್ಲಿ ಮಾಡಲಾಗಿತ್ತು. ಈ ಯೋಜನೆಯಿಂದ ದೊಡ್ಡ ಕ್ರಾಂತಿಕಾರಕ ಬದಲಾವಣೆ ಮಾಡಿದ್ದವು. 53 ಸಾವಿರ ಕೋಟಿ ವೆಚ್ಚದ ಗ್ಯಾರಂಟಿ ಯೋಜನೆಗಳು ಕೊಟ್ಟಿದ್ದೇವೆ. ನಾವು ಇರೋದೇ ನಿಮಗಾಗಿ ನೀವು ಇರೋದೇ ನಮಗಾಗಿ.
>
> -ಡಿ.ಕೆ.ಶಿವಕುಮಾರ್ ಡಿಸಿಎಂ

ಲೇಖಕಿ ಸರಿತಾ ಜ್ಞಾನಾನಂದ ಇನ್ನಿಲ್ಲ

ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ವಿಧಿವಶ

ಬೆಂಗಳೂರು: ಹಿರಿಯ ಲೇಖಕಿ, ಖ್ಯಾತ ಅನುವಾದಕಿ, ಕವಯಿತ್ರಿ ಸರಿತಾ ಜ್ಞಾನಾನಂದ ಅನಾರೋಗ್ಯದಿಂದ ವಿಧಿವಶರಾಗಿದ್ದಾರೆ.

ಬೆಂಗಳೂರಿನ ಆರ್.ಆರ್ .ನಗರದಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಅವರಿಗೆ 82 ವರ್ಷ ವಯಸ್ಸಾಗಿತ್ತು. ಸರಿತಾ ಜ್ಞಾಜಾನಂದ ವಿವಿಧ ಭಾಷೆಗಳ ಕಥೆ, ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದ ಮಾಡುತ್ತಿದ್ದರು. ಬೆಂಗಳೂರು ಮೂಲದವರಾಗಿದ್ದ ಸರಿತಾ, ಮೈಸೂರು ವಿಶ್ವವಿದ್ಯಾಲಯದಿಂದ ಬಿಎ, ಬಿಎಡ್ ಪದವಿ ಪಡೆದಿದ್ದರು. ಬಳಿಕ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಎಂ.ಎಡ್ ಪದವಿ ಪಡೆದಿದ್ದರು. ಕನ್ನಡ, ಹಿಂದಿ, ಇಂಗ್ಲೀಷ್, ಸಂಸ್ಕೃತ, ಮಲಯಾಳಂ, ಮರಾಠಿ ಭಾಷೆಗಳಲ್ಲಿ ಪ್ರಾವೀಣ್ಯತೆ ಪಡೆದುಕೊಂಡಿದ್ದರು. ಬೆಂಗಳೂರು ಹಾಗೂ ಕೆಜಿಎಫ್ ನಲ್ಲಿ ಶಾಲಾ ಶಿಕ್ಷಕಿಯಾಗಿಯೂ ಸೇವೆ ಸಲ್ಲಿಸಿದ್ದರು.

ಮುನ್ನೂರಕ್ಕೂ ಹೆಚ್ಚು ಕಥೆಗಳನ್ನು ಸರಿತಾ ರಚಿಸಿದ್ದಾರೆ. ಬೃಂದಾವನ ಹಾಗೂ ತುಳಸಿ ಕಟ್ಟೆ ಎಂಬ ಎರಡು ಕಥಾಸಂಕಲನಗಳು ಜನಪ್ರಿಯಗೊಂಡಿವೆ. ಅವರ ಹಲವು ಕಥೆಗಳು ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದವು. ಯಂಡಮೂರಿ ವೀರೇಂದ್ರ ನಾಥ್, ಸೂರ್ಯದೇವರ ರಾಮಮೋಹನರಾವ್, ಡಾ.ಕೊಂಡೂರು ವೀರರಾಘವಾಚಾರ್ಯಲು, ಬಲಿವಾಡ ಕಾಂತರಾವ್, ಮಲ್ಲಾದಿ ವೆಂಕಟ ಕೃಷ್ಣಮೂರ್ತಿ, ಡಾ. ಸಮರಂ ಮುಂತಾದ ತೆಲುಗು ಲೇಖಕರು, ತಮಿಳಿನ ಶಿವ ಶಂಕರಿ, ನಾರಾಯಣದತ್ತ ಶ್ರೀಮಾಲಿಯವರ ಹಿಂದಿ, ರಾಮ ಮೊಹಮದ್ ಡಿಸೌಜರವರ ಉರ್ದು ಮತ್ತು ಮರಾಠಿ ಭಾಷೆಗಳಿಂದ ಸುಮಾರು 50ಕ್ಕೂ ಹೆಚ್ಚು ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಸಂಗೀತದಲ್ಲಿ ಕೂಡ ಸಾಧನೆ ಮಾಡಿರುವ ಸರಿತಾ 'ಜ್ಞಾನಾನಂದರು ನೀಗಿಕೊಂಡ ಸಂಸ', 'ಜುಂನಾಳ ಧೂಳ್ಯನ ಪ್ರಸಂಗ', 'ಸಂಗ್ಯಾ ಬಾಳ್ಯ', 'ಜೋಕುಮಾರ ಸ್ವಾಮಿ' ಸಖೀಗೀತ', 'ಬೆನಕನ ಕೆರೆ' ಮುಂತಾದ ಅನೇಕ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ಮತ್ತು ನೃತ್ಯಗಳಲ್ಲಿ ತರಬೇತಿ ನೀಡಿದ್ದಾರೆ. ತಮ್ಮ ಸಂಗೀತದಲ್ಲಿ ಅನೇಕ ಧ್ವನಿಸುರುಳಿಗಳನ್ನೂ ಬಿಡುಗಡೆ ಮಾಡಿದ್ದಾರೆ. ಸರಿತಾ ಜ್ಞಾನಾನಂದರು ಕೆಜಿಎಫ್ನಲ್ಲಿ ಕನ್ನಡೇತರರಿಗೆ ಕನ್ನಡ ತರಗತಿಗಳನ್ನು ನಡೆಸಿ ಅನೇಕ ಇತರ ಭಾಷಿಗರಿಗೆ ಕನ್ನಡ ಭಾಷೆಯನ್ನು ಕಲಿಸಿದ್ದಾರೆ.

ಪಿಣರಾಯಿ ಬುಲ್ಡೋಜರ್: ರಾಜ್ಯದಲ್ಲಿ ಸಂಚಲನ

← ಮೊದಲ ಪುಟದಿಂದ

ಪಿಣರಾಯಿ ಹೇಳಿಕೆಗೆ ಸಂಬಂಧಿಸಿ ಡಿಸಿಎಂ ಡಿ.ಕೆ.ಶಿವಕುಮಾರ್ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕೆ.ಸಿ. ವೇಣುಗೋಪಾಲ್ ಅವರಿಗೂ ವರದಿ ನೀಡಿದ್ದು, ರಾಜಕೀಯ ಕಾರಣಕ್ಕೆ ಈ ರೀತಿಯ ಹೇಳಿಕೆ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ಆರೋಪಕ್ಕೆ ದೆಹಲಿಯಲ್ಲಿ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ಬೆಂಗಳೂರಿನ ಯಲಹಂಕದ ಫಕೀರ್ ಕಾಲೋನಿ ಮತ್ತು ವಸೀಮ್ ಲೇಔಟ್ ನ ವಸತಿಗಳನ್ನು ಏಕಾಏಕಿ ನೆಲಸಮಗೊಳಿಸಿಲ್ಲ. ಆ ಪ್ರದೇಶ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಪ್ರದೇಶವಾಗಿದ್ದು, ಅದು ಜನವಸತಿಗೆ ಸೂಕ್ತವಾದ ಪ್ರದೇಶವಲ್ಲ. ಆದ್ದರಿಂದ ಸರಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನೆಲೆಸಿದ್ದವರಿಗೆ ನೋಟಿಸ್ ನೀಡಿ ತೆರವುಗೊಳಿಸಲು ಸೂಚನೆ ನೀಡಲಾಗಿತ್ತು. ಆದರೆ ಸರಕಾರದ ಸೂಚನೆಗೆ ಮಣಿಯದೇ ಇದ್ದ ಕಾರಣ, ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಬಹುತೇಕ ಜನರು ವಲಸಿಗರಾಗಿದ್ದು, ಮಾನವೀಯತೆಯ ದೃಷ್ಟಿಯಿಂದ ನಿರಾಶ್ರಿತರಿಗೆ ಉಳಿದುಕೊಳ್ಳಲು ಪರ್ಯಾಯ ವ್ಯವಸ್ಥೆ ಇಲಾಖೆಯ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಸೂಚಿಸಲಾಗಿದೆ ಎಂದರು.

ವಿಜಯನ್ ಹಸ್ತಕ್ಷೇಪ ಮಾಡಬಾರದು: ಡಿ.ಕೆ. ಶಿವಕುಮಾರ್ ಪಿಣರಾಯಿ ವಿಜಯನ್ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಸತ್ಯಾಸತ್ಯತೆ ಅರಿಯದೇ ಮಾತನಾಡಿರುವುದು ದುರದೃಷ್ಟಕರ. ಬೆಂಗಳೂರಿನ ವಿಚಾರ ಏನು ಎಂದು ಅವರು ತಿಳಿಯಬೇಕು. ಈ ಜಾಗ ಘನತ್ಯಾಜ್ಯ ವಿಲೇವಾರಿ ಮಾಡುವ ಕ್ವಾರಿ ಪಿಟ್ ಆಗಿದೆ. ಈ ಪ್ರದೇಶದಲ್ಲಿ ಅನೇಕ ಆರೋಗ್ಯ ಸಂಬಂಧಿತ ಸಮಸ್ಯೆಗಳಿವೆ. ಕೆಲವರು ಕಾನೂನುಬಾಹಿರವಾಗಿ ಆ ಜಾಗವನ್ನು ಅತಿಕ್ರಮಣ ಮಾಡಿದ್ದಾರೆ. ನಮಗೂ ಮಾನವೀಯತೆ ಇದೆ. ಅವರಿಗೆ ಬೇರೆ ಜಾಗಗಳಿಗೆ ಹೋಗಲು ಸರಕಾರ ಹಾಗೂ ಸ್ಥಳೀಯ ಶಾಸಕರು ಅವಕಾಶ ನೀಡಿದ್ದೆವು. ಅಲ್ಲಿದ್ದವರ ಪೈಕಿ ಕೆಲವರು ಮಾತ್ರ ಸ್ಥಳೀಯರಾಗಿದ್ದು ಉಳಿದವರು ಏಕಾಏಕಿ ಅತಿಕ್ರಮಣ ಮಾಡಿದ್ದಾರೆ. ಪಿಣರಾಯಿ ಅವರಂತಹ ನಾಯಕರು ಇಂತಹ ವಿಚಾರದಲ್ಲಿ ಹಸ್ತಕ್ಷೇಪ ಮಾಡಬಾರದು ಎಂದು ಹೇಳಿದರು.

ಪ್ರಕರಣದ ಸತ್ಯಾಸತ್ಯತೆ ತಿಳಿಯದೇ ಪಿಣರಾಯಿ ಅವರು ಈ ರೀತಿ ಮಾತನಾಡಬಾರದು ಎಂದು ಮನವಿ ಮಾಡುತ್ತೇನೆ. ಬುಲ್ಡೋಜರ್ ಸಂಸ್ಕೃತಿ ನಮ್ಮಲ್ಲಿ ಇಲ್ಲ. ನಗರದ ಹೃದಯಭಾಗದಲ್ಲಿರುವ ಸರಕಾರಿ ಜಮೀನನ್ನು ರಕ್ಷಣೆ ಮಾಡಿಕೊಳ್ಳಲಾಗಿದೆ. ತ್ಯಾಜ್ಯ ವಿಲೇವಾರಿ ಘಟಕಕ್ಕೆ ನಿಗದಿಯಾಗಿರುವ ಜಾಗವನ್ನು ಒತ್ತುವರಿ ಮಾಡಿಕೊಳ್ಳಲು ಬಿಡುವುದಿಲ್ಲ. ಈ ಬಗ್ಗೆ ನಮ್ಮ ಪಕ್ಷ ಹಾಗೂ ಕೇರಳದ ನಾಯಕರಿಗೆ ವರದಿ ರವಾನೆ ಮಾಡುತ್ತೇನೆ. ಬೆಂಗಳೂರು ಬೇರೆ ನಗರಗಳಂತೆ ಅಲ್ಲ, ನಮ್ಮಲ್ಲಿ ಹೆಚ್ಚು ಕೊಳಗೇರಿ ಪ್ರದೇಶಗಳಿಲ್ಲ. ಹೊಸದಾಗಿ ಕೊಳಗೇರಿ ಪ್ರದೇಶ ನಿರ್ಮಾಣ ಮಾಡಲು ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು ಸ್ಫೋಟ: ತನಿಖೆ ತೀವ್ರ

← ಮೊದಲ ಪುಟದಿಂದ

ಹೀಲಿಯಂ ಪೌಡರ್ ಅನ್ನು ಅನಿಲವಾಗಿ ಪರಿವರ್ತನೆ ಮಾಡಿ ನಂತರ ಸಿಲಿಂಡರ್‌ಗೆ ಭರ್ತಿ ಮಾಡುತ್ತಿದ್ದರು ಎಂದು ಹೇಳಲಾಗಿದೆಯಾದರೂ, ಅಪಾಯ ತಂದೊಡ್ಡಬಲ್ಲ ಅನಿಲವೊಂದು ಇಷ್ಟು ಸರಳವಾಗಿ ಸಾಮಾನ್ಯ ಜನರ ಕೈಗೆ ಸಿಗುತ್ತಿರುವುದು ಪೊಲೀಸ್ ಇಲಾಖೆಗೆ ಪ್ರಶ್ನಾರ್ಥಕವಾಗಿದೆ. ಮೈಸೂರಿನ ಘಟನೆ ಬಳಿಕ ಎಚ್ಚೆತ್ತಿರುವ ಪೊಲೀಸ್ ಇಲಾಖೆ, ಹೀಲಿಯಂ ಮಾರುಕಟ್ಟೆಯ ಜಾಡಿನ ಬೆನ್ನು ಹತ್ತಿದೆ. ನಿಷೇಧಿತ ವಸ್ತುಗಳ ಸಾಲಿಗೆ ಹೀಲಿಯಂನಂತಹ ವಸ್ತು ಸೇರಿಸುವ ಬಗ್ಗೆಯೂ ಪೊಲೀಸ್ ವಲಯದಲ್ಲಿ ಚರ್ಚೆ ನಡೆದಿದೆ.

ಎನ್‌ಐಎಗೆ ವರದಿ ಸಲ್ಲಿಸಲು ಸಿದ್ಧತೆ: ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಪೊಲೀಸರು ಸಂಪೂರ್ಣ ಮಾಹಿತಿ ಕಲೆ ಹಾಕಿದ್ದು ಎನ್‌ಐಎಗೆ ವರದಿ ಸಲ್ಲಿಸಲಿದ್ದಾರೆ.

> ಸಲೀಂ ಹಾಗೂ ಅವರ ಸಂಬಂಧಿಕರು ಹತ್ತು ವರ್ಷದಿಂದ ಬರುತ್ತಿದ್ದರು. ದಸರಾ ಸೇರಿ ಹಬ್ಬ ಹರಿದಿನಗಳಲ್ಲಿ ಉತ್ತರಪ್ರದೇಶದಿಂದ ಬರುತ್ತಿದ್ದರು. ಒಬ್ಬರಿಗೆ ಒಂದು ದಿನಕ್ಕೆ ನೂರು ರುಪಾಯಿ ಚಾರ್ಜ್ ಮಾಡುತ್ತಿದ್ದೆವು. ದಾಖಲೆ ಪಡೆದೇ ಕೊಠಡಿ ನೀಡುತ್ತಿದ್ದೆವು.
>
> -ಅಮಾನ್ ಸಲೀಂ ಉಳಿದಿದ್ದ ಲಾಡ್ಜ್ ಮಾಲೀಕ

...ಬಿಕ್ಕಟ್ಟು ಪರಿಹಾರ?

← ಮೊದಲ ಪುಟದಿಂದ

ವಿದೇಶ ಪ್ರವಾಸದಿಂದ ಜ.6ರ ಬಳಿಕ ವಾಪಸಾಗಲಿದ್ದು, ವಾಪಸಾದ ಬಳಿಕ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ಕರೆಸಿಕೊಂಡು ಗೊಂದಲಕ್ಕೆ 'ಸ್ಪಷ್ಟ'ನೆ ನೀಡಲಿದ್ದಾರೆ. ಪ್ರಮುಖವಾಗಿ ರಾಹುಲ್ ಗಾಂಧಿ ಅವರು ಈ ಇಬ್ಬರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ. ದೆಹಲಿ ಪ್ರವಾಸದಲ್ಲಿದ್ದ ಸಿದ್ದರಾಮಯ್ಯ ಅವರಿಗೆ ಈ ವಿಷಯವನ್ನು ವೇಣುಗೋಪಾಲ್ ಹೇಳಿದ್ದು, ಡಿ.ಕೆ.ಶಿವಕುಮಾರ್ ಅವರಿಗೆ ಕರೆ ಮಾಡಿ ವಿಷಯ ಮುಟ್ಟಿಸಿದ್ದಾರೆ. ರಾಹುಲ್ ಗಾಂಧಿ ಅವರು ಈ ಗೊಂದಲ ನಿವಾರಿಸುವುದಾಗಿ ಹೇಳಿದ್ದು, ವಿದೇಶದಿಂದ ವಾಪಸಾಗುತ್ತಿದ್ದಂತೆ 'ನೀವಿಬ್ಬರೂ ಒಟ್ಟಿಗೆ' ದೆಹಲಿಗೆ ಬನ್ನಿ ಎಂದು ಸೂಚನೆ ನೀಡಿದ್ದಾರೆ.

ಬಜೆಟ್ ಸಭೆ?: ಸಿಎಂ ಅವರು 2026- 27ನೇ ಸಾಲಿನ ಬಜೆಟ್‌ಗೆ ಸಿದ್ಧತೆ ಆರಂಭಿಸಿಕೊಂಡಿದ್ದಾರೆ. ಮೂಲಗಳ ಪ್ರಕಾರ ಜ.1ರಿಂದ ಬಜೆಟ್ ಪೂರ್ವಭಾವಿ ಸಭೆ ನಡೆಸಲು ಈ ಹಿಂದೆ ಸಿದ್ಧತೆ ನಡೆಸಿಕೊಂಡಿದ್ದರು. ಆದರೀಗ, ಹೈಕಮಾಂಡ್ ಜ.6ರ ಬಳಿಕ ದೆಹಲಿಗೆ ಕರೆಸಿಕೊಳ್ಳುವ ಮಾತುಗಳನ್ನು ಆಡಿರುವುದರಿಂದ ನಾಯಕರ ಭೇಟಿ ಬಳಿಕವೇ ಬಜೆಟ್ ಸಭೆ ಆರಂಭಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-1 /2025-26/3133 ದಿ:- 23.12.2025

ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2025-26/BR/WORK_INDENT30465	15.00	8	PWD/2025-26/RD/WORK_INDENT29536	495.00
2	PWD/2025-26/BR/WORK_INDENT30232	10.50	9	PWD/2025-26/RD/WORK_INDENT29014	490.00
3	PWD/2025-26/RD/WORK_INDENT29537	50.00	10	PWD/2025-26/RD/WORK_INDENT29017	490.00
4	PWD/2025-26/BD/WORK_INDENT30319	20.00	11	PWD/2025-26/RD/WORK_INDENT29829	207.00
5	PWD/2025-26/RD/WORK_INDENT29538	495.00	12	PWD/2025-26/RD/WORK_INDENT29830	200.01
6	PWD/2025-26/RD/WORK_INDENT29539	495.00	13	PWD/2025-26/RD/WORK_INDENT30725	100.65
7	PWD/2025-26/RD/WORK_INDENT29540	250.00	14	PWD/2025-26/RD/WORK_INDENT30752	150.00

		ಕ್ರಸಂ 1 ಮತ್ತು 4 ಕ್ಕೆ	ಕ್ರಸಂ 5 ರಿಂದ 14 ಕ್ಕೆ
1	ಗುತ್ತಿಗೆದಾರರ ಕ್ವಾರೀಸ್ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ
2	ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:	03/01/2026 (16.00 ಗಂಟೆಗೆ)	12/01/2026 (16.00 ಗಂಟೆಗೆ)
3	ಕೆ.ಪಿ.ಪಿ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ:	05/01/2026 (16.30 ಗಂಟೆಗೆ)	13/01/2026 (16.30 ಗಂಟೆಗೆ)
4	ಕೆ.ಪಿ.ಪಿ ಪೋರ್ಟಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ

ಸೂಚನೆ:- ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು KPP Portal ನಲ್ಲಿ ನೋಡಿಕೊಳ್ಳಬಹುದು ಹಾಗೂ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/417

ನಿಸರ್ಗ ರಕ್ಷಣೆಯಾದರೆ ಪೀಳಿಗೆಗೆ ಭವಿಷ್ಯವಿದೆ

ಗಂಗಾವತಿ: ನದಿಗಳ ರಕ್ಷಣೆಯಿಂದ ಮಾತ್ರ ಪ್ರಕೃತಿ ರಕ್ಷಣೆ ಸಾಧ್ಯ. ನಿಸರ್ಗ ರಕ್ಷಣೆಯಿಂದ ಮಾತ್ರ ಮನುಷ್ಯನ ಪೀಳಿಗೆ ಉಳಿಯಲು ಸಾಧ್ಯ. ಆದರೆ, ನದಿಗೆ ಪ್ಲಾಸ್ಟಿಕ್ ಎಸೆಯುವುದು, ಚರಂಡಿ- ಕೈಗಾರಿಕೆಗಳು ತ್ಯಾಜ್ಯ ಬಿಡುವುದರಿಂದ ಜಲ ಮೂಲಗಳು ಹಾಳಾಗುತ್ತಿವೆ ಎಂದು ನೇತಾಜಿ ಸುಭಾಷ ಚಂದ್ರ ಬೋಸ್ ಮೊಮ್ಮಗಳು ರಾಜಶ್ರೀ ಚೌಧರಿ ಹೇಳಿದರು.

ನಗರದ ಹಿರೇ ಜಂತಕಲ್ ನ ಪಂಪಾ ವಿರೂಪಾಕ್ಷೇಶ್ವರ ದೇವಸ್ಥಾನದ ಆವರಣದಲ್ಲಿ ನವ ದೆಹಲಿಯ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ, ನಿರ್ಮಲ ತುಂಗಾಭದ್ರ ಅಭಿಯಾನ ಸಮಿತಿ, ಶಿವಮೊಗ್ಗದ ಪರ್ಯಾವರಣ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ 3ನೇ ಹಂತದ ನಿರ್ಮಲ ತುಂಗಾಭದ್ರ, ಜಲ ಜಾಗೃತಿ- ಜನ ಜಾಗೃತಿ ಪಾದಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಶನಿವಾರ ಮಾತನಾಡಿದರು.

ಜಗತ್ತಿನ ನಾಗರೀಕತೆ, ಸಾಮ್ರಾಜ್ಯಗಳ ನಿರ್ಮಾಣ ಆಗಿದ್ದೇ ನದಿಯ ತಟಗಳಲ್ಲಿ. ಕೃಷ್ಣದೇವರಾಯ ತನ್ನ ಸಾಮ್ರಾಜ್ಯ ನಿರ್ಮಿಸಿದ್ದು ತುಂಗಾಭದ್ರ ನದಿ ತಟದಲ್ಲಿಯೇ. ನದಿ ಇಲ್ಲದೇ ಯಾವ ದೇಶ, ಸಮಾಜ ಇರಲಾರದು. ಈ ಬಗ್ಗೆ ಎಲ್ಲರೂ ಗೌರವಿಸುವ ಧರ್ಮ ಗ್ರಂಥಗಳಲ್ಲಿ ಉಲ್ಲೇಖವಿದೆ.

ನದಿ ಕಲುಷಿತ ಮಾಡುವುದು ತುಂಬಾ ಪಾಪ ಕೃತ್ಯ. ಸಾಧ್ಯವಾದರೆ ನದಿಗಳ ರಕ್ಷಣೆಗೆ ಕೈಜೋಡಿಸಿ. ನದಿಗಳು ದೇಶದ ಜೀವನಾಡಿ. ಜೀವ ಸಂಕುಲಗಳ ಬದುಕಿಗೆ ನದಿ ಜೀವ ಸೆಲೆಯಾಗಿವೆ ಎಂದು ವಿವರಿಸಿದರು.

> **ದೇಶದಲ್ಲಿನ ಒಟ್ಟು ನದಿಗಳ ಪೈಕಿ ಈಗಾಗಲೇ 200 ನದಿ ಭೂಪಟದಲ್ಲಿ ಕಾಣದಂತೆ ಆಗಿವೆ. 80 ನದಿಗಳು ಅಪಾಯದ ಅಂಚಿನಲ್ಲಿವೆ. ಸದ್ಯ ನದಿಗಳ ಮಲಿನತೆ ಸಮಸ್ಯೆ ಒಂದಾದರೇ, ನದಿಗಳು ಹರಿಯುವಿಕೆ ಸಮಸ್ಯೆ ಇನ್ನೊಂದು. ತುಂಗಾಭದ್ರ ನದಿಗೆ ಸೇರುತ್ತಿರುವುದು ಪ್ಲಾಸ್ಟಿಕ್ ತ್ಯಾಜ್ಯ, ಚರಂಡಿ, ಕೈಗಾರಿಕೆ ನೀರಿನಿಂದ ನದಿ ಹಾಳಾಗಿದೆ. ಕೆಲ ಸಮೀಕ್ಷಾ ವರದಿಗಳ ಪ್ರಕಾರ ತುಂಗಾಭದ್ರ ನೀರು ಕುಡಿಯಲು ಯೋಗ್ಯವಿಲ್ಲ.**
>
> - ಬಸವರಾಜ ಪಾಟೀಲ್ ವೀರಾಪುರ
> ಅಧ್ಯಕ್ಷ, ನವ ದೆಹಲಿಯ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ

ಜಾಗೃತಿ ಜಾಥಾಕ್ಕೆ ಚಾಲನೆ

ನೇತಾಜಿ ಸುಭಾಷ್ ಚಂದ್ರ ಬೋಸ್ ಮೊಮ್ಮಗಳು ರಾಜಶ್ರೀ ಚೌಧರಿ, ರಾಜವಂಶಸ್ಥೆ ಹಾಗೂ 3ನೇ ಹಂತದ ತುಂಗಭದ್ರಾ ನಿರ್ಮಲ ಅಭಿಯಾನದ ರಾಯಬಾರಿ ಲಲಿತರಾಣಿ ಶ್ರೀರಂಗದೇವರಾಯಲು ಅವರು ಪಂಪಾ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ತುಂಗಭದ್ರಾ ನೀರಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಪಂಪಾ ವಿರೂಪಾಕ್ಷೇಶ್ವರ ದೇವಸ್ಥಾನದಿಂದ ಆರಂಭವಾದ ಯಾತ್ರೆ ಕಿಷ್ಕಿಂಧಾದಿಂದ- ಮಂತ್ರಾಲಯದ ವರೆಗೆ ನಡೆಯಲಿದೆ. 3ನೇ ಹಂತದ ನಿರ್ಮಲ ತುಂಗಭದ್ರಾ ಅಭಿಯಾನದ ಜಾಗೃತಿ ಪಾದಯಾತ್ರೆ ಕೃಷ್ಣದೇವರಾಯ ವೃತ್ತದ ಮೂಲಕ ಚನ್ನಬಸವ ತಾತನ ಮಠದ ಮೂಲಕ ಜುಲೈನಗರಕ್ಕೆ ತೆರಳಿ ಸಮಾರೋಪವಾಯಿತು. ಎಂಎನ್‌ಎಂ ಪ್ರೌಢಶಾಲೆ, ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು, ಲಿವ್ ವಿತ್ ಹ್ಯುಮನಿಟ್ ಸದಸ್ಯರು, ವಿಕಲಚೇತನರು ತುಂಗಭದ್ರಾ ನದಿ ರಕ್ಷಣೆ ಕುರಿತ ನಾಮಫಲಕಗಳು ಹಿಡಿದು ಜಾಗೃತಿ ಮೂಡಿಸಿದರು.

ಸಮಾಚಾರ ಸಣ್ಣದಲ್ಲ

ಚಿರತೆ ಸೆರೆ: ನಿಟ್ಟುಸಿರು ಬಿಟ್ಟ ಗ್ರಾಮಸ್ಥರು

ಮಂಡ್ಯ: ಹಲವಾರು ದಿನಗಳಿಂದ ಜನಜಾನುವಾರುಗಳಿಗೆ ಕಂಟಕ ಪ್ರಾಯವಾಗಿದ್ದ ಚಿರತೆ ಸೆರೆ ಸಿಕ್ಕಿದ್ದು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಹರದನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನರು ನಿಟ್ಟುಸಿರು ಬಿಟ್ಟಿದ್ದಾರೆ. ಹರದನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಜನರು ಹಲವಾರು ಬಾರಿ ಚಿರತೆ ಕಂಡು ಪ್ರಾಣ ಭಯದಿಂದ ಧೃತಿಗೆಟ್ಟಿದ್ದರು. ಚಿರತೆಯು ಈ ಭಾಗದ ಹಲವಾರು ನಾಯಿಗಳನ್ನ ಎಳೆದೊಯ್ದು ತಿಂದಿದ್ದನ್ನ ಕಣ್ಣಾರೆ ಕಂಡಿದ್ದ ಗ್ರಾಮಸ್ಥರು ನಾಗಮಂಗಲ ತಾಲೂಕು ಅರಣ್ಯ ಇಲಾಖೆಯವರಿಗೆ ದೂರು ಸಲ್ಲಿಸಿದ್ದರು. ಅರಣ್ಯ ಇಲಾಖೆಯವರು ಬೊಮ್ಮನಹಳ್ಳಿ ಗ್ರಾಮದ ಸಮೀಪ ತಂದಿರಿಸಿದ್ದ ಬೋನಿಗೆ ಚಿರತೆಯು ಸೆರೆ ಸಿಕ್ಕಿದ್ದು ಗ್ರಾಮಸ್ಥರು ನೆಮ್ಮದಿಯ ನಿಟ್ಟಿಸಿರು ಬಿಟ್ಟಿದ್ದಾರೆ ಹಾಗೂ ಅರಣ್ಯ ಇಲಾಖೆಯವರ ಕಾರ್ಯಕ್ಕೆ ಶ್ಲಾಘಿಸಿದ್ದಾರೆ.

ವಿಷ ನೀರಿನಿಂದ 50ಕ್ಕೂ ಹೆಚ್ಚು ಕುರಿಗಳು ಸಾವು

ರಾಯಚೂರು: ವಿಷಪೂರಿತ ನೀರು ಸೇವಿಸಿ 50ಕ್ಕೂ ಹೆಚ್ಚು ಕುರಿಗಳ ಸಾವನ್ನಪ್ಪಿರುವ ಘಟನೆ ರಾಯಚೂರು ಜಿಲ್ಲೆ ಅರಕೇರಾ ತಾಲೂಕಿನ ಹೆಗ್ಗಡದಿನ್ನಿ ಗ್ರಾಮದ ಬಳಿ ನಡೆದಿದೆ. ಸಂಚಾರಿ ಕುರಿಗಾಯಿ ಭೀಮಪ್ಪ ಮಲ್ಲಿನಾಯಕನದೊಡ್ಡಿ ಎಂಬುವವರಿಗೆ ಸೇರಿದ ಕುರಿಗಳು. ಗುಂಡಿಯಲ್ಲಿ ಶೇಖರಣೆ ಆಗಿದ್ದ ನೀರನ್ನು 100 ಕುರಿಗಳು ಕುಡಿದಿದ್ದು, ಈ ಪೈಕಿ ಹೊಟ್ಟೆ ಉಬ್ಬಸದಿಂದ ಏಕಾಏಕಿ 50ಕ್ಕೂ ಹೆಚ್ಚು ಸಾವನ್ನಪ್ಪಿವೆ. ಬದುಕುಳಿದಿರುವ ಕುರಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಇನ್ನೂ ಸಾವು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಪಶು ವೈದ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸುಮಾರು 5 ಲಕ್ಷ ರುಪಾಯಿಗೂ ಅಧಿಕ ನಷ್ಟವಾಗಿದ್ದು, ಕುರಿಗಾಯಿ ಕಣ್ಣೀರು ಹಾಕುತ್ತಿ ದ್ದಾರೆ. ನೀರಿನಲ್ಲಿ ವಿಷ ಕ್ರಿಮಿನಾಶಕ ಬೆರೆಸಿರುವ ಶಂಕೆಯಿದ್ದು, ಸ್ಥಳಕ್ಕೆ ಗಬ್ಬೂರು ಠಾಣೆ ಪೊಲೀಸರು, ಪಶು ವೈದ್ಯಾಧಿಕಾರಿಗಳು, ಗ್ರಾಪಂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸರಕಾರ ದಿಂದ ಸೂಕ್ತ ಪರಿಹಾರ ನೀಡಲು ಸ್ಥಳೀಯರು ಆಗ್ರಹಿಸಿದ್ದಾರೆ.

ಭೀಮ ಆನೆ ಬಳಿ ಫೋಟೊ ತೆಗೆದರೆ ಕೇಸ್

ಹಾಸನ: ಜಿಲ್ಲೆಯ ಮಲೆನಾಡು ಭಾಗದ ಗ್ರಾಮಗಳಿಗೆ ಕಾಡಾನೆ ಭೀಮ ಎಂಟ್ರಿ ಕೊಡುತ್ತಿದೆ. ಶಾಂತ ಸ್ವಭಾವದ ಭೀಮನನ್ನು ನೋಡಲು ಜನ ಮುಗಿಬೀಳು ತ್ತಿದ್ದಾರೆ. ಅಲ್ಲದೇ ಫೋಟೋ ತೆಗೆಯಲು, ವಿಡಿಯೊ ಮಾಡಲು ಮುಂದಾಗುತ್ತಿ ದ್ದಾರೆ. ಜನರ ನಡೆ ಯಿಂದ ಆನೆಗೆ ತೊಂದರೆ ಆಗುತ್ತಿರುವ

ಹಿನ್ನಲೆಯಲ್ಲಿ ಅರಣ್ಯ ಇಲಾಖೆ ಕ್ರಮಕ್ಕೆ ಮುಂದಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಡಿಎಫ್ಒ ಸೌರಭ್‌ಕುಮಾರ್, ಕಾಡಾನೆ ಭೀಮ, ಗ್ರಾಮ, ತೋಟಗಳಿಗೆ ಬರುತ್ತಿದೆ. ಇಟಿಎಫ್ ತಂಡ 24 ಗಂಟೆಗಳ ಕಾಲ ಕಾಡಾನೆ ಭೀಮನನ್ನು ಗಮನಿಸು ತ್ತಿದೆ. ಈಗಾಗಲೇ ಸಾರ್ವಜ ನಿಕರಿಗೆ ವಿನಂತಿ ಮಾಡಿ, ಎಚ್ಚರಿಕೆ ಕೊಡಲಾಗಿದೆ. ವನ್ಯಜೀವಿ ಸಂರಕ್ಷಣೆ ಕಾಯ್ದೆ ಪ್ರಕಾರ ಪ್ರಾಣಿಗಳಿಗೆ ತೊಂದರೆ ನೀಡುವುದು ಅಪರಾಧವಾಗಿದೆ. ಭೀಮನ ಸಮೀಪ ಹೋಗಿ ವಿಡಿಯೊ ಚಿತ್ರೀಕರಣ ಮಾಡಿದರೆ ವನ್ಯಜೀವಿ ಸಂರ ಕ್ಷಣೆ ಕಾಯಿದೆಯಡಿ ಪ್ರಕರಣ ದಾಖಲಿಸಲಾಗು ವುದು ಎಂದು ಡಿಎಫ್ಒ ಸೌರಭ್‌ಕುಮಾರ್ ಹೇಳಿ ದ್ದಾರೆ. ಇಟಿಎಫ್ ಸಿಬ್ಬಂದಿ ಭೀಮನನ್ನು ಟ್ರ್ಯಾಕ್ ಮಾಡುತ್ತಿದ್ದಾರೆ. ಇನ್ನೊಮ್ಮೆ ಎಚ್ಚರಿಕೆ ನೀಡುತ್ತಿದ್ದು ಯಾರು ಕಾಡಾನೆ ಭೀಮನ ಬಳಿ ವಿಡಿಯೊ, ಫೋಟೋ ತೆಗೆದುಕೊಳ್ಳಬಾರದು ಎಂದಿದ್ದಾರೆ.

ಹಾಲುಮತದಿಂದ ಅಧಿಕಾರ ಕಿತ್ತುಕೊಳ್ಳಲು ಆಗುವುದಿಲ್ಲ

ಬೆಳಗಾವಿ: ಹಾಲುಮತ ಸಮುದಾಯದಿಂದ ಅಧಿಕಾರ ಕಿತ್ತುಕೊಳ್ಳಲು ಆಗುವುದಿಲ್ಲ, ಸಿದ್ದರಾಮಯ್ಯ ತಮ್ಮ ಹುದ್ದೆ ಬಿಟ್ಟುಕೊಟ್ಟರೆ ಮಾತ್ರ ಅವಕಾಶ ಇದೆ. ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಕೋಡಿಮಠ ಸಂಸ್ಥಾನದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ. ಶನಿವಾರ ಬೆಳಗಾವಿ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೇ ಬಜೆಟ್ ಮಂಡನೆ ಮಾಡಲಿದ್ದಾರೆ. ಇದಾದ ನಂತರ ಅವರಾಗಿಯೇ ಅಧಿಕಾರ ಬಿಟ್ಟುಕೊಟ್ಟರೆ ಮಾತ್ರ ಅವಕಾಶ ಇರುತ್ತದೆ. ಇಲ್ಲವಾದರೆ ಅಸಾಧ್ಯ ಎಂದರು. ಈ ವರ್ಷಕ್ಕೆ ಹೋಲಿಸಿದರೆ ಮುಂಬರುವ ವರ್ಷಗಳಲ್ಲಿ ಸಾವು, ನೋವು ಹೆಚ್ಚಾಗಲಿವೆ. ಸಂಕಷ್ಟಗಳೂ ಬರಲಿವೆ. ಶೇ. 10ರಷ್ಟು ಜಗತ್ತು ಮುಳುಗು ಹೋಗುವ ಸಾಧ್ಯತೆಯೂ ಇದೆ. ಸಂಕಷ್ಟಗಳೂ ಬರಲಿವೆ ಎಂದು ಶ್ರೀಗಳು ಮಾರ್ಮಿಕವಾಗಿ ನುಡಿದರು.

ಹಿಂದೂ ವಿರೋಧಿ ಸರಕಾರ

ದ್ವೇಷ ಭಾಷಣದ ಕಾಯಿದೆ ಮೂಲಕ ವಾಕ್‌ಸ್ವಾತಂತ್ರ್ಯ ಕಸಿಯುವ ಪ್ರಯತ್ನ

ಗ್ಯಾರಂಟಿ ಹೆಸರಿನಲ್ಲಿ ರಾಜ್ಯಕ್ಕೆ ಅನ್ಯಾಯ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಸರಕಾರ ಗ್ಯಾರಂಟಿ ಹೆಸರಲ್ಲಿ ಹಿಂದೂ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ಬುರುಡೆ ಗ್ಯಾಂಗ್ ವಿಚಾರ-ಹಿಂದೂ ಭಾವನೆಗಳಿಗೆ ಧಕ್ಕೆ ತರುವ ಷಡ್ಯಂತ್ರ ಕುರಿತು ರಾಜ್ಯ, ದೇಶ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ನಡೆದಿದೆ. ಅಪಪ್ರಚಾರದಿಂದ ಧರ್ಮಸ್ಥಳ ಮಂಜುನಾಥೇಶ್ವರನ ಭಕ್ತಾದಿಗಳಿಗೆ ಆದ ಮಾನಸಿಕ ಕಿರುಕುಳದ ಚರ್ಚೆಯಾಗಿದೆ. ಸರಕಾರದ ಬೇಜವಾಬ್ದಾರಿತನದ ರಾಜ್ಯದ ಜನರ ಗಮನಕ್ಕೆ ತರುವ ಕೆಲಸ ಮಾಡಿದ್ದೇವೆ ಎಂದು ಹೇಳಿದರು.

ಹಾದಿಬೀದಿಯಲ್ಲಿ ಹೋಗುವವರ ಮಾತು ಕೇಳಿ ಮುಖ್ಯಮಂತ್ರಿಗಳು ಕೋಟ್ಯಂತರ ಭಕ್ತರ ಭಾವನೆಗೆ ಧಕ್ಕೆ ತರುವ ತೀರ್ಮಾನ ಮಾಡಿದ್ದಾರಲ್ಲವೇ? ಅಪಪ್ರಚಾರಕ್ಕೆ ಬೆಲೆ ಕಟ್ಟುವವರು ಯಾರು? ಹಿಂದೂ ಭಾವನೆಗೆ ಧಕ್ಕೆ ತಂದ ಮುಖ್ಯಮಂತ್ರಿಗಳು ಇವತ್ತಿಗೂ ಕ್ಷಮೆ ಯಾಚಿಸಿಲ್ಲ. ಬದಲಾಗಿ ತಾವು ಮಾಡಿದ್ದೇ ಸರಿ ಎಂದು ಕೈತೊಳೆದುಕೊಂಡಿದ್ದಾರೆ. ಇದರಡಿ ಬುರುಡೆ ಗ್ಯಾಂಗ್ ನೆಪ ಮಾತ್ರ. ಷಡ್ಯಂತ್ರದ ಹಿಂದಿನ ದುಷ್ಟ ಶಕ್ತಿಗಳು ಯಾರೆಂದು ಬಯಲಾಗಿಲ್ಲ ಎಂದು ಟೀಕಿಸಿದರು.

ಕಾಂಗ್ರೆಸ್ಸಿನವರು ಅಸಹಿಷ್ಣುತೆ ಬಗ್ಗೆ ಮಾತನಾಡುತ್ತಾರೆ. ಸದನ ನಡೆಯುವಾಗ ದ್ವೇಷ ಭಾಷಣ ಸಂಬಂಧಿ ಮಸೂದೆ ತಂದು ಚರ್ಚೆಗೂ ಅವಕಾಶ ಕೊಡದೆ ಮಂಜೂರು ಮಾಡಿದ್ದಾರೆ. ಕಾಂಗ್ರೆಸ್ ತನ್ನ ವೈಫಲ್ಯ ಮುಚ್ಚಿ ಹಾಕಿಕೊಳ್ಳುವ ಸಲುವಾಗಿ ಬಿಜೆಪಿ, ಜೆಡಿಎಸ್, ಖಾಸಗಿ ವ್ಯಕ್ತಿಗಳು, ಮಾಧ್ಯಮದವರು ಟೀಕಿಸದಂತೆ ಮಸೂದೆ ತಂದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಟೀಕಿಸಿದರೆ ಒದ್ದು 9-10 ವರ್ಷ ಒಳಗೆ ಹಾಕುವ ಷಡ್ಯಂತ್ರವನ್ನು ಸರಕಾರ ಮಾಡಿದೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆ. ಇಂದಿರಾ ಗಾಂಧಿಯವರು 1975ರಲ್ಲಿ ತುರ್ತು ಪರಿಸ್ಥಿತಿ ಹೇರುವ ಕೆಲಸ ಮಾಡಿದ್ದರು. ಆ ಕರಾಳ ದಿನ ಮರುಕಳಿಸುವ ಕಾಯಿದೆಯನ್ನು ಸರಕಾರ ತಂದಿದೆ ಎಂದು ಟೀಕಿಸಿದರು.

ಅಲ್ಪಸಂಖ್ಯಾತರ ಮೇಲೇಕೆ ಅಷ್ಟು ಪ್ರೀತಿ?: ಗೋವುಗಳನ್ನು ಅಕ್ರಮವಾಗಿ ಸಾಗಣೆ ಮಾಡುವವರನ್ನು ಪೊಲೀಸರು ಬಂಧಿಸಿ, ವಾಹನ ವಶಕ್ಕೆ ಪಡೆದರೆ ಕೋರ್ಟಿನಲ್ಲಿ ಜಾಮೀನು ಪಡೆಯಬೇಕಿತ್ತು. ಸಿದ್ದರಾಮಯ್ಯರ ಸರಕಾರ ಪೊಲೀಸರೇ ಠಾಣೆಯಲ್ಲಿ ಜಾಮೀನು ಕೊಡುವಂತೆ, ಬಾಂಡ್ ನೀಡಿ ವಾಹನ ಬಿಡುಗಡೆ ಮಾಡುವಂತೆ ಮಾಡಲು ಸಿದ್ಧತೆ ನಡೆದಿತ್ತು. ಇದು ದೇಶದ್ರೋಹದ ಕೆಲಸವಲ್ಲವೇ? ಹಿಂದೂ ಭಾವನೆಗೆ ಧಕ್ಕೆ ತರುವ ಕೆಲಸವಲ್ಲವೇ? ಯಾಕೆ ಇವರಿಗೆ ಅನುಕಂಪ? ಅಲ್ಪಸಂಖ್ಯಾತರ ಓಲೈಕೆಗಾಗಿ ರಾಜ್ಯ ಸರಕಾರ ಇಷ್ಟು ಕೀಳು ಮಟ್ಟಕ್ಕೆ ಇಳಿದದ್ದು ಅಕ್ಷಮ್ಯ ಅಪರಾಧ ಎಂದು ಆರೋಪಿಸಿದರು.

ರಾಜ್ಯದ ಕಾಂಗ್ರೆಸ್ ಸರಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ವಸತಿ ಸಚಿವ ಜಮೀರ್ ಆಪ್ತ ಕಾರ್ಯದರ್ಶಿ ಸರ್ಫರಾಜ್ ಖಾನ್ ಮನೆ ಮೇಲೆ ಲೋಕಾಯುಕ್ತ ದಾಳಿಯಾಗಿದೆ. ಅವರ ಮನೆಯಲ್ಲಿ 14 ಕೋಟಿ ವಶಪಡಿಸಿಕೊಳ್ಳಲಾಗಿದೆ. ಇಷ್ಟಾದರೂ ಸರಕಾರ ಏನೂ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಮೃದು ಧೋರಣೆ ಅನುಸರಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜನರಿಗೆ ಉತ್ತರ ನೀಡಬೇಕು ಎಂದು ಒತ್ತಾಯಿಸಿದರು.

ಮೋದಿ ಟೀಕಿಸೋದು ಸರಿಯಲ್ಲ: ನರೇಗಾ ಯೋಜನೆಯ ಹೆಸರನ್ನು ಬದಲಾಯಿಸಿರುವುದಕ್ಕೆ ಕಾಂಗ್ರೆಸ್‌ನವರು ಪ್ರಧಾನಿ ಮೋದಿಯವರನ್ನು ಟೀಕೆ ಮಾಡುತ್ತಿರುವುದು ಸರಿಯಲ್ಲ. ಮಹಾತ್ಮಗಾಂಧಿ ಬಗ್ಗೆ ಕಾಂಗ್ರೆಸ್ ಪಕ್ಷ ಮೊಸಳೆ ಕಣ್ಣೀರು ಹಾಕುತ್ತಿದೆ. ಮಹಾತ್ಮಗಾಂಧಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಅಂಬೇಡ್ಕರ್ ಅವರ ಸ್ಮಾರಕ ನಿರ್ಮಾಣ ಮಾಡಿರುವುದು ಎನ್‌ಡಿಎ ಸರಕಾರವೇ ಹೊರತು ಕಾಂಗ್ರೆಸ್ ಅಲ್ಲ. ಗಾಂಧೀಜಿಯವರ ಸಬರಮತಿ ಆಶ್ರಮವನ್ನು ಅಭಿವೃದ್ಧಿ ಮಾಡಿದ್ದು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ. ಪ್ರಧಾನಿ ಮೋದಿಯವರು ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ. ಆದರೂ ಅವರನ್ನು ಕಾಂಗ್ರೆಸ್ ಪಕ್ಷ ಸಹಿಸುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೆಚ್ಚು ಟೀಕೆ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರಿಗೆ ಮೋದಿಯವರ ಜನಪ್ರಿಯತೆ ಸಹಿಸಲು ಆಗುತ್ತಿಲ್ಲ. ಆದ್ದರಿಂದ ಅನವಶ್ಯಕವಾಗಿ ಆರೋಪಿಸುತ್ತಿದ್ದಾರೆ ಎಂದು ಟೀಕಿಸಿದರು.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು.

ಗ್ಯಾರಂಟಿ ವಿಚಾರದಲ್ಲಿ ಸರಕಾರದಲ್ಲೇ ಗೊಂದಲ

ಗ್ಯಾರಂಟಿ ಯೋಜನೆಗಳ ಬಗ್ಗೆ ಸಿಎಂ, ಡಿಸಿಎಂ ಭಾರಿ ಪ್ರಚಾರ ನೀಡಿದರು. ರಾಜ್ಯ ಸರಕಾರ ಗೃಹಲಕ್ಷ್ಮಿ ವಿಚಾರದಲ್ಲಿ ದ್ವಂದ್ವ ನಿಲುವು ಅನುಸರಿಸುತ್ತಿದೆ. ಒಂದೆಡೆ 2 ಸಾವಿರ ಕೊಡುವುದಾಗಿ ಹೇಳಿ ಮತ್ತೊಂದೆಡೆ ಹೆಂಡದ, ಅಬಕಾರಿ ಟಾರ್ಗೆಟ್ ಅನ್ನು ವರ್ಷ ವರ್ಷ ಜಾಸ್ತಿ ಮಾಡುತ್ತಿದೆ. ಕಳೆದ 2.5 ವರ್ಷದಲ್ಲಿ ಅನುಭವಿ ಸಿಎಂ ಸಿದ್ದರಾಮಯ್ಯನವರು ರಾಜ್ಯದ ಖಜಾನೆಗೆ ಹಣ ತುಂಬಿಸಲು ತಮ್ಮ ಗ್ಯಾರಂಟಿಗಳಿಗೆ ಹಣ ತುಂಬಿಸಲು ಸಾಧ್ಯವಾಗದೇ ಅಬಕಾರಿ ಗುರಿಯನ್ನು ಶೇ.35ರಷ್ಟು ಹೆಚ್ಚಿಸಿದ್ದಾರೆ. ಇನ್ನೊಂದು ಕಡೆ ಅಬಕಾರಿಯ 500- 600 ಲೈಸನ್ಸ್ ಅನ್ನು ಸರಕಾರ ಹರಾಜು ಮಾಡಲು ಹೊರಟಿದೆ. ರಾಜ್ಯವನ್ನು ಏನು ಮಾಡಲು ಹೊರಟಿದ್ದೀರಿ? ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

ಕಾಂಗ್ರೆಸ್ ಸರಕಾರ ಯಾವುದೇ ಟೀಕೆ ಸಹಿಸಲ್ಲ. ಇದೊಂದು ಅಸಹಿಷ್ಣು ಸರಕಾರ. ರಾಜ್ಯದಲ್ಲಿ ದ್ವೇಷ ಭಾಷಣ ಮಸೂದೆ ತಂದಿದೆ. ಈ ಮಸೂದೆ ಮೂಲಕ ಪ್ರಜಾಪ್ರಭುತ್ವದ'ಗ್ಗೊಲೆಗೆ ಮುಂದಾಗಿದೆ ಎಂದು ಟೀಕಿಸಿ, ದ್ವೇಷ ಭಾಷಣ ಮಸೂದೆ ಪ್ರಜಾಪ್ರಭುತ್ವ ವಿರೋಧಿ. ಅಧಿವೇಶನದ ಸಂದರ್ಭದಲ್ಲಿ ಸಚಿವರುಗಳು, ಡಿನ್ನರ್, ಬ್ರೇಕ್ ಫಾಸ್ಟ್ ಮೀಟಿಂಗ್‌ನಲ್ಲಿಯೇ ಕಾಲ ಹರಣ ಮಾಡಿದರು. ಯಾವುದೇ ಜ್ವಲಂತ ಸಮಸ್ಯೆಗಳಿಗೆ ಉತ್ತರ ಕೊಡಲಿಲ್ಲ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮೈತ್ರಿಯಿಲ್ಲವೆಂದು ನಾವ್ಯಾರು ಹೇಳಿಲ್ಲ: ಬಿ.ವೈ. ವಿಜಯೇಂದ್ರ

ಸ್ಥಳೀಯ ಚುನಾವಣೆ ಮೈತ್ರಿ, ವರಿಷ್ಠರ ತೀರ್ಮಾನಕ್ಕೆ ಬದ್ಧ

ಬೆಂಗಳೂರು: ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೈತ್ರಿಯಿಲ್ಲ ಎನ್ನುವ ಬಹಿರಂಗ ಹೇಳಿಕೆಯ ಹೊರತಾಗಿಯೂ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಥಳೀಯ ಸಂಸ್ಥೆ ಚುನಾವಣೆಯ ಮೈತ್ರಿಗೆ ಸಂಬಂಧಿಸಿದಂತೆ ಪಕ್ಷದ ಹೈಕಮಾಮಡ್ ತೀರ್ಮಾನಿಸುತ್ತದೆ ಎನ್ನುವ ಮೂಲಕ ಮೈತ್ರಿಯ ವಿಷಯವನ್ನು ವರಿಷ್ಠರ ಅಂಗಳದಲ್ಲಿಯೇ ಇತ್ಯರ್ಥಪಡಿಸಿಕೊಳ್ಳಲು ತೀರ್ಮಾನಿಸಿದ್ದಾರೆ.

ದೇವೇಗೌಡರ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ವಿಜಯೇಂದ್ರ, ಸ್ಥಳೀಯ ಸಂಸ್ಥೆಗಳಲ್ಲಿ ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳುವ ಸಂಬಂಧ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲಾ ಬದ್ಧ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಜತೆ ಮೈತ್ರಿ ಇಲ್ಲ ಎಂದು ನಾವ್ಯಾರು ಎಲ್ಲೂ ಹೇಳಿಲ್ಲ. ಅಂತಿಮವಾಗಿ ನಮ್ಮ ವರಿಷ್ಠರು ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಕುಮಾರಸ್ವಾಮಿಯವರ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ. ಆ ತೀರ್ಮಾನಕ್ಕೆ ನಾವು ಬದ್ಧರಾಗಿರುತ್ತೇವೆ ಎಂದರು.

ಮಾಜಿ ಪ್ರಧಾನಿ ದೇವೇಗೌಡರ ಬಗ್ಗೆ ನಮಗೆ ಗೌರವ ಇದೆ. ಅವರು ಮುತ್ಸದ್ದಿಗಳು. ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಜತೆ ಮೈತ್ರಿ ಇಲ್ಲ ಎಂಬ ದೇವೇಗೌಡರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸುವ ಅಗತ್ಯವಿಲ್ಲ. ವರಿಷ್ಠರು ಈ ಗೊಂದಲಗಳನ್ನು ಪರಿಹರಿಸುತ್ತಾರೆ. ವರಿಷ್ಠರು ಏನು ಹೇಳುತ್ತಾರೋ ಅದನ್ನು ಕೇಳುತ್ತೇವೆ. ಕೆಲ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದಿದೆ. ಕಾರ್ಯಕರ್ತರ ಆಕಾಂಕ್ಷೆಯಂತೆ ಅಧ್ಯಕ್ಷನಾಗಿ ನಾನು ಮಾತನಾಡುವುದು ನನ್ನ ಕರ್ತವ್ಯ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು. ಆ ಮೂಲಕ ಮೋದಿಯವರ ಕೈ ಬಲಪಡಿಸಬೇಕು ಎಂಬುದು ನಮ್ಮ ಮತ್ತು ಜೆಡಿಎಸ್ ನಾಯಕರ ಅಪೇಕ್ಷೆಯಾಗಿದೆ ಎಂದರು.

ಸ್ಥಳೀಯ ಒತ್ತಡಕ್ಕೆ ಮೈತ್ರಿ ಬೇಡವೆಂದ ಜೆಡಿಎಸ್?

ಬಿಜೆಪಿ ವರಿಷ್ಠರೊಂದಿಗೆ ಉತ್ತಮ ಒಡನಾಟವಿದ್ದರೂ ಜೆಡಿಎಸ್ ವರಿಷ್ಠರು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ಬೇಡ ಎನ್ನುವ ಮಾತುಗಳನ್ನು ಹೇಳಿರುವುದಕ್ಕೆ ಪ್ರಮುಖ ಕಾರಣ ಸ್ಥಳೀಯ ನಾಯಕರ ಒತ್ತಡವೇ ಕಾರಣ ಎನ್ನುವ ಮಾತುಗಳು ಕೇಳಿಬಂದಿದೆ. ಈ ಹಿಂದೆ ಜೆಡಿಎಸ್ ಶಾಸಕಿ ಕರೆಮ್ಮಾ ನಾಯಕ್, ಶರಣಗೌಡ ಕಂದಕೂರು ಸೇರಿ ಹಲವರಿಗೆ, ಸ್ಥಳೀಯ ಬಿಜೆಪಿ ನಾಯಕರೊಂದಿಗೆ ಇರುವ ಭಿನ್ನಾಭಿಪ್ರಾಯ, ಗೊಂದಲ, ವಿರೋಧವಿದೆ. ಆದ್ದರಿಂದ ಈ ನಾಯಕರು ಯಾವುದೇ ಕಾರಣಕ್ಕೂ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬಿಜೆಪಿಯೊಂದಿಗೆ ಹೋಗುವುದು ಪಕ್ಷಕ್ಕೆ ಸಮಸ್ಯೆಯಾಗುತ್ತದೆ ಎಂದು ದೇವೇಗೌಡರು ಹಾಗೂ ಕುಮಾರಸ್ವಾಮಿ ಅವರಿಗೆ ತಿಳಿಸಿದ್ದಾರೆ. ಈ ಕಾರಣಕ್ಕೆ ಮೈತ್ರಿ ವಿಷಯದಲ್ಲಿ ಭಿನ್ನಹಾದಿ ತುಳಿಯುವ ಲೆಕ್ಕಾಚಾರದಲ್ಲಿ ನಾಯಕರಿದ್ದಾರೆ.

ಫ್ಯಾನ್ಸ್‌ಗಳಲ್ಲಿ ಸ್ಟಾರ್‌ವಾರ್ ಬೇಡ: ಡಾಲಿ

ಬೆಳಗಾವಿ: ಅಭಿಮಾನಿಗಳು ತಮ್ಮ ಬದುಕನ್ನು ಗಟ್ಟಿಯಾಗಿ ಕಟ್ಟಿಕೊಂಡರೆ ನಟರಿಗೆ ಅದೇ ಸಂತೋಷದ ಕೊಡುತ್ತದೆ. ಅದು ಬಿಟ್ಟು ಹೊಡೆದಾಟ ಮಾಡುವುದರಲ್ಲಿ ಅರ್ಥವಿಲ್ಲ ಎಂದು ಖ್ಯಾತ ನಟ ಡಾಲಿ ಧನಂಜಯ ಅಭಿಮಾನಿಗಳಿಗೆ ಕಿವಿ ಮಾತು ಹೇಳಿದರು.

ಶನಿವಾರ ನಗರದಲ್ಲಿ ಆಯೋಜಿಸಿದ್ದ ಬೆಳಗಾವಿ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದ ವೇಳೆ ಸ್ಟಾರ್ ನಟರ ಹಿಂಬಾಲಕರ ನಡುವಿನ ಜಗಳದ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು. ಎಲ್ಲರಿಗೂ ಅವರ ಕುಟುಂಬವೇ ದೊಡ್ಡದು. ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಿ. ಹೊಡೆದಾಡುವ ಅವಶ್ಯಕತೆ ಇಲ್ಲ ಎಂದರು. ಎಲ್ಲರೂ ಕನ್ನಡ ಸಿನೆಮಾಗಳನ್ನು ನೋಡಿ ಆನಂದಿಸಿ. ತಪ್ಪಿದ್ದಲ್ಲಿ ಹೇಳಿ ತಿದ್ದಿಕೊಳ್ಳುತ್ತೇವೆ. ಒಟ್ಟಿನಲ್ಲಿ ಎಲ್ಲರೂ ಚೆನ್ನಾಗಿ ಇರೋಣ ಎಂದು ಕಿವಿಮಾತು ಹೇಳಿದರು. ಈ ವೇಳೆ ನಟ ನೀನಾಸಂ ಸತೀಶ್, ನಟಿ ಸಪ್ತಮಿ ಗೌಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರವಾರಕ್ಕೆ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ

ಕಾರವಾರ: ರಾಷ್ಟ್ರಪತಿ, ಭಾರತದ ಸಶಸ್ತ್ರ ಪಡೆಗಳ ಮಹಾದಂಡ ನಾಯಕಿ ದ್ರೌಪದಿ ಮುರ್ಮು ಅವರು ಡಿ. 28 ಭಾನುವಾರದಂದು ಕಾರವಾರದ ಕದಂಬ ನೌಕಾನೆಲೆಗೆ ಐತಿಹಾಸಿಕ ಭೇಟಿ ನೀಡಲಿದ್ದಾರೆ.

ಏಷ್ಯಾದ ಅತಿದೊಡ್ಡ ನೌಕಾನೆಲೆಯಾಗಿ ಅಭಿವೃದ್ಧಿ ಹೊಂದುತ್ತಿರುವ 'ಸೀಬರ್ಡ್'ಗೆ ರಾಷ್ಟ್ರಪತಿಗಳು ನೀಡುತ್ತಿರುವ ಮೊದಲ ಭೇಟಿ ಇದಾಗಿದ್ದು, ಕರಾವಳಿಯಲ್ಲಿ ಬಿಗಿ ಭದ್ರತೆ ಹಾಗೂ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ರಾಷ್ಟ್ರಪತಿಗಳ ಕಾರ್ಯಾಲಯದ ಪ್ರಕಟಣೆಯಂತೆ, ಡಿ.27ರಂದು ಗೋವಾಕ್ಕೆ ಆಗಮಿಸಲಿರುವ ರಾಷ್ಟ್ರಪತಿಗಳು, ಡಿ.28ರಂದು ಬೆಳಗ್ಗೆ ಕಾರವಾರಕ್ಕೆ ಬರಲಿದ್ದಾರೆ. ಕಾರವಾರದ ನೌಕಾದಳದ ಜಲಾಂತರ್ಗಾಮಿಯೊಂದರಲ್ಲಿ ಸಮುದ್ರಯಾನ ಕೈಗೊಳ್ಳಲಿರುವುದು ಈ ಭೇಟಿಯ ವಿಶೇಷವಾಗಿದೆ. ಮಧ್ಯಾಹ್ನದ ನಂತರ ಅವರು ಕಾರವಾರದಿಂದ ನಿರ್ಗಮಿಸಲಿದ್ದಾರೆ.

ರಾಜ್ಯಪಾಲರಿಂದ ಸ್ವಾಗತ: ರಾಷ್ಟ್ರಪತಿಗಳನ್ನು ಬರಮಾಡಿಕೊಳ್ಳಲು ರಾಜ್ಯಪಾಲರಾದ ಥಾವರಚಂದ್ ಗೆಹ್ಲೋತ್ ಅವರು ಕಾರವಾರಕ್ಕೆ ಆಗಮಿಸಲಿದ್ದಾರೆ. ನೌಕಾಸೇನೆಯ ಅಧಿಕೃತ ಕಾರ್ಯಕ್ರಮ ಇದಾಗಿರುವುದರಿಂದ, ನೌಕಾನೆಲೆಯ ಹಿರಿಯ ಅಧಿಕಾರಿಗಳು ಹಾಗೂ ಪಿಆರ್‌ಒ ಅರವಿಂದ್ ನೇತೃತ್ವದಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಮೀನುಗಾರಿಕೆ ನಿಷೇಧ, ಭದ್ರತೆ: ರಾಷ್ಟ್ರಪತಿಗಳ ಭೇಟಿಯ ಹಿನ್ನೆಲೆ ಅರಬ್ಬಿ ಸಮುದ್ರದಲ್ಲಿ ಹೆಚ್ಚಿನ ಭದ್ರತೆ ನಿಯೋಜಿಸಲಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಡಿ.28ರ ಬೆಳಗ್ಗೆಯಿಂದ ಮಧ್ಯಾಹ್ನ 3:30ರವರೆಗೆ ಕಾರವಾರದ ಮಾಜಾಳಿಯಿಂದ ಹಾರವಾಡದವರೆಗೆ ಸಮುದ್ರದಲ್ಲಿ ಮೀನುಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಗ್ಯಾರಂಟಿ ಯೋಜನೆ ಪರಿಷ್ಕರಣೆ ಇಲ್ಲ: ಸಚಿವ ಸತೀಶ ಜಾರಕಿಹೊಳಿ

ಬೆಳಗಾವಿ: ರಾಜ್ಯ ಸರಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಯಾವುದೇ ಪರಿಷ್ಕರಣೆ ಮಾಡುವ ವಿಚಾರವಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಪುಟ ಪುನರ್‌ರಚನೆ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸುವರು. ಈ ವಿಷಯದಲ್ಲಿ ನಾನೇನು ಹೇಳಲು ಸಾಧ್ಯವಿಲ್ಲ. ಪಕ್ಷದ ಅಧ್ಯಕ್ಷ ಸ್ಥಾನದ ಬದಲಾವಣೆ ಬಗ್ಗೆಯೂ ದೆಹಲಿಯಲ್ಲಿಯೇ ನಿರ್ಧಾರ ಆಗಬೇಕು ಎಂದರು. ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನದಲ್ಲಿ ಉತ್ತಮವಾಗಿ ಚರ್ಚೆಯಾಗಿದೆ. ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಮೂರು ದಿನ ಚರ್ಚಿಸಲಾಗಿದೆ. ಬೆಳಗಾವಿ ಜಿಲ್ಲೆ ವಿಭಜನೆ ಬಗ್ಗೆ ಸರಕಾರ ನಿರ್ಧರಿಸಲಿದೆ. ಕಲ್ಯಾಣ ಕರ್ನಾಟಕದ ಜನರು ಸವಲತ್ತು, ಅನುದಾನ ಪಡೆದುಕೊಳ್ಳಲು 40 ವರ್ಷ ಹೋರಾಟ ನಡೆಸಿದರು. ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸದ್ಯ ಅನುದಾನ ನೀಡಲಿಕ್ಕಿಲ್ಲ, ವಿಳಂಬವಾಗಬಹುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿದೇಶಿಗನ ಮೇಲೆ ಹಲ್ಲೆ: ಬಂಧನ

ಗೋಕರ್ಣ: ಕ್ಷುಲ್ಲಕ ವಿಚಾರಕ್ಕೆ ಅಮೆರಿಕಾ ಪ್ರಜೆ ಮೇಲೆ ಹಲ್ಲೆ ನಡೆಸಿದ್ದ ಇಬ್ಬರು ಆರೋಪಿಗಳನ್ನು ಗೋಕರ್ಣ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ. ಚಾರ್ಲ್ಸ್ ಮಾರ್ಟಿನ್ ವೈಟ್ (44) ಎಂಬ ಅಮೆರಿಕಾ ಪ್ರಜೆ ನೀಡಿದ ದೂರಿನ ಮೇರೆಗೆ ಪಾಂಡು ಹಾಗೂ ನಿತೀಶ್ ಎಂಬುವವರನ್ನು ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ.

ಅಮೆರಿಕಾ ಪ್ರಜೆ ಗೋಕರ್ಣದಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದು ವಾಸವಿದ್ದು, ನೆರೆಹೊರೆಯವರಾಗಿರುವ ನಿತೀಶ್ ಹಾಗೂ ಪಾಂಡು ಜತೆಗೆ ಸಂಗೀತ ವಿಚಾರಕ್ಕೆ ಜಗಳವಾಗಿದೆ. ಈ ವೇಳೆ ನಡೆದ ಮಾತುಕತೆ ವೇಳೆ ನಿತೀಶ್ ಹಾಗೂ ಪಾಂಡು ಮಾರ್ಟಿನ್ ಅವರ ಮೇಲೆ ಹಲ್ಲೆ ನಡೆಸಿದ್ದಾರೆಂದು ತಿಳಿದುಬಂದಿದೆ. ಡಿಸೆಂಬರ್ 20 ರಂದು ಬೆಳಗಿನ ಜಾವ 3 ಗಂಟೆ ಸುಮಾರಿಗೆ ದೊಡ್ಡಶಬ್ದದಲ್ಲಿ ಹಾಡನ್ನು ಹಾಕಿದ್ದರು. ಇದರಿಂದ ಎಚ್ಚರಕೊಂಡಿದ್ದೆ. ಬಳಿಕ ನಾನು ಕೂಡ ಸಂಗೀತ ಹಾಕಿದ್ದೆ. ಸ್ವಲ್ಪ ಸಮಯದ ಬಳಿಕ ಕೆಲವರು ಬಾಗಿಲು ಬಡಿದು, ಸಂಗೀತ ನಿಲ್ಲಿಸುವಂತೆ ಹೇಳಿದರು. ಈ ವೇಳೆ ಅವರಿಗೂ ನಿಲ್ಲಿಸುವಂತೆ ಹೇಳಿದಾಗ, ಓರ್ವ ವ್ಯಕ್ತಿ ನನ್ನ ಮೇಲೆ ಹಲ್ಲೆ ನಡೆಸಿದ. ಇಟ್ಟಿಗೆಯಿಂದ ನನ್ನ ಮೇಲೆ ಹಲ್ಲೆ ನಡೆಸಿದ್ದರು. ಇದರಿಂದ ನನ್ನ ಕೆನ್ನೆಯ ಮೂಳೆಯಲ್ಲಿ ಬಿರುಕು ಮೂಡಿದ್ದು, ಕಣ್ಣು ಊದಿಕೊಂಡಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ಐದು ವರ್ಷ ಸಿಎಂ ಆಗಿರಲಿ: ಪ್ರಭುಲಿಂಗ

ಕಲಬುರಗಿಯಲ್ಲಿ ಅಹಿಂದ ಸಂಘಟನೆಯಿಂದ ಬೃಹತ್ ಸಮಾವೇಶಕ್ಕೆ ಸಿದ್ಧತೆ



ಅಹಿಂದ ರಾಜ್ಯ ಒಕ್ಕೂಟದ ರಾಜ್ಯಾಧ್ಯಕ್ಷ ಪ್ರಭುಲಿಂಗ ದೊಡ್ಡನಿ ಕಲಬುರಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕಲಬುರಗಿ: ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆಯ ಕುರಿತಾದ ಚರ್ಚೆಗಳು ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪೂರ್ಣ ಬೆಂಬಲ ಘೋಷಿಸಲು ಅಹಿಂದ ಸಂಘಟನೆಯು ಮುಂದಾಗಿದೆ.

ಈ ನಿಟ್ಟಿನಲ್ಲಿ ಹೈಕಮಾಂಡ್ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಶನಿವಾರ ನಗರದ ಅಂಜುಮನ್ ಸಂಸ್ಥೆಯ ಸಭಾಗೃಹದಲ್ಲಿ ಅಹಿಂದ ಮುಖಂಡರ ಮಹತ್ವದ ಪೂರ್ವಸಿದ್ಧತಾ ಸಭೆ ಜರುಗಿತು.

ಸಭೆಯ ನಂತರ ಮಾತನಾಡಿದ ಅಹಿಂದ ರಾಜ್ಯ ಒಕ್ಕೂಟದ ರಾಜ್ಯಾಧ್ಯಕ್ಷ ಪ್ರಭುಲಿಂಗ ದೊಡ್ಡನಿ ಅವರು, ಸಿದ್ದರಾಮಯ್ಯ ಅವರು ಕೇವಲ ಒಂದು ವರ್ಗದ ನಾಯಕರಲ್ಲ, ಅವರು ಇಡೀ ರಾಜ್ಯದ ಶೋಷಿತ ವರ್ಗಗಳ ಧ್ವನಿಯಾಗಿದ್ದಾರೆ. ಹೀಗಾಗಿ, ಅವರು ಪೂರ್ಣ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಮುಂದುವರಿಯಬೇಕು ಎಂಬುದು ನಮ್ಮ ಸಂಘಟನೆಯ ದೃಢವಾದ ಆಗ್ರಹವಾಗಿದೆ. ಈ ಕುರಿತು ಕಾಂಗ್ರೆಸ್ ಹೈಕಮಾಂಡ್‌ಗೆ ಸ್ಪಷ್ಟ ಸಂದೇಶ ರವಾನಿಸಲು ನಾವು ನಿರ್ಧರಿಸಿದ್ದೇವೆ. ಆದ್ದರಿಂದ ಅಹಿಂದ ಬೃಹತ್ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಈ ವೇಳೆ ಅಹಿಂದ ಸಂಘಟನೆಯ ಗೌರವಾಧ್ಯಕ್ಷ ಸಿದ್ದಣ್ಣ ತ್ಯಜಿ, ಪ್ರಧಾನ ಕಾರ್ಯದರ್ಶಿ ಬೀರಲಿಂಗ ಪೂಜಾರಿ, ರಾಜ್ಯ ಕಾರ್ಯಾಧ್ಯಕ್ಷ ಬಟ್ಟಿ ಎರೆಸ್ವಾಮಿ, ಕಾರ್ಯದರ್ಶಿ ವಿಠ್ಠಲ್ ಬಿರಾದರ್, ಕಲಬುರಗಿ ಜಿಲ್ಲಾಧ್ಯಕ್ಷ ಶರಣಪ್ಪ ಪರಿಗಡ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್, ಜಿಲ್ಲಾ ಗೌರವಾಧ್ಯಕ್ಷ ಡಾ. ಸಾಜಿದ್ ಅಲಿ, ಬಳ್ಳಾರಿ ಜಿಲ್ಲಾಧ್ಯಕ್ಷ ಜೋಗಿನ್ ಚಂದ್ರಪ್ಪ, ರಾಜ್ಯ ಪದಾಧಿಕಾರಿಗಳು ಮತ್ತು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಿಎಂ ಬೆಂಬಲಕ್ಕಾಗಿ ಅಹಿಂದ ಮುಖಂಡರು ಈಗಾಗಲೇ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದು, ಸಮುದಾಯದ ಶಕ್ತಿಯನ್ನು ಒಗ್ಗೂಡಿಸುತ್ತಿದ್ದಾರೆ. ಇದರ ಭಾಗವಾಗಿ ಕಲಬುರಗಿಯಲ್ಲಿ ಬೃಹತ್ ಅಹಿಂದ ಸಮಾವೇಶವನ್ನು ಆಯೋಜಿಸಲು ಪ್ಲಾನ್ ಮಾಡಲಾಗಿದು, ಈ ಸಮಾವೇಶವು ರಾಜ್ಯ ರಾಜಕಾರಣದಲ್ಲಿ ಹೊಸ ದಿಕ್ಸೂಚಿಯಾಗಲಿದೆ.

-ಪ್ರಭುಲಿಂಗ ದೊಡ್ಡನಿ
ಅಹಿಂದ ರಾಜ್ಯ ಒಕ್ಕೂಟದ ರಾಜ್ಯಾಧ್ಯಕ್ಷ

ಅಂಜನಾದ್ರಿ ಬೆಟ್ಟಕ್ಕೆ ಸಾವಿರಾರು ಭಕ್ತರು, ಪ್ರವಾಸಿಗರು ಭೇಟಿ

ಕೊಪ್ಪಳ: ರಾಮಾಯಣ ಕಾಲದ ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವ ಗಂಗಾವತಿ ತಾಲೂಕಿನ ಅಂಜನಾದ್ರಿ ಬೆಟ್ಟಕ್ಕೆ ಸಾವಿರಾರು ಸಂಖ್ಯೆಯ ಪ್ರವಾಸಿಗರು, ಭಕ್ತರು ಆಗಮಿಸಿದ್ದು, ಬೆಟ್ಟದ ಮೇಲಿದ ದೇವಸ್ಥಾನದಲ್ಲಿ ನೂಕುನುಗ್ಗಲಿನ ವಾತಾವರಣ ಇಂದು ನಿರ್ಮಾಣವಾಗಿತ್ತು. ಕ್ರಿಸ್ಮಸ್ ಸೇರಿದಂತೆ ಸಾಲು ಸಾಲು ಸರಕಾರಿ ರಜೆಗಳು ಆಗಮಿಸಿದ ಹಿನ್ನಲೆಯಲ್ಲಿ ಅಂಜನಾದ್ರಿ ಬೆಟ್ಟಕ್ಕೆ ಹಾಗೂ ಪಂಪಾಸರೋವರಕ್ಕೆ ಭೇಟಿಯನ್ನು ನೀಡುವ ಭಕ್ತರ, ಪ್ರವಾಸಿಗರ ಸಂಖ್ಯೆಯು ಹೆಚ್ಚಳವಾಗಿದೆ. ಬೆಳಗಿನ ಮಹಾಮಂಗಳಾರತಿ ಸಮಯದಲ್ಲಿ ಸಾಮಾನ್ಯವಾಗಿದ್ದ ಭಕ್ತರ ಸಂಖ್ಯೆಯು ಸಮಯ ವಾಗುತ್ತಿದ್ದಂತೆ ಸಾವಿರಾರು ಸಂಖ್ಯೆಗೆ ಏರಿಕೆಯಾಗಿದೆ. ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ ಭಕ್ತರು, ಪ್ರವಾಸಿಗರಿಂದ ಅಂಜನಾದ್ರಿ ಬೆಟ್ಟದ ಸಮೀಪದ ರಸ್ತೆಯಲ್ಲಿ ಗಂಟೆಗಳ ಕಾಲ ಸಂಚಾರ ದಟ್ಟನೆ ನಿರ್ಮಾಣವಾಗಿತ್ತು. ನಂತರ ಪೊಲೀಸ್ ಇಲಾಖೆಯ ಅಧಿಕಾರಿಗಳು ಆಗಮಿಸಿ, ಸಂಚಾರ ದಟ್ಟನೆಯನ್ನು ತಿಳಿಗೊಳಿಸಿದ್ದಾರೆ. ರಸ್ತೆಯಲ್ಲಿ ಅಷ್ಟೇ ಅಲ್ಲದೆ ಬೆಟ್ಟ ಏರುವ ಮೆಟ್ಟಿಲುಗಳಲ್ಲಿ ಕೂಡ ನೂಕುನುಗ್ಗಲಿನ ವಾತಾವರಣ ನಿರ್ಮಾಣವಾಗಿದ್ದು, ಹನುಮನ ದರ್ಶನ ಪಡೆದುಕೊಳ್ಳಲು ಭಕ್ತರು ಹರಸಾಹಸ ಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಂಜೆಯಾದರು ಸಹ ಭಕ್ತರ ಸಂಖ್ಯೆ ಕಡಿಮೆಯಾಗದೆ ಇರುವುದು ವಿಶೇಷವಾಗಿತ್ತು.

ಅರಣ್ಯ ಭೂಮಿ ಕಬಳಿಕೆ ವಿರುದ್ಧ ಕಠಿಣ ಕ್ರಮ

ತುಮಕೂರು: ಭೂಮಿಗೆ ಬಂಗಾರದ ಬೆಲೆ ಬಂದಿರುವ ಹಿನ್ನೆಲೆಯಲ್ಲಿ ಕೆಲವರು ನಕಲಿ ದಾಖಲೆ ಸೃಷ್ಟಿಸಿ ಅರಣ್ಯ ಭೂಮಿ ಕಬಳಿಸಲು ಯತ್ನಿಸುತ್ತಿದ್ದು, ಕೂಡಲೇ ಪೊಲೀಸ್ ದೂರು

ಚಿರತೆಗಳ ಸೆರೆಗೆ 31 ಹೊಸ ಬೋನು: ಸಚಿವ ಈಶ್ವರ ಖಂಡ್ರೆ

ದಾಖಲಿಸುವುದರ ಜತೆಗೆ ಅರಣ್ಯ ಅಪರಾಧ ಕಾಯಿದೆ ಯಡಿಯೂ ಪ್ರಕರಣ ದಾಖಲಿಸುವಂತೆ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದ್ದಾರೆ. ನಗರದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ತುಮಕೂರು ಬಯಲು ಸೀಮೆ ಇಲ್ಲಿ ಇರುವ ಅರಣ್ಯ ಪ್ರದೇಶವೇ ಕಡಿಮೆ. ಇದರಲ್ಲಿ ಒತ್ತುವರಿಯೂ ಆಗಿದೆ. ಜತೆಗೆ ಕೆಲವರು ನಕಲಿ ದಾಖಲೆ ಸೃಷ್ಟಿಸಿ ಅರಣ್ಯದ ಮೇಲೆ ಹಕ್ಕು ಚಲಾಯಿಸುತ್ತಿ ದ್ದರೆ, ಇನ್ನು ಕೆಲವು ಕಡೆ ಅಕ್ರಮ ಮಂಜೂರಾತಿ ಆಗಿದೆ. ಈ ಬಗ್ಗೆ ಅರಣ್ಯಾಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಚಿರತೆ ಸೆರೆಗೆ ಬೋನಿಡಲು ಸೂಚನೆ: ತುಮಕೂರು ಜಿಲ್ಲೆಯ 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ಚಿರತೆ ಮಾನವ ಸಂಘರ್ಷವಿದ್ದು ಜನ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಈಶ್ವರ ಖಂಡ್ರೆ ಕೂಡಲೇ 31 ಹೊಸ ಬೋನುಗಳನ್ನು ಖರೀದಿಸಲು ಸಮ್ಮತಿ ಸೂಚಿಸಿದರು.

ಸ್ವಂತ ಖರ್ಚಿನಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕ ವಿಮಾನಯಾನ

ಬಳ್ಳಾರಿಯ ಜಿಂದಾಲ್ ವಿಮಾನ ನಿಲ್ದಾಣದಿಂದ ವಿಮಾನದಲ್ಲಿ ಪ್ರಯಾಣ ಬೆಳೆಸಿದ ಮಕ್ಕಳು ಗಗನಸಖಿ ಜತೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂತಸ ಪಟ್ಟರು.

ಕೊಪ್ಪಳ: ಬಳ್ಳಾರಿಯ ಜಿಂದಾಲ್ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ತೆರಳಿದ ಮಕ್ಕಳು ವಿಮಾನದಲ್ಲಿ ಫೋಟೊ ಕ್ಲಿಕ್ಕಿಸಿಕೊಂಡು ಶಿಕ್ಷಕರು ಹಾಗೂ ಸಿಬ್ಬಂದಿ ಜತೆ ಸಂಭ್ರಮಿಸಿದರು. ಮೊದಲ ಬಾರಿಗೆ ವಿಮಾನಯಾನ ಪ್ರಯಾಣ ಮಾಡಿದ ಮಕ್ಕಳಲ್ಲಿ ಸಂಭ್ರಮ ಮನೆ ಮಾಡಿತ್ತು. ವಿಕಲಚೇತನ ನೌಕರರ ಸಂಘದ ರಾಜ್ಯಾಧ್ಯಕ್ಷರೂ ಆದ ಬೀರಪ್ಪ ಅಂಡಗಿ ಹಣ ಸಂಗ್ರಹ ಮಾಡದೆ ವಿದ್ಯಾರ್ಥಿಗಳ ವಿಮಾನ ಪ್ರಯಾಣ, ಊಟ ಹಾಗೂ ವಸತಿ ಸೌಲಭ್ಯದ ಖರ್ಚು ಭರಿಸಿದ್ದಾರೆ.

ವಿಮಾನದಲ್ಲಿ ಪ್ರವಾಸಕ್ಕೆ ಕರೆದುಕೊಂಡು ಹೋಗುವ ವಿದ್ಯಾರ್ಥಿಗಳ ಆಯ್ಕೆಗಾಗಿ ಪ್ರವೇಶ ಪರೀಕ್ಷೆ ನಡೆಸಿ 5ರಿಂದ 8ನೇ ತರಗತಿ ತನಕ ಪ್ರತಿ ತರಗತಿಯಿಂದ ತಲಾ ಆರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದಾರೆ. ಬಹದ್ದೂರ್ ಬಂಡಿ ಶಾಲೆಯಿಂದ ಜಿಲ್ಲಾಡಳಿತ ಭವನಕ್ಕೆ ಬಂದ ಮಕ್ಕಳು ಮತ್ತು ಪ್ರವಾಸ ವ್ಯವಸ್ಥೆ ಮಾಡಿದ ಬೀರಪ್ಪ ಅವರಿಗೆ ಸಂಸದ ರಾಜಶೇಖರ ಹಿಟ್ನಾಳ ಶುಭ ಕೋರಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಬೀರಪ್ಪ ಸರಕಾರಿ ಶಾಲೆಯ ಮಕ್ಕಳಿಗೆ ವಿಮಾನ ಪ್ರಯಾಣದ ಅನುಭವ ಕಿರಿಯ ವಯಸ್ಸಿನಲ್ಲಿಯೇ ಲಭಿಸಬೇಕೆಂದು ಈ ವ್ಯವಸ್ಥೆ ಮಾಡಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ವಿಮಾನ ಪ್ರವಾಸಕ್ಕೆ ಮಕ್ಕಳನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

52 ವರ್ಷಗಳ ನಂತರವೂ ನೆನಪಾಗುವ, ಪ್ರಸ್ತಾಪವಾಗುವ, ಪ್ರಸ್ತುತವಾಗುವ ಆ ಮಾತು!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಮಾತುಗಳು ಸಾಯುವುದಿಲ್ಲ. ಆ ಮಾತನ್ನು ಹೇಳಿದವರು ಸಾಯಬಹುದು. ಕೆಲವರ ಮಾತುಗಳು ಅವರ ನಿಧನದ ಎಷ್ಟೋ ವರ್ಷಗಳ ನಂತರವೂ ನೆನಪಾಗುತ್ತವೆ, ಪ್ರಸ್ತಾಪವಾಗುತ್ತವೆ, ಪ್ರಸ್ತುತವಾಗುತ್ತವೆ. ಇಸ್ರೇಲ್‌ನ ಮಾಜಿ ಪ್ರಧಾನಿ ಗೋಲ್ಡಾ ಮೀರ್ ಅವರು ತಮಾಷೆಯಾಗಿ ಒಂದು ಮಾತು ಹೇಳಿದ್ದರು- 'ಮೋಸೆಸ್ ನಮ್ಮನ್ನು ಮರುಭೂಮಿಯಲ್ಲಿ ನಲವತ್ತು ವರ್ಷಗಳ ಕಾಲ ನಡೆಸಿಕೊಂಡು ಬಂದು, ಮಧ್ಯಪ್ರಾಚ್ಯದಲ್ಲಿ ತೈಲವಿಲ್ಲದ ಏಕೈಕ ಜಾಗದಲ್ಲಿ ನಿಲ್ಲಿಸಿಬಿಟ್ಟ!'

ಇದನ್ನು ಅವರು ಹೇಳಿದ್ದು 1973ರಲ್ಲಿ. ಈ ಮಾತನ್ನು ಹೇಳಿದ 52 ವರ್ಷಗಳ ನಂತರವೂ ಆಗಾಗ ಪ್ರಸ್ತಾಪವಾಗುತ್ತಲೇ ಇರುತ್ತದೆ. ಇಸ್ರೇಲ್‌ನ ನಾಲ್ಕನೇ ಪ್ರಧಾನಮಂತ್ರಿ ಮತ್ತು ಜಗತ್ತಿನ ಅಪ್ರತಿಮ ಮಹಿಳಾ ನಾಯಕರಲ್ಲಿ ಒಬ್ಬರಾದ ಗೋಲ್ಡಾ ಮೀರ್ ಅವರು ಪಶ್ಚಿಮ ಜರ್ಮನಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಆಗ ಅಲ್ಲಿನ ಚಾನ್ಸಲರ್ ವಿಲ್ಲಿ ಬ್ರಾಂಡ್ ಅವರು ನೀಡಿದ ಔತಣಕೂಟದಲ್ಲಿ ಈ ಮಾತನ್ನು ಹೇಳಿದ್ದರು.

ಹಾಗೆ ನೋಡಿದರೆ, ಇದು ಯಹೂದಿಗಳ ಹಣೆಬರಹದ ಬಗ್ಗೆ ಕುಶಾಲಿನಿಂದ ಮಾಡಿದ ವ್ಯಂಗ್ಯದ ಮಾತಾಗಿತ್ತು. 1970ರ ದಶಕದಲ್ಲಿ ಮಧ್ಯಪ್ರಾಚ್ಯದ ಅರಬ್ ರಾಷ್ಟ್ರಗಳು ತೈಲ ನಿಕ್ಷೇಪಗಳಿಂದ ಶ್ರೀಮಂತವಾಗಿದ್ದವು. ಸೌದಿ ಅರೇಬಿಯಾ, ಜೋರ್ಡನ್, ಇರಾಕ್, ಕುವೈತ್‌ನಂಥ ದೇಶಗಳು ತೈಲದ ಬಲದಿಂದ ಜಗತ್ತಿನ ಆರ್ಥಿಕತೆಯನ್ನು ನಿಯಂತ್ರಿಸುತ್ತಿದ್ದವು. ಆದರೆ ಇಸ್ರೇಲ್ ಬಳಿ ನೈಸರ್ಗಿಕ ಸಂಪನ್ಮೂಲಗಳಾಗಲಿ ಅಥವಾ ತೈಲವಾಗಲಿ ಇರಲಿಲ್ಲ. ಮೋಸೆಸ್ ಈಜಿಪ್ಟ್‌ನ ಗುಲಾಮಗಿರಿಯಿಂದ ಯಹೂದಿಗಳನ್ನು ಬಿಡಿಸಿ ಕರೆತಂದು, ಮಧ್ಯಪ್ರಾಚ್ಯದ ಇತರೆಲ್ಲ ದೇಶಗಳಲ್ಲಿ ತೈಲವಿರುವಾಗ ಇಸ್ರೇಲ್‌ನಲ್ಲಿ ಮಾತ್ರ ತೈಲವಿಲ್ಲದಂತೆ ಮಾಡಿದ್ದು ಯಹೂದಿಗಳ ಹಣೆಬರಹದ ಒಂದು ಭಾಗ ಎಂಬುದು ಅವರ ಮಾತಿನ ತಾತ್ಪರ್ಯವಾಗಿತ್ತು.

ಆ ದಿನಗಳಲ್ಲಿ ಇಸ್ರೇಲ್ ತೀವ್ರ ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಅದೇ ವರ್ಷದ ಅಕ್ಟೋಬರ್‌ನಲ್ಲಿ 'ಯೋಮ್ ಕಿಪ್ಪುರ್' ಯುದ್ಧ ನಡೆಯಿತು ಮತ್ತು ಅದಾದ ನಂತರ ಅರಬ್ ದೇಶಗಳು ಇಸ್ರೇಲ್ ಮೇಲೆ ಭಾರಿ ತೈಲ ದಿಗ್ಬಂಧನವನ್ನು ಹೇರಿದ್ದವು. ಅಂಥ ಸವಾಲಿನ ಸಮಯದಲ್ಲಿಯೂ ಗೋಲ್ಡಾ ಮೀರ್ ಅವರು ಧೃತಿಗೆಡದೆ ದೇಶವನ್ನು ಮುನ್ನಡೆಸಿದರು. ಗೋಲ್ಡಾ ಮೀರ್ ಅವರ ಈ ವ್ಯಂಗ್ಯಭರಿತ ಹೇಳಿಕೆಯು ಇಸ್ರೇಲಿಗರ ಹಣೆಬರಹದ ಬಗ್ಗೆ ಅವರಲ್ಲಿದ್ದ ಅಸಮಾಧಾನಕ್ಕಿಂತ ಹೆಚ್ಚಾಗಿ, ಸಂಪನ್ಮೂಲಗಳಿಲ್ಲದಿದ್ದರೂ ಇಸ್ರೇಲಿಗರು ಹೇಗೆ ಸ್ವಾವಲಂಬಿಗಳಾದರು ಎಂಬುದನ್ನು ಈ ಒಂದು ಮಾತಿನಿಂದ ಹೇಳಿದ್ದರು. 'ನಮಗೆ ಪ್ರಕೃತಿ ತೈಲವನ್ನು ನೀಡಿಲ್ಲದಿರಬಹುದು, ಆದರೆ ದೇವರು ನಮಗೆ ಮಿದುಳನ್ನು ನೀಡಿದ್ದಾನೆ' ಎಂಬುದು ಅವರ ಆಶಯವಾಗಿತ್ತು.

ಈ ಮಾತು ಇಸ್ರೇಲ್ ಕೇವಲ ಮಣ್ಣಿನೊಳಗಿನ ತೈಲವನ್ನು ನೆಚ್ಚಿಕೊಳ್ಳದೇ, ತನ್ನ ಜನರ ಬುದ್ಧಿವಂತಿಕೆಯನ್ನು ನಂಬಿ ಬೆಳೆಯಬೇಕು ಎಂಬ ಸಂದೇಶವನ್ನು ಧ್ವನಿಸಿತ್ತು. ಈ ಒಂದು ಮಾತು, ಇಸ್ರೇಲ್‌ನ ಅಸ್ತಿತ್ವದ ಹೋರಾಟ, ಭೌಗೋಳಿಕ ಸವಾಲುಗಳು ಮತ್ತು ಆ ದೇಶವು ತನ್ನ ಕೊರತೆಯನ್ನೇ ಶಕ್ತಿಯನ್ನಾಗಿ ಮಾಡಿಕೊಂಡ ರೋಚಕ ಕಥೆಯನ್ನು ಒಳಗೊಂಡಿರುವುದರಿಂದ ಆಗಾಗ ಪ್ರಸ್ತಾಪವಾಗುತ್ತಲೇ ಇರುತ್ತದೆ.

1948ರಲ್ಲಿ ಇಸ್ರೇಲ್ ಸ್ಥಾಪನೆಯಾದಾಗ ಅದು ಕೇವಲ ಮರುಭೂಮಿ ಮತ್ತು ಜೌಗು ಪ್ರದೇಶಗಳಿಂದ ಕೂಡಿದ ಬಡದೇಶವಾಗಿತ್ತು. ಸುತ್ತಲೂ ಶತ್ರುರಾಷ್ಟ್ರಗಳಿದ್ದವು ಮತ್ತು ಯಾವುದೇ ನೈಸರ್ಗಿಕ ಸಂಪತ್ತು ಇರಲಿಲ್ಲ. ಅರಬ್ ದೇಶಗಳು ಇಸ್ರೇಲ್ ಮೇಲೆ ತೈಲ ದಿಗ್ಬಂಧನ ಹೇರಿದಾಗ, ಇಸ್ರೇಲ್ ಅಕ್ಷರಶಃ ಇಂಧನಕ್ಕಾಗಿ ಪರದಾಡಬೇಕಾಯಿತು. ಈ ಸವಾಲು ಇಸ್ರೇಲನ್ನು ಹೊಸ ಆಲೋಚನೆಗಳತ್ತ ದೂಡಿತು.

ಇಸ್ರೇಲ್ ತನ್ನ ಭೂಮಿಯ ಅಡಿಯಲ್ಲಿ ತೈಲದ ಬಾವಿಗಳಿಲ್ಲ ಎಂಬ ಕಟುಸತ್ಯವನ್ನು ಬಹುಬೇಗನೆ ಅರಿತುಕೊಂಡಿತು. ನೆರೆಹೊರೆಯ ದೇಶಗಳು ತೈಲದ ಆಮದಿನಿಂದ ಶ್ರೀಮಂತವಾಗುತ್ತಿದ್ದಾಗ, ಇಸ್ರೇಲ್ ತನ್ನ ಜನರ 'ಬುದ್ಧಿ ಶಕ್ತಿ'ಯ ಮೇಲೆ ಹೂಡಿಕೆ ಮಾಡಲು ನಿರ್ಧರಿಸಿತು. ತೈಲದ ಬಾವಿಗಳನ್ನು ತೋಡುವ ಬದಲು, ಅತ್ಯಾಧುನಿಕ ಸಂಶೋಧನಾ ಮತ್ತು ಅಭಿವೃದ್ಧಿ (R – D) ಕೇಂದ್ರಗಳನ್ನು ಸ್ಥಾಪಿಸಿತು. ಇಂದು ಇಸ್ರೇಲ್ ವಿಶ್ವದ 'ಸ್ಟಾರ್ಟ್-ಅಪ್ ನೇಷನ್' ಎಂದು ಹೆಸರುವಾಸಿಯಾಗಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯಗಳಲ್ಲಿ ಜಗತ್ತಿನ ಮುಂಚೂಣಿ ದೇಶಗಳ ಸಾಲಿನಲ್ಲಿ ನಿಲ್ಲಲು ಅಲ್ಲಿನ ಶಕ್ತಿಯುತ ಮಾನವ ಸಂಪನ್ಮೂಲವೇ ಕಾರಣ.

ತೈಲವಿಲ್ಲದ ಕಾರಣ ಇಂಧನಕ್ಕಾಗಿ ಪರ್ಯಾಯ ಮಾರ್ಗಗಳನ್ನು ಹುಡುಕುವುದು ಇಸ್ರೇಲ್‌ಗೆ ಅನಿವಾರ್ಯವಾಗಿತ್ತು. ಅವರಿಗೆ ಹೇರಳವಾಗಿ ಲಭ್ಯವಿದ್ದದ್ದು ಸೂರ್ಯನ ಶಾಖ. ಇದನ್ನು ಬಳಸಿಕೊಳ್ಳಲು ಇಸ್ರೇಲ್ ಸೌರ ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತುನೀಡಿತು. 1950ರ ದಶಕದಲ್ಲೇ ಇಸ್ರೇಲ್‌ನ ವಿಜ್ಞಾನಿ ಹ್ಯಾರಿ ಜಿವಿ ಟಾಬರ್ ಅವರು ಸೌರಶಕ್ತಿಯನ್ನು ಬಳಸುವ ಪರಿಣಾಮಕಾರಿ ವಿಧಾನಗಳನ್ನು ಅಭಿವೃದ್ಧಿಪಡಿಸಿದರು. ಇಂದು ಇಸ್ರೇಲ್‌ನ ಶೇ.90ಕ್ಕೂ ಹೆಚ್ಚು ಮನೆಗಳು ಸೌರಶಕ್ತಿಯಿಂದ ನೀರು ಕಾಯಿಸುವ ಯಂತ್ರಗಳನ್ನು ಹೊಂದಿವೆ. ಈ ಮೂಲಕ ಇಸ್ರೇಲ್ ತನ್ನ ವಿದ್ಯುತ್ ಬಳಕೆಯನ್ನು ಗಣನೀಯವಾಗಿ ಉಳಿಸುವುದಲ್ಲದೇ, ನವೀಕರಿಸಬಹುದಾದ ಇಂಧನ ಬಳಕೆಯಲ್ಲಿ ಜಗತ್ತಿಗೆ ಮಾದರಿಯಾಗಿದೆ.

ಸಂಪನ್ಮೂಲಗಳ ಕೊರತೆಯು ಇಸ್ರೇಲ್ ಅನ್ನು ದುರ್ಬಲಗೊಳಿಸುವ ಬದಲು ಹೆಚ್ಚು ಸೃಜನಶೀಲವನ್ನಾಗಿ ಮಾಡಿತು. ಕೇವಲ ಸೌರಶಕ್ತಿಯಲ್ಲದೇ, ನೀರಿನ ಕೊರತೆಯನ್ನು ನೀಗಿಸಲು 'ಹನಿ ನೀರಾವರಿ' ತಂತ್ರಜ್ಞಾನವನ್ನು ಕಂಡುಹಿಡಿದು ಕೃಷಿ ಕ್ಷೇತ್ರದಲ್ಲಿ ಕ್ರಾಂತಿಮಾಡಿತು. ತೈಲವಿಲ್ಲದಿದ್ದರೂ ತಾಂತ್ರಿಕ ಜ್ಞಾನವನ್ನೇ ರಫ್ತು ಮಾಡುವ ಮೂಲಕ ಆ ದೇಶವು ಆರ್ಥಿಕವಾಗಿ ಸದೃಢವಾಯಿತು. ಯಾವುದೇ ದೇಶದ ಪ್ರಗತಿಗೆ ಭೂಮಿಯ ಒಳಗಿರುವ ಖನಿಜಗಳಿಗಿಂತ ಭೂಮಿಯ ಮೇಲಿರುವ ಜನರ ಬುದ್ಧಿವಂತಿಕೆ ಮತ್ತು ಸಂಕಲ್ಪ ಮುಖ್ಯ ಎಂಬುದನ್ನು ಇಸ್ರೇಲ್ ಸಾಬೀತುಪಡಿಸಿದೆ. ನೈಸರ್ಗಿಕ ಇಂಧನದ ಕೊರತೆಯನ್ನು ಸೌರಶಕ್ತಿಯ ಮೂಲಕ ನೀಗಿಸಿರುವುದು ಹಸಿರು ಇಂಧನದತ್ತ ಜಗತ್ತು ಸಾಗಬೇಕಾದ ದಾರಿಯನ್ನು ತೋರಿಸಿಕೊಟ್ಟಿದೆ. ತೈಲ ರಫ್ತು ಮಾಡುವ ದೇಶಗಳಿಗೂ ಇಸ್ರೇಲ್ ಇಂದು ಹಣ್ಣು ಮತ್ತು ತರಕಾರಿಗಳನ್ನು ರಫ್ತು ಮಾಡುವ ಮಟ್ಟಕ್ಕೆ ಬೆಳೆದಿದೆ. ಕುಡಿಯುವ ನೀರಿಲ್ಲದಿದ್ದಾಗ ಸಮುದ್ರದ ಉಪ್ಪು ನೀರನ್ನು ಶುದ್ಧೀಕರಿಸುವ ವಿಶ್ವದ ಅತ್ಯಾಧುನಿಕ ತಂತ್ರಜ್ಞಾನವನ್ನು ಅವರು ಅಭಿವೃದ್ಧಿಪಡಿಸಿದರು. ತೈಲ ರಾಷ್ಟ್ರ (ಜೋರ್ಡನ್) ಗಳಿಗೆ ಇಂದು ಇಸ್ರೇಲ್ ನೀರು ಸರಬರಾಜು ಮಾಡುತ್ತಿದೆ.

ಗೋಲ್ಡಾ ಮೀರ್ ಅವರು ಹೇಳಿದ ಮಾತು ಕಾಲು ಶತಮಾನ ಕಾಲ ಸತ್ಯವಾಗಿತ್ತು. ಆದರೆ, 2009 ಮತ್ತು 2010ರ ನಂತರ ಪರಿಸ್ಥಿತಿ ಬದಲಾಯಿತು. ಇಸ್ರೇಲ್‌ನ ಸಮುದ್ರ ತೀರದಲ್ಲಿ (ಮೆಡಿಟರೇನಿಯನ್ ಸಮುದ್ರ) 'ತಾಮರ್' ಮತ್ತು 'ಲೆವಿಯಾಥನ್' ಎಂಬ ಬೃಹತ್ ನೈಸರ್ಗಿಕ ಅನಿಲ ನಿಕ್ಷೇಪಗಳು ಪತ್ತೆಯಾದವು. ಇದರೊಂದಿಗೆ, ಇಸ್ರೇಲ್ ಈಗ ಇಂಧನಕ್ಕಾಗಿ ಇತರ ದೇಶಗಳ ಮೇಲೆ ಅವಲಂಬಿತವಾಗಿಲ್ಲ. ಬದಲಾಗಿ, ತಾನು ಕಂಡುಕೊಂಡ ಅನಿಲವನ್ನು ನೆರೆಹೊರೆಯ ದೇಶಗಳಾದ ಈಜಿಪ್ಟ್ ಮತ್ತು ಜೋರ್ಡಾನ್‌ಗೆ ರಫ್ತು ಮಾಡುತ್ತಿದೆ. ಗೋಲ್ಡಾ ಮೀರ್ ಅವರ 'ತೈಲವಿಲ್ಲದ ದೇಶ' ಎಂಬ ಹಣೆಪಟ್ಟಿ ಈಗ 'ಇಂಧನ ಸ್ವಾವಲಂಬಿ ದೇಶ'ವಾಗಿ ಬದಲಾಗಿದೆ.

ಗೋಲ್ಡಾ ಮೀರ್ ಅವರು ತೈಲದ ಬಗ್ಗೆ ಮಾತ್ರ ಮಾತನಾಡಲಿಲ್ಲ. ಅವರು ದೇಶಪ್ರೇಮದ ಬಗ್ಗೆಯೂ ಕಟುವಾದ ಸತ್ಯಗಳನ್ನು ಹೇಳಿದ್ದರು. 'ನಮ್ಮ ಶತ್ರುಗಳು ತಮ್ಮ ಮಕ್ಕಳನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ದ್ವೇಷಿಸುವುದನ್ನು ನಿಲ್ಲಿಸಿದ ದಿನ ಮಾತ್ರ ಇಲ್ಲಿ ಶಾಂತಿ ನೆಲೆಸಲು ಸಾಧ್ಯ' ಎಂಬುದು ಅವರ ಮತ್ತೊಂದು ಪ್ರಸಿದ್ಧ ಮಾತು.

ತಮ್ಮ ದೇಶದ ಭದ್ರತೆಗಾಗಿ ಅವರು ತೆಗೆದುಕೊಂಡ ಕಠಿಣ ನಿರ್ಧಾರಗಳು ಇಂದಿಗೂ ಚರ್ಚೆಯಾಗುತ್ತವೆ. 1972ರ ಮ್ಯೂನಿಚ್ ಒಲಿಂಪಿಕ್‌ನಲ್ಲಿ ಇಸ್ರೇಲಿ ಕ್ರೀಡಾಪಟುಗಳ ಹತ್ಯೆಯಾದಾಗ, ಅದಕ್ಕೆ ಕಾರಣರಾದವರನ್ನು ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಹುಡುಕಿ ಕೊಲ್ಲಲು ಅವರು 'ಆಪರೇಷನ್ ವ್ರಾತ್ ಆಫ್ ಗಾಡ್' (Operation Wrath of God) ಎಂಬ ಕಾರ್ಯಾಚರಣೆಗೆ ಆದೇಶ ನೀಡಿದ್ದನ್ನು ಸ್ಮರಿಸಬಹುದು.

ಇಂದು ಇಸ್ರೇಲ್ ತನ್ನ ಬಳಿ ತೈಲವಿಲ್ಲದಿದ್ದರೂ ಜಗತ್ತಿನ ಅತ್ಯಂತ ಶ್ರೀಮಂತ ಮತ್ತು ಶಕ್ತಿಯುತ ದೇಶಗಳಲ್ಲಿ ಒಂದಾಗಿದೆ. ಗೋಲ್ಡಾ ಮೀರ್ ಅವರು ಅಂದು ವ್ಯಂಗ್ಯವಾಗಿ ಹೇಳಿದ ಮಾತು ಇಸ್ರೇಲಿಗರಿಗೆ ಒಂದು ಸ್ಫೂರ್ತಿಯಾಯಿತು. 'ಸಂಪನ್ಮೂಲಗಳ ಕೊರತೆಯು ಆವಿಷ್ಕಾರಕ್ಕೆ ತಾಯಿ' ಎಂಬಂತೆ, ಇಸ್ರೇಲ್ ತನ್ನ ಜ್ಞಾನವನ್ನೇ 'ಕಪ್ಪು ಚಿನ್ನ' (ತೈಲ) ಕ್ಕಿಂತ ಮಿಗಿಲಾದ ಸಂಪತ್ತನ್ನಾಗಿ ಮಾಡಿಕೊಂಡಿತು. ತೈಲವಿರುವ ದೇಶಗಳು ಇಂದು ತೈಲದ ಬೆಲೆ ಕುಸಿದಾಗ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತವೆ. ಆದರೆ, ತಂತ್ರಜ್ಞಾನದ ಮೇಲೆ ನಿಂತಿರುವ ಇಸ್ರೇಲ್‌ನ ಆರ್ಥಿಕತೆ ಎಂದಿಗೂ ಕುಸಿಯದಂತೆ ಬೆಳೆದಿದೆ. ಗೋಲ್ಡಾ ಮೀರ್ ಅವರ ಕನಸಿನ ಇಸ್ರೇಲ್ ಇಂದು ಕೇವಲ ಮರುಭೂಮಿಯಲ್ಲ, ಅದು ಹಸಿರು ಕ್ರಾಂತಿ ಮತ್ತು ಡಿಜಿಟಲ್ ಕ್ರಾಂತಿಯ ಸಂಗಮವಾಗಿದೆ.

ಕೀಬೋರ್ಡ್ ಹಿಡಿದು ದೇಶ ಕಾಯುವವರು!

ಇಸ್ರೇಲ್ ರಕ್ಷಣಾ ಪಡೆಗಳ (ಐಡಿಎಫ್) ಅತ್ಯಂತ ರಹಸ್ಯಕಾರಿ ಮತ್ತು ಪ್ರಭಾವಶಾಲಿ ವಿಭಾಗವೆಂದರೆ ಅದು 'ಯೂನಿಟ್ 8200'. ಇದನ್ನು ಇಸ್ರೇಲ್‌ನ ಸೈಬರ್ ಸೈನ್ಯ ಅಥವಾ 'ತಾಂತ್ರಿಕ ಬುದ್ಧಿಮತ್ತೆ ಕೇಂದ್ರ' ಎಂದು ಕರೆಯಲಾಗುತ್ತದೆ. ಜಗತ್ತಿನ ಯಾವುದೇ ದೇಶದ ಗುಪ್ತಚರ ಸಂಸ್ಥೆಗಳಿಗೆ ಸರಿಸಾಟಿಯಿಲ್ಲದ ಇತಿಹಾಸ ಮತ್ತು ಶಕ್ತಿ ಈ ಯೂನಿಟ್‌ಗೆ ಇದೆ.

ಯೂನಿಟ್ 8200 ಎಂದರೆ ಏನು?

ಇದು ಇಸ್ರೇಲ್ ಮಿಲಿಟರಿ ಗುಪ್ತಚಾರ ನಿರ್ದೇಶನಾಲಯದ (ಇಂಟೆಲಿಜೆನ್ಸ್ ಡೈರೆಕ್ಟರೇಟ್) ಅಡಿಯಲ್ಲಿ ಬರುವ ಒಂದು ಘಟಕ. ಇದರ ಮುಖ್ಯ ಕೆಲಸವೆಂದರೆ ಸಿಗ್ನಲ್ ಇಂಟೆಲಿಜೆನ್ಸ್, ಕೋಡ್ ಬ್ರೇಕಿಂಗ್, ಸೈಬರ್ ಯುದ್ಧ ಮತ್ತು ರಹಸ್ಯ ಮಾಹಿತಿಗಳ ಕಣ್ಗಾವಲು. ಸರಳವಾಗಿ ಹೇಳುವುದಾದರೆ, ಶತ್ರು ರಾಷ್ಟ್ರಗಳ ಇಂಟರ್ನೆಟ್, ಫೋನ್ ಕರೆಗಳು ಮತ್ತು ಇ-ಮೇಲ್‌ಗಳ ಮೇಲೆ ಕಣ್ಣಿಟ್ಟು, ಯಾವುದೇ ಅಪಾಯ ಬರುವ ಮೊದಲೇ ಅದನ್ನು ತಡೆಯುವುದು ಇವರ ಕೆಲಸ.

ಈ ಯೂನಿಟ್‌ನ ಅತಿದೊಡ್ಡ ವೈಶಿಷ್ಟ್ಯ ಅಂದರೆ ಇಲ್ಲಿ ಕೆಲಸ ಮಾಡುವವರು ಹದಿನೆಂಟರಿಂದ ಇಪ್ಪತ್ತೊಂದು ವರ್ಷದ ಯುವಕ-ಯುವತಿಯರು! ಇಸ್ರೇಲ್ ಸರಕಾರವು ಹೈಸ್ಕೂಲ್ ಹಂತದಲ್ಲೇ ಅತ್ಯಂತ ವೇಗವಾಗಿ ಗಣಿತ ಬಿಡಿಸುವ, ಕಂಪ್ಯೂಟರ್ ಕೋಡಿಂಗ್‌ನಲ್ಲಿ ನಿಪುಣರಾಗಿರುವ ಮತ್ತು ಸಂಕೀರ್ಣವಾದ ಸಮಸ್ಯೆಗಳನ್ನು ಬಗೆಹರಿಸುವ ಮಕ್ಕಳನ್ನು ಗುರುತಿಸುತ್ತದೆ. ಇವರನ್ನು ಮಿಲಿಟರಿ ಸೇವೆಗೆ ಸೇರಿಸಿಕೊಂಡಾಗ ಯೂನಿಟ್ 8200ಗೆ ಕಳುಹಿಸಲಾಗುತ್ತದೆ. ಇಲ್ಲಿ ಅವರಿಗೆ ಯಾವುದೇ ಸಾಂಪ್ರದಾಯಿಕ ಶಿಕ್ಷಣಕ್ಕಿಂತ ಹೆಚ್ಚಿನ ತರಬೇತಿ ನೀಡಲಾಗುತ್ತದೆ.

ಯೂನಿಟ್ 8200 ಕೇವಲ ರಕ್ಷಣಾತ್ಮಕವಾಗಿ ಕೆಲಸ ಮಾಡುವುದಿಲ್ಲ. ಇದು ಶತ್ರುಗಳ ಮೇಲೆ ಆಕ್ರಮಣಕಾರಿ ಸೈಬರ್ ದಾಳಿ ಮಾಡುವ ಸಾಮರ್ಥ್ಯವನ್ನೂ ಹೊಂದಿದೆ. ಇಸ್ರೇಲ್‌ನ ಅಣು ಸ್ಥಾವರಗಳನ್ನು ನಿಷ್ಕ್ರಿಯಗೊಳಿಸಲು ಬಳಸಲಾದ 'ಸ್ಟಕ್ಸ್‌ನೆಟ್' (Stuxnet) ಎಂಬ ಕಂಪ್ಯೂಟರ್ ವೈರಸ್ ಅನ್ನು ಈ ಘಟಕವೇ ಸಿದ್ಧಪಡಿಸಿತ್ತು ಎಂದು ಜಗತ್ತಿನಾದ್ಯಂತ ನಂಬಲಾಗಿದೆ. ಯಾವುದೇ ಬಾಂಬ್ ಅಥವಾ ಕ್ಷಿಪಣಿ ಬಳಸದೇ, ಕೇವಲ ಒಂದು ವೈರಸ್ ಮೂಲಕ ಶತ್ರುದೇಶದ ಪರಮಾಣು ಕಾರ್ಯಕ್ರಮವನ್ನು ವರ್ಷಗಟ್ಟಲೆ ಹಿಂದಕ್ಕೆ ತಳ್ಳಿದ ಈ ಕಾರ್ಯಾಚರಣೆ ಸೈಬರ್ ಯುದ್ಧದ ಇತಿಹಾಸದಲ್ಲೇ ಅತಿದೊಡ್ಡ ಘಟನೆ.

ಇಂದು ಇಸ್ರೇಲ್ ಅನ್ನು 'ಸ್ಟಾರ್ಟ್-ಅಪ್ ನೇಷನ್' ಎಂದು ಕರೆಯಲು ಯೂನಿಟ್ 8200 ಪ್ರಮುಖ ಕಾರಣ. ಈ ಘಟಕದಿಂದ ನಿವೃತ್ತರಾದ ಯುವಕರು ಹೊರಬಂದ ಮೇಲೆ ದೊಡ್ಡ ದೊಡ್ಡ ಟೆಕ್ ಕಂಪನಿಗಳನ್ನು ಸ್ಥಾಪಿಸುತ್ತಾರೆ. ಚೆಕ್ ಪಾಯಿಂಟ್, ವೈಬರ್ ಮತ್ತು ಪಾಲೋ ಆಲ್ಟೊ ನೆಟ್‌ವರ್ಕ್ಸ್‌ನಂಥ ಜಾಗತಿಕ ಕಂಪನಿಗಳ ಸ್ಥಾಪಕರು ಇದೇ ಯೂನಿಟ್‌ನಲ್ಲಿ ತರಬೇತಿ ಪಡೆದವರು. ಇಲ್ಲಿ ಅವರು ಕಲಿಯುವ 'ಅಸಾಧ್ಯವಾದುದನ್ನು ಸಾಧ್ಯವಾಗಿಸುವ' ಮನೋಭಾವವೇ ಅವರ ಯಶಸ್ಸಿನ ರಹಸ್ಯ.

ಈ ಯೂನಿಟ್‌ನ ಒಳಗೆ ಏನು ನಡೆಯುತ್ತದೆ ಎಂಬುದು ಅತ್ಯಂತ ರಹಸ್ಯ. ಇಲ್ಲಿ ಕೆಲಸ ಮಾಡುವ ಸೈನಿಕರು ತಮ್ಮ ಮನೆಯವರಿಗೂ ತಾವು ಏನು ಮಾಡುತ್ತಿದ್ದೇವೆ ಎಂದು ಹೇಳುವಂತಿಲ್ಲ. ಇವರು ಸದಾ ಜಗತ್ತಿನಾದ್ಯಂತ ಹರಿಯುವ ಡೇಟಾವನ್ನು ವಿಶ್ಲೇಷಿಸುತ್ತಾ ಇರುತ್ತಾರೆ. ಶತ್ರುದೇಶದ ಮಿಲಿಟರಿ ನಾಯಕರು ಆಡುವ ಒಂದು ಸಣ್ಣ ಮಾತು ಅಥವಾ ಕಳುಹಿಸುವ ಒಂದು ಮೆಸೇಜ್ ಕೂಡ ಇವರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಇಸ್ರೇಲ್ ಸುತ್ತಮುತ್ತಲಿನ ಶತ್ರುಪ್ರದೇಶಗಳಲ್ಲಿ ನಡೆಯುವ ಪ್ರತಿಯೊಂದು ಡಿಜಿಟಲ್ ಚಟುವಟಿಕೆಯ ಮೇಲೆ ಇವರ ಕಣ್ಣಿರುತ್ತದೆ. ಗಾಜಾ ಪಟ್ಟಿ ಅಥವಾ ಲೆಬನಾನ್‌ನಂಥ ಪ್ರದೇಶಗಳಲ್ಲಿ ಉಗ್ರಗಾಮಿಗಳು ಸಂಚು ರೂಪಿಸುತ್ತಿದ್ದರೆ, ಅವರ ಫೋನ್ ಕಾಲ್‌ಗಳನ್ನು ಕೇಳಿಸಿಕೊಳ್ಳುವ ಅಥವಾ ಅವರ ಸಂಕೇತಗಳನ್ನು ಡಿಕೋಡ್ ಮಾಡುವ ಸಾಮರ್ಥ್ಯ ಇವರಿಗಿದೆ. ಇದು ಇಸ್ರೇಲ್ ವಿರುದ್ಧ ನಡೆಯಬಹುದಾದ ನೂರಾರು ಭಯೋತ್ಪಾದನಾ ದಾಳಿಗಳನ್ನು ಮೊದಲೇ ಪತ್ತೆಹಚ್ಚಿ ತಡೆಯಲು ಸಹಾಯ ಮಾಡಿದೆ.

ಇಸ್ರೇಲ್ ನಂಬುವಂತೆ, ಮುಂದಿನ ಯುದ್ಧಗಳು ಗಡಿಯಲ್ಲಿ ನಡೆಯುವುದಕ್ಕಿಂತ ಹೆಚ್ಚಾಗಿ ಕಂಪ್ಯೂಟರ್ ಸರ್ವರ್‌ಗಳಲ್ಲಿ ನಡೆಯುತ್ತವೆ. ಒಂದು ದೇಶದ ವಿದ್ಯುತ್ ವ್ಯವಸ್ಥೆ, ಬ್ಯಾಂಕಿಂಗ್ ನೆಟ್‌ವರ್ಕ್ ಅಥವಾ ರಕ್ಷಣಾ ಸಂಪರ್ಕವನ್ನು ಹ್ಯಾಕ್ ಮಾಡಿದರೆ ಆ ದೇಶವು ಯುದ್ಧ ಮಾಡದೆಯೇ ಸೋಲುತ್ತದೆ. ಇಂಥ ಸನ್ನಿವೇಶಗಳನ್ನು ಎದುರಿಸಲು ಯೂನಿಟ್ 8200 ಸದಾ ಸಿದ್ಧವಾಗಿರುತ್ತದೆ. ಯೂನಿಟ್ 8200 ಎನ್ನುವುದು ಕೇವಲ ಒಂದು ಮಿಲಿಟರಿ ಘಟಕವಲ್ಲ, ಅದು ಜಗತ್ತಿನ ಅತ್ಯಂತ ಪ್ರಭಾವಶಾಲಿ 'ಬುದ್ಧಿವಂತರ ಕಾರ್ಖಾನೆ'. ಇಲ್ಲಿನ ಯುವಕರು ಕೈಯಲ್ಲಿ ಗನ್ ಹಿಡಿಯುವ ಬದಲು ಕೀಬೋರ್ಡ್ ಹಿಡಿದು ದೇಶವನ್ನು ರಕ್ಷಿಸುತ್ತಾರೆ. ಇಸ್ರೇಲ್‌ನ ಅಸ್ತಿತ್ವಕ್ಕೆ ಈ ಸೈಬರ್ ಮಾಂತ್ರಿಕರ ಕೊಡುಗೆ ಅಪಾರ.

ಸೈನಿಕ ಸ್ನೇಹಿ ಟ್ಯಾಂಕ್

ಇಸ್ರೇಲ್ ದೇಶದ ರಕ್ಷಣಾ ನೀತಿಯಲ್ಲಿ ಒಂದು ಪರಮೋಚ್ಚ ಸತ್ಯವಿದೆ. ಅದೇನೆಂದರೆ, 'ಆಯುಧಗಳಿಗಿಂತ ಆಯುಧವನ್ನು ಬಳಸುವ ಮನುಷ್ಯ ಮುಖ್ಯ'. ಈ ತತ್ವಕ್ಕೆ ಜೀವಂತ ಉದಾಹರಣೆಯಾಗಿ ನಿಂತಿರುವುದು ಇಸ್ರೇಲ್‌ನ ಹೆಮ್ಮೆಯ 'ಮೆರ್ಕಾವಾ' ಯುದ್ಧ ಟ್ಯಾಂಕ್‌ಗಳು. ಹೀಬ್ರೂ ಭಾಷೆಯಲ್ಲಿ 'ಮೆರ್ಕಾವಾ' ಎಂದರೆ 'ರಥ' ಎಂದರ್ಥ.

ಜಗತ್ತಿನ ಇತರ ದೇಶಗಳು ಟ್ಯಾಂಕ್‌ಗಳನ್ನು ತಯಾರಿಸುವಾಗ ಅದರ ವೇಗ ಅಥವಾ ದಾಳಿ ಸಾಮರ್ಥ್ಯಕ್ಕೆ ಮೊದಲ ಆದ್ಯತೆ ನೀಡಿದರೆ, ಇಸ್ರೇಲ್ ಮಾತ್ರ ತನ್ನ ಸೈನಿಕರ ಸುರಕ್ಷತೆಗೆ ಮೊದಲ ಸ್ಥಾನ ನೀಡಿದೆ. ಸಾಮಾನ್ಯವಾಗಿ ಜಗತ್ತಿನ ಬಹುತೇಕ ಯುದ್ಧ ಟ್ಯಾಂಕ್‌ಗಳಲ್ಲಿ (ಉದಾಹರಣೆಗೆ ಅಮೆರಿಕದ ಅಬ್ರಾಮ್ಸ್ ಅಥವಾ ರಷ್ಯಾದ ಟಿ-90) ಎಂಜಿನ್ ಅನ್ನು ಟ್ಯಾಂಕ್‌ನ ಹಿಂಭಾಗದಲ್ಲಿ ಇರಿಸಲಾಗಿರುತ್ತದೆ. ಆದರೆ ಮೆರ್ಕಾವಾದಲ್ಲಿ ಎಂಜಿನ್ ಅನ್ನು ಮುಂಭಾಗದಲ್ಲಿ ಅಳವಡಿಸಲಾಗಿದೆ. ಯುದ್ಧದ ಸಮಯದಲ್ಲಿ ಎದುರಾಳಿಯ ಕ್ಷಿಪಣಿ ಅಥವಾ ಬಾಂಬ್, ಟ್ಯಾಂಕ್‌ನ ಮುಂಭಾಗಕ್ಕೆ ಅಪ್ಪಳಿಸಿದರೆ, ಮೊದಲು ಎಂಜಿನ್ ಅದನ್ನು ತಡೆಯುತ್ತದೆ. ಎಂಜಿನ್ ಹಾನಿಯಾದರೂ ಪರವಾಗಿಲ್ಲ, ಅದು ಒಂದು ಹೆಚ್ಚುವರಿ ಕವಚದಂತೆ ಕೆಲಸ ಮಾಡಿ ಒಳಗಿರುವ ಸೈನಿಕರ ಜೀವವನ್ನು ಉಳಿಸುತ್ತದೆ. ಸೈನಿಕರ ಪ್ರಾಣ ಉಳಿದರೆ ಅವರು ಟ್ಯಾಂಕ್‌ನಿಂದ ಹೊರಬಂದು ಮತ್ತೆ ಹೋರಾಡಬಹುದು ಎಂಬುದು ಇದರ ಹಿಂದಿನ ತರ್ಕ.

ಮೆರ್ಕಾವಾ ಟ್ಯಾಂಕ್‌ನ ಹಿಂಭಾಗದಲ್ಲಿ ಒಂದು ಸಣ್ಣ ಬಾಗಿಲು ಇರುತ್ತದೆ. ಇದು ಬೇರೆ ಯಾವುದೇ ಟ್ಯಾಂಕ್‌ಗಳಲ್ಲಿ ಕಂಡುಬರುವುದಿಲ್ಲ. ಟ್ಯಾಂಕ್‌ಗೆ ಬೆಂಕಿ ಬಿದ್ದಾಗ ಅಥವಾ ದಾಳಿಯಾದಾಗ ಸೈನಿಕರು ಮೇಲ್ಭಾಗದಿಂದ ಹೊರಬರುವುದು ಅಪಾಯಕಾರಿ. ಆಗ ಶತ್ರುಗಳು ಅವರನ್ನು ಸುಲಭವಾಗಿ ಗುರಿಯಾಗಿಸಬಹುದು. ಆದರೆ ಮೆರ್ಕಾವಾದಲ್ಲಿ ಸೈನಿಕರು ಟ್ಯಾಂಕ್‌ನ ಹಿಂಭಾಗದ ಬಾಗಿಲಿನಿಂದ ಸುರಕ್ಷಿತವಾಗಿ ಹೊರಬರಬಹುದು. ಅಷ್ಟೇ ಅಲ್ಲ, ಈ ಜಾಗವನ್ನು ಗಾಯಗೊಂಡ ಸೈನಿಕರನ್ನು ಯುದ್ಧಭೂಮಿಯಿಂದ ಸ್ಥಳಾಂತರಿಸಲು (ಅಂಬ್ಯುಲೆನ್ಸ್ ಆಗಿ) ಅಥವಾ ಹೆಚ್ಚುವರಿ ಮದ್ದುಗುಂಡುಗಳನ್ನು ಸಾಗಿಸಲು ಬಳಸಬಹುದು.

ಆಧುನಿಕ ಮೆರ್ಕಾವಾ (ಮಾರ್ಕ್ 4) ಟ್ಯಾಂಕ್‌ಗಳು 'ಟ್ರೋಫಿ' ಎಂಬ ಅದ್ಭುತ ತಂತ್ರಜ್ಞಾನವನ್ನು ಹೊಂದಿವೆ. ಇದನ್ನು 'ಅಗೋಚರ ಕವಚ' ಎಂದು ಕರೆಯಬಹುದು.

ಹಾಗಾದರೆ ಇದು ಹೇಗೆ ಕೆಲಸ ಮಾಡುತ್ತದೆ? ಶತ್ರುಗಳು ಟ್ಯಾಂಕ್ ಕಡೆಗೆ ಆಂಟಿ-ಟ್ಯಾಂಕ್ ಕ್ಷಿಪಣಿಯನ್ನು ಉಡಾಯಿಸಿದರೆ, ಟ್ಯಾಂಕ್‌ನಲ್ಲಿರುವ ರೇಡಾರ್‌ಗಳು ಅದನ್ನು ತಕ್ಷಣ ಗುರುತಿಸುತ್ತವೆ. ಆ ಕ್ಷಿಪಣಿ ಟ್ಯಾಂಕ್‌ಗೆ ತಗುಲುವ ಮೊದಲೇ, ಟ್ಯಾಂಕ್‌ನಿಂದ ಒಂದು ಸಣ್ಣ ಸ್ಫೋಟಕ ಚಿಮ್ಮಿ ಶತ್ರು ಕ್ಷಿಪಣಿಯನ್ನು ಗಾಳಿಯಲ್ಲೇ ಧ್ವಂಸ ಮಾಡುತ್ತದೆ. ಇದು ಟ್ಯಾಂಕ್‌ನ ಸುತ್ತಲೂ ಒಂದು ರಕ್ಷಣಾ ವಲಯವನ್ನು ನಿರ್ಮಿಸುತ್ತದೆ.

ಮೆರ್ಕಾವಾ ಕೇವಲ ಶೂಟ್ ಮಾಡುವ ಯಂತ್ರವಲ್ಲ. ಇದನ್ನು ಒಂದು ಸಣ್ಣ ಯುದ್ಧ ವಾಹನದಂತೆ ಬಳಸಬಹುದು. ಟ್ಯಾಂಕ್‌ನ ಒಳಗೆ ಸೈನಿಕರ ತಂಡವನ್ನೇ ಕರೆದೊಯ್ಯುವ ಸಾಮರ್ಥ್ಯ ಇರುವುದರಿಂಲೇ ಇದನ್ನು 'ಯುದ್ಧಭೂಮಿಯ ಟ್ಯಾಕ್ಸಿ' ಎಂದೂ ಕರೆಯುತ್ತಾರೆ. ಯುದ್ಧದ ತೀವ್ರತೆ ಹೆಚ್ಚಿರುವಾಗ ಸೈನಿಕರನ್ನು ಸುರಕ್ಷಿತವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಲುಪಿಸಲು ಇದು ಸಹಕಾರಿ.

ಮೆರ್ಕಾವಾ ಟ್ಯಾಂಕ್‌ನ ಮೈಮೇಲಿರುವ ಕವಚವನ್ನು ಅತ್ಯಂತ ಕಠಿಣವಾದ ಲೋಹಗಳ ಮಿಶ್ರಣದಿಂದ ಮಾಡಲಾಗಿದೆ. ಇದನ್ನು ಪದರಗಳ ರೂಪದಲ್ಲಿ ನಿರ್ಮಿಸಲಾಗಿದ್ದು, ಒಂದು ಪದರಕ್ಕೆ ಹಾನಿಯಾದರೂ ಒಳಗಿನ ಪದರಗಳು ಸೈನಿಕರನ್ನು ರಕ್ಷಿಸುತ್ತವೆ. ಅಲ್ಲದೇ, ಟ್ಯಾಂಕ್‌ನ ವಿನ್ಯಾಸವು ಅಲೆ ಅಲೆಯಾಗಿ ಇರುವುದರಿಂದ ಶತ್ರುಗಳ ಗುಂಡುಗಳು ತಗುಲಿದರೂ ಅವು ಜಾರಿಹೋಗುವಂತೆ ಮಾಡುತ್ತದೆ. ದೀರ್ಘಕಾಲ ಯುದ್ಧಭೂಮಿಯಲ್ಲಿ ಇರುವ ಸೈನಿಕರಿಗೆ ಸುಸ್ತಾಗಬಾರದು ಎಂಬ ಕಾರಣಕ್ಕೆ ಮೆರ್ಕಾವಾದ ಒಳಗೆ ಹವಾನಿಯಂತ್ರಿತ ವ್ಯವಸ್ಥೆ ಇರುತ್ತದೆ. ಅತಿಯಾದ ಉಷ್ಣಾಂಶವಿರುವ ಮರುಭೂಮಿಗಳಲ್ಲಿ ಹೋರಾಡುವಾಗ ಇದು ಸೈನಿಕರ ದಕ್ಷತೆಯನ್ನು ಹೆಚ್ಚಿಸುತ್ತದೆ. ಇದರಲ್ಲಿ ಸೈನಿಕರಿಗಾಗಿ ಸಣ್ಣ ನೀರಿನ ಟ್ಯಾಂಕ್ ಮತ್ತು ಸಂವಹನ ವ್ಯವಸ್ಥೆಗಳು ಅತ್ಯಂತ ಸುಧಾರಿತವಾಗಿವೆ.

ಇಸ್ರೇಲ್ ದೇಶದ ಪಾಲಿಗೆ ಪ್ರತಿಯೊಬ್ಬ ಸೈನಿಕನೂ ಅಮೂಲ್ಯ. ಯುದ್ಧದಲ್ಲಿ ಟ್ಯಾಂಕ್ ಹೋದರೆ ಮತ್ತೆ ಖರೀದಿಸಬಹುದು ಅಥವಾ ತಯಾರಿಸಬಹುದು, ಆದರೆ ಅನುಭವವಿರುವ ಸೈನಿಕ ಹೋದರೆ ಅದನ್ನು ತುಂಬಲು ಸಾಧ್ಯವಿಲ್ಲ ಎಂಬುದು ಅವರ ನಂಬಿಕೆ. ಈ ಮಾನವೀಯ ಮತ್ತು ಪ್ರಾಯೋಗಿಕ ಆಲೋಚನೆಯೇ ಮೆರ್ಕಾವಾ ಅನ್ನು ಜಗತ್ತಿನ ಅತ್ಯಂತ 'ಮಾನವ ಹಿತೈಷಿ' ಯುದ್ಧ ಟ್ಯಾಂಕನ್ನಾಗಿ ಮಾಡಿದೆ. ಇಸ್ರೇಲ್‌ನ ಈ ತಂತ್ರಜ್ಞಾನ ಇಂದು ಅಮೆರಿಕದಂಥ ದೊಡ್ಡ ದೇಶಗಳಿಗೂ ಪ್ರೇರಣೆಯಾಗಿದೆ. 'ತನ್ನವರನ್ನು ಕಾಪಾಡುವವನೇ ನಿಜವಾದ ವೀರ' ಎಂಬ ಸಂದೇಶವನ್ನು ಮೆರ್ಕಾವಾ ಸಾರುತ್ತಿದೆ.

ಪರೋಪಕಾರಿ ಪುಣ್ಯವಂತೆಗೆ ಪಿಎಚ್‌ಡಿ ಪದವಿ ಪುರಸ್ಕಾರ

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು...'' ಎಂದಿದ್ದಾನೆ ಸರ್ವಜ್ಞ. ಅನ್ನದಾನ ಮಾಡುವುದು, ಸತ್ಯವನ್ನೇ ಹೇಳುವುದು ಮತ್ತು ತನ್ನಂತೆಯೇ ಬೇರೆಯವರು ಕೂಡ ಮನುಷ್ಯರು ಎಂದು ತಿಳಿದು ಸ್ಪಂದಿಸುವುದು- ಇದಿಷ್ಟನ್ನು ಮಾಡಿದರೆ ಕೈಲಾಸವು ನಿನ್ನದಾಗುವುದು ಎಂದು ಈ ವಚನದ ಸರಳ ಇಂಗಿತ. ಇಲ್ಲಿ ಅನ್ನವನು ಇಕ್ಕುವುದು ಎಂದರೆ ಅಕ್ಕಿ ಬೇಯಿಸಿ ಅನ್ನ ಮಾಡಿ ಬಡಿಸುವುದು ಎಂಬ ಸೀಮಿತ ಅರ್ಥವಲ್ಲ; ಹೊಟ್ಟೆಗೆ ಆಹಾರ ಒದಗಿಸುವುದು ಎಂದು ಮಾತ್ರವೂ ಅಲ್ಲ; ಇನ್ನೊಬ್ಬರ ಬದುಕಿಗೆ ಬೆಳಕಾಗುವ, ಅವರ ಮನಸ್ಸಿಗೆ ಸಾಂತ್ವನ ಒದಗಿಸುವ, ಸದಾ ಅವರ ಶ್ರೇಯೋಭಿವೃದ್ಧಿಯನ್ನೇ ಬಯಸುವ ಉದಾತ್ತ ಚರ್ಯೆಗಳೆಲ್ಲವನ್ನೂ 'ಅನ್ನವನು ಇಕ್ಕುವುದು' ಎಂಬೆರಡು ಪದಗಳಲ್ಲಿ ಸರ್ವಜ್ಞ ಹಿಡಿದಿಟ್ಟಿದ್ದಾನೆ. ಮತ್ತೆ ಅಷ್ಟು ವಿಶಾಲಾರ್ಥದ ಅನ್ನ ಇಕ್ಕುವಿಕೆ ಆದರ್ಶವಾಗಿ ಹೇಗಿರಬೇಕು? ಲವಲೇಶವೂ ಸ್ವಾರ್ಥವಿಲ್ಲದೆ, ಯಾವುದೇ ಪ್ರತಿಫಲವನ್ನು ಬಯಸದೆ ಆಗಬೇಕು. ''ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ। ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ'' (ಮನುಷ್ಯನು ವಿಹಿತ ಕರ್ತವ್ಯವನ್ನು, ಅದನ್ನು ಮಾಡಲೇಬೇಕು ಎನ್ನುವ ಕಾರಣದಿಂದ ಮಾತ್ರವೇ ಮಾಡಿ, ಎಲ್ಲ ಐಹಿಕ ಸಂಗವನ್ನೂ ಕರ್ಮಫಲಾಪೇಕ್ಷೆಯನ್ನೂ ತ್ಯಜಿಸಿದಾಗ, ಅಂಥ ತ್ಯಾಗವು ಸಾತ್ತ್ವಿಕ ಎನಿಸಿಕೊಳ್ಳುತ್ತದೆ) ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದೂ ಇದನ್ನೇ. ಅಂದರೆ ಭಗವಂತ ಅಂಥವರನ್ನು ಗಮನಿಸುತ್ತಲೇ ಇರುತ್ತಾನೆ. ಅಂತಿಮವಾಗಿ 'ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಗೆ' ಆಗುವಂತೆ ಅನುಗ್ರಹಿಸುತ್ತಾನೆ ಕೂಡ.

ಇದೆಲ್ಲ ಓದಲಿಕ್ಕೆ, ಕೇಳಲಿಕ್ಕೆ ಚಂದ. ನಮ್ಮನ್ನೇ ನಾವು ಪ್ರಾಮಾಣಿಕವಾಗಿ ಪ್ರಶ್ನಿಸಿಕೊಂಡರೆ- ಎಷ್ಟು ಪ್ರತಿಶತ ಅಂಥ ಗುಣವಿದೆ ನಮ್ಮಲ್ಲಿ? ಮಾದರಿ ಆಗಿಟ್ಟುಕೊಳ್ಳೋಣವೆಂದರೆ ಸಮಾಜದಲ್ಲಿ ಎಷ್ಟು ಜನ ಸಿಗುತ್ತಾರೆ ಅಂಥ ಕರ್ಮಯೋಗಿಗಳು? ಉತ್ತರ ನಿರಾಶಾದಾಯಕ. ಹಾಂ! ಅದೃಷ್ಟವಶಾತ್ ನನಗೊಬ್ಬರು ಸಿಕ್ಕಿದ್ದಾರೆ, ಕಳೆದ ವಾರಾಂತ್ಯದಲ್ಲಿ ಇಲ್ಲೇ ಅಮೆರಿಕದ ನಾರ್ತ್ ಕೆರೊಲಿನಾ ಸಂಸ್ಥಾನದ ಮೊರ್‍ರಿಸ್‌ವಿಲ್ ಎಂಬ ಪಟ್ಟಣದಲ್ಲಿ ನಡೆದ ಒಂದು ಸುಂದರ ಸನ್ಮಾನ ಸಮಾರಂಭದಲ್ಲಿ ನಾನೊಬ್ಬ ಪ್ರೇಕ್ಷಕನಾಗಿ ಭಾಗವಹಿಸಿದಾಗ. ಅದು, ಆ ಪಟ್ಟಣದ ನಿವಾಸಿ 93ರ ಹರೆಯದ ಭಾರತೀಯ ಮಹಿಳೆ ಸರೋಜ್ ಶರ್ಮ ಎಂಬುವವರಿಗೆ ಸಂದ ಸನ್ಮಾನ ಸಮಾರಂಭ. ಅವರ ನಿಷ್ಕಾಮಕರ್ಮ ಸಮಾಜಸೇವೆ, ಸನಾತನ ಸಂಸ್ಕೃತಿಯ ಉಳಿಸಿ-ಬೆಳೆಸುವಿಕೆಯನ್ನು ಗುರುತಿಸಿ ಅವರಿಗೆ ಯೋಗ ಯುನಿವರ್ಸಿಟಿ ಆಫ್ ಅಮೆರಿಕ ಗೌರವ ಡಾಕ್ಟರೇಟ್ ಕೊಟ್ಟು ಪುರಸ್ಕರಿಸಿದ್ದಕ್ಕೆ ಅಭಿಮಾನಿಗಳೆಲ್ಲರೂ ಸೇರಿ ನಡೆಸಿದ ಒಂದು ಅತ್ಯಂತ ಆರ್ದ್ರ-ಆತ್ಮೀಯ ಕಾರ್ಯಕ್ರಮ. ನಾನದರಲ್ಲಿ ಭಾಗಿಯಾಗುವಂತಾದದ್ದು ಹೇಗೆಂದು ಆಮೇಲೆ ತಿಳಿಸುತ್ತೇನೆ. ಮೊದಲಿಗೆ ಡಾ. ಸರೋಜ್ ಶರ್ಮರ ಸಂಕ್ಷಿಪ್ತ ಪರಿಚಯ ಓದಿಕೊಳ್ಳಿ. ಮೇಲೆ ಬರೆದ ಪ್ಯಾರಗ್ರಾಫ್ ಅವರಿಗೆ ಎಷ್ಟು ಕರಾರುವಾಕ್ಕಾಗಿ ಹೊಂದುತ್ತದೆಯೆಂದು ನೀವೇ ನೋಡುವಿರಂತೆ.

1932ರ ಅಕ್ಟೋಬರ್ 3ರಂದು ಉತ್ತರಪ್ರದೇಶದ ಕಾನ್ಪುರದಲ್ಲಿ ಜನನ. ತಾಯಿ ಶ್ರೀಮತಿ ಶಾಸ್ತ್ರೀ; ತಂದೆ ಪಂಡಿತ್ ವೈಕುಂಠನಾಥ ಶಾಸ್ತ್ರೀ. ಧರ್ಮಭೀರು ಸಂಪ್ರದಾಯಸ್ಥ ಕುಟುಂಬ. ಐದು ವರ್ಷದ ಬಾಲಿಕೆಯಾಗಿದ್ದಾಗಲೇ ತಾನೊಂದು ದೇವಸ್ಥಾನ ಕಟ್ಟಬೇಕೆಂಬ ಕನಸಿತ್ತಂತೆ ಸರೋಜ್‌ಳಿಗೆ. ಹದಿಹರೆಯದಲ್ಲಿ ಮದುವೆಯಾಯ್ತು. ಪತಿಯ ಹೆಸರು ಗಂಗಾಧರ ಶರ್ಮ. ಅರ್ಚಕ ವೃತ್ತಿಯಲ್ಲಿದ್ದವರ ಸುಪುತ್ರ. ಅವರಿದ್ದದ್ದು ಲಖನೌದಲ್ಲಿ ಹಾಗಾಗಿ ಅಲ್ಲಿಗೆ ಪಯಣ. ಅಲ್ಲಿ ಸರೋಜ್ ಶರ್ಮ ಆರಂಭಿಸಿದ್ದ ಒಂದು ಮಹಿಳಾಮಂಡಲ ಈಗಲೂ ಅಸ್ತಿತ್ವದಲ್ಲಿದೆಯಂತೆ. 1962ರಲ್ಲಿ ಭಾರತ-ಚೀನಾ ಯುದ್ಧ ನಡೆದಿದ್ದಾಗ ಪ್ರಧಾನಿ ನೆಹರುರವರ ಕರೆಗೆ ಓಗೊಟ್ಟು ಸಾಮಾನ್ಯಪ್ರಜೆಗಳಿಂದ ಸರಕಾರಕ್ಕೆ ಸಹಾಯ ಯೋಜನೆಯಡಿ ತನ್ನದೂ ಸೇರಿದಂತೆ ಅವರಿವರಿಂದ ಒಟ್ಟುಗೂಡಿಸಿ 25 ತೊಲೆಗಳಷ್ಟು ಚಿನ್ನವನ್ನು ಭಾರತೀಯ ಸೇನೆಯ ಖರ್ಚಿಗೆಂದು ದಾನಮಾಡಿದ ಧೀರೆ ಸರೋಜ್ ಶರ್ಮ. ಆಮೇಲೆ ಪತಿಯ ಉನ್ನತಶಿಕ್ಷಣ ಮತ್ತು ವೃತ್ತಿಗೋಸ್ಕರ ನೈಜೀರಿಯಾ, ಸೂಡಾನ್ ಮತ್ತು ಕೆನಡಾಗಳಲ್ಲಿದ್ದಾಗ ಅಲ್ಲಿ ಸರೋಜ್ ಶರ್ಮ ಒಬ್ಬ ಸಾಂಸ್ಕೃತಿಕ ರಾಯಭಾರಿ ಆಗಿದ್ದರಷ್ಟೇ ಅಲ್ಲದೆ ಧಾರ್ಮಿಕ ಆಚರಣೆಗಳು ಮತ್ತು ಆಪತ್ಕಾಲದಲ್ಲಿ ಪರಿಹಾರಕಾರ್ಯಗಳಲ್ಲೂ ತೊಡಗಿಸಿಕೊಂಡಿದ್ದರು. ಸೂಡಾನ್‌ನಲ್ಲಿರುವಾಗಲೇ ಬಾಂಗ್ಲಾ ಯುದ್ಧ ಸಂತ್ರಸ್ತರಿಗೆ ದೊಡ್ಡ ಮೊತ್ತದ ಪರಿಹಾರನಿಧಿ ಸಂಗ್ರಹಿಸಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರಿಗೆ ಕಳುಹಿಸಿಕೊಟ್ಟಿದ್ದರು.

1972ರಲ್ಲಿ ಶರ್ಮ ದಂಪತಿ ಅಮೆರಿಕದ ನಾರ್ತ್ ಕೆರೊಲಿನಾ ಸಂಸ್ಥಾನಕ್ಕೆ ಬಂದವರು ಅಲ್ಲೇ ನೆಲೆನಿಂತಿದ್ದಾರೆ. ಆರಂಭದಲ್ಲಿ ರಾಜಧಾನಿ ರ್‍ಯಾಲೆ ನಗರದಲ್ಲಿ ಮನೆ. ಅದರ ನೆಲಮಾಳಿಗೆಯಲ್ಲಿ ಅನೌಪಚಾರಿಕವಾಗಿ ಒಂದು ಧಾರ್ಮಿಕ ಕೇಂದ್ರದ ಸ್ಥಾಪನೆ. ದೀಪಾವಳಿ, ಹೋಳಿ, ದಸರಾ, ಶಿವರಾತ್ರಿ, ಜನ್ಮಾಷ್ಟಮಿ ಹಬ್ಬಗಳ ಆಚರಣೆ, ಸತ್ಯನಾರಾಯಣ ಪೂಜೆ, ರಾಮಾಯಣ ಮತ್ತು ಭಗವದ್ಗೀತೆ ಪಠನ ಮುಂತಾದ ಚಟುವಟಿಕೆಗಳು. ಒಂದಿಷ್ಟು ಸಮಾನಮನಸ್ಕರನ್ನು ಒಟ್ಟುಸೇರಿಸಿ ಹಣ ಸಂಗ್ರಹಿಸಿ ಜಾಗ ಖರೀದಿಸಿ ಒಂದು ದೇವಸ್ಥಾನ ಮತ್ತು ಅಧ್ಯಾತ್ಮಕೇಂದ್ರ ಸ್ಥಾಪಿಸುವ ಯೋಜನೆ. ಹಾಗೆ ಆರಂಭವಾದದ್ದೇ ಎಚ್‌ಎಸ್‌ಎನ್‌ಸಿ (ಹಿಂದೂ ಸೊಸೈಟಿ ಆಫ್ ನಾರ್ತ್ ಕೆರೊಲಿನಾ). ಸರೋಜ್ ಶರ್ಮ ಹತ್ತಾರು ಬಾರಿ ಅದರ ಅಧ್ಯಕ್ಷತೆ ಜವಾಬ್ದಾರಿ ವಹಿಸಿದ್ದಾರೆ. 1980ರಲ್ಲಿ ಜಾಗವನ್ನು ಖರೀದಿಸಿದಾಗ ಆಗಿನ್ನೂ ಅದೊಂದು ಕಾಡೇ ಆಗಿತ್ತು. ಅಲ್ಲಿ ದೇವಸ್ಥಾನ ಕಟ್ಟಲಿಕ್ಕೆ ನಿಮಗೇನು ಹುಚ್ಚೇ ಎಂದು ಹುಬ್ಬೇರಿಸಿದವರೂ ಇದ್ದರಂತೆ. ಧೃತಿಗೆಡದ ಸರೋಜ್ ಶರ್ಮ ತಮ್ಮ ಯೋಜನೆ ಮುಂದುವರಿಸಿದರು. 1986ರಲ್ಲಿ ಆರು ಎಕ್ರೆ ಜಾಗದಲ್ಲಿ ಪುಟ್ಟದೊಂದು ದೇಗುಲ ನಿರ್ಮಾಣವಾಯಿತು. ಬಂದ ಭಕ್ತರಿಗೆ ಹಂಚಲಿಕ್ಕೆ ಪ್ರಸಾದ ತಯಾರಿ ಸರೋಜ್‌ರಿಂದಲೇ, ಆಗಲೂ ಈಗಲೂ. 1999ರಲ್ಲಿ ಇನ್ನೊಂದು ಕನಸು ನನಸಾಯಿತು. ದೇಗುಲದ ಪಕ್ಕದಲ್ಲೇ ಹಿಂದೂಭವನ ಎಂಬ ಭವ್ಯ ಸಭಾಂಗಣ ತಲೆಯೆತ್ತಿತು. 1500 ಆಸನವ್ಯವಸ್ಥೆಯ ದೊಡ್ಡ ಹಾಲ್, ಸುತ್ತಮುತ್ತ ತರಗತಿಗಳನ್ನು ನಡೆಸಲಿಕ್ಕೆ ಕೊಠಡಿಗಳು, ಮಕ್ಕಳಿಗೆ ಆಡಲಿಕ್ಕೊಂದು ಪಾರ್ಕ್. ಧಾರ್ಮಿಕ ಪ್ರವಚನಗಳು, ಸಂಗೀತ-ನೃತ್ಯ ಕಾರ್ಯಕ್ರಮಗಳು, ಮದುವೆ-ಮುಂಜಿಯೇ ಮೊದಲಾದ ಸಮಾರಂಭಗಳಿಗೂ ಪ್ರಶಸ್ತ ಸ್ಥಳ. ಭಾರತ ಮತ್ತು ನೇಪಾಳ ಮೂಲದ ಸರಿಸುಮಾರು 60,000 ಜನರಿಗೆ ಅದೀಗ ಸಮುದಾಯ ಕೇಂದ್ರ. ಹಿಂದೆ ಕಾಡಾಗಿದ್ದ ಪ್ರದೇಶ ಈಗ ಮೊರ್‍ರಿಸ್‌ವಿಲ್ ಎಂಬ ಪಟ್ಟಣ! ಅಲ್ಲಿಯ ಜನಸಂಖ್ಯೆ ಮತ್ತು ಮನೆಗಳ ಸಂಖ್ಯೆಯಲ್ಲಿ ಅರ್ಧದಷ್ಟು ಭಾರತೀಯರೇ. ತಾಯ್ನಾಡಿಂದ ದೂರವಿದ್ದೇವೆಂಬ ಭಾವನೆಯೇ ಬಾರದಂಥ ಪರಿಸರ ಮತ್ತು ಸೌಕರ್ಯಗಳು. ಇದೆಲ್ಲ ಸಾಧ್ಯವಾದದ್ದು ಸರೋಜ್ ಶರ್ಮರ ದೂರದರ್ಶಿತ್ವದಿಂದ.

ಸರೋಜ್ ಶರ್ಮರ ದೃಷ್ಟಿಯಲ್ಲಿ ದೇವಸ್ಥಾನವೆಂದರೆ ಕಟ್ಟಾ ಸಂಪ್ರದಾಯಗಳ, ತೀರ ಮಡಿವಂತಿಕೆಯ ಸ್ಥಳ ಎನಿಸಬೇಕಿಲ್ಲ. ನವಪೀಳಿಗೆಗೆ, ಚಿಕ್ಕ ಮಕ್ಕಳಿಗೂ ಅದರಲ್ಲಿ ಆಕರ್ಷಣೆ ಬರಬೇಕು. ಅಲ್ಲಿ ಅವರು ಭಾರತೀಯ ಸಂಸ್ಕೃತಿಯ ಬಗೆಗೆ ತಿಳಿದುಕೊಳ್ಳಬೇಕು. ಚಟುವಟಿಕೆಗಳಲ್ಲಿ ಭಾಗವಹಿಸಬೇಕು, ತನ್ಮೂಲಕ ಅವರ ವ್ಯಕ್ತಿತ್ವ ವಿಕಸನ ಆಗಬೇಕು. ಈ ನಿಟ್ಟಿನಲ್ಲಿ ಮಕ್ಕಳಿಗೆಂದೇ ಭಗವದ್ಗೀತೆ, ಯೋಗ, ಸಂಸ್ಕೃತ, ಹಿಂದಿ ಮತ್ತಿತರ ಭಾರತೀಯ ಭಾಷೆಗಳ ಕಲಿಕೆ, ಆಟೋಟಗಳು, ಬೇಸಗೆ ಶಿಬಿರಗಳು, ಶಿಕ್ಷಣಮಾರ್ಗದರ್ಶನ ಎಲ್ಲವನ್ನೂ ಸೇರಿಸಿದರು. ಅಲ್ಲಿ ತರಬೇತಿ ಪಡೆದ ಅನೇಕ ಮಕ್ಕಳೀಗ ದೊಡ್ಡವರಾಗಿ ಎಂಬಿಎ, ವೈದ್ಯಕೀಯ, ವಕೀಲ ವೃತ್ತಿಗಳಲ್ಲೆಲ್ಲ ಯಶಸ್ಸು ಪಡೆಯುತ್ತಿದ್ದಾರೆ. ಅದೆಷ್ಟೋ ಕಾಲೇಜು ವಿದ್ಯಾರ್ಥಿಗಳಿಗೆ, ಅವರ ಹೆತ್ತವರಿಗೆ, ಸಂಸಾರದ ತಿಕ್ಕಾಟದಲ್ಲಿ ಜರ್ಜರಿತ ದಂಪತಿಗಳಿಗೆ ಖುದ್ದಾಗಿ ಸರೋಜ್ ಶರ್ಮರೇ ಕೌನ್ಸೆಲಿಂಗ್ ನಡೆಸಿದ್ದಿದೆ; ಸಂಕಷ್ಟಗಳಿಂದ ಪಾರು ಮಾಡಿದ್ದಿದೆ. ಅವರಿಗೆಲ್ಲ ನೆಚ್ಚಿನ 'ಶರ್ಮಾ ಆಂಟಿ' ಆಗಿದ್ದಾರೆ. ಹಿರಿಯರಿಗೆ, ವಯೋವೃದ್ಧರಿಗೆ ಗೀತಾರ್ಥ ಚಿಂತನೆ, ಹನೂಮಾನ್ ಚಾಲೀಸಾ, ಸುಂದರಕಾಂಡ ಪಠನ, ಅಧ್ಯಾತ್ಮ ಉಪನ್ಯಾಸಗಳು ಇತ್ಯಾದಿ. ಹಿಂದಿ ವಿಕಾಸ ಮಂಡಲ ಸ್ಥಾಪಿಸಿ ಕವಿಸಮ್ಮೇಳನ, ರಾಮಾಯಣ ಗೀತನೃತ್ಯ ಮತ್ತಿತರ ಲಲಿತಕಲೆಗಳ ಪೋಷಣೆ. ಭಾರತ ಸ್ವಾತಂತ್ರ್ಯ ದಿನಾಚರಣೆ, ಬಹುರಾಷ್ಟ್ರೀಯ ಮೇಳಗಳ ಆಯೋಜನೆ. ಆಹಾರ, ಉಡುಪು, ಕಲೆ, ಸಂಸ್ಕೃತಿಗಳ ಪರಸ್ಪರ ಪರಿಚಯ ಮತ್ತು ವಿನಿಮಯಕ್ಕೆ ವ್ಯವಸ್ಥೆ. ಇದೆಲ್ಲದಕ್ಕೂ ಪತಿ ಗಂಗಾಧರ ಶರ್ಮರ ನಿರಂತರ ಬೆಂಬಲ.

ಹಾಗಂತ, ಭಾರತೀಯರಿಗಷ್ಟೇ ಪ್ರಯೋಜನವಾಗಬೇಕೆಂಬ ಸಂಕುಚಿತತೆ ಸರೋಜ್ ಶರ್ಮರದಲ್ಲ, ಆರೋಗ್ಯ ಕ್ಷೇತ್ರದಲ್ಲಿ ಅವರ ಸಮಾಜಸೇವೆ ಎಲ್ಲರನ್ನೂ- ಸ್ಥಳೀಯ ಅಮೆರಿಕನ್ನರನ್ನೂ ಸೇರಿಸಿಕೊಳ್ಳುತ್ತದೆ. ತಜ್ಞ ವೈದ್ಯರನ್ನು ಕರೆಸಿ ಉಚಿತ ಆರೋಗ್ಯ ತಪಾಸಣೆ, ಮಹಿಳೆಯರ ಆರೋಗ್ಯ, ಮಾನಸಿಕ ಆರೋಗ್ಯದ ಬಗ್ಗೆಯೆಲ್ಲ ವಿಶೇಷ ಕಾಳಜಿ. ಆರೋಗ್ಯವಿಮೆ ಇಲ್ಲದವರಿಗೂ ಸೌಲಭ್ಯಗಳ ವಿಸ್ತರಣೆ. ಕೋವಿಡ್ ಸಮಯದಲ್ಲಂತೂ ಆಹಾರ ಸರಬರಾಜು ವ್ಯವಸ್ಥೆಯನ್ನು ಅಗಾಧ ಪ್ರಮಾಣದಲ್ಲಿ ಸಂಯೋಜಿಸಿ ಒಂದು ಲಕ್ಷಕ್ಕೂ ಹೆಚ್ಚು ಆಹಾರ ಪೊಟ್ಟಣಗಳನ್ನು ಶಾಲಾ ಮಕ್ಕಳಿಗೆ, ಅನಾಥಾಶ್ರಮಗಳಿಗೆ, ಕಷ್ಟದಲ್ಲಿದ್ದ ಕುಟುಂಬಗಳಿಗೆ ಒದಗಿಸಿದ್ದಾರೆ. ಇದಕ್ಕೆಲ್ಲ ಬೇರೆಯವರ ನೆರವೂ ಬೇಕು ನಿಜ, ಆದರೆ ಶರ್ಮಾ ಆಂಟಿ ಕೇಳಿದರೆಂದರೆ ಆಯ್ತು, 'ಒಲ್ಲೆ' ಎನ್ನುವವರಿಲ್ಲ. ಅಂಥದೊಂದು ಋಣ-ವಾತ್ಸಲ್ಯಗಳ ಬೆಸುಗೆ. ಅಪಘಾತಗಳಾದಾಗ, ದುರ್ಮರಣಗಳಾದಾಗ, ಹಠಾತ್ತನೆ ಸಂಕಷ್ಟಗಳು ಎದುರಾದಾಗ ಎಲ್ಲರಿಗೂ ತತ್‌ಕ್ಷಣ ನೆನಪಾಗುವ ಆಸರೆ ಅಭಯಹಸ್ತವೆಂದರೆ ಶರ್ಮಾ ಆಂಟಿ.

ಇದೆಲ್ಲವನ್ನೂ ಗುರುತಿಸಿ ಸರೋಜ್ ಶರ್ಮರನ್ನು ಅನೇಕ ಸಂಘಸಂಸ್ಥೆಗಳು, ಸರಕಾರಗಳು ಗೌರವಿಸಿ ಪುರಸ್ಕರಿಸಿವೆ. ನಾರ್ತ್ ಕೆರೊಲಿನಾ ಸಂಸ್ಥಾನದ ಅತ್ಯುನ್ನತ ಪೌರಸಮ್ಮಾನ ಎನಿಸಿರುವ 'ದಿ ಆರ್ಡರ್ ಆಫ್ ದ ಲಾಂಗ್ ಲೀಫ್ ಪೈನ್' ಪುರಸ್ಕಾರ ಪಡೆದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. ಮೊರ್‍ರಿಸ್‌ವಿಲ್ ಪುರಸಭೆಯಿಂದ ಅತ್ಯುತ್ತಮ ನಾಯಕತ್ವ ಗುಣವನ್ನು ಗುರುತಿಸಿ ಪ್ರಶಸ್ತಿ. ಸಮುದಾಯ ಸೇವೆಗೆಂದು ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ಗೌರವ. ವಿಶ್ವ ಹಿಂದೂ ಪರಿಷತ್‌ನ ಅಮೆರಿಕ ಶಾಖೆಯಿಂದ ಹಿಂದೂಸಂಸ್ಕೃತಿ ಪ್ರಸರಣದಲ್ಲಿ ಜೀವಮಾನ ಸಾಧನೆಗಾಗಿ ಪ್ರಶಸ್ತಿ. ಇಷ್ಟೇ ಅಲ್ಲದೆ ಇನ್ನೂ ಹಲವಾರು ನಾಗರಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಸಂಘಟನೆಗಳಿಂದ ಸನ್ಮಾನ ಪುರಸ್ಕಾರಗಳು ಬಂದಿವೆ. ಆದರೆ ಇವ್ಯಾವುದನ್ನೂ ಸರೋಜ್ ಶರ್ಮ ತಲೆಗೇರಿಸಿಕೊಂಡಿಲ್ಲ. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ತಮಗೇನು ಸಿಕ್ಕಿದರೂ ಅದನ್ನು ದೇವಸ್ಥಾನಕ್ಕೆ, ಸಮುದಾಯಕ್ಕೆ ಅರ್ಪಿಸಿಬಿಡುತ್ತಾರೆ. ತಾವು ಮಾತ್ರ ದೇವಸ್ಥಾನದಲ್ಲಿ ಪ್ರಸಾದ ತಯಾರಿ, ವಿತರಣೆ ಮತ್ತಿತರ ನಿತ್ಯನೈಮಿತ್ತಿಕಗಳಲ್ಲೇ ಮುಳುಗುತ್ತಾರೆ. ಮಕ್ಕಳನ್ನು, ಯುವಕರನ್ನು ಉತ್ತೇಜಿಸುತ್ತಾರೆ. ಸತ್ಸಂಗದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಾರೆ. ದೇವಸ್ಥಾನಕ್ಕೆ ಅನತಿದೂರದಲ್ಲೇ ಅವರ ಮನೆ. 90 ದಾಟಿದ ಈ ವಯಸ್ಸಲ್ಲೂ ತಾವೇ ಕಾರು ಚಲಾಯಿಸುತ್ತಾರೆ. ಅವರಿಗೆಂದೇ ಒಂದು ಪಾರ್ಕಿಂಗ್ ಸ್ಪಾಟ್ ನಿಗದಿಯಾಗಿದೆ. 100 ದಾಟಿರುವ ಪತಿ ಗಂಗಾಧರ ಶರ್ಮರನ್ನು ನೋಡಿಕೊಳ್ಳಲಿಕ್ಕೆ ಒಬ್ಬ ಸಹಾಯಕರನ್ನಿಟ್ಟುಕೊಂಡಿದ್ದಾರೆ.

ಶರ್ಮ ದಂಪತಿಗೆ ಐವರು ಮಕ್ಕಳು, ಒಂಬತ್ತು ಮೊಮ್ಮಕ್ಕಳು, ಎಂಟು ಮರಿಮಕ್ಕಳು. ಅವರೆಲ್ಲ ಅಮೆರಿಕದ ಬೇರೆಬೇರೆ ಕಡೆ ಪಸರಿಸಿದ್ದಾರೆ. ಹಬ್ಬ-ಹರಿದಿನಗಳಂದು ಸಾಧ್ಯವಿದ್ದಷ್ಟೂ ಮಟ್ಟಿಗೆ ಎಲ್ಲರೂ ಒಟ್ಟುಸೇರುತ್ತಾರೆ. ಸರೋಜ್ ಶರ್ಮರ ನಿಜಸಾಧನೆ ಇರುವುದು ತಮ್ಮ ಕುಟುಂಬವನ್ನು ಶ್ರೀಮಂತವಾಗಿ ವಿಸ್ತರಿಸಿದ್ದರಲ್ಲಲ್ಲ. ಸಂಘಸಂಸ್ಥೆಗಳನ್ನು ಆರಂಭಿಸಿ ಸೌಧಗಳನ್ನು ನಿರ್ಮಿಸಿದ್ದರಲ್ಲಲ್ಲ. ಬದಲಿಗೆ ಶ್ರದ್ಧೆ, ನಂಬಿಕೆ, ಶಾಂತಿ, ಅಹಿಂಸೆ, ಸಹಾನುಭೂತಿ, ಸಂಸ್ಕೃತಿಯಲ್ಲಿ ಗೌರವ ಇವೇ ಮುಂತಾದ ಅಮೂರ್ತ ಮೌಲ್ಯಗಳನ್ನು ಎರಕ ಹೊಯ್ದು ಪೋಷಿಸಿ ದೊಡ್ಡದೊಂದು

ಸಮುದಾಯವನ್ನು ಬೆಳೆಸಿದ್ದರಲ್ಲಿ. ಅಂಥ ಅರ್ಥಪೂರ್ಣ ಬದುಕನ್ನು ಗುರಿಯಾಗಿಟ್ಟುಕೊಳ್ಳುವವರಿದ್ದರೆ ಸರೋಜ್ ಶರ್ಮ ಅವರಿಗೆಲ್ಲ ಒಂದು ದಾರಿದೀವಿಗೆ, ಸ್ಫೂರ್ತಿಯ ಸೆಲೆ.

ಇಂತಿರುವ ಸರೋಜ್ ಶರ್ಮ, ನಾರ್ತ್ ಕೆರೊಲಿನಾದಲ್ಲಿ ಮೊರ್‍ರಿಸ್‌ವಿಲ್ ಪಟ್ಟಣದ ಪಕ್ಕದಲ್ಲೇ ಕೇರಿ ಎಂಬಲ್ಲಿ ವಾಸವಾಗಿರುವ ಅಮೆರಿಕನ್ನಡಿತಿ ಸವಿತಾ ರವಿಶಂಕರ್ ಅವರಿಗೂ ನೆಚ್ಚಿನ 'ಶರ್ಮಾ ಆಂಟಿ'. ದೇವಸ್ಥಾನದಲ್ಲಿ ಹಬ್ಬ-ಉತ್ಸವಗಳ ವೇಳೆ ಸಿಂಗಾರದ ಕೆಲಸವನ್ನು ಸೇವೆಯೆಂಬಂತೆ ಮಾಡುವವರು ಸವಿತಾ. ಹಾಗಾಗಿ ಮತ್ತಷ್ಟು ಒಡನಾಟ, ಆತ್ಮೀಯತೆ. ಯೋಗ ಯುನಿವರ್ಸಿಟಿ ಆಫ್ ಅಮೆರಿಕ ಜತೆ ಮಾತನಾಡಿ, ಅದರ ಭಾರತ/ಬೆಂಗಳೂರು ಶಾಖೆಯ ಉಪಕುಲಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರ ಅನುಮತಿಯನ್ನೂ ಪಡೆದು, ಶರ್ಮಾ ಆಂಟಿಗೆ ಗೌರವ ಡಾಕ್ಟರೇಟ್ ಪುರಸ್ಕಾರ ಸಲ್ಲುವುದಕ್ಕೆ ಬೇಕಾದ ದಾಖಲೆಗಳನ್ನು ಕ್ರೋಡೀಕರಿಸಿ ಅರ್ಜಿ ಸಲ್ಲಿಸಿದ್ದು ಸವಿತಾ ಅವರೇ. ಮೊನ್ನೆ ನವೆಂಬರ್ 2ರಂದು ಕೌಲಾಲಂಪುರದಲ್ಲಿ ಪದವಿಪ್ರದಾನ ಆದಾಗ ಅಲ್ಲಿಂದ ಪ್ರಮಾಣಪತ್ರ ತರಿಸಿ ಶರ್ಮಾ ಆಂಟಿಗೆ ತಲುಪುವಂತೆ ಮಾಡಿದ್ದೂ ಅವರೇ. ಆವತ್ತೇ ವಾಟ್ಸ್ಯಾಪ್‌ನಲ್ಲಿ ಕರೆಮಾಡಿ ''ನಿಮಗೊಬ್ಬರು ಅದ್ಭುತ ವ್ಯಕ್ತಿತ್ವದ ಪರಿಚಯವಾಗುತ್ತದೆ. ಡಿಸೆಂಬರ್ 21ಕ್ಕೆ ಮೊರ್‍ರಿಸ್‌ವಿಲ್‌ಗೆ ಬನ್ನಿ!'' ಎಂದು ನನ್ನನ್ನು ಆಹ್ವಾನಿಸಿದವರೂ ಅವರೇ. ನಾನಿರುವಲ್ಲಿಂದ ಐದು ಗಂಟೆ ಕಾರ್ ಡ್ರೈವಿಂಗ್‌ನಷ್ಟು ದೂರ. ಯಾರು ಹೋಗುತ್ತಾರೆ ಈ ಚಳಿಯಲ್ಲಿ ಅಂತ ಆಲಸ್ಯ ತೋರಬಹುದಿತ್ತು. ಪುಣ್ಯಕ್ಕೆ ಹಾಗೆ ಮಾಡಲಿಲ್ಲ, ಹನ್ನೆರಡು ಗಂಟೆ ಡ್ರೈವ್ ಮಾಡಿಕೊಂಡು ಫ್ಲೋರಿಡಾದಿಂದ ಯೋಗ ಯುನಿವರ್ಸಿಟಿಯ ಅಧ್ಯಕ್ಷ ಡಾ. ಮನೋಹರನ್ ಮತ್ತವರ ಪತ್ನಿ ಜಯಶ್ರೀ ಬಂದಿದ್ದರು. ಸಾಂಕೇತಿಕವಾಗಿ ಅಲ್ಲಿಯೂ ಪದವಿಪ್ರಮಾಣ ಪತ್ರ ಕೊಟ್ಟು ''ಸರೋಜ್ ಶರ್ಮ ಇನ್ನುಮುಂದೆ ಡಾಕ್ಟರ್ ಸರೋಜ್ ಶರ್ಮ!'' ಎಂದು ಘೋಷಿಸಿದರು. ನಾರ್ತ್ ಕೆರೊಲಿನಾದ ಒಬ್ಬಿಬ್ಬರು ಶಾಸಕರು, ಮೊರ್‍ರಿಸ್‌ವಿಲ್ ಪಟ್ಟಣದ ಮೇಯರ್ ಮತ್ತಿತರ ಗಣ್ಯರೂ ಉಪಸ್ಥಿತರಿದ್ದರು. ಮುಕ್ತಕಂಠದಿಂದ ಮಾತನಾಡಿದರು. ಎಚ್‌ಎಸ್‌ಎನ್‌ಸಿ ಮತ್ತು ಹಿಂದಿ ವಿಕಾಸಮಂಡಲ ಜಂಟಿಯಾಗಿ ಕಾರ್ಯಕ್ರಮವನ್ನು ಆಯೋಜಿಸಿದ್ದು ಸರೋಜ್‌ಶರ್ಮರ ಕುಟುಂಬಸ್ಥರೂ ಇದ್ದರು. ಅಭಿಮಾನಿಗಳೂ ಫಲಾನುಭವಿಗಳೂ ಸೇರಿದ್ದರು. ವೇದಿಕೆಯಲ್ಲಿ ಚಿಕ್ಕಚೊಕ್ಕ ಭಾಷಣಗಳೆಲ್ಲ ಅರ್ಥಗರ್ಭಿತವಾಗಿ ಭಾವಪೂರ್ಣವಾಗಿ ಇದ್ದುವು. ಗಾಲಿ ಕುರ್ಚಿಯಲ್ಲಿ ಕುಳಿತುಕೊಂಡೇ ಡಾ. ಗಂಗಾಧರ ಶರ್ಮ ಸಹ ಬಂದಿದ್ದರು; ಸಂದರ್ಭೋಚಿತ ಮಾತನಾಡಿದರು. ಒಂದು ಅತ್ಯಂತ ಹೃದಯಸ್ಪರ್ಶಿ ಸಮಾರಂಭದಲ್ಲಿ ಪಾಲ್ಗೊಂಡ ಸೌಭಾಗ್ಯ ಮತ್ತು ಧನ್ಯತೆ ನನ್ನದಾಯಿತು.

ಆವತ್ತು ನಾನು ಸವಿತಾ ರವಿಶಂಕರ್ ಅವರ ಮನೆಯಲ್ಲೇ ಉಳಕೊಂಡಿದ್ದೆನಾದ್ದರಿಂದ 'ಶರ್ಮಾ ಆಂಟಿ'ಯ ನಿಗರ್ವ, ನಿಸ್ಪೃಹತೆಗಳ ಬಗೆಗೆ ಮತ್ತಷ್ಟು ತಿಳಿಯುವಂತಾಯ್ತು. ಅದರಲ್ಲೊಂದು ಅಂಶ, ದೇವರು ಒಳ್ಳೆಯವರನ್ನೇ ಮತ್ತಷ್ಟು ಕಠಿನ ಸನ್ನಿವೇಶಗಳಿಗೊಡ್ಡಿ ಪರೀಕ್ಷಿಸುತ್ತಾನೆಂಬುದಕ್ಕೆ ಪುರಾವೆಯಂಥದು. 2019ರಲ್ಲಿ, ಕೋವಿಡ್‌ಗಿಂತ ಸ್ವಲ್ಪ ಮೊದಲು, ಸರೋಜ್ ಶರ್ಮರ ಒಬ್ಬ ಮಗ ಯಾವುದೋ ಕೆಲಸದ ನಿಮಿತ್ತ ಮೆಕ್ಸಿಕೋಗೆ ಹೋಗಿದ್ದರಂತೆ. ಆಹಾರದಲ್ಲಿ ವಿಷಾಂಶ ಬೆರಕೆಯಾಗಿ(ಫುಡ್ ಪಾಯ್ಸನಿಂಗ್) ತೀವ್ರ ಅಸ್ವಸ್ಥಗೊಂಡು ರಾತ್ರಿ ಬೆಳಗಾಗುವುದರೊಳಗೆ ಅಸುನೀಗಿದರು. ಸಿಡಿಲಿನಂತೆ ಬಂದೆರಗಿತು ಸುದ್ದಿ. ಇತ್ತ ಮರುದಿನವೇ ಮೊಮ್ಮಗನ ಗ್ರಾಜ್ಯುವೇಷನ್ ಸಮಾರಂಭ. ಸಂಭ್ರಮಾಚರಣೆ ಹೋಗಿ ಶೋಕಾಚರಣೆಯಾಯ್ತು. ಮೆಕ್ಸಿಕೋ ದೇಶದ ನಿಯಮದಂತೆ ಮೃತ ಶರೀರವನ್ನು ತರಬೇಕಿದ್ದರೆ ಪತ್ನಿಯೇ ಹೋಗಬೇಕು, ಅದೂ ಮ್ಯಾರೇಜ್ ಸರ್ಟಿಫಿಕೇಟ್ ಮತ್ತಿತರ ದಾಖಲೆಗಳೊಂದಿಗೆ. ತುಂಬ ಕಷ್ಟದ ಅನುಭವ. ಸವಿತಾ ಆವತ್ತೇ ಸಂಜೆ ಮೈಸೂರಿಗೆ ಹೊರಡುವವರಿದ್ದರು. ಆದರೂ ಒಮ್ಮೆ ಶರ್ಮಾ ಆಂಟಿಯ ಮನೆವರೆಗೆ ಹೋಗಿಬರುತ್ತೇನೆ, ಒಳಗೆಹೋಗಿ ಮಾತನಾಡಿಸಲಿಕ್ಕಾಗದಿದ್ದರೆ ಸುಮ್ಮನೆ ಹೊರಗೆ ಕಾರಲ್ಲೇ ಸ್ವಲ್ಪ ಹೊತ್ತು ಕುಳಿತು ಪ್ರಾರ್ಥಿಸಿ ಬರುತ್ತೇನೆ ಎಂದುಕೊಂಡರಂತೆ. ಹಾಗೆ ಹೋದಾಗ ಶರ್ಮಾ ಆಂಟಿಗೆ ಗೊತ್ತಾಗಿ ಒಳಕರೆದರಂತೆ. ಪತಿ ಗಂಗಾಧರ ಶರ್ಮ ಪುತ್ರಶೋಕದಿಂದ ಆದಾಗಲೇ ತಲ್ಲಣಗೊಂಡಿದ್ದರು, ಕುಸಿದಿದ್ದರು. ಬೇರೆಲ್ಲರೂ ಕಣ್ಣೀರುಗರೆಯುತ್ತಿದ್ದರು. ಶರ್ಮಾ ಆಂಟಿ ಮಾತ್ರ ದಿಟ್ಟತನದಿಂದ ಮಾತನಾಡಿದರು. ''ನಾನೇ ಕುಸಿದರೆ ನನ್ನ ಪ್ರೀತಿಯ ಸಮುದಾಯಕ್ಕೆಲ್ಲ ಆಘಾತವಾಗುತ್ತದೆ. ಈ ಗಳಿಗೆಯಲ್ಲಿ ನಾನು ಧೈರ್ಯದಿಂದಿರಬೇಕು. ಎಲ್ಲ ದೈವೇಚ್ಛೆ. ನಾವೇನೂ ಮಾಡಲಿಕ್ಕಾಗದು'' ಎಂದಷ್ಟೇ ಹೇಳಿದರು. ಇದನ್ನು ವಿವರಿಸುವಾಗ ಸವಿತಾ ಗದ್ಗದಿತರಾಗಿದ್ದರು. ಕೇಳುತ್ತಿದ್ದ ನನ್ನ ಮನದಲ್ಲಿ ''ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ...'' ಮೊಳಗುತ್ತಿತ್ತು. ಗೀತೆಯ ನುಡಿಗಳನ್ನು ಶರ್ಮಾ ಆಂಟಿ ಅದೆಷ್ಟು ಸಾವಿರಗಟ್ಟಲೆ ಜನರಿಗೆ ಕಲಿಸಿದ್ದಾರೋ, ನುಡಿಯಷ್ಟೇ ಅಲ್ಲ ಅದರಂತೆಯೇ ನಡೆಯುವುದನ್ನೂ ಸ್ವತಃ ನಡತೆಯಿಂದ ಕಲಿಸಿದರು!

ಬರ್ಲಿನ್ ಶಾಲೆಯಲ್ಲಿ ಮತ್ತದೇ ರಾಗಾಲಾಪ!

ರಾಹುಲ್ ಗಾಂಧಿ ವಿದೇಶಕ್ಕೆ ಹೋಗುವುದು ಅಪರಾಧವಲ್ಲ, ಆದರೆ ಹಾಗೆ ತೆರಳಿದಾಗೆಲ್ಲ ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ದುರ್ಬಲಗೊಳಿಸುವ ರೀತಿಯಲ್ಲಿ ಮಾತನಾಡುವ ವ್ಯಕ್ತಿಗಳನ್ನು ಭೇಟಿ ಮಾಡಲು ಏಕೆ ಆಯ್ಕೆ ಮಾಡುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಲಿ; ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಇಂಥ ಭಾರತ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸುವ ಮೂಲಕ ಭಾರತದ ವಿರುದ್ಧ ಪಿತೂರಿ ನಡೆಸುತ್ತಿರುವಂತೆ ಭಾಸವಾಗುತ್ತಿದೆ ಎನ್ನುತ್ತಿದ್ದಾರೆ ಬಿಜೆಪಿ ನಾಯಕರು.

ದೆಹಲಿಯಲ್ಲಿ ಮತಗಳ್ಳತನದ ಹೋರಾಟಕ್ಕೆ ಮಂಗಳ ಹಾಡಿ, 'ಮನ್ರೇಗಾ' ಯೋಜನೆಯ ಹೆಸರು ಬದಲಾವಣೆಯ ಹೋರಾಟಕ್ಕೆ ನಾಂದಿ ಹಾಡಿ, ಕರ್ನಾಟಕದ ಅಧಿಕಾರ ಹಸ್ತಾಂತರದ ವಿಷಯವನ್ನು ಅಡ್ಡಗೋಡೆಯ ಮೇಲಿಟ್ಟು, ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಯುತ್ತಿರುವಾಗಲೇ ವಿರೋಧಪಕ್ಷದ ನಾಯಕರು ಜರ್ಮನಿಯ ಪ್ರವಾಸಕ್ಕೆ ತೆರಳಿದ್ದರು. ರಾಹುಲ್ ಗಾಂಧಿ ತಮ್ಮ ವಿದೇಶ ಪ್ರವಾಸದ ಸಂದರ್ಭದಲ್ಲಿ ಭಾರತದ ತನಿಖಾ ಸಂಸ್ಥೆಗಳು, ಚುನಾವಣಾ ಆಯೋಗ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ದುರವಸ್ಥೆಯನ್ನು ಮತ್ತೆ ದೂಷಿಸಿದ್ದಾರೆ. ಅವರು ಹೀಗೆ ವಿದೇಶದಲ್ಲಿ ಭಾರತದ ಆಡಳಿತ ವ್ಯವಸ್ಥೆಯನ್ನು ದೂಷಿಸುವುದು ಇದೇನು ಮೊದಲ ಬಾರಿಯಲ್ಲ. ಹಿಂದೆಯೂ ಮಾಡಿದ್ದಾರೆ, ಈಗಲೂ ಅದರ ಪುನರಾವರ್ತನೆಯಾಗಿದೆ ಅಷ್ಟೇ. ಅದರೆ ಈ ಬಾರಿ ಅವರ ಭಾಷಣ ಅಸ್ಖಲಿತವಾಗಿತ್ತು, ಉತ್ತಮ ಇಂಗ್ಲಿಷ್‌ನ ಪ್ರದರ್ಶನವಿತ್ತು, ಉದ್ವೇಗವಿರಲಿಲ್ಲ ಎನ್ನುವುದು ಗಮನಿಸಬಹುದಾದ ಅಂಶವಾಗಿತ್ತು.

ಮೊನ್ನೆ ರಷ್ಯಾ ಅಧ್ಯಕ್ಷ ಪುಟಿನ್ ಅವರ ಭಾರತದ ಭೇಟಿಯ ಸಂದರ್ಭದಲ್ಲಿ, ವಿರೋಧಪಕ್ಷದ ನಾಯಕನಿಗೆ ವಿದೇಶಿ ನಾಯಕನೊಂದಿಗೆ ಸಂವಾದಕ್ಕೆ ಸರಕಾರ ಅವಕಾಶ ಮಾಡಿಕೊಟ್ಟಿಲ್ಲ, ಈ ಮೂಲಕ, ವಿದೇಶಿ ಗಣ್ಯರು ಭಾರತಕ್ಕೆ ಬಂದಾಗ ವಿರೋಧ ಪಕ್ಷದ ನಾಯಕರಿಗೂ ಭೇಟಿಗೆ ಅವಕಾಶ ನೀಡುವ, ಅನಾದಿಯಿಂದ ಇದ್ದ ಒಂದು ಒಳ್ಳೆಯ ಸಂಪ್ರದಾಯಕ್ಕೆ ಬಿಜೆಪಿ ಸರಕಾರ ಕೊಡಲಿಯೇಟು ಕೊಟ್ಟಿದೆ ಎಂದು ಕಾಂಗ್ರೆಸ್ ದೂರಿತ್ತು. ಹೌದಲ್ವಾ? ಸರಕಾರ ಅವಕಾಶ ಮಾಡಿಕೊಡಬೇಕಿತ್ತು ಎಂದು ಆಗ ನಮಗೂ ಅನಿಸಿತ್ತು. ವಿರೋಧ ಪಕ್ಷದ ನಾಯಕನೊಬ್ಬ ವಿದೇಶಿ ನೆಲದಲ್ಲಿ ನಿಂತು ಪದೇ ಪದೆ ತನ್ನದೇ ದೇಶದ ವ್ಯವಸ್ಥೆಗಳ ವಿರುದ್ಧ ಮಾತನಾಡುವುದನ್ನು ನೋಡುವಾಗ, ಇವರಿಗೆ ವಿದೇಶಿ ನಾಯಕನೊಂದಿಗೆ ಸಂವಾದಕ್ಕೆ ಅವಕಾಶ ಮಾಡಿಕೊಟ್ಟರೆ, ಅಲ್ಲೂ ಈತ ತನ್ನ ದೇಶದ ಸರಕಾರದ ವಿರುದ್ಧವೇ ಮಾತನಾಡಿ ದೇಶಕ್ಕೆ ಮುಜುಗುರ ಉಂಟುಮಾಡುತ್ತಿದ್ದರೇನೋ ಅಂತ ಈಗ ಅನಿಸುತ್ತಿದೆ. ಈ ಕಾರಣಕ್ಕಾಗಿಯೇ ಇರಬೇಕು, ಸರಕಾರ ಇಂಥವರನ್ನು ಎಲ್ಲಿಡಬೇಕೋ ಅಲ್ಲಿಟ್ಟಿದ್ದು. ತಾವೇ ದೊಣ್ಣೆ ಕೊಟ್ಟು ಹೊಡೆಸಿಕೊಳ್ಳಲು ಕೇಂದ್ರ ಸರಕಾರದಲ್ಲಿರುವವರೇನು ಮೂರ್ಖರೇ?

ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ಪಕ್ಷದ 'ಪ್ರಬುದ್ಧ ಯುವನಾಯಕ' ರಾಹುಲ್ ಗಾಂಧಿ ಅವರು ಕಳೆದ ಸೋಮವಾರ ಜರ್ಮನಿಯ ಬರ್ಲಿನ್‌ನಲ್ಲಿರುವ ಹರ್ಟಿ ವಿದ್ಯಾಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಭಾರತದಲ್ಲಿ ನಡೆದಿದೆ ಎನ್ನಲಾಗುತ್ತಿರುವ 'ಮತ ಕಳ್ಳತನ'ದ ಕುರಿತು ಹೇಳಿಕೆ ನೀಡಿರುವುದು ಭಾರತದಲ್ಲಿ ವಿವಾದಕ್ಕೆ ಕಾರಣವಾಗಿದೆ. ಭಾರತದ ಸಾಂಸ್ಥಿಕ ಚೌಕಟ್ಟಿನ ಮೇಲೆ ಸರಕಾರದಿಂದ ನಿರಂತರವಾಗಿ ಪೂರ್ಣಪ್ರಮಾಣದ ದಾಳಿ ನಡೆಯುತ್ತಿದೆ ಎಂದು ಅವರು ಹೇಳಿದ್ದಾರೆ. ಬಿಜೆಪಿ ನೇತೃತ್ವದ ಸರಕಾರದ ಅವಧಿಯಲ್ಲಿ ನಡೆದ ಚುನಾವಣೆಗಳಲ್ಲಿನ ಅಕ್ರಮಗಳ ಬಗ್ಗೆ ತಮ್ಮ ಆರೋಪಗಳನ್ನು ಅವರು ಅಲ್ಲಿಯೂ ಪುನರಾವರ್ತಿಸಿದರು. ಕಾಂಗ್ರೆಸ್ ಪಕ್ಷವು ಭಾರತದ ಚುನಾವಣಾ ಆಯೋಗದ ಪ್ರಾಮಾಣಿಕತೆಯ ಬಗ್ಗೆ ಪದೇ ಪದೆ ಕಳವಳ ವ್ಯಕ್ತಪಡಿಸುತ್ತಿದ್ದರೂ ಅತ್ತಕಡೆಯಿಂದ ಪ್ರತಿಕ್ರಿಯೆ ಮಾತ್ರ ಬರುತ್ತಿಲ್ಲ ಎಂದು ಅವರು ಹೇಳಿದರು. ಮೂಲಭೂತವಾಗಿ, ಭಾರತೀಯರೆಲ್ಲ ಸಮಾನರು ಎಂದು ಬಿಜೆಪಿಗರು ನಂಬುವುದಿಲ್ಲ, ಆಡಳಿತ ಪಕ್ಷವು ದಲಿತರು ಮತ್ತು ಮೇಲ್ಜಾತಿಯ ನಾಗರಿಕರನ್ನು ಸಮಾನವಾಗಿ ನೋಡುವುದಿಲ್ಲ ಎಂದು ಹೇಳಿದ ರಾಹುಲ್ ಗಾಂಧಿ, ಈ ದೃಷ್ಟಿಕೋನವು ದೋಷಪೂರಿತವಾಗಿದೆ ಮತ್ತು ದೇಶದಲ್ಲಿ ಗಂಭೀರವಾದ ಸಾಮಾಜಿಕ ಉದ್ವಿಗ್ನತೆಯನ್ನು ಸೃಷ್ಟಿಸುವ ಅಪಾಯವಿದೆ ಎಂದು ಹೇಳಿದರು.

ತನಿಖಾ ಸಂಸ್ಥೆಗಳನ್ನು ಕೇಂದ್ರ ಸರಕಾರ ಆಯುಧವನ್ನಾಗಿ ಮಾಡಿಕೊಂಡಿದೆ, ನಮ್ಮ ಗುಪ್ತಚರ ಸಂಸ್ಥೆಗಳಾದ 'ಇ.ಡಿ' ಮತ್ತು ಸಿಬಿಐಗಳನ್ನು ವಿರೋಧಪಕ್ಷಗಳ ವಿರುದ್ಧ ಶಸ್ತ್ರಾಸ್ತ್ರವಾಗಿ ಬಳಸಲಾಗುತ್ತಿದೆ, ಈ ಸಂಸ್ಥೆಗಳಿಂದ ಬಿಜೆಪಿ ವಿರುದ್ಧ ಒಂದೂ ಪ್ರಕರಣ ದಾಖಲಾಗುವುದಿಲ್ಲ; ಆದರೆ ಹೆಚ್ಚಿನ ಪ್ರಕರಣಗಳು ಅವರನ್ನು ರಾಜಕೀಯವಾಗಿ ವಿರೋಧಿಸುವವರ ವಿರುದ್ಧವಾಗಿ ಮಾತ್ರ ದಾಖಲಾಗುತ್ತವೆ, ಕಾಂಗ್ರೆಸ್ ಅನ್ನು ಬೆಂಬಲಿಸುವ ಉದ್ಯಮಿಗಳು ಇಂದು ಸರಕಾರದಿಂದ ಬೆದರಿಕೆಯನ್ನು ಎದುರಿಸುತ್ತಿದ್ದಾರೆ, ಇದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಮೇಲಿನ ದಾಳಿ ಎನ್ನುವುದು ರಾಹುಲ್ ಗಾಂಧಿಯವರ ದೂರು.

ಒಬ್ಬ ವ್ಯಕ್ತಿಯ ಇಚ್ಛೆಗೆ ಅನುಗುಣವಾಗಿ ಭಾರತವನ್ನು ಮುನ್ನಡೆಸಲು ಸಾಧ್ಯವಿಲ್ಲ ಎಂದು ನಂಬುವ ಲಕ್ಷಾಂತರ ಜನ ದೇಶದಲ್ಲಿ ಇನ್ನೂ ಇದ್ದಾರೆ, ರಾಜ್ಯ ರಾಜ್ಯಗಳ ನಡುವಿನ ಸಂವಾದದ ಮೂಲಕ ದೇಶ ಕಾರ್ಯನಿರ್ವಹಿಸುವ ಮಾದರಿಯ ಅಗತ್ಯವಿದೆ ಎಂದು ಅವರು ಪ್ರತಿಪಾದಿಸಿದರು. ಪ್ರಧಾನಿ ಮೋದಿಯವರನ್ನು ಇಂದು ಭಾರತದಲ್ಲಿನ ಜನರು ಬೆಂಬಲಿಸುತ್ತಿದ್ದಾರೆ ಎನ್ನುವುದು ನಿಜವಾದರೂ, ಅವರ ಸಿದ್ಧಾಂತ ಮತ್ತು ದೇಶದ ಕುರಿತ ದೃಷ್ಟಿಕೋನವನ್ನು ಒಪ್ಪದ ದೊಡ್ಡ ವರ್ಗವೂ ದೇಶದಲ್ಲಿದೆ. ಭಾರತದಲ್ಲಿ ಉತ್ಪಾದನೆ ಹೆಚ್ಚಳ ಮಾಡಿದರೆ ಉದ್ಯೋಗ ಹೆಚ್ಚಿಸಬಹುದು. ಆದರೆ ಬಿಜೆಪಿಯು ಅದಾನಿ, ಅಂಬಾನಿಗಳ ಕೈಗೆ ಅಧಿಕಾರ ನೀಡಿದೆ. ಭಾರತದಲ್ಲಿ, ಅಂಬಾನಿ ಅಥವಾ ಅದಾನಿ ಮುಂತಾದ ಉದ್ದಿಮೆದಾರರು ಉತ್ಪಾದಕತೆಯಲ್ಲಿ ತೊಡಗದೇ ಹೆಚ್ಚಿನವರು ಕೇವಲ ಚೀನಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ, ಹಾಗಾಗಿ ಭಾರತದ ಉದ್ಯೋಗ ಮಾರುಕಟ್ಟೆ ಹದಗೆಟ್ಟಿದೆ ಎಂದು ನಮಗಿಂತ ಆರ್ಥಿಕ ಸ್ಥಿತಿಗತಿ ಹದಗೆಟ್ಟಿರುವ ಜರ್ಮನ್ನರ ಮುಂದೆ ರಾಹುಲ್ ಅಭಿಪ್ರಾಯಪಟ್ಟರು. ಈಗ ಇರುವ ಜಿಎಸ್‌ಟಿ ಸಂಪೂರ್ಣ ಉತ್ಪಾದಕ ಮತ್ತು ಗ್ರಾಹಕ ವರ್ಗದ ವಿರೋಧಿಯಾಗಿದೆ ಎಂದೂ ಟೀಕಿಸಿದರು.

'ಕಾಂಗ್ರೆಸ್ ನಾಯಕ ವಿದೇಶಿ ನೆಲದಲ್ಲಿ ಭಾರತದ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದ್ದಾರೆ' ಎಂದು ಭಾರತೀಯ ಜನತಾ ಪಕ್ಷವು ಆರೋಪಿಸಿದೆ. ಅವರ ಹೇಳಿಕೆಗಳನ್ನು ಬೇಜವಾಬ್ದಾರಿಯುತ ಮತ್ತು ರಾಷ್ಟ್ರ ವಿರೋಧಿ ಎಂದು ಕರೆದಿದೆ. ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ವಿರೋಧ ಪಕ್ಷದ ನಾಯಕನಾಗಿ ಕಾರ್ಯನಿರ್ವಹಿಸುತ್ತಿಲ್ಲ, ಆದರೆ ದೇಶದ ವಿರುದ್ಧ ಮಾತನಾಡಲು ಆಗಾಗ ವಿದೇಶಕ್ಕೆ ಪ್ರಯಾಣಿಸುವ 'ಭಾರತ ವಿರೋಧಿ ನಾಯಕ' ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗೆ ಮಾಡುವುದರಿಂದ ಆತ ಏನು ಗಳಿಸುವ ಗುರಿಯನ್ನು ಹೊಂದಿದ್ದಾರೆ ಎನ್ನುವುದು ತಿಳಿಯುತ್ತಿಲ್ಲ, ಅವರು ಈಗಲೂ ಚಿಕ್ಕ ಮಗುವಿನಂತೆ ವರ್ತಿಸುತ್ತಿದ್ದಾರೆಯೇ ಹೊರತು ಒಬ್ಬ ಗೌರವಾನ್ವಿತ ನಾಯಕನಂತೆ ಅಲ್ಲ ಎಂದು ಅದು ಹೇಳಿದೆ. ರಾಹುಲ್ ಗಾಂಧಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ವರ್ಚಸ್ಸನ್ನು ಹಾಳುಮಾಡಲು ಪ್ರಯತ್ನಿಸುತ್ತಿದ್ದಾರೆ; ತಾವು ವಿರೋಧ ಪಕ್ಷದ ನಾಯಕ ಎನ್ನುವುದನ್ನು ಮರೆತು ಕೇವಲ ಪ್ರಚಾರ ನಾಯಕ ಎಂದು ತಿಳಿದಂತಿದೆ. ಅವರು ವಿದೇಶಕ್ಕೆ ಹೋದಾಗಲೆಲ್ಲಾ ಪ್ರಧಾನಿ, ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಮತ ಕಳ್ಳತನದ ಬಗ್ಗೆ ಟೀಕಿಸುತ್ತಿರುವುದನ್ನು ನೋಡುವಾಗ, ಅವರ ಗುರಿ ಭಾರತವನ್ನು ಅವಮಾನಿಸುವುದು ಮಾತ್ರ ಅಂತ ತಿಳಿಯುತ್ತದೆ ಎನ್ನುವುದು ಬಿಜೆಪಿಗರ ಅಂಬೋಣ.

ರಾಹುಲ್ ಗಾಂಧಿ ವಿದೇಶಕ್ಕೆ ಹೋಗುವುದು ಅಪರಾಧವಲ್ಲ, ಆದರೆ ಭಾರತ ವಿರೋಧಿ ಕಾರ್ಯಸೂಚಿ ಹೊಂದಿರುವ ಜನರನ್ನು ಭೇಟಿ ಮಾಡುವುದು ಸರಿಯಲ್ಲ ಎನ್ನುವುದು ಬಿಜೆಪಿ ನಾಯಕರ ವಾದ. ರಾಹುಲ್ ಗಾಂಧಿ ಅವರ ಇತ್ತೀಚಿನ ಜರ್ಮನಿ ಪ್ರವಾಸದಲ್ಲಿ ರಾಜಕೀಯ ವಿಜ್ಞಾನಿ ಕಾರ್ನೆಲಿಯಾ ವೋಲ್‌ರನ್ನು ಭೇಟಿಯಾಗಿರುವುದನ್ನು ಅವರು ಪ್ರಶ್ನಿಸುತ್ತಾರೆ. ಇವರು ಅಮೆರಿಕದ ಬಿಲಿಯನೇರ್ ಜಾರ್ಜ್ ಸೊರೊಸ್ ಅವರ ಓಪನ್ ಸೊಸೈಟಿ ಫೌಂಡೇಷನ್‌ನಿಂದ ಧನಸಹಾಯ ಪಡೆದಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ ರಾಹುಲ್ ಗಾಂಧಿ ಇಂಥ ಭಾರತ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸುವ ಮೂಲಕ ಭಾರತದ ವಿರುದ್ಧ ಪಿತೂರಿ ನಡೆಸುತ್ತಿರುವಂತೆ ಭಾಸವಾಗುತ್ತಿದೆ. ರಾಹುಲ್ ಗಾಂಧಿ ವಿದೇಶಕ್ಕೆ ಭೇಟಿ ನೀಡಿದಾಗಲೆಲ್ಲಾ, ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ದುರ್ಬಲಗೊಳಿಸುವ ರೀತಿಯಲ್ಲಿ ಮಾತನಾಡುವ ವ್ಯಕ್ತಿಗಳನ್ನು ಭೇಟಿ ಮಾಡಲು ಏಕೆ ಆಯ್ಕೆ ಮಾಡುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಲಿ ಎಂದು ಬಿಜೆಪಿ ನಾಯಕರು ಕೇಳುತ್ತಿದ್ದಾರೆ.

ಹೀಗೆ ವಿದೇಶದಲ್ಲಿ ನಿಂತು ತನ್ನದೇ ದೇಶದ ವಿರುದ್ಧ ಮಾತನಾಡುವುದರಿಂದ ರಾಹುಲ್ ಗಾಂಧಿ ಹಾಗೂ ಅವರ ಪಕ್ಷ ಗಳಿಸುವುದಾದರೂ ಏನು ಎನ್ನುವುದನ್ನು ಅವರೇ ಹೇಳಬೇಕು. ಬರ್ಲಿನ್ ವಿದ್ಯಾರ್ಥಿಗಳ ಮುಂದೆ ಅಳಲು ತೋಡಿಕೊಂಡರೆ, ಭಾರತದ ಉದ್ಧಾರಕ್ಕೆ ಯಾವ ಕಾಣಿಕೆಯನ್ನು ಅವರು ಹೇಗೆ ನೀಡಬಲ್ಲರೋ? ಇದನ್ನು ರಾಹುಲ್ ಗಾಂಧಿಯವರೇ ಹೇಳಬೇಕು. ದೇಶದ ಮತದಾರರ ವಿಶ್ವಾಸ ಗಳಿಸಲು ಸಾಧ್ಯವಾಗದೇ, ಭವಿಷ್ಯದ ಚುನಾವಣೆಗಳಲ್ಲಿಯೂ ತಮ್ಮ ಪಕ್ಷ ಗೆಲ್ಲುವುದು ಸಾಧ್ಯವೇ ಇಲ್ಲ ಎಂದು ಮನದಟ್ಟಾದವರು ಮಾತ್ರ ಹೀಗೆಲ್ಲ ಮಾಡಲು ಸಾಧ್ಯ. ಅದಲ್ಲದಿದ್ದರೆ, ವಿದೇಶದಲ್ಲಿ ಭಾರತವನ್ನು ತೆಗಳುವ ಚಾಳಿಯಿಂದ ಸ್ವತಃ ರಾಹುಲ್ ಗಾಂಧಿ ಅಥವಾ ಅವರ ಪಕ್ಷ ಗಳಿಸುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು ಎನ್ನುವುದು ಪಕ್ಷದಲ್ಲಿ ಯಾರಿಗೂ ಅರ್ಥವಾಗದಿರುವುದು ಚೋದ್ಯದ ಸಂಗತಿಯಾಗಿದೆ. 'ಚೌಕೀದಾರ್ ಚೋರ್ ಹೈ' ಆಯ್ತು, ಆಮೇಲೆ ಅಂಬಾನಿ–

ಅದಾನಿಯಗಳ ವಿಷಯವಾಯ್ತು, ವೋಟ್ ಚೋರಿಯ ಪ್ರಹಸನವಾಯ್ತು, ಈಗ 'ಮನ್ರೇಗಾ' ಯೋಜನೆಯಿಂದ ಮಹಾತ್ಮ ಗಾಂಧಿಯವರ ಹೆಸರು ಕೈಬಿಟ್ಟಿದ್ದಕ್ಕೆ ಕ್ಯಾತೆ ಶುರುವಾಗಿದೆ. ಅಂತೂ ಮೇಲೆ ತಿಳಿಸಿದ ಯಾವ ವಿಷಯವನ್ನೂ ನ್ಯಾಯಾಲಯ ಮುಂತಾದ ಸಾಂವಿಧಾನಿಕ ವ್ಯವಸ್ಥೆಯನ್ನು ಬಳಸಿಕೊಂಡು ಒಂದು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋದ ಉದಾಹರಣೆಯೇ ಇಲ್ಲ. ಬರೀ ಮಾತು, ಮಾತು, ಮಾತು. ಒಂದು ಕಡೆ ರಾಹುಲ್ ಗಾಂಧಿ ವಿದೇಶಗಳಿಗೆ ಹೋಗುವುದು, ಭಾರತ ವಿರೋಧಿ ಭಾಷಣ ಮಾಡುವುದು, ಭಾರತದ ಪ್ರಧಾನಮಂತ್ರಿ ಮೋದಿಯವರನ್ನು ಹಳಿಯುವುದು ಮಾಡುತ್ತಿದ್ದರೆ, ಇನ್ನೊಂದು ಕಡೆ ಅದೇ ದೇಶದ ಸರಕಾರಗಳು ಮೋದಿಯವರನ್ನು ಕರೆಸಿಕೊಂಡು ದೇಶದ ಅತ್ಯುನ್ನತ ಗೌರವಪ್ರಶಸ್ತಿಯನ್ನು ಕೊಡುವುದು ನಡೆದೇ ಇದೆ. ದೇಶದ ಹಾಗೂ ಪ್ರಧಾನ ಮಂತ್ರಿಗಳ ವರ್ಚಸ್ಸಿಗೆ ಎಳ್ಳುಕಾಳಿನಷ್ಟೂ ಧಕ್ಕೆಯಾಗಿಲ್ಲ.

ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೂ ವಿರೋಧ ಪಕ್ಷದ ನಾಯಕರು ವಿದೇಶ ಪ್ರವಾಸ ಮಾಡಿದ್ದಿದೆ. ಆಗೆಲ್ಲ, ಅವರು ಭಾರತದಲ್ಲಿ ಕೇಂದ್ರ ಸರಕಾರ ವಿರೋಧಪಕ್ಷಗಳ ಎಷ್ಟು ಸರಕಾರಗಳನ್ನು ಅಸಾಂವಿಧಾನಿಕವಾಗಿ ಬೀಳಿಸಿದೆ, ತುರ್ತುಪರಿಸ್ಥಿತಿಯಲ್ಲಿ ವಿರೋಧ ಪಕ್ಷದವರನ್ನು ಹಾಗೂ ಮಾಧ್ಯಮವನ್ನು ಎಷ್ಟು ಕೆಟ್ಟದಾಗಿ ನೋಡಿಕೊಳ್ಳಲಾಗಿದೆ, ಸರಕಾರದ ಮುಂದಾಳತ್ವದಲ್ಲೇ ಸಿಖ್ಖರ ನರಮೇಧ ಹೇಗಾಯಿತು ಮುಂತಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆಯೇ? ಈ ಹುಳುಕುಗಳನ್ನೆಲ್ಲ ದೇಶದ ಜನರ ಮುಂದೆ ತಂದು ಚುನಾವಣೆಗಳಲ್ಲಿ ಹೋರಾಡಿದ್ದಾರೆಯೇ ಹೊರತು ವಿದೇಶಿ ನೆಲದಲ್ಲಿ ನಿಂತು ಭಾರತವನ್ನು ಜರಿಯುವ ಕೆಲಸ ಮಾಡಿರಲಿಲ್ಲ.

ವಿರೋಧ ಪಕ್ಷದ ನಾಯಕನಿಗೆ ಹೆಚ್ಚಿನ ಜವಾಬ್ದಾರಿ ಇರಬೇಕಾಗುತ್ತದೆ. ಆತ ಸರಕಾರ ಮತ್ತು ವಿವಿಧ ವಿರೋಧ ಪಕ್ಷಗಳ ನಡುವಿನ ಸೇತುವೆಯಾಗಿ ಕೆಲಸ ಮಾಡಬೇಕಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ, ವಿರೋಧ ಪಕ್ಷದ ನಾಯಕನು ಸರಕಾರದ ಸವಲತ್ತು, ಸಂಬಳ ಹಾಗೂ ಇತರ ಸೌಲಭ್ಯಗಳನ್ನು ಬಳಸುತ್ತಿರುತ್ತಾನೆ. ಹೆಚ್ಚು ಕಡಿಮೆ ಸಂಪುಟ ದರ್ಜೆಯ ಸಚಿವರಿಗಿರುವ ಸವಲತ್ತುಗಳನ್ನು ಆತ ಅನುಭವಿಸುತ್ತಿರುತ್ತಾನೆ. ಹಾಗಾಗಿ ಅವನ ಉತ್ತರದಾಯಿತ್ವ ಉಳಿದವರಿಗಿಂತ ಹೆಚ್ಚಾಗಿರುತ್ತದೆ. ಇವರು ಮಣಿಶಂಕರ್ ಅಯ್ಯರ್ ಅಥವಾ ದಿಗ್ವಿಜಯ್ ಸಿಂಗ್ ಮಾತಾಡಿದಂತೆ ದೇಶದ ಕುರಿತು ಹಗುರವಾಗಿ ಮಾತಾಡುವುದನ್ನು ಯಾರೂ ಒಪ್ಪುವುದಿಲ್ಲ. ನಮಗೊಂದೇ ಅಲ್ಲ, ಈ ಯಪ್ಪ ಯಾಕೆ ಪದೇ ಪದೆ ಹೀಗೆ ವಿದೇಶಿ ನೆಲದಲ್ಲಿ ನಿಂತು ಸ್ವದೇಶವನ್ನು ಜರಿದು, ತಮ್ಮ ಮರ್ಯಾದೆಯನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೇ, ಪಕ್ಷದ ಮಾನವನ್ನೂ ಹರಾಜು ಹಾಕುತ್ತಾರೆ ಎಂದು ಅವರ ಪಕ್ಷದ ಪ್ರಜ್ಞಾವಂತರಿಗೂ ಅನಿಸಬಹುದು. ಆದರೆ ಬಹಿರಂಗವಾಗಿ ಮಾತಾಡುವ ಹಾಗಿಲ್ಲ ಅಷ್ಟೆ. ರಾಹುಲ್ ಗಾಂಧಿ ಎಷ್ಟೇ ಕ್ಷುಲ್ಲಕವಾಗಿ ಮಾತಾಡಿದರೂ ಅದನ್ನು ಸಮರ್ಥನೆ ಮಾಡಿಕೊಂಡಿರುವವನಿಗೇ ಪಕ್ಷದಲ್ಲಿ ಮಣೆ ಎನ್ನುವುದನ್ನು ತಿಳಿದು ಸುಮ್ಮನಿರಬೇಕಷ್ಟೆ.

ಬಿಹಾರ ಚುನಾವಣೆಯಲ್ಲಿನ ಘನಘೋರ ಸೋಲಿನ ನೈತಿಕ ಹೊಣೆ ಹೊರಿಸಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ರಾಜೀನಾಮೆ ಪಡೆಯಬಹುದು ಎಂದು ನಿರೀಕ್ಷಿಸಲಾಗಿತ್ತು. ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ರಾಜೀನಾಮೆ ಕೊಟ್ಟು, ಅವರ ಜಾಗದಲ್ಲಿ ಪ್ರಿಯಾಂಕಾ ಗಾಂಧಿಯವರನ್ನು ತಂದು ಕುಳ್ಳಿರಿಸಲಾಗುವುದು ಎನ್ನುವ ಮಾತೂ ಓಡಾಡುತ್ತಿತ್ತು. ಆದರೆ ಅದಾವುದೂ ಆಗಲಿಲ್ಲ. ಬಿಹಾರದಲ್ಲಿ ಚುನಾವಣೆಗಿಂತ ಮೊದಲೇ ಕಾಂಗ್ರೆಸ್ ಸೋಲೊಪ್ಪಿಕೊಂಡಾಗಿತ್ತು, ಹಾಗಾಗಿಯೇ ಸೋಲಿನ ಕಾರಣ ಹುಡುಕುವ ಆತ್ಮವಿಮರ್ಶೆಯ ಸಭೆಯನ್ನು ಕಾಂಗ್ರೆಸ್ ಕಾಟಾಚಾರಕ್ಕೂ ಮಾಡಿದಂತಿಲ್ಲ. ವಿಮರ್ಶೆ ಮಾಡುವುದಾದರೆ, ಬಿಹಾರದ ಸೋಲಿಗಲ್ಲ, ಒಂದಾದಮೇಲೆ ಒಂದು ರಾಜ್ಯಗಳ ಚುನಾವಣೆಗಳಲ್ಲಿ ಪಕ್ಷ ಮಕಾಡೆ ಮಲಗುತ್ತಿದ್ದರೂ, ಕಳೆದ ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿ ಅಷ್ಟು ಸ್ಥಾನಗಳು ತಮಗೆ ಹೇಗೆ ಬಂತು ಎನ್ನುವುದನ್ನು ತಿಳಿಯಲು ಜಿಜ್ಞಾಸೆ ಮಾಡುವುದೊಳಿತು ಎಂದು ವಿರೋಧಪಕ್ಷಗಳು ಲೇವಡಿ ಮಾಡಿರುವುದೂ ಇದೆ. ಅದೂ ನಿಜವೇ! ಲೋಕಸಭಾ ಚುನಾವಣೆಯಲ್ಲಿ ನೂರು ಸ್ಥಾನಗಳನ್ನು ಕಾಂಗ್ರೆಸ್ ಗೆದ್ದಿದ್ದು ಹೇಗೆ ಎನ್ನುವುದು ವಿಮರ್ಶಕರಿಗೆ ಇನ್ನೂ ಒಗಟಾಗೇ ಉಳಿದಿದೆ.

ಕಾಂಗ್ರೆಸ್ ಪಕ್ಷವು, ಕರ್ನಾಟಕವನ್ನೂ ಸೇರಿ ಅಧಿಕಾರದಲ್ಲಿರುವುದೇ ಮೂರು ರಾಜ್ಯಗಳಲ್ಲಿ, ಅಲ್ಲೂ ಸರಕಾರಗಳು ಗ್ಯಾರಂಟಿಗಳ ಭಾರದಿಂದ ಬಸವಳಿದು ನಿಂತಿವೆ. ಅನೇಕ ಪ್ರತಿಭಾವಂತ ಯುವನಾಯಕರು ಪಕ್ಷವನ್ನು ತೊರೆದು ಹೋಗಿಯಾಗಿದೆ, ಇನ್ನೊಂದಷ್ಟು ಜನ ಹೊರಹೋಗುವ ತಯಾರಿಯಲ್ಲಿದ್ದಾರೆ. ದಶಕಗಳಿಂದ ಬೇರೆ ಪಕ್ಷಗಳಿಂದ ಪ್ರಭಾವಿ ನಾಯಕರು ಕಾಂಗ್ರೆಸ್ಸನ್ನು ಸೇರಿರುವ ವರ್ತಮಾನವಿಲ್ಲ. ಮೂರು ಮತ್ತೊಬ್ಬರು ಸೇರಿ ಪಕ್ಷ ನಡೆಸುವಲ್ಲಿ ಹರಸಾಹಸ ಪಡುತ್ತಿರುವ ಈ ಹೊತ್ತಿನಲ್ಲಿ ಕಾಂಗ್ರೆಸ್ ಇರುವಾಗ, ರಾಹುಲ್ ಗಾಂಧಿಯವರು ಭಾರತದ ಸ್ಥಿತಿಗತಿಗಳ ಬಗ್ಗೆ ಜರ್ಮನ್ನರಿಗೆ ಪಾಠ ಮಾಡುತ್ತಿರುವುದು ನೋಡಿದರೆ, 'ತಿನ್ನುವುದು ಬದನೇಕಾಯಿಯಾದರೂ ಹೇಳುವುದು ಮಾತ್ರ ಪುರಾಣ' ಎನ್ನುವ ನಾಣ್ಣುಡಿ ನೆನಪಾಗುತ್ತಿದೆ...!!

ಅಟಲ್‌ಜೀ ಜತೆಗಿನ ದಶಕಗಳ ಹಿಂದಿನ ಸವಿಸವಿ ನೆನಪು, ಸಾವಿರ ನೆನಪು...

ಇವತ್ತು ನಮಗೆ ನಮ್ಮ ರಾಜ್ಯ ಸೇರಿದಂತೆ ಕೆಲವು ರಾಜ್ಯಗಳಲ್ಲಿ 'ಉಚಿತ ಕೊಡುಗೆಗಳ' ಅಬ್ಬರ ಕಾಣುತ್ತಿದೆ. ಆದರೆ 'ಮೀನು ನೀಡುವುದಕ್ಕಿಂತ, ಮೀನು ಹಿಡಿಯುವುದನ್ನು ಕಲಿಸಬೇಕು' ಎಂಬುದು ಅಟಲ್‌ಜೀ ಅವರ ತತ್ವವಾಗಿತ್ತು. ಅಲ್ಪಾವಧಿಯ ಲಾಭಕ್ಕಾಗಿ ಉಚಿತಗಳನ್ನು ಕೊಡುವ ಬದಲು, ದೇಶಕ್ಕೆ ಶಾಶ್ವತ ಆಸ್ತಿಗಳನ್ನು ಕೊಡುವುದು ಅವರ ಹಾದಿಯಾಗಿತ್ತು. ಅಧಿಕಾರಗಳು ಬರುತ್ತವೆ, ಹೋಗುತ್ತವೆ; ಆದರೆ ರಾಷ್ಟ್ರ ಶಾಶ್ವತವಾಗಿರಬೇಕು ಎಂಬ ಆ ಮಹಾನ್ ಚೇತನದ ಹಾದಿಯೇ ನಮಗೆ ಇಂದಿಗೂ ಮತ್ತು ಎಂದಿಗೂ ದಾರಿದೀಪ.

ಬನ್ನಿ, 4 ದಶಕಗಳ ಸುವರ್ಣ ಕ್ಷಣಗಳ ಹಿಂದೆ ಹೋಗೋಣ.

ಕಣ್ಣು ಮುಚ್ಚಿ ಒಂದು ಕ್ಷಣ ಕಲ್ಪಿಸಿಕೊಳ್ಳಿ. ನಾವು 1984ರ ಬೆಂಗಳೂರಿನಲ್ಲಿದ್ದೇವೆ. ಸಂಜೆ ಮಂದವಾದ ಬೆಳಕು. ಲೋಕಸಭಾ ಚುನಾವಣೆಯ ಸೋಲಿನಿಂದ ಇಡೀ ಬಿಜೆಪಿ ಪಕ್ಷವೇ ಕಂಗಾಲಾಗಿದೆ. ನಾಯಕ ಅಟಲ್‌ಜೀ ಸೋತಿದ್ದಾರೆ, ಸಂಸತ್ತಿನಲ್ಲಿ ನಮ್ಮ ಪಕ್ಷದಿಂದ ಕೇವಲ ಇಬ್ಬರೇ ಉಳಿದಿದ್ದೇವೆ. ಎಲ್ಲರೂ ಮುಗಿದುಹೋಯಿತು ಅಂದುಕೊಂಡಾಗ, ಅಟಲ್‌ಜೀ ಎದ್ದು ನಿಂತು ಮೌನ ಮುರಿಯುತ್ತಾರೆ. ಅವರ ಆ ಸಿಂಹಗರ್ಜನೆ ಕೇಳಿ– 'ನಾ ದೈನ್ಯಂ, ನಾ ಪಲಾಯನಂ' (ನಾನು ದಯೆಯನ್ನು ಬೇಡುವುದಿಲ್ಲ, ನಾನು ರಣರಂಗದಿಂದ ಹಿಂಜರಿಯುವುದಿಲ್ಲ) ಎಂಬ ಮಾತು ನೆನಪಾಯಿತು. ಸೋಲನ್ನೂ ಗೆಲುವಾಗಿಸುವ ಆ ವಿಶ್ವಾಸವೇ ಅವರನ್ನು ಮತ್ತೆ ಪ್ರಧಾನಿಯ ಗದ್ದುಗೆಗೆ ತಂದು ನಿಲ್ಲಿಸಿತು.

ಇನ್ನೊಂದು ದೃಶ್ಯ. ನಾವು ಶಿವಮೊಗ್ಗದ ನಮ್ಮ ಮನೆಯ ಅಡುಗೆಮನೆಯಲ್ಲಿದ್ದೇವೆ. ಅಟಲ್‌ಜೀ ಅವರೇ ಸ್ವತಃ ಚಹಾ ತಯಾರಿಸುತ್ತಿದ್ದಾರೆ. ''ಶಂಕರಮೂರ್ತಿಯವರೇ, ಬನ್ನಿ... ನಮ್ಮ ಶೈಲಿಯಲ್ಲಿ ಚಹಾ ಮಾಡುವುದನ್ನು ಕಲಿಸುತ್ತೇನೆ'' ಎಂದು ಅವರು ನಗುತ್ತಾ ಹೇಳುವಾಗ, ಆ ಮುಗುಳ್ನಗು ಅವರ ವಿಶ್ವವಿಖ್ಯಾತ ವ್ಯಕ್ತಿತ್ವಕ್ಕಿಂತ ಅವರ ಸರಳತೆಯನ್ನು ನಮಗೆ ಪರಿಚಯಿಸುತ್ತದೆ. ಬಿಸಿಬಿಸಿ ರಸಂ ಸವಿಯುತ್ತಾ, ಜೋಗ ಜಲಪಾತದ ಕುರಿತಾದ ಸುಂದರ ಕವಿತೆಗಳನ್ನು ಅವರು ಅಲ್ಲಿಯೇ ಗುನುಗುತ್ತಿದ್ದರು.

• ಸಮಾನತೆಯ ಮಹಾಪರ್ವ: ಒಂದು ಚಪಾತಿಯಲ್ಲಿ ಅಡಗಿದ್ದ ಮಾನವೀಯತೆ

1984ರ ದಿನಗಳು ಅವು. ಕರ್ನಾಟಕದಲ್ಲಿ ಬಿಜೆಪಿ ಬೆಳೆಯುತ್ತಿದ್ದ ಕಾಲವದು. ಅಟಲ್‌ಜೀ ಅವರು ಚುನಾವಣಾ ಪ್ರಚಾರಕ್ಕಾಗಿ ರಾಜ್ಯಕ್ಕೆ ಬಂದಾಗ, ಶಿವಮೊಗ್ಗ ಮತ್ತು ಕರಾವಳಿ ಭಾಗ ಸೇರಿದಂತೆ ವಿವಿಧ ಪ್ರದೇಶಗಳನ್ನು ಪರಿಚಯಿಸಲು ಅವರನ್ನು ಕಾರಿನಲ್ಲಿ ಕರೆದೊಯ್ಯುವ ಚಾಲಕನಾಗಿ ನಾನು ಸೇವೆ ಸಲ್ಲಿಸುತ್ತಿದ್ದೆ. ಒಮ್ಮೆ ಪ್ರಯಾಣದ ಮಧ್ಯೆ ಹಸಿವಾದಾಗ ಊಟಕ್ಕಾಗಿ ಹೋಟೆಲ್ ಒಂದರ ಬಳಿ ನಿಲ್ಲಿಸಿದೆವು. ಅಲ್ಲಿ ಕೇವಲ ಒಂದೇ ಒಂದು ಚಪಾತಿ ಉಳಿದಿತ್ತು. ಗೌರವಪೂರ್ವಕವಾಗಿ ನಾನು ಅದನ್ನು ಅವರಿಗೆ ನೀಡಿದಾಗ, ಅವರು ತೋರಿದ ಔದಾರ್ಯ ನನ್ನ ಕಣ್ಣು ತೇವಗೊಳಿಸಿತು. ಅತ್ಯಂತ ಸಹಾನುಭೂತಿಯಿಂದ ನನ್ನತ್ತ ನೋಡಿ, ''ಶಂಕರಮೂರ್ತಿಯವರೇ, ಇದನ್ನು ಎರಡು ಭಾಗ ಮಾಡಿ

ನೆನಪಿನ ದೋಣಿ
ಡಾ. ಡಿ.ಎಚ್. ಶಂಕರಮೂರ್ತಿ
vveditoped@gmail.com

ಇಬ್ಬರೂ ಹಂಚಿಕೊಳ್ಳೋಣ'' ಎಂದರು. ಅಂದು ನನಗೆ ಸಾಕ್ಷಾತ್ಕಾರವಾಗಿದ್ದು– ಸಮಾನತೆ ಎಂಬುದು ಅಟಲ್‌ಜೀ ಅವರ ಭಾಷಣದಲ್ಲಿ ಮಾತ್ರವಲ್ಲ, ಅವರ ರಕ್ತದಲ್ಲೇ ಇತ್ತು.

• ನನ್ನ ಪಾಲಿನ ದಿವ್ಯಸ್ಮರಣೆ: ಶಬ್ದ ಮತ್ತು ನಿಶ್ಶಬ್ದದ ನಡುವಿನ ಅನುಬಂಧ

ಕಳೆದ 25 ವರ್ಷಗಳಿಗೂ ಹೆಚ್ಚು ಕಾಲ ಅಟಲ್‌ಜೀ ಅವರ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಸುಯೋಗ ನನ್ನದಾಗಿತ್ತು. ವೇದಿಕೆಯ ಮೇಲೆ ಅವರು ಹಿಂದಿಯಲ್ಲಿ ಗರ್ಜಿಸುತ್ತಿದ್ದರೆ, ಅದರ ಭಾವ ಮತ್ತು ತೀವ್ರತೆ ಕುಂದದಂತೆ ಕನ್ನಡಿಗರಿಗೆ ತಲುಪಿಸುವ ಜವಾಬ್ದಾರಿಯನ್ನು ನಾನು ನಿರ್ವಹಿಸಿದ್ದೇನೆ. ಈ ಪ್ರಕ್ರಿಯೆಯಲ್ಲಿ ನಾನು ಅವರನ್ನು ಅತ್ಯಂತ ಹತ್ತಿರದಿಂದ ಗಮನಿಸಿದ್ದೇನೆ. ಆ ಅಗಾಧವಾದ ಜ್ಞಾನ, ಶಬ್ದಗಳ ಮೇಲಿನ ಹಿಡಿತ ಮತ್ತು ಭವಿಷ್ಯದ ಭಾರತವನ್ನು ಕಟ್ಟುವ ಬಗ್ಗೆ ಅವರಿಗಿದ್ದ ಸ್ಪಷ್ಟವಾದ ದೃಷ್ಟಿಕೋನ ನನ್ನನ್ನು ಸದಾ ಬೆರಗುಗೊಳಿಸುತ್ತಿತ್ತು. ಅವರು ಕೇವಲ ನಾಯಕರಲ್ಲ, ನನ್ನ ಪಾಲಿಗೆ ಒಂದು ಜೀವಂತ ವಿಶ್ವಕೋಶವಾಗಿದ್ದರು

ಈಗ ನಾವು 2000ನೇ ಇಸವಿಯ ಆಡಳಿತದ ದರ್ಬಾರಿಗೆ ಬರೋಣ. ಅಟಲ್‌ಜೀ ಅವರು ಕಡತಗಳ ಮೇಲೆ ಸಹಿ ಮಾಡುತ್ತಿದ್ದಾರೆ. ಆ ಸಹಿಗಳು ಇಂದಿನ ಭಾರತದ ಭವಿಷ್ಯವನ್ನು ಬರೆಯುತ್ತಿದ್ದವು:

- **ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ (Golden Quadrilateral):** ಅಟಲ್‌ಜೀ ಅವರು ಕೇವಲ ರಸ್ತೆಗಳನ್ನು ನಿರ್ಮಿಸಲಿಲ್ಲ, ದೇಶದ ಆರ್ಥಿಕತೆಯ ರಕ್ತನಾಳಗಳನ್ನು ಸೃಜಿಸಿದರು. ದೆಹಲಿ, ಮುಂಬೈ, ಚೆನ್ನೈ ಮತ್ತು ಕೋಲ್ಕತ್ತಾವನ್ನು ಸಂಪರ್ಕಿಸುವ 5,846 ಕಿ.ಮೀ. ಉದ್ದದ ಈ ಯೋಜನೆ ಭಾರತದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಹೆದ್ದಾರಿ ಯೋಜನೆಯಾಗಿತ್ತು. ಕರ್ನಾಟಕಕ್ಕೆ ಇದರಿಂದ ಬೆಂಗಳೂರು–ಬೆಳಗಾವಿ ಮತ್ತು ಬೆಂಗಳೂರು–ಚೆನ್ನೈ ಆರ್ಥಿಕ ಕಾರಿಡಾರ್‌ಗಳ ಕೊಡುಗೆ ದೊರೆಯಿತು.
- **ಹಳ್ಳಿಗಳ ಉದ್ಧಾರ (PMGSY):** ಹಳ್ಳಿಗಳು ಉದ್ಧಾರವಾದರೆ ದೇಶ ಉದ್ಧಾರ ಎಂಬ ನಂಬಿಕೆ ಅವರದ್ದಾಗಿತ್ತು. 2000ನೇ ಇಸವಿಯಲ್ಲಿ ಅವರು ಆರಂಭಿಸಿದ 'ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ' ಕುಗ್ರಾಮಗಳಿಗೂ ಕಾಂಕ್ರೀಟ್/ಡಾಂಬರು ರಸ್ತೆಗಳನ್ನು ತಂದಿತು.

- **ಅಕ್ಷರ ಕ್ರಾಂತಿ ಮತ್ತು ಸುರಕ್ಷಿತ ಭಾರತದ ರೂವಾರಿ:** ದೇಶದ ಕಟ್ಟಕಡೆಯ ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ಹಂಬಲದಿಂದ ಅವರು ತಂದ 'ಸರ್ವ ಶಿಕ್ಷಣ ಅಭಿಯಾನ' ಭಾರತದ ಸಾಕ್ಷರತಾ ಪ್ರಮಾಣದಲ್ಲಿ ಮೈಲಿಗಲ್ಲಾಯಿತು. ಅತ್ತ ಶಿಕ್ಷಣಕ್ಕೆ ಒತ್ತು ನೀಡುತ್ತಲೇ, ಇತ್ತ ದೇಶದ ರಕ್ಷಣೆಗಾಗಿ ಪೋಖ್ರಾನ್‌ನಲ್ಲಿ ಅಣುಬಾಂಬ್ ಪರೀಕ್ಷೆ ನಡೆಸಿ ಜಗತ್ತನ್ನೇ ದಿಗ್ಭ್ರಮೆಗೊಳಿಸಿದರು.
- **ಸಹಮತದ ರಾಜಕಾರಣದ ಪಿತಾಮಹ:** 24ಕ್ಕೂ ಹೆಚ್ಚು ವಿವಿಧ ಸಿದ್ಧಾಂತಗಳ ಪಕ್ಷಗಳನ್ನು ಒಂದೇ ಸೂರಿನಡಿ ತಂದು 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ'ವನ್ನು (NDA) ಯಶಸ್ವಿಯಾಗಿ ಮುನ್ನಡೆಸಿದ್ದು ಅಟಲ್‌ಜೀ ಅವರ ರಾಜಕೀಯ ಮುತ್ಸದ್ದಿತನಕ್ಕೆ ಸಾಕ್ಷಿ. ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಇರಲಿ, ಆದರೆ ಮನಸ್ತಾಪ ಇರಬಾರದು ಎಂಬುದು ಅವರ ತತ್ವವಾಗಿತ್ತು.
- **ಜಿಎಸ್‌ಟಿ ಅಡಿಪಾಯ :** ಇಂದು ಜಾರಿಯಲ್ಲಿರುವ ಜಿಎಸ್‌ಟಿಯ ಮೂಲ ಬೇರುಗಳು 2000ನೇ ಇಸವಿಯಲ್ಲಿ ಅಟಲ್‌ಜೀ ರಚಿಸಿದ ಅಸೀಮ್ ದಾಸ್‌ಗುಪ್ತ ಸಮಿತಿಯಲ್ಲಿದೆ. 'ಒಂದೇ ದೇಶ, ಒಂದೇ ಮಾರುಕಟ್ಟೆ' ಎನ್ನುವ ಅವರ ಕನಸು ಇಂದಿನ ಆರ್ಥಿಕತೆಗೆ ಅಡಿಪಾಯ.
- **ಕಾರ್ಯಕರ್ತರೇ ಪಕ್ಷದ ಶಕ್ತಿ:** ಅಟಲ್‌ಜೀ ಅವರು ಕಾರ್ಯಕರ್ತರನ್ನು ಕೇವಲ ಪಕ್ಷದ ಕೆಲಸಗಾರರೆಂದು ನೋಡದೆ, ತಮ್ಮ ಕುಟುಂಬದ ಸದಸ್ಯರಂತೆ ಪ್ರೀತಿಸುತ್ತಿದ್ದರು. ಎಷ್ಟೇ ದೊಡ್ಡ ನಾಯಕರಾಗಿದ್ದರೂ, ಸಾಮಾನ್ಯ ಕಾರ್ಯಕರ್ತನ ಹೆಸರನ್ನು ನೆನಪಿಟ್ಟುಕೊಂಡು ಮಾತನಾಡಿಸುತ್ತಿದ್ದ ಅವರ ಗುಣ ಅಮೋಘ.

ವಾಪಸ್ ಇಂದಿನ ಕಾಲಕ್ಕೆ ಬರುವುದಾದರೆ, ಇವತ್ತು ನಮಗೆ ನಮ್ಮ ರಾಜ್ಯ ಸೇರಿದಂತೆ ಕೆಲವು ರಾಜ್ಯಗಳಲ್ಲಿ 'ಉಚಿತ ಕೊಡುಗೆಗಳ' ಅಬ್ಬರ ಕಾಣುತ್ತಿದೆ. ಆದರೆ ಅಟಲ್‌ಜೀ ಅವರ ತತ್ವವೊಂದಿತ್ತು– 'ಮೀನು ನೀಡುವುದಕ್ಕಿಂತ, ಮೀನು ಹಿಡಿಯುವುದನ್ನು ಕಲಿಸು'. ಅಲ್ಪಾವಧಿಯ ಲಾಭಕ್ಕಾಗಿ ಉಚಿತಗಳನ್ನು ಕೊಡುವ ಬದಲು, ದೇಶಕ್ಕೆ ಶಾಶ್ವತ ಆಸ್ತಿಗಳನ್ನು ಕೊಡುವುದು ಅವರ ಹಾದಿಯಾಗಿತ್ತು. ಅಧಿಕಾರಗಳು ಬರುತ್ತವೆ, ಹೋಗುತ್ತವೆ; ಆದರೆ ರಾಷ್ಟ್ರ ಶಾಶ್ವತವಾಗಿರಬೇಕು ಎಂಬ ಆ ಮಹಾನ್ ಚೇತನದ ಹಾದಿಯೇ ನಮಗೆ ಇಂದಿಗೂ ಮತ್ತು ಎಂದಿಗೂ ದಾರಿದೀಪ.

(ಲೇಖಕರು ವಿಧಾನ ಪರಿಷತ್‌ನ ಮಾಜಿ ಸಭಾಪತಿಗಳು ಹಾಗೂ ಮಾಜಿ ಸಚಿವರು)

ಅಡ್ಡಗೋಡೆ ಮೇಲೆ ಸು'ದೀಪ'

ಸಿನಿಗನ್ನಡ

ಕಿಚ್ಚ ಸುದೀಪ ತಮ್ಮ ಮನಸ್ಸಿನಲ್ಲಿ ಇದ್ದ ಆಕ್ರೋಶವನ್ನು ಹುಬ್ಬಳ್ಳಿಯ 'ಮಾರ್ಕ್' ಸಿನಿಮಾದ ಪ್ರಚಾರದ ವೇದಿಕೆ ಮೇಲೆ 'ಮಾರ್ಕ್ ಮೈ ವರ್ಡ್ಸ್' ಅಂತ ಮಾತುಗಳ ಮೂಲಕ ತೋರಿಸಿಕೊಂಡಿದ್ದರು. ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರಿಗೆ ತಮ್ಮ ಗಂಡನ ಅಭಿಮಾನಿಗಳಿಗೆ ಹೇಳಿದ್ದು ಅಂತಲೇ ಅನಿಸಿದೆ. ಹಾಗಾಗಿ ಅವರೂ ಇನ್‌ಡೈರೆಕ್ಟ್ ಆಗಿ ಸುದೀಪ್ ವಿರುದ್ಧ ಮಾತಾಡಿದ್ದಾರೆ. ಪ್ರತಿಸಲ ಸುದೀಪ್ ಸಿನಿಮಾ ಬಿಡುಗಡೆ ಆದಾಗ ಪೈರಸಿ ಮಾಡೇ ಮಾಡ್ತೀವಿ ಅಂತ ಹಠ ತೊಟ್ಟು ಕಿರುಕುಳ ನೀಡುವವರ ವಿರುದ್ಧ ಕಿಚ್ಚನ ಕಿಚ್ಚು ಅರ್ಥ ಆಗುವಂಥದ್ದೇ. ಹಾಗಾಗಿ ಅವರ ವಿರುದ್ಧ ಕಿಚ್ಚ ಗುಡುಗಿದ್ದರು. ಆದರೆ 'ಡೆವಿಲ್' ಸಿನಿಮಾದ ಫಲಿತಾಂಶದಿಂದ ಮೊದಲೇ ಬೇಸರಗೊಂಡಿದ್ದ ವಿಜಯಲಕ್ಷ್ಮಿ ಅವರಿಗೆ ಇದು ಇನ್ನಷ್ಟು ಬೇಸರ ತರಿಸಿರಬಹುದು. ಹಾಗಾಗಿ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಅಷ್ಟಾಗಿ ಮಾತಾಡದ ಅವರು ಈಗ ಸುದೀಪ್ ವಿರುದ್ಧ ಮಾತಾಡಿದ್ದಾರೆ. ಆದರೆ ಸುದೀಪ್ ಅವರಂತೆಯೇ ಹೆಸರು ಪೂರ್ತಿ ಹೇಳದೇ ಮಾತಾಡಿದ್ದಾರೆ. ಅವರು ಆಡಿರೋ ಕೆಲವು ಮಾತುಗಳು ದರ್ಶನ್ ಅವರಂತೆಯೇ ದುರಹಂಕಾರದ ಮಾತುಗಳು ಅಂತಲೂ ಅಥವಾ ಅಸಡ್ಡೆಯ ಮತ್ತು ಅಜ್ಞಾನದ ಮಾತುಗಳು ಅಂತಲೂ ಅನಿಸಬಹುದು. ಯಾಕಂದ್ರೆ 'ನನ್ನ ಗಂಡ ಹೊರಗಿದ್ದಾಗ ಕೆಲವರು ಮಾತಾಡಲ್ಲ. ಅವರು ಒಳಗಿದ್ದಾಗ ಮಾತ್ರ ಮಾತಾಡ್ತಾರೆ. ಅದೂ ಬೆಂಗಳೂರಿನಲ್ಲಿ ಮಾತಾಡಲ್ಲ, ಇನ್ನೆಲ್ಲೋ ಹೋಗಿ ಮಾತಾಡ್ತಾರೆ' ಅಂತ ತಮ್ಮ ಗಂಡನ ಬಗ್ಗೆ ತಾವೇ ಅಪಪ್ರಚಾರ ಮಾಡಿದ್ದಾರೆ ಅನಿಸಿದರೆ ತಪ್ಪಿಲ್ಲ. ಯಾಕಂದ್ರೆ, ಅವರ ಪತಿ ದರ್ಶನ್ ಏನೋ ದೊಡ್ಡ ರೌಡಿ, ಅವರಿಗೆ ಎಲ್ಲರೂ ಹೆದರುತ್ತಾರೆ ಅನ್ನೋ ಟೋನ್ ಅವರ ಮಾತುಗಳಲ್ಲಿ ಇತ್ತು. ಹೀಗಾಗಿ 'ಡೆವಿಲ್' ಮತ್ತು 'ಮಾರ್ಕ್' ಚಿತ್ರಗಳ ನಡುವಿನ ವಾರ್ ತಾರಕಕ್ಕೇರಿತ್ತು. ಆದರೆ ಈ ಎರಡೂ ಚಿತ್ರಗಳಲ್ಲಿ ಯಾವುದೂ ದೊಡ್ಡ ಮಟ್ಟದ ಸೌಂಡ್ ಮಾಡುತ್ತಿಲ್ಲ. 'ದರ್ಶನ್ ಜೈಲಿನಲ್ಲಿದ್ದರೆ ಸಿನಿಮಾ ಸೂಪರ್‌ಹಿಟ್' ಅನ್ನೋ ನಂಬಿಕೆಯನ್ನು 'ಡೆವಿಲ್' ಚಿತ್ರ ಹುಸಿಗೊಳಿಸಿದೆ, ಹಾಗಾಗಿ ಕಲೆಕ್ಷನ್‌ನಲ್ಲಿ ಡಲ್ ಹೊಡೀತಿದೆ. ಇನ್ನು 'ಡೆವಿಲ್' ಚಿತ್ರಕ್ಕೆ ಹೋಲಿಸಿದರೆ ಪರವಾಗಿಲ್ಲ ಎನ್ನುವ ಮಟ್ಟಕ್ಕೆ 'ಮಾರ್ಕ್' ನಿಂತಿದೆ. ಇನ್ನು, 'ಮಾರ್ಕ್' ಜತೆ ಬಿಡುಗಡೆ ಆದ '45' ಚಿತ್ರ ಕೂಡಾ, ಶಿವಣ್ಣನ ಪೋರ್ಷನ್ ಬಿಟ್ಟರೆ ಉಳಿದ ವಿಭಾಗಗಳಲ್ಲಿ ಜನರನ್ನು ಸೆಳೆಯುವಲ್ಲಿ ಅಷ್ಟಾಗಿ ಸಫಲವಾಗಿಲ್ಲ. ಒಟ್ಟಿನಲ್ಲಿ ಈ ಬಾರಿ ಸ್ಯಾಂಡಲ್‌ವುಡ್‌ಗೆ 'ಡಿಸ್‌ಅಪಾಯಿಂಟಿಂಗ್ ಡಿಸೆಂಬರ್' ಆಗಿದೆ ಅಂದರೆ ತಪ್ಪೇನಿಲ್ಲ.

ಲೂಸ್ ಟಾಕ್ ▸▸ ಕಿಚ್ಚ ಸುದೀಪ

- **ಏನ್ ಸರ್, ಹುಬ್ಬಳ್ಳಿ ವೇದಿಕೆ ಮೇಲೆ ಯಾರನ್ನೋ ಟಾರ್ಗೆಟ್ ಮಾಡಿದ್ರಿ. ಯಾರಿಗೆ ಅಂತ ಗೊತ್ತಾಗ್ಲಿಲ್ಲವಲ್ಲ?**

– ಸುದೀಪ ಅಂತ ಹೆಸರಿಟ್ಟುಕೊಂಡ ಮೇಲೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತಾಡಲೇಬೇಕಲ್ಲ

- **ಓ ಹಂಗೆ, ಸರಿ. ವಿಜಯಲಕ್ಷ್ಮಿ ಅವರು ಕೂಡಾ ನಿಮ್ಮ ಬಗ್ಗೆ ಇನ್‌ಡೈರೆಕ್ಟ್ ಆಗಿ ಮಾತಾಡಿದ್ದಾರಲ್ಲ?**

– ಅವರ ಸಿನಿಮಾ 'ಡೆವಿಲ್'ಗೆ ವಿಜಯಲಕ್ಷ್ಮಿ ಒಲಿಯಲಿಲ್ಲ ಅಂತ ಬೇಸರದಲ್ಲಿ ಏನೋ ಮಾತಾಡಿದ್ದಾರೆ ಬಿಡಿ

- **ಆದ್ರೂ, ಅವರ ಗಂಡ ಒಳಗಿದ್ದಾಗ ಮಾತಾಡಿದ್ದೀರ, ಹೊರಗೆ ಇದ್ದಾಗ ಮಾತಾಡಲ್ಲ ಅಂತೆಲ್ಲಾ ಆವಾಜ್ ಹಾಕಿದ್ದಾರಲ್ಲ?**

– ಅವರ ಗಂಡ ಎರಡು ಪೆಗ್ ಒಳಗೆ ಹೋದಮೇಲೆ ಮಾತಾಡ್ತಾರೆ. ನಾನು ಅವರ ಗಂಡ ಒಳಗೆ ಹೋದಾಗ ಮಾತಾಡಿದ್ದೀನಿ ಅಷ್ಟೇ ವ್ಯತ್ಯಾಸ.

- **ಸರ್, ನಿಜ ಹೇಳಿ ನೀವು ಅವತ್ತು ಮಾತಾಡಿದ್ದು ಪೈರಸಿ ಮಾಡೋರ ಬಗ್ಗೆನಾ?**

– 'ಪೈರಸಿ' ಮಾಡೋರ ಬಗ್ಗೆ ಮತ್ತು ಕಾನ್'ಪಿರಸಿ' ಮಾಡೋರ ಬಗ್ಗೆ

- **ಅಂದಹಾಗೆ, ನಿಮ್ಮ 'ಮಾರ್ಕ್' ಸಿನಿಮಾಗೆ ಪ್ರತಿಕ್ರಿಯೆ ಹೇಗಿದೆ?**

– ರಿಮಾರ್ಕಬಲ್ ಅಲ್ಲದಿದ್ರೂ ಜಸ್ಟ್ ಅಪ್ ಟು ದಿ ಮಾರ್ಕ್ ಅಂತಿದ್ದಾರೆ ಪ್ರೇಕ್ಷಕರು. ಹಂಗಾಗಿ ಪಾಸಿಂಗ್ ಮಾರ್ಕ್ ಸಿಕ್ಕಿದೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಈ ಸುರಪಾನ ಬಂದಿದ್ದೇ ಸುರರಿಂದ, ಅಂದ್ರೆ, ದೇವತೆಗಳಿಂದ ಅಲ್ವಾ. ಅವರೇ ನಮಗೆ ಇದನ್ನೆಲ್ಲಾ ಕಲಿಸಿದ್ದು. ಅದಕ್ಕೇ ಹೆಂಡನ ಪರಮಾತ್ಮ ಅಂತಾರೋ ಏನೋ ಗೊತ್ತಿಲ್ಲ. ಸರಿ, ಹಿಂಗೇ ಒಂದ್ಸಲ ದೇವಲೋಕದಿಂದ ನಾರದ ಭೂಮಿಗ್ ಬಂದಿದ್ದ. ಅವ್ನು ಅಲ್ಲಿ ಇಲ್ಲಿ ಬತ್ತಿ ಇಡೋ ಕೆಲ್ಸ ಮಾಡಿ ಸುಸ್ತಾಗಿ ಒಂದ್ ಬಾರಿಗೆ ಹೋಗಿ ಎಣ್ಣೆ ಕುಡಿಯೋಕ್ ಕೂತ್ಕೊಂಡ. ಅಲ್ಲಿ ಖೇಮು ವೆಯ್ಟರ್ ಕೆಲ್ಸ ಮಾಡ್ತಾ ಇದ್ದ. ನಾರದ ಬಂದ ಕೂಡಲೇ ಖೇಮು ಹೋಗಿ, ''ಸರ್, ಏನ್ ಕೊಡ್ಲಿ?'' ಅಂದ. ಅದಕ್ಕೆ ನಾರದ 'ಒಂದ್ ಕ್ವಾರ್ಟರ್ ರಮ್ ಕೊಡಪ್ಪಾ'' ಅಂದ. ಸರಿ ಖೇಮು ಹೋಗಿ ತಂದುಕೊಟ್ಟ. ನಾರದ ಒಂದ್ ಫುಲ್ ಕ್ವಾರ್ಟರ್ ಕುಡಿದ. ಅವನಿಗೆ ಅದು ಏನೂ ಏರಲಿಲ್ಲ. ಸರಿ ಅಂತ ಖೇಮುನ ಕರೆದು ಇನ್ನೊಂದ್ ಕ್ವಾರ್ಟರ್ ತರಿಸಿದ, ಕುಡಿದ. ಅದೂ ಏರಲಿಲ್ಲ. ಇನ್ನೊಂದಾಯ್ತು. ಫುಲ್‌ಬಾಟ್ಲ್ ಆಯ್ತು. ನಾರದ ಸುಮ್ನೆ ಆರ್ಡರ್ ಮಾಡ್ತಾನೇ ಇದ್ದ, ಖೇಮು ತಂದ್ ಕೊಡ್ತಾ ಇದ್ದ, ಇವ್ನು ಕುಡಿತಾ ಇದ್ದ. ಸರಿ, ಎರಡ್ ಫುಲ್‌ಬಾಟ್ಲ್ ಆಯ್ತು. ವೆಯ್ಟರ್ ಖೇಮು ನೋಡ್ತಾನೇ ಇದ್ದ. ಇವ್ನು ಮತ್ತೆ ಇನ್ನೊಂದ್ ಕ್ವಾರ್ಟರ್ ಆರ್ಡರ್ ಮಾಡೋಕೆ ಖೇಮುನ ಕರೆದ. ಖೇಮುಗೆ ಇವನು ಕುಡಿತಾ ಇರೋ ಪರಿ ನೋಡಿ ಸಿಕ್ಕಾಪಟ್ಟೆ ಆಶ್ಚರ್ಯ ಆಗಿತ್ತು. ಇನ್ನೊಂದ್ ಕ್ವಾರ್ಟರ್ ತಂದುಕೊಟ್ಟು, ''ಸರ್, ನಂಗೆ ಒಂದ್ ಡೌಟು. ನೀವು ಇಷ್ಟೊಂದ್ ಕುಡಿದ್ರೂ ನಿಮಗೆ ಒಂಚೂರೂ ಏರಿಲ್ಲವಲ್ಲ ಹೆಂಗೆ?'' ಅಂದ. ಅದಕ್ಕೆ ನಾರದ, ''ಇಲ್ಲಾ ಕಣಮ್ಮಾ, ಹೆಂಡ ಕುಡಿದ್ರೆ ಚಿತ್ತಾಗೋದು, ಕಿಕ್ ಹೊಡೆಯೋದು, ಏರೋದು, ಇದೆಲ್ಲ ಏನಿದ್ರೂ ಬರೀ ನಿಮ್ಮಂಥ ಮನುಷ್ಯರಿಗೆ, ನಾನು ನಾರದ, ದೇವಲೋಕದಿಂದ ಬಂದಿದೀನಿ'' ಅಂದ. ಆವಾಗ ವೆಯ್ಟರ್ ಖೇಮು ಅಂದ, ''ಹಾ, ಬಡ್ಡಿಮಗಂಗೆ ಇವಾಗ್ ಏರ್ತು ನೋಡು''.

ಲೈನ್‌ಮ್ಯಾನ್

- **ಆಟೋಗ್ರಾಫ್ ಹಾಕಿಸಿಕೊಳ್ಳುವ ಹುಚ್ಚು ಅತಿರೇಕಕ್ಕೆ ಹೋದರೆ ಬರುವ ಕಾಯಿಲೆ**

– 'ಸೈನ್' ಫ್ಲೂ

- **ಒಂದು ಒಳ್ಳೆಯ ಉದ್ದೇಶಕ್ಕೆ ಸಹಿ ಸಂಗ್ರಹಿಸುವ ಅಭಿಯಾನ ಯಶಸ್ವಿಯಾದರೆ**

– ಇಂಡಿಯಾ ಈಸ್ 'ಸೈನಿಂಗ್'

- **ಅದಕ್ಕೆ ಬ್ರ್ಯಾಂಡ್ ಅಂಬಾಸಿಡರ್**

– 'ಸೈನಾ' ನೆಹ್ವಾಲ್

- **ಆರ್ಟ್ ಬಿಡಿಸುವವನು ಆರ್ಟಿಸ್ಟ್, ಕೊನೆಗೆ ಅದರ ಕೆಳಗೆ ಸಹಿ ಮಾಡುವಾಗ**

– 'ಸೈನ್' ಟಿಸ್ಟ್

- **ಆರ್ಟಿಸ್ಟ್ ಕೊಡುವ ಆಟೋಗ್ರಾಫ್**

– ಡಿ'ಸೈನ್'

- **ನಾನು ಕೆಲಸ ಬಿಡ್ತಾ ಇದ್ದೀನಿ ಎಂದು ಬರೆದುಕೊಡುವಾಗ ಮಾಡುವ ಸಹಿ**

– ರಿ'ಸೈನ್'

- **ರಜಾ ಕೇಳಿ ಬರೆದ ಪತ್ರಕ್ಕೆ ಹಾಕುವ ಸಹಿ**

– ರುಜು

- **ಆರ್ಟ್ ಆಫ್ ಸೈನಿಂಗ್ ಅನ್ನು ಏನಂತಾರೆ?**

– ಸೈನ್ಸ್

- **ಗಜಿಬಿಜಿ ಮಾಡದೆ ಎಲ್ಲರಿಗೂ ಅರ್ಥ ಆಗುವಂತೆ ಶಿಸ್ತಾಗಿ ಸೈನ್ ಮಾಡುವವನು**

– ಸೈನಿಕ

- **ನಿಮ್ಮ ಕೆಲಸವನ್ನು ಇನ್ನೊಬ್ಬರಿಗೆ ವಹಿಸುವುದು**

– ಅ'ಸೈನ್'

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:347

ಸಮಾಚಾರ ಸಣ್ಣದಲ್ಲ

ಕೇರಳ: 4 ದಿನಕ್ಕೇ 333 ಕೋ.ರು ಮದ್ಯಖರೀದಿ

ತಿರುವನಂತಪುರಂ: ಕೇರಳದಲ್ಲಿ ಕ್ರಿಸ್ಮಸ್ ಆಚರಣೆ ಸಂಭ್ರಮ ಜೋರಾಗಿದೆ. ಕೇರಳ ರಾಜ್ಯ ಪಾನೀಯ ನಿಗಮಕ್ಕೆ ಕ್ರಿಸ್ ಹಬ್ಬಕ್ಕೂ ಮುಂಚಿನ 4 ದಿನಗಳಲ್ಲಿ 'ಬೆವ್ಕೊ' ಮಳಿಗೆಗಳ ಮೂಲಕ 332.62 ಕೋಟಿ ರು. ವಹಿವಾಟಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ.19ರಷ್ಟು ಹೆಚ್ಚಳ ಕಂಡುಬಂದಿದೆ. 2024ರ ಡಿಸೆಂಬರ್ 22-25ರ ನಡುವೆ 229.54 ಕೋಟಿ ರು. ವಹಿವಾಟಾಗಿತ್ತು. ಡಿ.24ರಂದು ಅತ್ಯಧಿಕ ಪ್ರಮಾಣದಲ್ಲಿ ಮದ್ಯದ ಬಾಟಲಿಗಳು ಮಾರಾಟವಾಗಿದ್ದು, 114.45 ಕೋಟಿ ರು. ವಹಿವಾಟಾಗಿದೆ. ಡಿ.22 ರಂದು 77.62 ಕೋಟಿ ರು., ಡಿ.23ರಂದು 81.34 ಕೋಟಿ ರು. ಮತ್ತು ಡಿ.25ರಂದು 59.21 ಕೋಟಿ ರು. ಮೌಲ್ಯದ ಮದ್ಯದ ಬಾಟಲಿಗಳು ಮಾರಾಟವಾಗಿವೆ.

ಶ್ರೀನಗರ ಅಪಘಾತ: ಸಿಬಿಐ ವಕೀಲ ಸಾವು

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿನ ಶ್ರೀನಗರ-ಜಮ್ಮು ಹೆದ್ದಾರಿಯಲ್ಲಿ ಬನಿಹಾಲ್ ಪಟ್ಟಣದ ಬಳಿ ರಸ್ತೆ ಅಪಘಾತದಲ್ಲಿ ಸಿಬಿಐ ವಕೀಲ ಶೇಖ್ ಆದಿಲ್ ನಬಿ(35) ಸಾವನ್ನಪ್ಪಿದ್ದಾರೆ. ಹಿಂದಿನಿಂದ ವೇಗವಾಗಿ ಬಂದ ಕಾರು ಅವರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸಿಲ್ಲ. ಅಪಘಾತಕ್ಕೆ ಕಾರಣನಾದ ಮಹೀಂದ್ರಾ ಸ್ಕಾರ್ಪಿಯೋ ಚಾಲಕ ಮೊಹಮ್ಮದ್ ಶಫಿಯನ್ನು ಪೊಲೀಸರು ಬಂಧಿಸಿದ್ದು, ತನಿಖೆ ಮುಂದುವರಿದಿದೆ. ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ಆದಿಲ್ ಶೇಖ್, ಇತ್ತೀಚೆಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, 2 ತಿಂಗಳ ಹಿಂದೆಯಷ್ಟೇ ಚಂಡೀಗಢದಲ್ಲಿ ಸಿಬಿಐ ಪರ ವಾದಿಸುವುದಕ್ಕೆ ಪ್ರಾಸಿಕ್ಯೂಷನ್ ಅಧಿಕಾರಿಯಾಗಿ ನೇಮಕಗೊಂಡಿದ್ದರು.

ಆಧಾರ್ ಜೋಡಿಸಿದ್ದರೆ ರೈಲು ಟಿಕೆಟ್ ಸಲೀಸು

ಚೆನ್ನೈ: ತತ್ಕಾಲ್ ಇ-ಟಿಕೆಟ್ ಕಾಯ್ದಿರಿಸಲು ಬಯಸುವ ರೈಲ್ವೆ ಪ್ರಯಾಣಿಕರು ತಮ್ಮ ಯೂಸರ್ ಖಾತೆಗೆ ಆಧಾರ್ ಜೋಡಣೆ ಮಾಡಿರಬೇಕು ಎಂಬುದನ್ನು 6 ತಿಂಗಳ ಹಿಂದೆಯೇ ಕಡ್ಡಾಯಗೊಳಿಸಿದ್ದ ಭಾರತೀಯ ರೈಲ್ವೆ, ಈಗ ಸಾಮಾನ್ಯ ಮೀಸಲಾತಿ ಟಿಕೆಟ್‌ಗಳನ್ನು ಮುಂಚಿತವಾಗಿ ಕಾಯ್ದಿರಿಸುವುದಕ್ಕೂ ಆಧಾರ್ ಪರಿಶೀಲನೆ ಕಡ್ಡಾಯಗೊಳಿಸಿದೆ. ಐಆರ್‌ಸಿಟಿಸಿ ವೆಬ್‌ತಾಣದಲ್ಲಿ ಆಧಾರ್ ಪರಿಶೀಲನೆ ಪೂರ್ಣಗೊಳಿಸದೇ ಇರುವವರಿಗೆ ರೈಲಿನ ನಿಗದಿತ ಪ್ರಯಾಣಕ್ಕೆ 60 ದಿನ ಮೊದಲೇ ಆರಂಭವಾಗುವ ಬುಕಿಂಗ್‌ನ ಮೊದಲ ದಿನವೇ ಟಿಕೆಟ್ ಕಾಯ್ದಿರಿಸಲು ಅವಕಾಶ ಇರುವುದಿಲ್ಲ. ಹೊಸ ವರ್ಷದ 2ನೇ ವಾರ(ಜ.12) ಈ ನಿಯಮ ಜಾರಿಗೆ ಬರಲಿದೆ. ಏಜೆಂಟರು ಪ್ರಯಾಣಿಕರ ಗುರುತಿನ ಚೀಟಿಗಳನ್ನು ದುರುಪಯೋಗ ಪಡಿಸಿಕೊಳ್ಳುವುದು, ದುಪ್ಪಟ್ಟು ಬೆಲೆಗೆ ಟಿಕೆಟ್ ಮಾರುವುದನ್ನು ತಡೆಯಲೆಂದೇ ಈ ನಿಯಮ ಜಾರಿಗೆ ತರಲಾಗುತ್ತಿದೆ ಎಂದು ರೈಲ್ವೆ ಸ್ಪಷ್ಟಪಡಿಸಿದೆ. ಆದರೆ, ರೈಲು ನಿಲ್ದಾಣದಲ್ಲಿನ ರಿಸರ್ವೇಶನ್ ಕೌಂಟರ್‌ಗಳಲ್ಲಿ ಮುಂಗಡ ಟಿಕೆಟ್ ಬುಕ್ ಮಾಡುವ ಪ್ರಯಾಣಿಕರಿಗೆ ಈ ನಿಯಮ ಅನ್ವಯಿಸುವುದಿಲ್ಲ ಅವರು ಬೇರಾವುದೇ ಮಾನ್ಯ ಗುರುತಿನ ಚೀಟಿ, ದಾಖಲೆಗಳನ್ನು ಹಾಜರುಪಡಿಸಿ ರಿಸರ್ವೇಶನ್ ಫಾರ್ಮ್ ಸಲ್ಲಿಸಬಹುದಾಗಿದೆ.

ಕಾಂಬೋಡಿಯ- ಥಾಯ್ ಕದನ ವಿರಾಮ ಒಪ್ಪಂದ

ಬ್ಯಾಂಕಾಕ್: ಕಾಂಬೋಡಿಯ ಮತ್ತು ಥಾಯ್ಲೆಂಡ್ ನಡುವಿನ ಸೇನಾ ಸಂಘರ್ಷ ಸದ್ಯ ಕೊನೆಗೊಂಡಿದೆ. ಎರಡೂ ದೇಶಗಳು ಶನಿವಾರ 'ಕದನ ವಿರಾಮ ಒಪ್ಪಂದ'ಕ್ಕೆ ಸಹಿ ಹಾಕಿವೆ. ಪುರಾತನ ಹಿಂದೂ ದೇವಾಲಯವಿದ್ದ ಪ್ರದೇಶದ ಒಡೆತನ ಸೇರಿದಂತೆ ಗಡಿ ವಿಚಾರವಾಗಿ ಕಳೆದೆರಡು ವಾರಗಳಿಂದ ಥಾಯ್ಲೆಂಡ್ ಮತ್ತು ಕಾಂಬೋಡಿಯ ಸೇನಾ ಸಂಘರ್ಷದಲ್ಲಿ ತೊಡಗಿದ್ದರಿಂದ 100ಕ್ಕೂ ಅಧಿಕ ಮಂದಿ ಹತರಾದರು. 5 ಲಕ್ಷಕ್ಕೂ ಅಧಿಕ ಜನರು ಎರಡೂ ದೇಶಗಳ ಗಡಿಭಾಗಗಳಿಂದ ಸ್ಥಳಾಂತರಗೊಳ್ಳಬೇಕಾಯಿತು. ಕಡೆಗೂ ಶಾಂತಿ ಮಾತುಕತೆ ನಡೆಸಲು ಮುಂದಾದ ಉಭಯ ದೇಶಗಳ ಮುಖ್ಯಸ್ಥರು, ತಕ್ಷಣವೇ ಕದನ ವಿರಾಮಕ್ಕೆ ಒಪ್ಪಿಕೊಂಡರು. ಕದನ ವಿರಾಮ ಒಪ್ಪಂದಕ್ಕೆ ಎರಡೂ ದೇಶಗಳ ರಕ್ಷಣಾ ಸಚಿವರು ಶನಿವಾರ ಸಹಿ ಹಾಕಿದರು. ಶನಿವಾರ ಬೆಳಗ್ಗೆ 5 ಗಂಟೆಯಿಂದಲೇ ಕದನ ವಿರಾಮ ಜಾರಿಗೆ ಬಂದಿದೆ ಎಂಬ ಜಂಟಿ ಹೇಳಿಕೆ ಪ್ರಕಟಿಸಿದರು.

{ ಅಮಿತ್ ಶಾ } ಕೇಂದ್ರ ಗೃಹ ಸಚಿವ

ಪಹಲ್ಗಾಮ್‌ನಲ್ಲಿನ ಏ.22ರ ಉಗ್ರ ದಾಳಿ ತನಿಖೆ ಯಶಸ್ವಿಯಾಗಿ ನಡೆಸಿ ಪಾಕ್‌ನ ಭಯೋತ್ಪಾದಕ ಮಾಸ್ಟರ್ ಮೈಂಡ್‌ಗಳಿಗೆ ತಕ್ಕ ಉತ್ತರ ನೀಡಲಾಗಿದೆ. ಈ ತನಿಖೆಯಿಂದ ಪಾಕ್‌ನ ಅಸಲಿ ಮುಖ ವಿಶ್ವದೆದುರು ಬಯಲಾಗಿದೆ. ಉಗ್ರ ಕೃತ್ಯ ಯೋಜಿಸಿದವರು, ಜಾರಿಗೊಳಿಸಿದವರನ್ನು ಆಪರೇಷನ್ ಸಿಂಧೂರ್ -ಆಪರೇಷನ್ ಮಹಾದೇವ್ ಮೂಲಕ ಶಿಕ್ಷಿಸಲಾಗಿದೆ.

ಹೋಟೆಲ್, ಅಂಗಡಿ, ಟ್ಯಾಕ್ಸಿ-ಆಟೋಗಳಲ್ಲಿ 'ಬಾಯ್ಕಾಟ್ ಬಾಂಗ್ಲಾ' ಬ್ಯಾನರ್-ಭಿತ್ತಿಪತ್ರ

ಬಾಯ್ಕಾಟ್ ಬಾಂಗ್ಲಾ: ಕೃತಘ್ನ ದೇಶಕ್ಕೆ ಸಿಲಿಗುರಿ ತಿರುಗೇಟು

ಸಿಲಿಗುರಿ: ಭಾರತದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿರುವ, ಢಾಕಾದಲ್ಲಿನ ಭಾರತೀಯ ಧೂತವಾಸದ ಕಚೇರಿಗೆ ನುಗ್ಗಲೆತ್ನಿಸಿದ್ದ, ಭಾರತೀಯರನ್ನು ಗುರಿಯಾಗಿಸಿ ಹಲ್ಲೆ ನಡೆಸಿದ, ದೇಶದಲ್ಲಿನ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಮೇಲೆ ದಾಳಿ ನಡೆಸುತ್ತಿರುವ ಬಾಂಗ್ಲಾದೇಶದ ಮತಾಂಧ ಜಿಹಾದಿ ಮನಸ್ಥಿತಿಯ ಜನರ ವಿರುದ್ಧ ಭಾರತದ ಒಂದು ಭಾಗ ಈಗ ಸಿಡಿದೆದ್ದು ನಿಂತಿದೆ.

ಪಶ್ಚಿಮ ಬಂಗಾಳದ ಅಂತ್ಯಂತ ಸೂಕ್ಷ್ಮ ಪ್ರದೇಶವಾಗಿ ಸಿಲಿಗುರಿ, 'ಬಾಯ್ಕಾಟ್ ಬಾಂಗ್ಲಾ' ಘೋಷಣೆ ಮೊದಲಿಟ್ಟಿದೆ. ಇಡೀ ಸಿಲಿಗುರಿಯ ಎಲ್ಲಾ ಹೋಟೆಲ್‌ಗಳಲ್ಲಿ, ಅಂಗಡಿಗಳಲ್ಲಿ, ಟ್ಯಾಕ್ಸಿ, ಆಟೋಗಳಲ್ಲಿ 'ಬಾಯ್ಕಾಟ್ ಬಾಂಗ್ಲಾ' ಬ್ಯಾನರ್‌ಗಳು, ಭಿತ್ತಿಪತ್ರಗಳನ್ನು ತೂಗುಬಿಡಲಾಗಿದೆ, ಎದ್ದು ಕಾಣುವಂತೆ ಮುಂಬದಿ ಗಾಜಿಗೆ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ.

ಇಬ್ಬರು ಹಿಂದೂ ಯುವಕರ ಕಗ್ಗೊಲೆ, ವಿವಿಧೆಡೆ ಹತ್ತಾರು ಹಿಂದೂಗಳ ಮನೆಗಳಿಗೆ ಬೆಂಕಿ ಹಾಕಿದ, ಕ್ರೈಸ್ತ ಧರ್ಮೀಯ ಎಂಬ ಕಾರಣಕ್ಕೆ ಖ್ಯಾತ ಗಾಯಕ ಜೇಮ್ಸ್ ಎಂಬವರ ಸಂಗೀತ ಕಾರ್ಯಕ್ರಮಕ್ಕೆ ಕಲ್ಲೆಸೆತ-ದಾಂಧಲೆ ನಡೆಸುತ್ತಾ ಹಿಂಸಾಚಾರವನ್ನು ಮುನ್ನಡೆಸುತ್ತಿರುವ ಬಾಂಗ್ಲಾದೇಶದಲ್ಲಿನ ಜಿಹಾದಿ ಮನಸ್ಥಿತಿಯ ಮುಸ್ಲಿಂ ಸಮುದಾಯದ ವಿರುದ್ಧ ಭಾರತದಲ್ಲಿ ಭಾರೀ ಆಕ್ರೋಶ ವ್ಯಕ್ತವಾಗುತ್ತಿದೆ. ಪಶ್ಚಿಮ ಬಂಗಾಳ ರಾಜ್ಯದ ಬಲು ಸೂಕ್ಷ್ಮವಾದ ಸಿಲಿಗುರಿ ಪ್ರದೇಶದ ಜನತೆ ಒಂದು ಹೆಜ್ಜೆ ಮುಂದೆ ಹೋಗಿ, 'ಬಾಂಗ್ಲಾದೇಶೀ ಪ್ರವಾಸಿಗರಿಗೆ ನಮ್ಮ ನಗರ-ಪಟ್ಟಣಗಳಲ್ಲಿ ಸೇವೆ-ಸಹಕಾರ ಇಲ್ಲ. ನಾವು ಬಾಂಗ್ಲಾದೇಶೀಯರನ್ನು ನಿಷೇಧಿಸುತ್ತೇವೆ(ವಿ ಬಾಯ್ಕಾಟ್ ಬಾಂಗ್ಲಾ)' ಎಂಬ ಬಿಗಿ ನಿಲುವು ತಳೆದಿದ್ದಾರೆ.

ಈಶಾನ್ಯ ಭಾರತದ 7 ಸೋದರಿ ರಾಜ್ಯಗಳನ್ನು ಭಾರತದ ಉಳಿದ ಭಾಗದ ಜತೆ ಸಂಪರ್ಕಿಸುವ, ಕೇವಲ 22 ಕಿಮೀ ಅಗಲವಿರುವ 'ಚಿಕನ್ ನೆಕ್'(ಕೋಳಿಯ ಕತ್ತು) ರೀತಿಯ ಭೂ ಪ್ರದೇಶವನ್ನು ಬಂದ್ ಮಾಡಿಸುವುದಾಗಿ ಬಾಂಗ್ಲಾದೇಶದ ಕೆಲವು ನಾಯಕರು ವೀರಾವೇಶದ ಭಾಷಣ ಮಾಡಿರುವುದು ಕೂಡಾ ಸಿಲಿಗುರಿಯ ಜನರನ್ನು ಸಿಟ್ಟಿಗೇಳಿಸಿದೆ.

'ನಮಗೆ ದೇಶ ಮೊದಲು, ವ್ಯಾಪಾರ ಆನಂತರ' ಎಂದೇ ಹೇಳುತ್ತಿರುವ ಸಿಲಿಗುರಿಯ ಅಂಗಡಿ-ಮುಂಗಟ್ಟುಗಳು, ಹೋಟೆಲ್‌ಗಳು, ಟ್ಯಾಕ್ಸಿ-ಆಟೋ ಚಾಲಕರು, ಇದೀಗ ಬಾಂಗ್ಲಾದೇಶದ ನಾಯಕರ ಹೇಳಿಕೆ ವಿರುದ್ಧ ತಮ್ಮದೇ ಆದ ರೀತಿಯಲ್ಲಿ ಪ್ರತ್ಯುತ್ತರ ನೀಡಿದ್ದಾರೆ. 'ಬಾಂಗ್ಲಾದೇಶೀಯರಿಗೆ ನಮ್ಮಲ್ಲಿ ಯಾವುದೇ ಸೇವೆ ಇಲ್ಲ' ಎಂದೇ ಪ್ರತಿರೋಧ ಒಡ್ಡಿದ್ದಾರೆ.

'ಸಾವಿರಾರು ಬಾಂಗ್ಲಾದೇಶದ ಜನತೆ ವೈದ್ಯಕೀಯ ಮತ್ತು ವ್ಯಾಪಾರಿ ಹಾಗೂ ವಿದ್ಯಾರ್ಥಿ ವೀಸಾದಡಿ ಸಿಲಿಗುರಿಗೆ ಬಂದು ಭಾರತದಲ್ಲಿನ ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅಷ್ಟಿದ್ದರೂ ಭಾರತದ ವಿರುದ್ಧ ನಿಲುವು ತಳೆದಿದ್ದಾರೆ. ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿ ನಡೆಸುತ್ತಿದ್ದಾರೆ. ಅಂತಹ ಬಾಂಗ್ಲಾದೇಶೀ ಜನರಿಗೆ ಇನ್ನು ಮುಂದೆ ನಮ್ಮ ಹೋಟೆಲ್‌ಗಳಲ್ಲಿ ಕೊಠಡಿ, ಊಟ-ತಿಂಡಿ ಕೊಡುವುದಿಲ್ಲ' ಎಂದೇ ಸಿಲಿಗುರಿಯ ಹೋಟೆಲ್ ಮಾಲೀಕರು ಕಠಿಣ ನಿಲುವು ತಳೆದಿದ್ದಾರೆ. ಹಾಗೆಂದೇ ತಮ್ಮ ಹೋಟೆಲ್‌ಗಳ ಮುಂದೆ ಬೋರ್ಡ್, ಭಿತ್ತಿಚಿತ್ರಗಳನ್ನೂ ತೂಗುಹಾಕಿದ್ದಾರೆ. ಟ್ಯಾಕ್ಸಿ-ಆಟೋರಿಕ್ಷಾಗಳಲ್ಲಿಯೂ 'ಬಾಯ್‌ಕಾಟ್ ಬಾಂಗ್ಲಾ' ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ.

ಹೋಟೆಲ್ ಮುಂದಿನ ಗಾಜಿಗೆ 'ಬಾಯ್ಕಾಟ್ ಬಾಂಗ್ಲಾ' ಭಿತ್ತಿಚಿತ್ರ ಅಂಟಿಸುತ್ತಿರುವ ಸಿಬ್ಬಂದಿ.

ಇನ್ನು ಮೌನ ಸಾಧ್ಯವಿಲ್ಲ: ಸಿಲಿಗುರಿ

ನೆರೆಯ ಬಾಂಗ್ಲಾದೇಶದಲ್ಲಿ ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತ ಸಮುದಾ ಯದ ಮೇಲೆ ನಡೆಯುತ್ತಿರುವ ಹಲ್ಲೆ-ಕೊಲೆ-ಮನೆಗಳಿಗೆ ಬೆಂಕಿ ಹಾಕುವ ಈ ಹಿಂಸಾಚಾರವನ್ನು ನೋಡಿಕೊಂಡು ಮೌನವಾಗಿರುವುದು ಸಾಧ್ಯವಿಲ್ಲ. ಹಾಗಾ ಗಿಯೇ ನಾವೆಲ್ಲರೂ ಬಾಂಗ್ಲಾದೇಶೀ ಪ್ರವಾಸಿಗರಿಗೆ, ನಮ್ಮ ನಗರದ ಆಸ್ಪತ್ರೆಗೆ ಚಿಕಿತ್ಸೆಗೆಂದು ಬರುವ ಬಾಂಗ್ಲಾದೇಶದ ಜನತೆಗೆ ಸೇವೆ ಒದಗಿಸುವುದನ್ನು ನಿಲ್ಲಿಸುತ್ತಿದ್ದೇವೆ ಎಂದು ಸಿಲಿಗುರಿಯ ದೊಡ್ಡ ಹೋಟೆಲೊಂದರ ವ್ಯವಸ್ಥಾಪಕ ದಿಲೀಪ್ ಮಲ್ಲಿಕ್ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಸಿಲಿಗುರಿ ನಗರದ ವೃತ್ತದಲ್ಲಿ ರಸ್ತೆ ಬದಿ ವ್ಯಾಪಾರ ಮಾಡುವ ಸುಜನ್ ದಾಸ್ ಎಂಬ ವರ್ತಕ 'ಬಾಯ್ಕಾಟ್ ಬಾಂಗ್ಲಾ' ಬೆಂಬಲಿಸಿ ಮಾತನಾಡಿದ್ದು, ಹೋಟೆಲ್, ಅಂಗಡಿ, ಆಸ್ಪತ್ರೆ, ಮೆಡಿಕಲ್ ಸ್ಟೋರ್, ಟ್ಯಾಕ್ಸಿ-ಆಟೊ ಎಲ್ಲರೂ ಬಾಂಗ್ಲಾದೇಶಿಯರನ್ನು ಬಹಿಷ್ಕರಿಸಬೇಕು. ಭಾರತ ಸರಕಾರವೂ ಬಾಂಗ್ಲಾದೇಶದ ಜತೆಗಿನ ರಫ್ತು-ಆಮದು ವಹಿವಾಟನ್ನು ತಕ್ಷಣ ನಿಲ್ಲಿಸಬೇಕು. ದೇಶದ ಇತರೆಡೆಯ ವ್ಯಾಪಾರಿ ಸಮುದಾಯವೂ ಇದೇ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಹೋಟೆಲ್ ಸಂಘದ ಕಠಿಣ ನಿರ್ಧಾರ

'ಗ್ರೇಟರ್ ಸಿಲಿಗುರಿ ಹೋಟೆಲಿಯರ್ಸ್ ವೆಲ್‌ಫೇರ್ ಅಸೋಸಿಯೇಷನ್' ಬಾಂಗ್ಲಾದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಭೆ ನಡೆಸಿದ್ದು, 'ಬಾಯ್ಕಾಟ್ ಬಾಂಗ್ಲಾ'ಗೆ ಕರೆ ನೀಡಿದೆ. ಈಶಾನ್ಯದ 7 ಸೋದರಿ ರಾಜ್ಯಗಳು ಮತ್ತು ಭಾರತದ ರಾಜಧಾನಿ ನಡುವಿನ ಸಂಪರ್ಕದ ಮುಖ್ಯ ಕೊಂಡಿಯಾಗಿರುವ ಚಿಕನ್ ನೆಕ್ ಪ್ರದೇಶವನ್ನು ವಶಪಡಿಸಿಕೊಳ್ಳುವ ಬಗ್ಗೆ ಮಾತನಾಡುತ್ತಿರುವ ಬಾಂಗ್ಲಾದೇಶದ ಕೆಲವು ನಾಯಕರಿಗೆ ಸರಿಯಾದ ಸಂದೇಶ ಕಳುಹಿಸಬೇಕಾಗಿದೆ. ಹಾಗಾಗಿಯೇ ನಾವು ಹೋಟೆಲ್ ಮಾಲೀಕರು ಒಗ್ಗೂಡಿ 'ಬಾಯ್ಕಾಟ್ ಬಾಂಗ್ಲಾ'ಗೆ ಕರೆ ಕೊಟ್ಟಿದ್ದೇವೆ. ನಮಗೇನಿದ್ದರೂ ಮೊದಲು ದೇಶ-ದೇಶದ ಸುರಕ್ಷೆ ಮುಖ್ಯ. ವ್ಯಾಪಾರ-ಲಾಭದ ವಿಚಾರವೇನಿದ್ದರೂ ಆನಂತರ ಎಂದು ಹೋಟೆಲ್‌ಗಳ ಮಾಲೀಕರ ಸಂಘದ ಜಂಟಿ ಕಾರ್ಯದರ್ಶಿ ಉಜ್ವಲ್ ಘೋಷ್ ಅವರು ಸುದ್ದಿಸಂಸ್ಥೆಗಳ ಜತೆ ಶನಿವಾರ ಹಂಚಿಕೊಂಡಿದ್ದಾರೆ.

ಬಾಂಗ್ಲಾದೇಶದಲ್ಲಿ ಹಿಂದೂಗಳು, ಸಿಖ್ಖರು, ಬೌದ್ಧರು, ಕ್ರೈಸ್ತರು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಮತಾಂಧರು, ಜಿಹಾದಿಗಳು ಸರಣಿಯೋಪಾದಿಯಲ್ಲಿ ದಾಳಿ ನಡೆಸುತ್ತಿರುವುದನ್ನು ಖಂಡಿಸಿದೆ. ವೈದ್ಯಕೀಯ ವೀಸಾದಡಿ ಇಲ್ಲಿನ ಆಸ್ಪತ್ರೆಗಳಿಗೆ ಬಂದು ಚಿಕಿತ್ಸೆ ಪಡೆಯುವ ಬಾಂಗ್ಲಾದೇಶೀಯರಿಗೂ ತಮ್ಮ ಹೋಟೆಲ್‌ಗಳಲ್ಲಿ ಸ್ಥಳಾವಕಾಶ, ಊಟ-ತಿಂಡಿ ಕೊಡುವುದಿಲ್ಲ ಎಂದು ಕಠಿಣ ನಿಲುವು ತಳೆದಿದೆ. ಇದೇ ಮಾರ್ಗದಲ್ಲಿ ಅಂಗಡಿಗಳು, ಬಾಡಿಗೆ ವಾಹನಗಳ ಚಾಲಕರು-ಮಾಲೀಕರು 'ಬಾಯ್ಕಾಟ್ ಬಾಂಗ್ಲಾ'ಗೆ ದನಿಗೂಡಿಸಿದ್ದಾರೆ.

- ಹಿಂದೂ ಸಹಿತ ಅಲ್ಪಸಂಖ್ಯಾತ ಸಮುದಾಯದ ಮೇಲಿನ ಹಲ್ಲೆ-ಕೊಲೆಗೆ ತೀವ್ರ ಖಂಡನೆ
- ಪ್ರವಾಸಿ, ವೈದ್ಯಕೀಯ, ವಿದ್ಯಾರ್ಥಿ ವೀಸಾದಡಿ ಬಂದ ಬಾಂಗ್ಲಾದವರಿಗೆಲ್ಲಾ ಸೇವೆ ಅಲಭ್ಯ
- ಬಾಂಗ್ಲಾದೇಶದ ಜತೆಗಿನ ರಫ್ತು-ಆಮದು ಪೂರ್ಣ ಸ್ಥಗಿತಗೊಳಿಸುವಂತೆ ಕೇಂದ್ರಕ್ಕೆ ಆಗ್ರಹ

ಬಾಂಗ್ಲಾ ಬೆಳವಣಿಗೆ ಖಂಡಿಸಿ ಪಶ್ಚಿಮ ಬಂಗಾಳ ಬಿಜೆಪಿ ಘಟಕದ ಪ್ರತಿಭಟನೆ



ಬಾಂಗ್ಲಾದೇಶ ವಿರುದ್ಧ ಸಿಲಿಗುರಿಯಲ್ಲಿ ನಾಗರಿಕರಿಂದ ಪಂಜಿನ ಮೆರವಣಿಗೆ

15.44 ಕೋಟಿ ಮತದಾರರಲ್ಲಿ ಶೇ.18.72 ಅರ್ಜಿ ಬಂದಿಲ್ಲ

ಉ.ಪ್ರ 2.89 ಕೋಟಿ ಹೆಸರು ರದ್ದು

ಲಖನೌ: ಉತ್ತರ ಪ್ರದೇಶ ರಾಜ್ಯ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆಯ ಒಂದು ಹಂತ ಪೂರ್ಣಗೊಂಡಿದೆ. ರಾಜ್ಯದಲ್ಲಿನ ಪಸ್ತುತ ಮತದಾರರ ಪಟ್ಟಿಯಲ್ಲಿದ್ದ 15.44 ಕೋಟಿ ಮತದಾರರಲ್ಲಿ 2.89 ಕೋಟಿ(ಶೇ.18.72) ಮತದಾರರ ಹೆಸರು ಕೈಬಿಡಲಾಗಿದೆ.

ಎಸ್‌ಐಆರ್ ಪ್ರಕ್ರಿಯೆಯಡಿ ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಗಡುವನ್ನು 2 ಬಾರಿ ವಿಸ್ತರಿಸಿದ್ದರೂ ಬಹಳಷ್ಟು ಅರ್ಜಿಗಳು ಸಲ್ಲಿಕೆಯಾಗಿಲ್ಲ. ಇವರಲ್ಲಿ 1.11 ಕೋಟಿ ಜನರ(ಶೇ.9) ಮನೆಗಳಿಗೇ ನೋಟಿಸ್ ಕಳುಹಿಸಲಾಗುವುದು. ನೈಜ ಮತದಾರರಿದ್ದರೆ ಪುರಾವೆ ಒದಗಿಸಿದರೆ ಅವರ ಹೆಸರು ಮತ್ತೆ ಪಟ್ಟಿಗೆ ಸೇರಿಸಲಾಗುತ್ತದೆ ಎಂದು ಉತ್ತರ ಪ್ರದೇಶ ಸರಕಾರದ ಚುನಾವಣಾ ಇಲಾಖೆಯ ಸಿಇಒ ನವದೀಪ್ ರಿನ್ವಾ ಶನಿವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

2003ರ ಮತದಾರರ ಪಟ್ಟಿಯನ್ನು ಪ್ರಸ್ತುತ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡುವುದೂ ಪೂರ್ಣಗೊಂಡಿದೆ. ಶೇ.91ರಷ್ಟು ಜನರ ಹೆಸರುಗಳು ಹೊಂದಿಕೆಯಾಗಿವೆ. ಅಂತಹ ಮತದಾರರ ಹೆಸರುಗಳ ಜತೆಗೆ ಪೋಷಕರು, ಅಜ್ಜ-ಅಜ್ಜಿ ಅಥವಾ ತಾಯಿಯ ಅಜ್ಜ-ಅಜ್ಜಿಯರ ಹೆಸರುಗಳೊಂದಿಗೆ ಹೋಲಿಸಿ ದೃಢಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ. ಮತದಾರರ ಪಟ್ಟಿಯಿಂದ ಕೈಬಿಡಲಾದ 2.89 ಕೋಟಿ ಮತದಾರರ ಹೆಸರುಗಳಲ್ಲಿ 1.26 ಕೋಟಿ ಜನರು ನೋಂದಾಯಿತ ವಿಳಾಸ ತೊರೆದು ಬೇರೆಡೆಗೆ ವಲಸೆ ಹೋಗಿರುವುದು ದೃಢಪಟ್ಟಿದೆ. ಹಿಂದಿನ 'ಎಸ್‌ಐಆರ್' ಅವಧಿಯಿಂದ ಇಲ್ಲಿಯವರೆಗೆ ರಾಜ್ಯದ ಮತದಾರರಲ್ಲಿ 46 ಲಕ್ಷ ಜನರು ಅಸುನೀಗಿದ್ದಾರೆ. 23.70 ಲಕ್ಷ ಜನರ ಹೆಸರು ಎರಡಕ್ಕೂ ಅಧಿಕ ಮತಕ್ಷೇತ್ರಗಳಲ್ಲಿ ದಾಖಲಾಗಿವೆ. 83.73 ಲಕ್ಷ ಜನರು ಎಸ್‌ಐಆರ್ ಪ್ರಕ್ರಿಯೆಗೆ ವೇಳೆ ದಾಖಲೆ ಸಲ್ಲಿಸಿಲ್ಲ, ಸಮೀಕ್ಷೆಗೂ ಸಿಕ್ಕಿಲ್ಲ ಮತ್ತು 9.57 ಲಕ್ಷ ಜನರು ಭಾರತೀಯ ಪ್ರಜೆಗಳಲ್ಲ ಎಂಬುದು ದೃಢಪಟ್ಟಿದೆ. ಹಾಗಾಗಿ ದೊಡ್ಡ ಸಂಖ್ಯೆಯ ಹೆಸರು ಕೈಬಿಡಲಾಗಿದೆ ಎಂದು ತಿಳಿಸಿದ್ದಾರೆ.

ಉ.ಪ್ರದೇಶದ ಕರಡು ಮತದಾರರ ಪಟ್ಟಿ ಡಿ.31ರಂದು ಪ್ರಕಟಿಸಲಾಗುವುದು. ಅದರನ್ವಯ ಮತದಾರರ ಹಕ್ಕು- ಆಕ್ಷೇಪಣೆ ಸಲ್ಲಿಸಲು 2026ರ ಜ.30ರವರೆಗೂ ಅವಕಾಶವಿರುತ್ತದೆ. ಫೆ.21ರವರೆಗೆ ಎಣಿಕೆ ನಮೂನೆ, ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ನಡೆಯುತ್ತದೆ. ಫೆ.28ರಂದು ರಾಜ್ಯದ ಮತದಾರರ ಅಂತಿಮ ಪಟ್ಟಿ ಪ್ರಕಟವಾಗಲಿದೆ.

-ನವದೀಪ್ ರಿನ್ವಾ
ಉ.ಪ್ರ. ಚು. ಇಲಾಖೆ ಅಧಿಕಾರಿ

ಮೋದಿ ಟೀಕಾಕಾರ ದಿಗ್ವಿಜಯ್ ಸಿಂಗ್ ಅಚ್ಚರಿ ಬದಲಾವಣೆ

ಬಿಜೆಪಿ-ಆರೆಸ್ಸೆಸ್ ಹೊಗಳಿದ ಕೈ ನಾಯಕ

ದೆಹಲಿ: ಕಾಂಗ್ರೆಸ್‌ನ ಹಿರಿಯ ನಾಯಕರಿಗೆ ಇತ್ತೀಚೆಗೆ ಬಿಜೆಪಿ, ಆರ್‌ಎಸ್‌ಎಸ್ ಸಂಘಟನೆ-ಕಾರ್ಯಶೈಲಿಯಲ್ಲಿ ಉತ್ತಮ ಮಾದರಿಗಳಾಗಿ ಕಾಣಬರುತ್ತಿವೆ. ಶತಮಾನ ಹಳೆಯ ಪಕ್ಷ ಕಾಂಗ್ರೆಸ್‌ನ ಸಂಘಟನಾ ವ್ಯವಸ್ಥೆ-ಕಾರ್ಯವೈಖರಿ ಮುಂದಿಟ್ಟುಕೊಂಡು ತಮ್ಮದೇ ಪಕ್ಷವನ್ನು ಟೀಕಿಸುವ ಉದ್ದೇಶದಿಂದ ಹಿರಿಯ ನಾಯಕರು 'ಕೇಸರಿ-ಕಮಲ'ವನ್ನು ಪ್ರಶಂಸಿಸಲಾರಂಭಿಸಿದ್ದಾರೆ.

ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ, ಕೇಂದ್ರ ಮಾಜಿ ಸಚಿವ ಗುಲಾಂ ನವಿ ಆಜಾದ್ ಅಂತಹವರಿಂದ ಶುರುವಾದ ಈ ನಡೆ, ಈಗ ತಿರುವನಂತಪುರಂ ಸಂಸದ ಶಶಿತರೂರ್ ವರೆಗೂ ವಿಸ್ತರಣೆಯಾಗಿದೆ. ಈ ಸಾಲಿಗೆ ಹೊಸದಾಗಿ ದಿಗ್ವಿಜಯ್ ಸಿಂಗ್ ಸೇರಿದ್ದಾರೆ.

ಸದಾ ವಿವಾದಾತ್ಮಕ ಹೇಳಿಕೆಗಳಲ್ಲೇ ಗಮನ ಸೆಳೆವ, ಬಿಜೆಪಿ-ನರೇಂದ್ರ ಮೋದಿ ಅವರನ್ನು ಒಂದಿಲ್ಲೊಂದು ಕಾರಣಕ್ಕೆ ಟೀಕಿಸುತ್ತಲೇ ಇರುವ ಕಾಂಗ್ರೆಸ್‌ನ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ದಿಗ್ವಿಜಯ ಸಿಂಗ್, ಮೊದಲ ಬಾರಿಗೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಗ್ಗೆ ಹೊಗಳಿ ಮಾತನಾಡಿದ್ದಾರೆ. ಇದು ಈಗ ಕಾಂಗ್ರೆಸ್-ಬಿಜೆಪಿ ಸೇರಿದಂತೆ ದೇಶದ ರಾಜಕಾರಣದಲ್ಲಿ ಬಹಳ ಚರ್ಚೆಗೆ ಕಾರಣವಾಗಿದೆ.

'ಪಕ್ಷದ ವ್ಯವಸ್ಥೆಯಲ್ಲಿ ಸುಧಾರಣೆ ಅಗತ್ಯ' ಎಂಬುದನ್ನು ರಾಹುಲ್ ಗಾಂಧಿ ಅವರಿಗೆ ಮುಟ್ಟುವಂತೆ ಕಳೆದ ವಾರ ಹೇಳಿಕೆ ನೀಡಿದ್ದ ದಿಗ್ವಿಜಯ, ಈಗ 1990ರ ದಶಕದಲ್ಲಿ ಮೋದಿ ಆರ್‌ಎಸ್‌ಎಸ್ ಕಾರ್ಯಕರ್ತರಾಗಿ ಕಾರ್ಯಕ್ರಮವೊಂದರಲ್ಲಿ ಎಲ್.ಕೆ.ಅಡ್ವಾಣಿ ದಂಪತಿಯ ಕಾಲಬಳಿ ನೆಲದ ಮೇಲೆ ಕುಳಿತಿದ್ದ ಕಪ್ಪು-ಬಿಳುಪು ಫೋಟೋವನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. 'ನನಗೆ ಈ ಚಿತ್ರ ಕ್ವಾರಾದಲ್ಲಿ ಕಾಣಿಸಿತು. ಆರ್‌ಎಸ್‌ಎಸ್ ಮತ್ತು ಬಿಜೆಪಿ ವ್ಯವಸ್ಥೆಯೊಳಗೆ ತಳಮಟ್ಟದ ಕಾರ್ಯಕರ್ತರು ಹೇಗೆ ಬೆಳೆದು ಮುಖ್ಯಮಂತ್ರಿ-ಪ್ರಧಾನಿ ಆಗಬಹುದು ಎಂಬುದನ್ನು ಈ ಚಿತ್ರ ತೋರಿಸಿಕೊಡುತ್ತದೆ' ಎಂದು ಪ್ರಶಂಸಿಸಿದ್ದಾರೆ. ಅಲ್ಲದೇ, 'ಜೈ ಸಿಯಾ ರಾಮ್' ಎಂದು ಬರೆದು ಸಂದೇಶ ಕೊನೆಗೊಳಿಸಿದ್ದಾರೆ. ಸಂದೇಶವನ್ನು ಕಾಂಗ್ರೆಸ್ ಪಕ್ಷ, ಅಧ್ಯಕ್ಷ ಖರ್ಗೆ, ರಾಹುಲ, ಪ್ರಿಯಾಂಕಾ, ಜೈರಾಮ್ ರಮೇಶ್ ಮತ್ತು ನರೇಂದ್ರ ಮೋದಿ ಅವರ 'ಎಕ್ಸ್' ಖಾತೆಗಳಿಗೆ ಟ್ಯಾಗ್ ಮಾಡಿದ್ದಾರೆ.

ಬಿಜೆಪಿ ಪ್ರತಿಕ್ರಿಯೆ

ಈ ಅವಕಾಶವನ್ನು ಬಳಸಿಕೊಂಡಿರುವ ಬಿಜೆಪಿ ವಕ್ತಾರ ಸಿ.ಆರ್.ಕೇಶವನ್, 'ಸಿಂಗ್ ಅವರ ಎಕ್ಸ್ ಸಂದೇಶ ಕಾಂಗ್ರೆಸ್‌ನಲ್ಲಿನ ನಿರಂಕುಶ ಮತ್ತು ಪ್ರಜಾಪ್ರಭುತ್ವ ವಿರೋಧಿ ಆಂತರಿಕ ವ್ಯವಸ್ಥೆಯನ್ನು ತೆರೆದಿಡುವ ನೈಜ ಬಾಂಬ್. ರಾಹುಲ್ ಗಾಂಧಿ ಈ ಆಘಾತಕಾರಿ ಸತ್ಯದ ಬಾಂಬ್‌ಗೆ ಪ್ರತಿಕ್ರಿಯಿಸುತ್ತಾರೆಯೇ? ಬದಲಾವಣೆಗೆ ತೆರೆದುಕೊಳ್ಳುವ ಧೈರ್ಯ ತೋರುತ್ತಾರೆಯೇ?' ಎಂದು ಪ್ರಶ್ನಿಸಿದ್ದಾರೆ.

ಕಾಲ್ತುಳಿತ ದೋಷಾರೋಪ: ಅಲ್ಲು 11ನೇ ಆರೋಪಿ

ಹೈದರಾಬಾದ್: 2024ರ ಡಿಸೆಂಬರ್‌ನಲ್ಲಿ ಪುಷ್ಪಾ-2 ಚಿತ್ರ ಬಿಡುಗಡೆಯಾದಾಗ ಹೈದರಾಬಾದ್ ನಗರದಲ್ಲಿನ ಸಂಧ್ಯಾ ಚಿತ್ರಮಂದಿರದಲ್ಲಿ ಚಿತ್ರದ ನಾಯಕ ನಟ ಅಲ್ಲು ಅರ್ಜುನ್ ಆಗಮಿಸಿದ್ದಾಗ ಕಾಲ್ತುಳಿತವಾಗಿದ್ದು, ಮಹಿಳೆಯೊಬ್ಬರು ಮೃತಪಟ್ಟು ಅವರ ಅಪ್ರಾಪ್ತ ಮಗ ಗಾಯಗೊಂಡಿದ್ದ. ಈ ಪ್ರಕರಣಕ್ಕೆ ಸಂಬಂಧಿಸಿ ಹೈದರಾಬಾದ್ ನ್ಯಾಯಾಲಯಕ್ಕೆ ಚಿಕ್ಕಡಪಲ್ಲಿ ಠಾಣೆ ಪೊಲೀಸರು ಶನಿವಾರ 24 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಹೈದರಾಬಾದ್ ನಗರದ ಚಿಕ್ಕಡಪಲ್ಲಿ ಪೊಲೀಸ್ ಠಾಣೆಯ ತನಿಖಾಧಿಕಾರಿ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ನಟ ಅಲ್ಲು ಅರ್ಜುನ್‌ರನ್ನು 11ನೇ ಆರೋಪಿಯಾಗಿಸಲಾಗಿದೆ. ಜನಜಂಗುಳಿ ಹೆಚ್ಚಿದ್ದರೂ ಲೆಕ್ಕಿಸದೆ ಚಿತ್ರಮಂದಿರಕ್ಕೆ ಭೇಟಿ ನೀಡಿದ ಕಾರಣಕ್ಕೆ ಅಲ್ಲು ಅರ್ಜುನ್ ಹೆಸರನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಧ್ಯಾ ಚಿತ್ರಮಂದಿರದ ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದಾಗಿಯೇ ಕಾಲ್ತುಳಿತ ದುರಂತ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ. ಹೀಗಾಗಿ ಸಂಧ್ಯಾ ಚಿತ್ರಮಂದಿರದ ಮಾಲೀಕರನ್ನೇ ಆರೋಪಿ ನಂ. 1ಎಂದು ಹೆಸರಿಸಲಾಗಿದೆ.

ಅಲ್ಲದೇ, ದೋಷಾರೋಪ ಪಟ್ಟಿಯಲ್ಲಿ ಚಿತ್ರಮಂದಿರದ ಮೂವರು ವ್ಯವಸ್ಥಾಪಕರು ಮತ್ತು ಚಿತ್ರಮಂದಿರದ 8 ಬೌನ್ಸರ್‌ಗಳನ್ನು ಆರೋಪಿಗಳೆಂದು ಹೆಸರಿಸಲಾಗಿದೆ. ನಟ ಅಲ್ಲು ಅರ್ಜುನ್ ಅವರು ತಮ್ಮ ರಕ್ಷಣೆ ಕೆಲಸಕ್ಕೆ ನಿಯೋಜಿಸಿಕೊಂಡಿದ್ದ ಭದ್ರತಾ ಸಿಬ್ಬಂದಿಗಳನ್ನೂ ಆರೋಪಿಗಳ ಪಟ್ಟಿಗೆ ಸೇರಿಸಲಾಗಿದೆ.

ನಾಯಕ ನಟ ಸಂಧ್ಯಾ ಚಿತ್ರಮಂದಿರಕ್ಕೆ ಭೇಟಿ ಕೊಡುತ್ತಾರೆಂದು ತಿಳಿದಿದ್ದರೂ ಚಿತ್ರಮಂದಿರದ ಮಾಲೀಕರು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿಲ್ಲ. ದುರಂತದಲ್ಲಿ ಸ್ಥಳೀಯ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದಾರೆ. ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದ್ದಾರೆ. ಹಾಗಾಗಿಯೇ ಅವಘಡ ಸಂಭವಿಸಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಬಾಂಗ್ಲಾ ಜಿಹಾದಿ ದಾಳಿ: 25 ಜನಕ್ಕೆ ಗಾಯ

ಢಾಕಾ: ಅರಾಜಕಗೊಂಡಿರುವ ಬಾಂಗ್ಲಾದೇಶದಲ್ಲಿ ಹಿಂಸಾಚಾರ ಮುಂದುವರಿದೇ ಇದೆ. ಕಲಾವಿದರು, ಸಾಂಸ್ಕೃತಿಕ ಸಂಸ್ಥೆಗಳು, ಸಂಗೀತ ಕಾರ್ಯಕ್ರಮಗಳ ಮೇಲೆಯೂ ಜಿಹಾದಿಗಳು ದಾಳಿ ನಡೆಸುತ್ತಿದ್ದಾರೆ. ಬಾಂಗ್ಲಾದ ಪ್ರಸಿದ್ಧ ಹಿನ್ನೆಲೆ ಗಾಯಕ, ಗಿಟಾರ್ ವಾದಕ ಜೇಮ್ಸ್ ಫರೀದ್‌ಪುರದಲ್ಲಿನ ಸಂಗೀತ ಕಾರ್ಯಕ್ರಮಕ್ಕೆ ಜಿಹಾದಿ ಮನಸ್ಥಿತಿ ಗುಂಪು ನುಗ್ಗಿ ದಾಳಿ ನಡೆಸಿದೆ. ಹಿಂಸಾಚಾರದಲ್ಲಿ 20 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

1840ರಲ್ಲಿ ಬ್ರಿಟಿಷ್ ಆಳ್ವಿಕೆಯಡಿ ಆರಂಭಗೊಂಡ ಫರೀದ್‌ಪುರ ಜಿಲ್ಲಾ ಶಾಲೆ ಬಾಂಗ್ಲಾದಲ್ಲಿನ ಅತಿ ಹಳೆಯ ಸರಕಾರಿ ಶಾಲೆಯಾಗಿದ್ದು, 185ನೇ ವಾರ್ಷಿಕೋತ್ಸವದಂಗವಾಗಿ ಶುಕ್ರವಾರ ರಾತ್ರಿ 9.30ಕ್ಕೆ ಹಮ್ಮಿಕೊಂಡಿದ್ದ ಸಂಗೀತ ಕಛೇರಿಗೆ ಜಿಹಾದಿ ಗುಂಪು ನುಗ್ಗಿ ಕಾರ್ಯಕ್ರಮದಲ್ಲಿದ್ದವರ ಮೇಲೆ ಕಲ್ಲು-ಇಟ್ಟಿಗೆ ಎಸೆದು ದಾಂಧಲೆ ನಡೆಸಿದೆ. ಪರಿಣಾಮ 25ಕ್ಕೂ ಹೆಚ್ಚು ಮಂದಿ ಗಾಯಗೊಂಡರು.

ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಲೇಖಕಿ ತಸ್ಲೀಮಾ ನಸ್ರೀನ್, ಸಾಂಸ್ಕೃತಿಕ ಕೇಂದ್ರವಾದ ಛಾಯಾನಾಟ್ ಮತ್ತು ಜಾತ್ಯತೀತ ಪ್ರಜ್ಞೆ ಮೂಡಿಸುತ್ತಿದ್ದ 'ಉದೀಚಿ' ಸಂಘಟನೆಗಳನ್ನು ಸುಟ್ಟು ಹಾಕಿದ್ದ ಜಿಹಾದಿಗಳು ಈಗ ಖ್ಯಾತ ಗಾಯಕ ಜೇಮ್ಸ್ ಅವರನ್ನೂ ಹಾಡಲು ಬಿಡಲಿಲ್ಲ. ಬಾಂಗ್ಲಾದಲ್ಲಿ ಕಲಾವಿದರಿಗೆ ಸುರಕ್ಷೆ ಇಲ್ಲ ಎಂಬ ಕಾರಣಕ್ಕೇ ಅಲ್ಲಿನ ಆಹ್ವಾನವನ್ನು ಭಾರತದ ಖ್ಯಾತ ಸಂಗೀತಗಾರರಾದ ಸಿರಾಜ್ ಅಲಿ ಖಾನ್ ಮತ್ತು ಅರ್ಮಾನ್ ಖಾನ್ ತಿರಸ್ಕರಿಸಿದ್ದಾರೆ. ಇದು ಬಾಂಗ್ಲಾದಲ್ಲಿನ ಸಾಂಸ್ಕೃತಿಕ ಅವನತಿ' ಎಂದು ಕಿಡಿಕಾರಿದ್ದಾರೆ.

ದೆಹಲಿ ಆಪರೇಷನ್ ಆಘಾತ್

ದೆಹಲಿ: ದಶಕದಲ್ಲೇ ಕನಿಷ್ಠ ತಾಪಮಾನ, ಮೈ ಮರಗಟ್ಟಿಸುವ ಚಳಿ, ಇನ್ನೊಂದೆಡೆ ಉಸಿರಾಡುವುದೇ ಕಷ್ಟ ಎನ್ನುವಂತೆ ಇಡೀ ನಗರದ ವಾತಾವರಣವನ್ನು ಆವರಿಸಿಕೊಂಡಿರುವ ದಟ್ಟ ಹೊಗೆಯ ಮಧ್ಯೆಯೇ ರಾಷ್ಟ್ರ ರಾಜಧಾನಿ ದೆಹಲಿ 2026 ಹೊಸ ವರ್ಷವನ್ನು ಸ್ವಾಗತಿಸಲು ಸಜ್ಜಾಗುತ್ತಿದೆ. ಈ ಮಧ್ಯೆ, ದೆಹಲಿ ಪೊಲೀಸರು ಡಿ.31ರ ತಡರಾತ್ರಿ ವರ್ಷಾಚರಣೆ ವೇಳೆಯಲ್ಲಿ ನಗರದಲ್ಲಿ ಮಾಡಬೇಕಾದ ಭದ್ರತಾ ವ್ಯವಸ್ಥೆ ಕುರಿತು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಇದರ ಮಧ್ಯೆಯೇ ಶುಕ್ರವಾರ ರಾತ್ರಿಯಿಂದ ಮಹತ್ವದ 'ಆಪರೇಷನ್ ಆಘಾತ್: 3.0' ಕಾರ್ಯಾಚರಣೆ ಕೈಗೊಂಡು ಮುನ್ನೆಚ್ಚರಿಕೆ ಕ್ರಮವಾಗಿ 500ಕ್ಕೂ ಅಧಿಕ ಜನರನ್ನು ಬಂಧಿಸಿ, ಡಜನ್ ಗಟ್ಟಲೆ ಅಕ್ರಮ ಶಸ್ತ್ರಾಸ್ತ್ರಗಳನ್ನು ಅವರ ಬಳಿಯಿಂದ ವಶಪಡಿಸಿಕೊಂಡಿದ್ದಾರೆ.

ಹೊಸ ವರ್ಷಾಚರಣೆ ಸಂದರ್ಭ ಸಮಾಜಘಾತಕ ಶಕ್ತಿಗಳಿಂದ ನಾಗರಿಕ ಸಮಾಜಕ್ಕೆ ತೊಂದರೆ ಆಗದಿರಲಿ ಎಂಬ ಮುಂಜಾಗ್ರತೆ ಕ್ರಮ, ಅಪರಾಧಗಳನ್ನು ಮುಂಚಿತವಾಗಿ ತಡೆಗಟ್ಟುವ ಉದ್ದೇಶದಿಂದ ಆಪರೇಷನ್ ಆಘಾತ್ 3.0 ನಡೆಸಲಾಗಿದೆ. ಉದ್ದೇಶಪೂರ್ವಕವಾಗಿ ಗಲಭೆ ಸೃಷ್ಟಿಸುವ ದುರುದ್ದೇಶ ಹೊಂದಿರುವ ವ್ಯಕ್ತಿಗಳನ್ನು ಶಂಕೆಯ ಮೇರೆಗೆ 285 ಜನರನ್ನು ಬಂಧಿಸಲಾಗಿದೆ. ಅಕ್ರಮ ಶಸ್ತ್ರಾಸ್ತ್ರ, ಅಬಕಾರಿ ಮತ್ತು ಎನ್‌ಡಿಪಿಎಸ್ ಕಾಯಿದೆಗಳಡಿ ಹಾಗೂ ಜೂಜಾಟ ತಡೆ ಕಾಯಿದೆಯ ವಿವಿಧ ನಿಬಂಧನೆಗಳಡಿ ಬಂಧನ ಕ್ರಮ ಜರುಗಿಸಲಾಗಿದೆ ಎಂದು ದೆಹಲಿ ಆಗ್ನೇಯ ಜಿಲ್ಲೆ ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರಿಂದ 21 ಅಕ್ರಮ ಶಸ್ತ್ರಾಸ್ತ್ರಗಳು, 231 ದ್ವಿಚಕ್ರ ವಾಹನಗಳು ಮತ್ತು 27 ಕಾರುಗಳು, 12,000ಕ್ಕೂ ಹೆಚ್ಚು ಮದ್ಯದ ಬಾಟಲಿಗಳು, 2.50 ಲಕ್ಷ ರು. ನಗದು ಮತ್ತು 7 ಕೆಜಿ ಗಾಂಜಾ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ. 210 ಕಳವು ಮೊಬೈಲ್ ಫೋನ್‌ಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಟ್ರಂಪ್-ಝೆಲೆನ್‌ಸ್ಕಿ ಭೇಟಿ ಮುನ್ನ ರಷ್ಯಾ ದಾಳಿ

ಕೀವ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರನ್ನು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಭಾನುವಾರ ಭೇಟಿ ಮಾಡಿ ಯಾವುದೇ ಪೂರ್ವ ಷರತ್ತುಗಳಿಲ್ಲದೇ ರಷ್ಯಾವನ್ನು ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಸುವಂತೆ ಮನವಿ ಮಾಡಲಿದ್ದಾರೆ ಎಂದು ತಿಳಿದುಬಂದಿದೆ. ಆದರೆ, ಅದಕ್ಕೂ ಮುನ್ನವೇ ರಷ್ಯಾ ವೈಮಾನಿಕ ದಾಳಿಯನ್ನು ತೀವ್ರಗೊಳಿಸಿದೆ. ಉಕ್ರೇನ್ ರಾಜಧಾನಿ ಕೀವ್ ನಗರದ ಮೇಲೆ ಶನಿವಾರ ಮುಂಜಾನೆಯೇ ತೀವ್ರ ಸ್ವರೂಪದ ದಾಳಿ ಮಾಡಿದೆ. ಪರಿಣಾಮವಾಗಿ ಕೀವ್ ನಗರದ ಹಲವೆಡೆ ದೊಡ್ಡ ಮಟ್ಟದ ಸ್ಫೋಟಗಳಾಗಿದ್ದು, ಅದರ ಶಬ್ದಕ್ಕೇ ಜನರು ಭಯಗೊಂಡಿದ್ದಾರೆ ಎನ್ನಲಾಗಿದೆ. ಪ್ರತಿಯಾಗಿ ಉಕ್ರೇನ್ ಸೇನೆಯೂ ರಕ್ಷಣಾತ್ಮಕವಾಗಿ ಪ್ರತಿ ದಾಳಿ ಮಾಡಲಾರಂಭಿಸಿದೆ ಎಂದು ವರದಿಯಾಗಿದೆ. ಉಕ್ರೇನ್ ನ್ಯಾಟೊ ಒಕ್ಕೂಟ ಸೇರದಂತೆ ತಡೆಯುವ ಉದ್ದೇಶದಿಂದ ರಷ್ಯಾ ಶುರು ಮಾಡಿದ ಯುದ್ಧಕ್ಕೀಗ 4ನೇ ವರ್ಷ.

'ಸಿಸಿಟಿವಿ' ದೃಶ್ಯ ಕಂಡು ಭದ್ರತಾಪಡೆಗಳಿಗೇ ಅಚ್ಚರಿ | ಸೇನೆ-ಪೊಲೀಸ್ ಶೋಧ

ಕಾಶ್ಮೀರ ಮಾರುಕಟ್ಟೆ: ಲಷ್ಕರೆ ಉಗ್ರರಿಬ್ಬರ ಓಡಾಟ

ಅನಂತನಾಗ್: ಪಹಲ್ಗಾಮ್ ಉಗ್ರ ದಾಳಿಯ ಬಳಿಕ ಪಾಕಿಸ್ತಾನ ಮೂಲದ ಭಯೋತ್ಪಾದಕರು ಜಮ್ಮು-ಕಾಶ್ಮೀರದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಅಡಗುತಾಣಗಳನ್ನು ದಟ್ಟ ಅರಣ್ಯ ಪ್ರದೇಶಗಳಿಗೆ ಸ್ಥಳಾಂತರಿಸಿದ್ದಾರೆ ಎಂದೇ ಹೇಳಲಾಗುತ್ತಿತ್ತು. ಆದರೆ, ಆಘಾತಕಾರಿ ಸಂಗತಿ ಏನೆಂದರೆ ಪಾಕ್ ಮೂಲದ ಭಯೋತ್ಪಾದಕ ಸಂಘಟನೆ 'ಲಷ್ಕರ್-ಎ-ತಯ್ಯಬಾ'(ಎಲ್‌ಇಟಿ) ಉಗ್ರ ಸಂಘಟನೆಗೆ ಸೇರಿದ ಇಬ್ಬರು ಉಗ್ರರು ದಕ್ಷಿಣ ಕಾಶ್ಮೀರ ಭಾಗದಲ್ಲಿ ಸ್ಥಳೀಯ ಮಾರುಕಟ್ಟೆ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದಾರೆ. ತಲೆಗೆ ಉಣ್ಣೆಯ ಕಪ್ಪು ಟೋಪಿ ಹಾಗೂ ಭುಜದಿಂದ ಪಾದದವರೆಗೂ ಮೈಮುಚ್ಚುವಂತಹ ದಪ್ಪದಾದ ನಿಲುವಂಗಿಯನ್ನು ಧರಿಸಿರುವ ಇಬ್ಬರೂ ಉಗ್ರರು ಯಾವುದೇ ಆತಂಕ, ಆತುರ ಇಲ್ಲದೇ ಪರಸ್ಪರ ಮಾತನಾಡಿಕೊಂಡು ನಡೆದು ಹೋಗುತ್ತಿರುವುದು ಸ್ಥಳೀಯ ವ್ಯಾಪಾರಿ ಮಳಿಗೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ.

ಇಬ್ಬರು ಉಗ್ರರ ಚಿತ್ರಗಳು ಸಿಸಿಟಿವಿ ದೃಶ್ಯಾವಳಿಗಳಲ್ಲಿ ಕಂಡು ಬಂದಿರುವುದರಿಂದ ಗುರುತಿಸುವುದು ಸುಲಭವಾಗಿದೆ. ಒಬ್ಬ ಉಗ್ರ ಕುಲ್ಗಾಮ್ ಜಿಲ್ಲೆಯ ಖೆರ್ವಾನ್ ನಿವಾಸಿ ಮೊಹಮದ್ ಲತೀಫ್ ಭಟ್, ಮತ್ತೊಬ್ಬ ಪಾಕಿಸ್ತಾನದ ಹಮ್ಜ್ ಉಲ್ಲಾ ಎಂದು ಗುರುತಿಸಲಾಗಿದೆ.

ಭದ್ರತಾಪಡೆಗಳು ಅನಂತ್ ನಾಗ್ ಜಿಲ್ಲೆ ಸೇರಿದಂತೆ ದಕ್ಷಿಣ ಕಾಶ್ಮೀರದ ವಿವಿಧೆಡೆ ಉಗ್ರರಿಗಾಗಿ ತೀವ್ರ ಶೋಧ ಕಾರ್ಯಾಚರಣೆ ನಡೆಸುತ್ತಿವೆ. ಪ್ರಸ್ತುತ ಡೆಂಗರ್‌ಪೋರಾ ಮತ್ತು ಕಾಜಿಬಾಗ್ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಭಾರತೀಯ ಸೇನಾಪಡೆಯ ತುಕಡಿಗಳು ಹಾಗೂ ಜಮ್ಮು-ಕಾಶ್ಮೀರದ ಪೊಲೀಸ್ ಇಲಾಖೆಯ ವಿಶೇಷ ತಂಡ ಜಂಟಿಯಾಗಿ ಶೋಧ ನಡೆಸುತ್ತಿದ್ದಾರೆ.

ಸಿಸಿಟಿವಿ ಇರುವೆಡೆಯೇ ಕಾಣಿಸಿರುವುದು ಅಚ್ಚರಿ

ಇಬ್ಬರೂ ಉಗ್ರರು ಮಾರುಕಟ್ಟೆ ಪ್ರದೇಶದಲ್ಲಿಯೇ ರಾಜಾರೋಷವಾಗಿ ಕಾಣಿಸಿಕೊಂಡಿರುವುದು, ಅದೂ ಸಿಸಿಟಿವಿ ಇರುವ ಮಾರ್ಗದಲ್ಲೇ ನಡೆದುಕೊಂಡು ಹೋಗಿರುವುದು ಭದ್ರತಾ ಪಡೆಗಳನ್ನು ಗೊಂದಲಕ್ಕೆ ಕೆಡವಿದೆ. ಉಗ್ರರ ಉದ್ದೇಶ ಏನಾಗಿರಬಹುದು ಎಂಬ ಬಗ್ಗೆ ಹಲವು ಅನುಮಾನಗಳು ಮೂಡಿವೆ. ಭದ್ರತಾ ಪಡೆಗಳು ಭಯೋತ್ಪಾದಕರ ಚಲನವಲನ ತಿಳಿಯಲು ಗುಪ್ತಚರ ಇಲಾಖೆ ಮೊರೆ ಹೋಗಿವೆ. ಸ್ಥಳೀಯ ನಿವಾಸಿಗಳಿಂದಲೂ ಮಾಹಿತಿ ಸಂಗ್ರಹಿಸುತ್ತಿವೆ.

ಸಮಾಚಾರ ಸಣ್ಣದಲ್ಲ

ಭೂತಾನ್ ಪ್ರವಾಸಕ್ಕೆ ಯಕ್ಷ ದೀವಿಗೆ ಸಂಸ್ಥೆ

ತುಮಕೂರು: ಜಿಲ್ಲೆಯಲ್ಲಿ ಯಕ್ಷಗಾನ ತರಬೇತಿ, ಸಂಘಟನೆ ಹಾಗೂ ಪ್ರದರ್ಶನಗಳನ್ನು ಕಳೆದ ಹತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಯಕ್ಷದೀವಿಗೆ ಸಂಸ್ಥೆಯು ಭೂತಾನ್ ಅಧ್ಯಯನ ಪ್ರವಾಸಕ್ಕೆ ಆಯ್ಕೆಯಾಗಿದೆ. ಇಂಡಿಯಾ-ಭೂತಾನ್ ಫೌಂಡೇಶನ್ ಈ ಯೋಜನೆಗೆ ಆರ್ಥಿಕ ಬೆಂಬಲ ನೀಡಿದೆ.'ಕರ್ನಾಟಕದ ಯಕ್ಷಗಾನ ಮತ್ತು ಭೂತಾನ್ನ ಮುಖವಾಡ ನೃತ್ಯ: ಒಂದು ತೌಲನಿಕ ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನ ಯೋಜನೆಯು ಇದಾಗಿದ್ದು, ಯಕ್ಷದೀವಿಗೆಯ ಪ್ರತಿನಿಧಿಗಳಾಗಿ ತುಮಕೂರು ವಿದ್ಯಾನಿಧಿ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕಿ ಡಾ. ಆರತಿ ಪಟ್ರಮೆ, ತುಮಕೂರು ವಿವಿ ಪತ್ರಿಕೋದ್ಯಮ ಸಹಪ್ರಾಧ್ಯಾಪಕ ಡಾ. ಸಿಬಂತಿ ಪದ್ಮನಾಭ ಕೆ.ವಿ. ಹಾಗೂ ಎಸ್.ಎಸ್.ಪುರಂ ಮಾರುತಿ ವಿದ್ಯಾಕೇಂದ್ರದ ವಿದ್ಯಾರ್ಥಿ ಸಂವೃತ ಎಸ್.ಪಿ. ಭಾಗವಹಿಸಲಿದ್ದಾರೆ. ಜನವರಿ 2ರಿಂದ ಎರಡು ವಾರ ಅಧ್ಯಯನ ಪ್ರವಾಸ ಕೈಗೊಳ್ಳಲಿರುವ ಯಕ್ಷದೀವಿಗೆ ತಂಡ ಭೂತಾನ್ನ ರಾಜಧಾನಿ ಥಿಂಪು, ಸಾಂಸ್ಕೃತಿಕ ನಗರಗಳಾದ ಪಾರೊ, ಪುನಾಖಗಳಿಗೆ ಭೇಟಿ ನೀಡಿ ಅಧ್ಯಯನ ಕೈಗೊಳ್ಳಲಿದೆ. ಮುಖವಾಡ ನೃತ್ಯದ ಉಗಮ ಸ್ಥಾನಗಳಾದ ಬೌದ್ಧ ವಿಹಾರಗಳನ್ನು ಸಂದರ್ಶಿಸಿ ಕಲೆಯ ಪ್ರಾಚೀನತೆ, ವೈಶಿಷ್ಟ್ಯ, ಸಾಂಸ್ಕೃತಿಕ ಮಹತ್ವ ವಿಶ್ಲೇಷಿಸಲಿದೆ.

ಮಾವು ಬೆಳೆಗಾರರಿಗೆ ತರಬೇತಿ ಡಿ.29 ರಂದು

ಚಿಕ್ಕಬಳ್ಳಾಪುರ: ಮಾವು ಬೆಳೆಯ ಸಮಗ್ರ ಪೋಷಕಾಂಶ ನಿರ್ವಹಣೆ, ಕೀಟ ಮತ್ತು ರೋಗ ನಿಯಂತ್ರಣ ಹಾಗೂ ರಫ್ತು ಮಾರುಕಟ್ಟೆಗೆ ಉತ್ತೇಜನ ಕುರಿತು ಮಾವು ಬೆಳೆಗಾರರಿಗೆ ತರಬೇತಿ ಡಿಸೆಂಬರ್29 ರಂದು ಬೆಳಿಗ್ಗೆ 11 ಗಂಟೆಗೆ ಚಿಂತಾಮಣಿ ಮಾಡಿಕೆರೆ ಮಾವು ಕೊಯ್ಲೋತ್ತರ ನಿರ್ವಹಣೆ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮ ಉದ್ಘಾಟನೆ ಉಸ್ತುವಾರಿ ಸಚಿವ ಡಾ. ಎಂ.ಸಿ.ಸುಧಾಕರ್‌ಅವರು ನೆರವೇರಿಸಲಿದ್ದಾರೆ. ಗೌರವ ಉಪಸ್ಥಿತಿಯನ್ನು ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ವಹಿಸುವರು. ಮುಖ್ಯ ಅತಿಥಿಗಳಾಗಿ ಕೋಲಾರ ಸಂಸದರಾದ ಎಂ.ಮಲ್ಲೇಶ್ ಬಾಬು, ರಾಜ್ಯ ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ. ಬಿ.ಸಿ. ಮುದ್ದು ಗಂಗಾಧರ್ ,ವಿಧಾನ ಪರಿಷತ್ತು ಶಾಸಕರಾದ ಚಿಂದಾನಂದ ಎಂ. ಗೌಡ, ಎಂ.ಎಲ್. ಅನಿಲ್ ಕುಮಾರ್,ಡಿ.ಟಿ. ಶ್ರೀನಿವಾಸ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಮುನಿನಾರಾಯಣಪ್ಪ, ಊಲವಾಡಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ರತ್ನಮ್ಮ, ಭಾಗವಹಿಸುವರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಚಿಕ್ಕಬಳ್ಳಾಪುರ: ವಿದ್ಯುತ್ ಪರಿವರ್ತಕ-2 ರಲ್ಲಿ ನಿರ್ವಹಣೆ ಕಾಮಗಾರಿ ಡಿ. 28 ರಂದು ಕೈಗೊಂಡಿದ್ದು ಈ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಚಿಕ್ಕಬಳ್ಳಾಪುರ ನಗರ, ಕೈಗಾರಿಕಾ ಪ್ರದೇಶ ಮತ್ತು ನಂದಿ 66/11 ಕೆ.ವಿ. ಉಪ ವಿದ್ಯುತ್ ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಕಡಿತಗೊಳ್ಳಲಿದ್ದು ನಂದಿ, ನಂದಿಕ್ರಾಸ್, ಬೀಡಗಾನಹಳ್ಳಿ, ನಂದಿಬೆಟ್ಟ, ಸುಲ್ತಾನ್ಪೇಟೆ, ಸಿಂಗಾಟಕದಿರೇನಹಳ್ಳಿ, ಹೊಸೂರು, ಮುದ್ದೇನಹಳ್ಳಿ, ಕುಪ್ಪಹಳ್ಳಿ, ಪಟ್ರೇನಹಳ್ಳಿ, ಜಾತವಾರ, ಹೊಸಹುಡ್ಯ, ಅಜ್ಜವಾರ, ದಿಬ್ಬೂರು, ಮಂಚನಬಲೆ, ಕೇತೇನಹಳ್ಳಿ, ರೆಡ್ಡಿಗೊಲ್ಲರಹಳ್ಳಿ, ಹಾರೋಬಂಡೆ, ಗುಂಡ್ಲಗುರ್ಕಿ, ಜಿಲ್ಲಾಡಳಿತ ಭವನ, ತಿಪ್ಪೇನಹಳ್ಳಿ, ಕಣಜೇನಹಳ್ಳಿ, ಮೈಲಪ್ಪನಹಳ್ಳಿ, ಕಂದವಾರ, ಚದಲಪುರ, ಗವಿಗಾನಹಳ್ಳಿ, ಕಣಿತಹಳ್ಳಿ, ಬೊಮ್ಮನಹಳ್ಳಿ, ಅಗಲಗುರ್ಕಿ, ಹೊನ್ನೇನಹಳ್ಳಿ, ಕೆಳಗಿನ ತೋಟ, ಜಕ್ಕಲಮಡಗು, ಸುತ್ತಲಿನ ಪ್ರದೇಶಗಳಿಗೆ ಡಿ. 28 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಚಿಕ್ಕಬಳ್ಳಾಪುರ ಬೆ.ವಿ.ಕಂ ಕಾರ್ಯನಿರ್ವಾಹಕ ಇಂಜಿನಿಯರ್ ಪಿ.ಜಿ. ರಮೇಶ್ ಕುಮಾರ ತಿಳಿಸಿದ್ದಾರೆ.

ವಿಶ್ವಮಾನವ ದಿನಾಚರಣೆ 29 ರಂದು

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವಮಾನವ ದಿನಾಚರಣೆಯನ್ನು ಡಿ. 29 ರಂದು ಸಂಜೆ 4 ಗಂಟೆಗೆ ನಗರದ ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್‌ನೆರವೇರಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶಿವರಾಜ್ ಎಸ್ ತಂಗಡಗಿ ಆಗಮಿಸಲಿದ್ದಾರೆ. ಕ್ಷೇತ್ರದ ಶಾಸಕರಾದ ಪ್ರದೀಪ್ ಈಶ್ವರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಡಾ. ಕೆ.ಸುಧಾಕರ್,ಎಂ. ಮಲ್ಲೇಶ್ ಬಾಬು, ಶಾಸಕರುಗಳಾದ ಎಸ್.ಎನ್. ಸುಬ್ಬಾರೆಡ್ಡಿ, ರವಿಕುಮಾರ್, ಪುಟ್ಟಸ್ವಾಮಿಗೌಡ, ವಿಧಾನ ಪರಿಷತ್ತು ಶಾಸಕರಾದ ಚಿದಾನಂದ ಗೌಡ, ಎಂ.ಎಲ್.ಅನಿಲ್ ಕುಮಾರ್, ಡಿ.ಟಿ. ಶ್ರೀನಿವಾಸ, ಡಾ. ಹೆಚ್.ನರಸಿಂಹಯ್ಯ ಪ್ರಾಧಿಕಾರದ ಅಧ್ಯಕ್ಷ ಎನ್.ಹೆಚ್ ಶಿವಶಂಕರರೆಡ್ಡಿ, ಉಗ್ರಾಣ ನಿಗಮದ ಅಧ್ಯಕ್ಷ ಎನ್.ಸಂಪಂಗಿ ಪಾಲ್ಗೊಳ್ಳುವರು.

{ಡಾ.ಜಿ.ಪರಮೇಶ್ವರ್ } ಗೃಹ ಸಚಿವ

ನಾವು ವೇದಿಕೆಗಳಲ್ಲಿ ಮಾತನಾಡುವ ರೀತಿ ನಡೆದುಕೊಳ್ಳುತ್ತಿಲ್ಲ. ನಮ್ಮ ನಡತೆ ಸರಿ ಹೋಗದ ಹೊರತು ಸಮಾನತೆ ಎಂಬುದು ಸಾಧ್ಯವಿಲ್ಲ. ಕೆಳ ಜಾತಿಯ ಹುಡುಗನನ್ನು ಮದುವೆಯಾದಳು ಎಂಬ ಕಾರಣಕ್ಕೆ ತಂದೆಯೇ ತನ್ನ ಗರ್ಭಿಣಿ ಮಗಳನ್ನೇ ಕೊಲ್ಲುವ ಘಟನೆ ನಡೆಯುತ್ತಿವೆ. ಹೀಗಿರುವಾಗ ನಮ್ಮ ಭಾರತೀಯ ಸಂಸ್ಕೃತಿ, ಪರಂಪರೆ ಎಷ್ಟು ಎತ್ತರಕ್ಕೆ ಬೆಳೆದರೇನು ಪ್ರಯೋಜನ ಹೇಳಿ.

ಅಧಿಕಾರಿಗಳೊಂದಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸಭೆ | ಅರಣ್ಯ ಭೂಮಿ ಕಬಳಿಸುವವರ ವಿರುದ್ಧ ಕ್ರಮ

ಚಿರತೆಗಳ ಸೆರೆಗೆ 31 ಹೊಸ ಬೋನು ಖರೀದಿಗೆ ಸಮ್ಮತಿ

ಅರಣ್ಯ, ಪರಿಸರ ಸಚಿವ ಈಶ್ವರ ಬಿ . ಖಂಡ್ರೆ ಅವರು ತುಮಕೂರು ನಗರದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ತುಮಕೂರು: ಈಗ ಎಲ್ಲೆಡೆ ಭೂಮಿಗೆ ಬಂಗಾರದ ಬೆಲೆ ಬಂದಿದ್ದು ಕೆಲವರು ನಕಲಿ ದಾಖಲೆ ಸೃಷ್ಟಿಸಿ ಅರಣ್ಯ ಭೂಮಿ ಕಬಳಿಸಲು ಯತ್ನಿಸುತ್ತಿದ್ದಾರೆ. ಕೂಡಲೇ ಪೊಲೀಸ್ ದೂರು ದಾಖಲಿಸುವುದರ ಜತೆಗೆ ಅರಣ್ಯ ಅಪರಾಧ ಕಾಯ್ದೆಯಡಿ ಪ್ರಕರಣ ದಾಖಲಿಸುವಂತೆ ಅರಣ್ಯ, ಪರಿಸರ ಸಚಿವ ಈಶ್ವರ ಬಿ . ಖಂಡ್ರೆ, ಸೂಚಿಸಿದರು.

ನಗರದ ಅರಣ್ಯ ಇಲಾಖೆ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾತನಾಡಿದರು.

ತುಮಕೂರು ಬಯಲು ಸೀಮೆ. ಇಲ್ಲಿ ಇರುವ ಅರಣ್ಯ ಪ್ರದೇಶವೇ ಕಡಿಮೆ. ಇದರಲ್ಲಿ ಒತ್ತುವರಿಯೂ ಆಗಿದೆ. ಜತೆಗೆ ಕೆಲವರು ನಕಲಿ ದಾಖಲೆ ಸೃಷ್ಟಿಸಿ ಅರಣ್ಯದ ಮೇಲೆ ಹಕ್ಕು ಚಲಾಯಿಸುತ್ತಿದ್ದರೆ, ಇನ್ನು ಕೆಲವು ಕಡೆ ಅಕ್ರಮ ಮಂಜೂರಾತಿ ಆಗಿದೆ ಈ ಬಗ್ಗೆ ಅರಣ್ಯಾಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಚಿರತೆ ಸೆರೆಗೆ ಬೋನು :

ತುಮಕೂರು ಜಿಲ್ಲೆಯ 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ಚಿರತೆ, ಮಾನವ ಸಂಘರ್ಷವಿದ್ದು ಜನ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಸಚಿವರು, ಕೂಡಲೇ 31 ಹೊಸ ಬೋನುಗಳನ್ನು ಖರೀದಿಸಲು ಸಮ್ಮತಿ ಸೂಚಿಸಿದರು. ಯಾವುದೇ ಗ್ರಾಮದ ಬಳಿ ಚಿರತೆ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿ ಬಂದರೆ ಕೂಡಲೇ ವನ್ಯಜೀವಿ ವಿಭಾಗದ ಸಿಬ್ಬಂದಿ ಕಳುಹಿಸಿ ಕೊಡಿ. ಸ್ಥಳ ಪರಿಶೀಲಿಸಿ ಚಿರತೆ ಸಂಚಾರ ಖಚಿತವಾದರೆ, ಬೋನುಗಳನ್ನು ಇಡಲು ತುರ್ತು ಕ್ರಮ ವಹಿಸುವಂತೆ ಅರಣ್ಯ ಅದಿಕಾರಿಗಳಿಗೆ ಸಚಿವರು ಸೂಚಿಸಿದರು.

ಕ್ಷೀಣಿಸಿದ ಅರಣ್ಯಗಳಲ್ಲಿ ಬರುವ ಮುಂಗಾರಿನಲ್ಲಿ ಸಸಿ ನೆಟ್ಟು ಅರಣ್ಯ ಸಂವರ್ಧನೆ ಮಾಡಲೂ ಸೂಚಿಸಿದರು.

ತಿಪಟೂರಿನಲ್ಲಿ ಕಮಾಂಡ್ ಸೆಂಟರ್‌ತೆರೆಯಲು ಕ್ರಮ ವಹಿಸುವಂತೆಯೂ ಸಚಿವರು ತಿಳಿಸಿದರು. ಸಭೆಯಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಏಳುಕೊಂಡಲ ಮತ್ತಿತರರು ಪಾಲ್ಗೊಂಡಿದ್ದರು.

ರಸ್ತೆ ಬದಿ ಸಸಿಗಳ ನೆಟ್ಟು ಪೋಷಿಸಿ

ಜಿಲ್ಲೆಯ ನಗರ ಪ್ರದೇಶಗಳ ಎಲ್ಲ ರಸ್ತೆ ಬದಿಗಳಲ್ಲಿ ಸಸಿಗಳನ್ನು ನೆಟ್ಟು ಪೋಷಿಸಲು ಕ್ರಮ ವಹಿಸಬೇಕು, ರಸ್ತೆ ಬದಿಯ ಸಸಿಗಳ ಸುತ್ತ ಕನಿಷ್ಠ 3 ಅಡಿ ಮಣ್ಣು ಅಗೆಸುವಂತೆ ನಿಗಾ ವಹಿಸಬೇಕು, ಎಷ್ಟು ಸಸಿ ಬದುಕಿ ಉಳಿದಿವೆ ಎಂಬ ಬಗ್ಗೆ ಕೂಡ ಆಡಿಟ್ ಮಾಡಿಸಬೇಕು ಎಂದು ಸಚಿವ ಈಶ್ವರ ಬಿ . ಖಂಡ್ರೆ, ಅರಣ್ಯ ಅಧಿಕಾರಿಗಳಿಗೆ ತಿಳಿಸಿದರು.

ತುಮಕೂರು ಜಿಲ್ಲೆಯಲ್ಲಿ 30 ಕಡೆ ರಾತ್ರಿ ವಿಶೇಷ ಕ್ಯಾಮೆರಾ ಅಳವಡಿಕೆ

ಚಿರತೆ ಸೆರೆಗೆ ವಿಶೇಷ ಕಾರ್ಯಪಡೆ ರಚನೆ

ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ತುಮಕೂರು: ಜಿಲ್ಲೆಯ ತುರುವೇಕೆರೆಯಲ್ಲಿ ಇತ್ತೀಚೆಗೆ ನಡೆದ ಚಿರತೆ ದಾಳಿ ಪ್ರಕರಣದ ಬೆನ್ನಲ್ಲೇ ಚಿಕ್ಕನಾಯಕನಹಳ್ಳಿ ಹಾಗೂ ತಿಪಟೂರು ತಾಲೂಕುಗಳಲ್ಲೂ ಚಿರತೆಗಳ ಹಾವಳಿ ಬಗ್ಗೆ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿ ದೂರು ಬಂದ ಹಿನ್ನೆಲೆಯಲ್ಲಿ ಚಿರತೆಗಳ ಸೆರೆಗಾಗಿ ಜಿಲ್ಲಾಡಳಿತದಿಂದ ವಿಶೇಷ ಕಾರ್ಯಪಡೆ ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದವಾರ ತುರುವೇಕೆರೆಯಲ್ಲಿ ನಡೆದ ಚಿರತೆ ದಾಳಿಯ ಭೀಕರ ಘಟನೆಯ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ, ಚಿರತೆಗಳನ್ನು ಸೆರೆಹಿಡಿಯಲು ಮತ್ತು ಜನರಲ್ಲಿ ಜಾಗೃತಿ ಮೂಡಿಸಲು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದೆ. ವಿಶೇಷ ಕಾರ್ಯಪಡೆಯು ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ ಒಳಗೊಂಡಿದ್ದು, ಪ್ರತಿ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲು ಪ್ರತಿ ಹಳ್ಳಿಯಲ್ಲೂ ಸುರಕ್ಷತೆಯ ಭಾಗವಾಗಿ ಸಾರ್ವಜನಿಕರು ಒಂಟಿಯಾಗಿ ಸಂಚರಿಸದಂತೆ ಮತ್ತು ಸಂಜೆ ವೇಳೆ ಎಚ್ಚರಿಕೆಯಿಂದ ಇರುವಂತೆ ಜನರಲ್ಲಿ ಜಾಗೃತಿ ಮೂಡಿಲಾಗುತ್ತಿದೆ ಎಂದು ಹೇಳಿದರು.

ಡಿ. 21ರಂದು ತುರುವೇಕೆರೆಯ ದಬ್ಬೇಘಟ್ಟ ಹೋಬಳಿಯ ಅರೆಮಲ್ಲೇನಹಳ್ಳಿಯಲ್ಲಿ ಸುಜಾತಾ (35) ಎಂಬ ಮಹಿಳೆ ಕುರಿ ಮೇಯಿಸಲು ಹೋದಾಗ ಚಿರತೆ ದಾಳಿ ನಡೆಸಿ ಮೃತಪಟ್ಟಿದ್ದರು. ಈ ಘಟನೆಯಿಂದ ಸಾರ್ವಜನಿಕರು ಆ ಭಾಗದಲ್ಲಿ20ಕ್ಕೂ ಹೆಚ್ಚು ಚಿರತೆಗಳಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಬೇರೆ ಜಿಲ್ಲೆಗಳಿಂದ ರಾತ್ರಿ ವೀಕ್ಷಣೆಯ ವಿಶೇಷ ಕ್ಯಾಮೆರಾಗಳನ್ನು ತರಿಸಲಾಗಿದ್ದು, ಚಿರತೆ ಸಂಚಾರವಿರುವ 30ಕ್ಕೂ ಹೆಚ್ಚು ಕಡೆ ಅಳವಡಿಸಿ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಚಿರತೆಗಳ ಓಡಾಟ ಹೆಚ್ಚಿರುವ ಜಾಗಗಳಲ್ಲಿ ಹೆಚ್ಚಿನ ಸಂಖ್ಯೆಯ ಬೋನುಗಳನ್ನು ಇರಿಸಲಾಗಿದೆ. ಈಗಾಗಲೇ 8 ವರ್ಷದ ಗಂಡು ಚಿರತೆ ಹಾಗೂ ಹೆಣ್ಣು ಚಿರತೆ ಹಿಡಿಯಲಾಗಿದೆ. ಗಂಡು ಚಿರತೆಯನ್ನು ಸುರಕ್ಷಿತವಾಗಿ ಬನ್ನೇರುಘಟ್ಟ ಅರಣ್ಯಕ್ಕೆ ಬಿಡಲಾಗಿದೆ ಎಂದು ಹೇಳಿದರು.

ಮೃತ ಸುಜಾತಾ ಅವರ ಕುಟುಂಬಕ್ಕೆ ಸರಕಾರ ಐದು ಲಕ್ಷ ರೂ.ಗಳು ಹಾಗೂ ಭದ್ರ ಟೈಗರ್ ರೀಸರ್ವ್ ವತಿಯಿಂದ 15 ಲಕ್ಷ ರೂ. ಪರಿಹಾರ ನೀಡಲಾಗಿದೆ. ಮೃತ ಮಹಿಳೆಯ ಮಗನ ವಿದ್ಯಾಭ್ಯಾಸಕ್ಕಾಗಿ ಮುಂದಿನ 5 ವರ್ಷಗಳವರೆಗೆ ಪ್ರತಿ ತಿಂಗಳು4000 ರೂ. ಆರ್ಥಿಕ ನೆರವು ನೀಡುವುದಾಗಿ ಹೇಳಿದರು.

ಬೋನಿಗೆ ಬೀಳದ ಚಿರತೆಗಳನ್ನು ಸೆರೆಹಿಡಿಯಲು ಸರಕಾರ ವಿಶೇಷ ಅನುಮತಿ ನೀಡಿದೆ. ಇದಕ್ಕಾಗಿ ಇಬ್ಬರು ಪಶು ವೈದ್ಯರು ತುರುವೇಕೆರೆಯಲ್ಲಿ ಬೀಡುಬಿಟ್ಟಿದ್ದು, ಚಿರತೆ ಕಂಡ ತಕ್ಷಣ ಚುಚ್ಚುಮದ್ದು ನೀಡಿ ಸೆರೆಹಿಡಿಯಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ವನ್ಯಮೃಗಗಳ ಸಂಚಾರ ಪಥ ಪತ್ತೆಗೆ ಸಮೀಕ್ಷೆ

ಜಿಲ್ಲೆಯಲ್ಲಿ ವನ್ಯಮೃಗಗಳ ಸಂಖ್ಯೆ ಹಾಗೂ ಅವುಗಳ ಸಂಚಾರ ಪಥ ನಿಖರವಾಗಿ ಪತ್ತೆಹಚ್ಚಲು ಬರುವ ಜನವರಿ ತಿಂಗಳಿನಿಂದ ಅಧಿಕೃತ ಸಮೀಕ್ಷೆ ಆರಂಭವಾಗಲಿದೆ. ಕಾಡುಪ್ರಾಣಿಗಳು ಆಹಾರ ಮತ್ತು ನೀರಿಗಾಗಿ ಸಂಚರಿಸುತ್ತಿವೆ, ಜಿಲ್ಲೆಯಲ್ಲಿ ಯಾವ ಯಾವ ಪ್ರಾಣಿಗಳು ಎಷ್ಟು ಸಂಖ್ಯೆಯಲ್ಲಿವೆ, ಎಂಬುದನ್ನು ವೈಜ್ಞಾನಿಕವಾಗಿ ದಾಖಲಿಸುವುದು ಈ ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಹೇಳಿದರು.

ಮೂಲ ನಿವಾಸಿಗಳು ಸೌಲಭ್ಯಗಳಿಂದ ವಂಚನೆ: ಭಾಸ್ಕರ್

ಬೇನಾಮಿ ಹೆಸರಿಗೆ ಸರಕಾರಿ ಸೌಲತ್ತು

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಭಾಸ್ಕರ್ ಅಂಕಾಲ ಮೊಡಗು ಶಿವಾರೆಡ್ಡಿ ಮಾತನಾಡಿದರು.

ಚಿಕ್ಕಬಳ್ಳಾಪುರ: ಜಿಲ್ಲೆಯ ಚಿಂತಾಮಣಿ ತಾಲೂಕು ಕಡದನಮರಿ ಪಂಚಾಯಿತಿಯಲ್ಲಿ ಹರ್ಘರ್‌ಜಲ್ ನೀರು ಸಂಪರ್ಕದ ಚಂದಾದಾರರ ಪಟ್ಟಿಯಲ್ಲಿ ಅನಿವಾಸಿಗಳ ಅಕ್ರಮ ಸೇರ್ಪಡೆ ಮೂಲಕ 14,15ನೇ ಹಣಕಾಸು ಆಯೋಗದ ಅನುದಾನವನ್ನು ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಭಾಸ್ಕರ್‌ಅಂಕಾಲಮೊಡಗು ಶಿವಾರೆಡ್ಡಿ ಆರೋಪಿಸಿದ್ದಾರೆ. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಮ್ಮ ಪಂಚಾಯಿತಿಯಲ್ಲಿ ಜಲಜೀವನ ಮಿಷನ್ ಮತ್ತು ಎಂ.ಜಿ.ನರೇಗಾ, ಪಂಚಾಯತ್ರಾಜ್, ಗ್ರಾಮೀಣ ಅನುದಾನಗಳ ಅಕ್ರಮ ದುರುಪಯೋಗವಾಗಿದೆ.ಈ ಬಗ್ಗೆ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದರೆ ನಾವು ಕೇಳಿರುವ ಮಾಹಿತಿ ಬಿಟ್ಟು ಬೇರೆಯದೇ ಮಾಹಿತಿ ನೀಡುವ ಮೂಲಕ ಅಧಿಕಾರಿಗಳು ಅಕ್ರಮ ನಡೆಸುವವರ ಪರ ವಹಿಸಿರುವುದು ಸ್ಪಷ್ಟವಾಗಿದೆ.ಹೀಗಾಗಿ ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ ಜಿಲ್ಲಾಧಿಕಾರಿ ಈ ಬಗ್ಗೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಕಡದನಮರಿ ಗ್ರಾಮ ಪಂಚಾಯಿತಿಯಲ್ಲಿ ಕಳೆದ ಹಲವು ವರ್ಷಗಳಿಂದ ನಡೆಯುತ್ತಿರುವ ಆಡಳಿತಾತ್ಮಕ ಅವ್ಯವಸ್ಥೆ, ಪಾರದರ್ಶಕತೆಯ ಕೊರತೆ, ಸಾರ್ವಜನಿಕ ನಿಧಿಗಳ ದುರ್ಬಳಕೆ ಕುರಿತು ಮಾಧ್ಯಮದ ಮೂಲಕ ಅಧಿಕಾರಿಗಳ ಗಮನ ಸೆಳೆಯುವ ಕೆಲಸ ಮಾಡುತ್ತಿದ್ದೇನೆ ಎಂದರು.

ಪೌರಕಾರ್ಮಿಕರಿಗೆ ಬೆಡ್‌ಶೀಟ್, ಜರ್ಕಿನ್ ವಿತರಣೆ

ಮಾಜಿ ಜಿಪಂ ಸದಸ್ಯ ಪಿ.ಎನ್.ಕೃಷ್ಣಮೂರ್ತಿ ಅವರು ಪೌರ ಕಾರ್ಮಿಕರಿಗೆ , ಬೆಡ್ ಶೀಟ್ , ಜರ್ಕಿನ್ ವಿತರಣೆ ಮಾಡಿದರು.

ಕೊರಟಗೆರೆ: ನಮ್ಮ ಊರು ಸ್ವಚ್ಛವಾಗಿಬೇಕು ಎಂದರೆ ಪಟ್ಟಣದ ಪೌರಕಾರ್ಮಿಕರ ಕೊಡುಗೆ ದೊಡ್ಡದು. ಪ್ರತ್ರಿದಿನ ಕೆಲಸ ಮಾಡುವ ಪೌರ ಕಾರ್ಮಿಕರಿಗೆ ಸಣ್ಣಉಡುಗರೆ ನೀಡುತ್ತಿದ್ದೇವೆ ಎಂದು ಮಾಜಿ ಜಿಪಂ ಸದಸ್ಯ ಪಿ.ಎನ್.ಕೃಷ್ಣಮೂರ್ತಿ ತಿಳಿಸಿದರು. ಕೊರಟಗೆರೆ ಪಟ್ಟಣದಲ್ಲಿ ಮಾಜಿ ಜಿಪಂ ಸದಸ್ಯ ಪಿ.ಎನ್. ಕೃಷ್ಣಮೂರ್ತಿಅಭಿಮಾನಿ ಬಳಗ ಏರ್ಪಡಿಸಲಾಗಿದ್ದಕೊರಟಗೆರೆ ಪಪಂ ಪೌರಕಾರ್ಮಿಕರಿಗೆ ಬೆಡ್ಶೀಟ್, ಜರ್ಕಿನ್ ವಿತರಣೆ ಮಾಡಿ ಮಾತನಾಡಿದರು.

ಪೌರಕಾರ್ಮಿಕರು ಚಳಿ, ಗಾಳಿ, ಮಳೆ ಎನ್ನದೆ ಬೆಳಿಗ್ಗೆ 5 ಗಂಟೆಗೆಎದ್ದು ಪಟ್ಟಣವನ್ನ ಸ್ವಚ್ಛಗೊಳಿಸಿ ನಮಗೆ ಉತ್ತಮ ಪರಿಸರ ಸೃಷ್ಠಿ ಮಾಡಿಕೊಡುತ್ತಾರೆ. ಅವರು ಚಳಿಯಲ್ಲಿ ನಡುಗಬಾರದು ಎನ್ನುವ ಉದ್ದೇಶದಿಂದ ಪಟ್ಟಣದ ಎಲ್ಲಾ ಪೌರಕಾರ್ಮಿಕರಿಗೆ ಬೆಡ್ಶೀಟ್, ಜರ್ಕಿನ್ ಕೊಡಲಾಗಿದೆ ಎಂದರು.

ಕೊರಟಗೆರೆ ಕ್ಷೇತ್ರದ ಜನತೆಯ ಅಭಿಮಾನಕ್ಕೆ ನಾನು ಚಿರಋಣಿಯಾಗಿದ್ದೇನೆ. ನಾನು 30 ವರ್ಷದಿಂದ ಕೊರಟಗೆರೆ ಜನತೆಯ ಜೊತೆ ಉತ್ತಮ ಒಡನಾಟ ಇಟ್ಟುಕೊಂಡಿದ್ದು, ಅವರ ಕಷ್ಟ ಸುಖಗಳಲ್ಲಿ ಭಾಗವಹಿಸಿ ನನ್ನಕೈಲಾದ ಸಹಾಯ ಮಾಡಿಕೊಂಡು ಬಂದಿದ್ದೇನೆ. ಮುಂದೆನೂ ಸಹ ನಾನು ನಿಮ್ಮ ಜೊತೆ ಇರುತ್ತೇನೆ. ನಿಮ್ಮ ಈ ಪ್ರೀತಿ ವಿಶ್ವಾಸಕ್ಕೆ ನಾನು ಅಭಾರಿಯಾಗಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಪ.ಪಂ ಸದಸ್ಯ ಅಶ್ವಥನಾರಾಯಣರಾಜು, ಮುಖಂಡರುಗಳಾದ ವಿಜಯ್ಕುಮಾರ್, ಆರ್.ಎಸ್.ರಾಜಣ್ಣ, ಕಾಂತರಾಜು, ಚೌಡಪ್ಪ, ಕೃಷ್ಣಪ್ಪ, ರಮೇಶ್, ಲಕ್ಷ್ಮೀಕಾಂತ, ಕಾಂತಣ್ಣ ಇದ್ದರು.

ಮಹಿಳೆಗೆ ಮಹಿಳೆಯೇ ಸ್ಫೂರ್ತಿಯಾಗಬೇಕು

ಚಿಕ್ಕನಾಯಕನಹಳ್ಳಿಯ ಶ್ರೀ ಬನಶಂಕರಿ ಪ್ರಾರ್ಥನಾ ಮಂದಿರದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ನಡೆದ ಮಹಿಳಾ ವಿಚಾರಗೋಷ್ಠಿಯನ್ನು ತಹಸೀಲ್ದಾರ್ ಎಂ. ಮಮತಾ ಉದ್ಘಾಟಿಸಿದರು.

ಚಿಕ್ಕನಾಯಕನಹಳ್ಳಿ: ಸಮಾಜದಲ್ಲಿ ಪ್ರತಿಯೊಂದು ಹೆಣ್ಣಿಗೂ ತಾಳ್ಮೆ, ಸಹನೆ, ಧೈರ್ಯ ಮತ್ತು ಮನೋಸ್ಥೈರ್ಯದ ಮೂಲಕ ಕುಟುಂಬ ಕಟ್ಟುವ ಮಹತ್ತರ ಜವಾಬ್ದಾರಿಯಿದ್ದು ಮಹಿಳೆಗೆ ಮಹಿಳೆಯೇ ಸ್ಫೂರ್ತಿಯಾಗಬೇಕು ಎಂದು ತಹಸೀಲ್ದಾರ್ ಮಮತಾ ಎಂ. ತಿಳಿಸಿದರು.

ಪಟ್ಟಣದ ಶ್ರೀ ಬನಶಂಕರಿ ಪ್ರಾರ್ಥನಾ ಮಂದಿರದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ, ಸ್ವ-ಉದ್ಯೋಗ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವಿವಿಧ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ತಮಗೆ ಸಿಗುವ ಅವಕಾಶಗಳನ್ನು ಬಳಸಿಕೊಂಡು ಪ್ರತಿಯೊಂದು ಕ್ಷೇತ್ರದಲ್ಲಿ ಸಾಧನೆ ಮಾಡುವ ಮೂಲಕ ತಮ್ಮ ಶಕ್ತಿಯನ್ನು ಬಿಂಬಿಸಿಕೊಳ್ಳಬೇಕು. ಹೆಣ್ಣು ಮತ್ತು ಗಂಡು ಎಂಬ ಭೇದಭಾವ ಮಾಡದೆ, ಮನೆಯ ಗಂಡು ಮಕ್ಕಳಿಗೆ ನೀಡುವ ಗೌರವ ಹಾಗೂ ಸ್ಥಾನಮಾನಗಳನ್ನು ಹೆಣ್ಣು ಮಕ್ಕಳಿಗೂ ನೀಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ನಿರ್ದೇಶಕ ಪ್ರವೀಣ್ ಕುಮಾರ್ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾದಾಗ ಮಾತ್ರ ಕುಟುಂಬ ಮತ್ತು ಸಮಾಜದಲ್ಲಿ ಬದಲಾವಣೆ ಸಾಧ್ಯ. ಬಾಲ್ಯವಿವಾಹ ತಡೆ ಹಾಗೂ ''ಬೇಟಿ ಬಚಾವೋ ಬೇಟಿ ಪಡಾವೋ'' ಘೋಷಣೆಗಳು ಕೇವಲ ಮಾತಿಗೆ ಸೀಮಿತವಾಗದೆ ಕಾರ್ಯಗತಗೊಳ್ಳಬೇಕು ಎಂದರು.

ವಿಶೇಷ ಉಪನ್ಯಾಸ ನೀಡಿದ ಕಾಚಪುರ ರಂಗಪ್ಪ ಅವರು, ಆಧುನಿಕತೆ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗೆ ಮರುಳಾಗಿ ಮಕ್ಕಳ ಭವಿಷ್ಯವನ್ನು ಹಾಳು ಮಾಡಬಾರದು. ಪೋಷಕರು ಮಕ್ಕಳನ್ನು ಸರಿಯಾದ ದಾರಿಯಲ್ಲಿ ನಡೆಸದಿದ್ದರೆ ಅವರು ದುಶ್ಚಟಗಳಿಗೆ ಬಲಿಯಾಗುವ ಸಾಧ್ಯತೆಯಿದೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲಕ್ಷ್ಮೀ ಮಾತನಾಡಿ, ಧರ್ಮಸ್ಥಳ ಯೋಜನೆಯು ಮಹಿಳೆಯರಿಗೆ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಭದ್ರ ಬುನಾದಿ ಹಾಕಿಕೊಟ್ಟಿದೆ ಎಂದರು.

ರಂಗೋಲಿ ಸ್ಪರ್ಧೆ, ಪುಷ್ಪಗುಚ್ಛ ತಯಾರಿಕೆ ಹಾಗೂ ಗುಡಿ ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ ಆಯೋಜಿಸಲಾಗಿತ್ತು. ವಿವಿಧ ಕ್ಷೇತ್ರಗಳ ಮಹಿಳಾ ಸಾಧಕರನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಯೋಜನಾ ನಿರ್ದೇಶಕ ಪ್ರೇಮಾನಂದ್ ಜನಜಾಗೃತಿ ವೇದಿಕೆ ಸದಸ್ಯ ಜಯಪ್ರಭ, ಕವಿತಾ ಹಾಗೂ ಸಂಘದ ಮೇಲ್ವಿಚಾರಕರು ಉಪಸ್ಥಿತರಿದ್ದರು.

ಶ್ರೀ ರಂಭಾಪುರಿ ಜಗದ್ಗುರುಗಳ ಧನುರ್ಮಾಸ ಪೂಜೆ



ರಂಭಾಪುರಿ ಪೀಠದ ಶ್ರೀ ಪ್ರಸನ್ನ ರೇಣುಕಾ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಜಗದ್ಗುರುಗಳ ಧನುರ್ಮಾಸದ ಇಷ್ಟಲಿಂಗ ಮಹಾಪೂಜೆ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ನೆರವೇರಿತು.

ತುಮಕೂರು: ಬಾಳೆಹೊನ್ನೂರು ರಂಭಾಪುರಿ ಪೀಠದ ಶ್ರೀ ಪ್ರಸನ್ನ ರೇಣುಕಾ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಜಗದ್ಗುರುಗಳ ಧನುರ್ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಸಾಮೂಹಿಕ ಶಿವ ಪೂಜೆ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ನೆರವೇರಿತು. ಸಿದ್ದರಬೆಟ್ಟ ಶಾಖಾ ಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ನೇತೃತ್ವವಹಿಸಿದ್ದರು. ನಗರ ವೀರಶೈವ ಸಮಾಜ ಸೇವಾ ಸಮಿತಿಯು ಈ ಪೂಜಾ ಕಾರ್ಯಕ್ರಮ ಆಯೋಜಿಸಿತ್ತು.

ವೀರಶೈವ ಸಮಾಜದ ಉಪಾಧ್ಯಕ್ಷ ಟಿ.ಬಿ. ಹರೀಶ್, ಕಾರ್ಯದರ್ಶಿ ಡಿ.ಜೆ. ಶಶಿಧರನ್, ಖಜಾಂಚಿ ಜಿ.ಕೆ.ಸ್ವಾಮಿ, ಮುಖಂಡರಾದ ಕೋರಿ ಮಂಜುನಾಥ್, ಬಾವಿಕಟ್ಟೆ ಬಿ.ಎಸ್. ಮಂಜುನಾಥ್, ಸಿದ್ದಲಿಂಗಪ್ಪ ಸೇರಿದಂತೆ ಸಮಿತಿ ನಿರ್ದೇಶಕರು, ಸಮಾಜದ ಹಲವು ಮುಖಂಡರು, ಹೆಚ್ಚಿನ ಸಂಖ್ಯೆಯ ಭಕ್ತರು ರಂಭಾಪುರಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ ಹಾಗೂ ಸಾಮೂಹಿಕ ಶಿವಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ತುಮುಲ್ ಮಾಜಿ ಅಧ್ಯಕ್ಷ ಶಿವನಂಜಪ್ಪ ನಿಧನ

ತುಮಕೂರು: ತುಮಕೂರು ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ (ತುಮುಲ್) ಮಾಜಿ ಅಧ್ಯಕ್ಷರು ಹಾಗೂ ಹಿರಿಯ ಸಹಕಾರಿ ಮುಖಂಡರಾದ ಹಳೇಮನೆ ಶಿವನಂಜಪ್ಪ (79) ಅವರು ಶನಿವಾರ ವಿಧಿವಶರಾಗಿದ್ದಾರೆ. ಕಳೆದ ಕೆಲವು ದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಮೃತರು ಅಪಾರ ಬಂಧು-ಬಳಗ ಹಾಗೂ ಅಭಿಮಾನಿಗಳನ್ನು ಅಗಲಿದ್ದಾರೆ.

ಗಣನೀಯ ಸೇವೆ: ಹಳೇಮನೆ ಶಿವನಂಜಪ್ಪ ಅವರು ತುಮಕೂರು ಹಾಲು ಒಕ್ಕೂಟದ ಅಧ್ಯಕ್ಷರಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದರು. ಅವರ ಅವಧಿಯಲ್ಲಿ ಒಕ್ಕೂಟ ಅನೇಕ ಸಾಧನೆಗಳನ್ನು ಸ್ಥಾಪಿಸಿತ್ತು. ರೈತರ ಹಿತರಕ್ಷಣೆ ಮತ್ತು ಹೈನುಗಾರಿಕೆ ಲಾಭದಾಯಕವಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೇವಲ ಹಾಲು ಒಕ್ಕೂಟ ಮಾತ್ರವಲ್ಲದೆ, ಜಿಲ್ಲೆಯ ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಅಂತ್ಯಕ್ರಿಯೆ ಇಂದು: ಮೃತರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವರ ಸ್ವಗ್ರಾಮದಲ್ಲಿ ವ್ಯವಸ್ಥೆ ಮಾಡಲಾಗಿದೆ. ಭಾನುವಾರ 11 ಗಂಟೆಯ ಸುಮಾರಿಗೆ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದನೆ

ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ.ಷಹೀದ್ ತೆಕ್ಕಿಲ್ ಕೋಲಾರಕ್ಕೆ ಭೇಟಿ ನೀಡಿ ಮಾತನಾಡಿದರು.

ಕೋಲಾರ: ಅಸಂಘಟಿತ ಮತ್ತು ಸಂಘಟಿತ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದನೆ ನೀಡುವ ಮೂಲಕ ದುಡಿಯುವ ಸಮುದಾಯಕ್ಕೆ ಶಕ್ತಿ ತುಂಬಲಾಗುವುದೆಂದು ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ.ಷಹೀದ್ ತೆಕ್ಕಿಲ್ ಹೇಳಿದರು.

ನಗರದ ಕ್ಲಾಕ್ಟವರ್ನ ದರ್ಗಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕನಿಷ್ಠ ವೇತನ ರಾಜ್ಯದ ಎಲ್ಲ ಕಾರ್ಮಿಕರಿಗೆ ದೊರಕಿಸಿಕೊಡುವಲ್ಲಿ ಸಿಎಂ ಸಿದ್ದರಾಮಯ್ಯ ಅವರು ನನಗೆ ಕ್ಯಾಬಿನೆಟ್ ಸ್ಥಾನಮಾನದ ಸಮಿತಿ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದು ಕಾರ್ಮಿಕರ ಹಿತಾಸಕ್ತಿ ಕಾಪಾಡುವ ಮೂಲಕ ಸರಕಾರದ ಋಣ ತೀರಿಸುತ್ತೇನೆಂದರು.

ಕಾರ್ಮಿಕರಿಗೆ ಸಮರ್ಪಕ ವೇತನವನ್ನು ಪಾವತಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತದೆ. ಎನ್‌ಎಸ್ಯುಐ, ಯುವ ಕಾಂಗ್ರೆಸ್, ಕಾಂಗ್ರೆಸ್ ಸಂಘಟನೆಯಿಂದಾಗಿ ಕೋಲಾರದ ಜತೆ ನನಗೆ ಅತೀವ ನಂಟಿದ್ದು ಜಿಲ್ಲೆಯ ಕಾಂಗ್ರೆಸ್ ಜನಪ್ರತಿನಿಧಿಗಳೊಂದಿಗೆ ಉತ್ತಮ ಬಾಂಧವ್ಯವಿದೆ. ದೇಶದ ಮುಲ್ಲಾ, ಪಾದ್ರಿ, ಮಠಾಧೀಶರ ದೂರದೃಷ್ಟಿ, ತ್ಯಾಗ, ಕೋಮು ಸೌಹಾರ್ದತೆಯಿಂದಾಗಿ ಎಲ್ಲ ಜಾತಿಗಳು ಒಂದಾಗಿ ಮುನ್ನಡೆಯುತ್ತಿದ್ದಾರೆ. ಮಸೀದಿ, ಮಠ, ಚರ್ಚ್ಗಳಿಗೆ ತೆರಳಿ ಕಾರ್ಮಿಕರ ಒಳಿತಿಗೆ ನಾನು ಪ್ರಾರ್ಥನೆ ಸಲ್ಲಿಸಿದ್ದು ಕರ್ನಾಟಕ ಮತ್ತು ದೆಹಲಿಯಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಲಾಗುತ್ತಿದೆ ಎಂದು ಷಹೀದ್ ತೆಕ್ಕಿಲ್ ತಿಳಿಸಿದರು.

ಕೆಪಿಸಿಸಿ ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಸಮೀರ್‌ಪಾಷ, ಬ್ಲಾಕ್ ಅಧ್ಯಕ್ಷ ಆರೋಗ್ಯನಾಥನ್, ಕಾರ್ಯದರ್ಶಿ ಮಂಜುನಾಥ್, ಮಸೀದಿ ಅಧ್ಯಕ್ಷ ನಯ್ಯೂ ಇದ್ದರು.

ಬಿಳ್ಳೂರು ಫ್ಲೈಓವರ್‌ಉದ್ಘಾಟಿಸಿದ ಸಂಸದರು

ಕೋಲಾರ ಸಂಸದ ಮಲ್ಲೇಶ್ ಬಾಬು ಬಿಳ್ಳೂರು ಫ್ಲೈಓವರ್‌ಉದ್ಘಾಟಿಸಿದರು.

ಕೋಲಾರ: ಬಿಳ್ಳೂರು - ನರಸಾಪುರ ಕೈಗಾರಿಕಾ ಪ್ರದೇಶ ಸಂಪರ್ಕಿಸುವ ನೂತನ ಫ್ಲೈ ಓವರ್ ಅನ್ನು ಸಂಸದ ಮಲ್ಲೇಶ್ ಬಾಬು ಉದ್ಘಾಟಿಸಿದರು.

ನ್ಯಾಷನಲ್ ಹೈವೇ ಅಥಾರಿಟಿಯಿಂದ ಗುಣಮಟ್ಟದ ಕಾಮಗಾರಿ ನಡೆಸಲಾಗಿದ್ದು 1.8ಕಿಮೀ ಬ್ರಿಡ್ಜ್, 28 ಕೋಟಿ ರೂ. ವೆಚ್ಚ ಮಾಡಲಾಗಿದೆ. ನರಸಿಂಹತೀರ್ಥ, ವಡ್ಡಹಳ್ಳಿ, ನಂಗಲಿ, ವಡಗೂರು ಮತ್ತು ತಂಬಳ್ಳಿ ಫ್ಲೈ ಓವರ್ಗಳನ್ನು ಎರಡು ತಿಂಗಳಲ್ಲಿ ಉದ್ಘಾಟಿಸಲಾಗುತ್ತಿದ್ದು ಇದರಿಂದಾಗಿ ಪ್ರಯಾಣಿಕರಿಗೆ ಅನುಕೂಲ ಆಗಲಿದೆ. ಈ ರಸ್ತೆಯಲ್ಲಿ 23 ಬ್ಲಾಕ್ ಸ್ಪಾಟ್ಗಳನ್ನು ಗುರ್ತಿಸಲಾಗಿದ್ದು ಕೇಂದ್ರ ಸಚಿವ ಗಡ್ಕರಿ ಅವರ ಜತೆ ಚರ್ಚೆ ಮಾಡಿ ಮಾತನಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಚಿಹ್ನೆ ಇಲ್ಲದ ಕಾರಣ ಮಾಜಿ ಪ್ರಧಾನಿ ದೇವೇಗೌಡರು ಬಿಜೆಪಿ-ಜೆಡಿಎಸ್ ಮೈತ್ರಿ ಅಗತ್ಯ ಇಲ್ಲ ಎಂದು ಹೇಳಿದ್ದು ಇದಕ್ಕೆ ಮತ್ಯಾವುದೇ ಅರ್ಥ ಕಲ್ಪಿಸಬೇಕಿಲ್ಲ. ನರೇಗಾ ಹೆಸರು ಮನ್ರೇಗಾ ಆಗಿತ್ತು. ಇದೀಗ ಮತ್ತೊಂದು ಹೊಸ ಹೆಸರು ಇಡಲಾಗಿದ್ದು ಇದಕ್ಕೆ ವಿಪಕ್ಷಗಳು ಪ್ರತಿಭಟನೆ ಮಾಡುವ ಅಗತ್ಯ ಇಲ್ಲ ಎಂದು ಸಂಸದರು ಪ್ರತಿಕ್ರಿಯಿಸಿದರು.

ದಳಪತಿ ಸಿಎಂಆರ್‌ಶ್ರೀನಾಥ್, ಬಿಜೆಪಿ ಜಿಲ್ಲಾಧ್ಯಕ್ಷ ಓಂಶಕ್ತಿ ಚಲಪತಿ, ಜೆಡಿಎಸ್ ತಾಲೂಕು ಅಧ್ಯಕ್ಷ ಬಾಬುಮೌನಿ, ಕೂಡಾ ಮಾಜಿ ಅಧ್ಯಕ್ಷ ವಿಜಯಕುಮಾರ್, ಕಾಮಗಾರಿ ಗುತ್ತಿಗೆ ಸಂಸ್ಥೆ ಮುದ್ದಲೂರು ಇನ್ಫ್ರಾ ಟೆಕ್ನ ಜನರಲ್ ಮ್ಯಾನೇಜರ್ ರಾಮಚಂದ್ರಾರೆಡ್ಡಿ, ಎಂಜಿನಿಯರ್ ಜಸ್ವಂತ್ರೆಡ್ಡಿ, ಸಿಸಿಂದ್ರಿ, ಮುಸ್ತಾಫ್, ಹಿದಾಯತ್ತುಲ್ಲಾ ಇದ್ದರು.

ಬುಡಕಟ್ಟುಗಳ ಆಯೋಗದ ಅಧ್ಯಕ್ಷರ ಪ್ರವಾಸ 29 ರಂದು

ಚಿಕ್ಕಬಳ್ಳಾಪುರ: ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರು ಡಿ.29 ರಂದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗೊಂಡ ಪ್ರವಾಸ ಕಾರ್ಯಕ್ರಮಗಳು ಇಂತಿವೆ. ಅಂದು ಬೆಳಿಗ್ಗೆ 11 ಗಂಟೆಗೆ ಜಿಪಂ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಸಂವಾದ ಕಾರ್ಯಕ್ರಮವದಲ್ಲಿ ಭಾಗವಹಿಸಲಿದ್ದಾರೆ. ನಂತರ ಬೆಳಿಗ್ಗೆ 11:30 ರಿಂದ 2:15 ಗಂಟೆಯವರೆಗೆ ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿವಿಧ ಯೋಜನೆಗಳ ಅಡಿ ನೀಡಲಾ ಗಿರುವ ಅನುದಾನದ ಬಗ್ಗೆ ಪರಿಶೀಲನಾ ಸಭೆಯಲ್ಲಿ ಭಾಗವಹಿ ಸುವರು. ನಂತರ ಮಧ್ಯಾಹ್ನ 2:15 ಗಂಟೆಗೆ ಪತ್ರಿಕಾ ಗೋಷ್ಠಿಯನ್ನು ಏರ್ಪಡಿಸಲಾಗಿರುತ್ತದೆ ಎಂದು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಈ ವರ್ಷ ಹೆಚ್ಚು ವಿಕೆಟ್ ಕುಲ್‌ದೀಪ್‌ಗೆ ಅಗ್ರಸ್ಥಾನ

ದೆಹಲಿ: ಟೀಮ್ ಇಂಡಿಯಾದ ಮಿಸ್ಟ್ರಿ ಸ್ಪಿನ್ ಬೌಲರ್ ಕುಲ್‌ದೀಪ್ ಯಾದವ್ ಅವರು ಈ ವರ್ಷ ಅತಿ ಹೆಚ್ಚು ವಿಕೆಟ್ ಉರುಳಿಸಿದ ಭಾರತದ ಬೌಲರ್ ಆಗಿ ಹೊ ಹೊಮ್ಮಿದ್ದಾರೆ. 2025ರಲ್ಲಿ 25 ಪಂದ್ಯಗಳನ್ನು ಆಡಿದ ಅವರು, 20.48 ಸರಾಸರಿ, 4.58 ಎಕಾನಮಿಯಲ್ಲಿ 60 ವಿಕೆಟ್ ಕಬಳಿಸಿದ್ದಾರೆ. 2025ರಲ್ಲಿ ಹೆಚ್ಚು ವಿಕೆಟ್ ಪಡೆದ ಭಾರತೀಯ ಬೌಲರ್‌ಗಳ ಪೈಕಿ ವರುಣ್ ಚಕ್ರವರ್ತಿ ಅವರು ಎರಡನೇ ಸ್ಥಾನದಲ್ಲಿ ಇದ್ದಾರೆ. ಈ ವರ್ಷ ಒಟ್ಟು 24 ಪಂದ್ಯಗಳನ್ನು ಆಡಿರುವ ವರುಣ್ ಚಕ್ರವರ್ತಿ 46 ವಿಕೆಟ್‌ಗಳನ್ನ ಪಡೆದುಕೊಂಡಿದ್ದಾರೆ. ವೇಗದ ಬೌಲರ್ ಜಸ್‌ಪ್ರಿತ್ ಬುಮ್ರಾ ಈ ವರ್ಷ 21 ಪಂದ್ಯಗಳನ್ನು ಆಡಿದ್ದು ಸರಾಸರಿ 21.77 ಹಾಗೂ ಎಕಾನಮಿ 3.44 ರಲ್ಲಿ ಬೌಲಿಂಗ್ ಮಾಡಿ 45 ವಿಕೆಟ್‌ಗಳನ್ನು ಉರುಳಿಸಿದ್ದಾರೆ. ಈ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಬುಮ್ರಾ ತೃಪ್ತಿ ಪಟ್ಟಿದ್ದಾರೆ. ಮೊಹಮ್ಮದ್ ಸಿರಾಜ್ ಅವರು 13 ಪಂದ್ಯಗಳಲ್ಲಿ ಸರಾಸರಿ 28.08 ಹಾಗೂ ಎಕಾನಮಿ 3.82 ರಲ್ಲಿ ಬೌಲಿಂಗ್ ಮಾಡಿ 45 ವಿಕೆಟ್ ಪಡೆದುಕೊಂಡಿದ್ದಾರೆ. ಆಲ್‌ರೌಂಡರ್ ರವಿಂದ್ರ ಜಡೇಜಾ 2025ರಲ್ಲಿ 20 ಪಂದ್ಯಗಳಲ್ಲಿ ಆಡಿ ಸರಾಸರಿ 36.64 ಹಾಗೂ ಎಕಾನಮಿ 3.53 ರಲ್ಲಿ ಬೌಲಿಂಗ್ ಮಾಡಿ 37 ವಿಕೆಟ್‌ಗಳನ್ನು ಪಡೆದಿದ್ದಾರೆ.

ಟಿಮ್ ಡೇವಿಡ್‌ಗೆ ಗಾಯ ಐಪಿಎಲ್ ಪಂದ್ಯಕ್ಕೆ ಗೈರು?



ದೆಹಲಿ: ಐಪಿಎಲ್ 2026ಕ್ಕೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಇದರ ನಡುವೆಯೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸ್ಟಾರ್ ಆಟಗಾರ ಆಸ್ಟ್ರೇಲಿಯಾದ ಆಲ್‌ರೌಂಡರ್ ಟಿಮ್ ಡೇವಿಡ್ ಗಾಯಗೊಂಡಿದ್ದು, ಐಪಿಎಲ್ ಟೂರ್ನಿಯಲ್ಲಿ ಪಾಲ್ಗೊಳ್ಳುವುದು ಅನುಮಾನ ಎಂದು ಹೇಳಲಾಗುತ್ತಿದೆ. ಆರ್‌ಸಿಬಿ ತಂಡದ ಪ್ರಮುಖ ಆಟಗಾರ ಟಿಮ್ ಡೇವಿಡ್ ಬಿಗ್ ಬ್ಯಾಷ್ ಲೀಗ್ ಪಂದ್ಯದ ವೇಳೆ ಗಂಭೀರವಾಗಿ ಗಾಯಗೊಂಡಿದ್ದಾರೆ. ಪರ್ತ್‌ನಲ್ಲಿ ನಡೆದ ಬಿಗ್ ಬ್ಯಾಷ್ ಲೀಗ್‌ನ 12ನೇ ಪಂದ್ಯದಲ್ಲಿ ಹೋಬರ್ಟ್ ಹರಿಕೇನ್ಸ್ ಪರ ಕಣಕ್ಕಿಳಿದಿದ್ದ ಟಿಮ್ ಡೇವಿಡ್ ಬ್ಯಾಟಿಂಗ್ ವೇಳೆ ಮಂಡಿರಜ್ಜು ಗಾಯಕ್ಕೆ ಒಳಗಾಗಿದ್ದಾರೆ. ಈ ಗಾಯದ ಕಾರಣ ಟಿಮ್ ಡೇವಿಡ್ ಅರ್ಧದಲ್ಲೇ ಬ್ಯಾಟಿಂಗ್ ನಿಲ್ಲಿಸಿ ಪೆವಿಲಿಯನ್‌ಗೆ ಮರಳಿದ್ದಾರೆ. ವೈದ್ಯರು ಅವರಿಗೆ ಹೆಚ್ಚಿನ ವಿಶ್ರಾಂತಿ ಸೂಚಿಸಿದ್ದಾರೆ. ಇದರ ಬೆನ್ನಲ್ಲೇ ಟಿಮ್ ಡೇವಿಡ್ ಫೆ. 7ರಿಂದ ಆರಂಭವಾಗುವ ಟಿ20 ವಿಶ್ವಕಪ್‌ನಲ್ಲಿ ಕಣಕ್ಕಿಳಿಯುವುದು ಅನುಮಾನ ಎಂಬ ಸುದ್ದಿಗಳು ಕೂಡ ಹರಿದಾಡುತ್ತಿದೆ.

ಎರಡೇ ದಿನದಲ್ಲಿ ಮುಗಿದ ಆ್ಯಶಸ್ ಸರಣಿ 4ನೇ ಟೆಸ್ಟ್ ಪಂದ್ಯ | ಇಂಗ್ಲೆಂಡ್‌ನ 14 ವರ್ಷಗಳ ಗೆಲುವಿನ ಬರ ಅಂತ್ಯ

ಬಾಕ್ಸಿಂಗ್ ಡೇ ಪಂದ್ಯ ಗೆದ್ದು ಬೀಗಿದ ಇಂಗ್ಲೆಂಡ್

ಮೆಲ್ಬರ್ನ್: ಇಂಗ್ಲೆಂಡ್ ಕ್ರಿಕೆಟ್ ತಂಡ ಆಸ್ಟ್ರೇಲಿಯಾ ನೆಲದಲ್ಲಿ 14 ವರ್ಷಗಳ ನಂತರ ಟೆಸ್ಟ್ ಪಂದ್ಯವನ್ನು ಗೆದ್ದು ಇತಿಹಾಸ ಸೃಷ್ಟಿಸಿದೆ. ಮೆಲ್ಬರ್ನ್ ಕ್ರಿಕೆಟ್ ಗ್ರೌಂಡ್‌ನಲ್ಲಿ ನಡೆದ ಆ್ಯಶಸ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ 4 ವಿಕೆಟ್‌ಗಳಿಂದ ಆಸ್ಟ್ರೇಲಿಯಾವನ್ನು ಸೋಲಿಸಿ ಈ ಸಾಧನೆ ಮಾಡಿದೆ.

ಈ ಬಾಕ್ಸಿಂಗ್ ಡೇ ಟೆಸ್ಟ್ ಕೇವಲ ಎರಡು ದಿನಗಳಲ್ಲಿ ಮುಗಿದಿದ್ದು, ಒಟ್ಟು 36 ವಿಕೆಟ್‌ಗಳು ಬಿದ್ದಿವೆ. ಮೊದಲ ದಿನವೇ 20 ವಿಕೆಟ್ ಪತನಗೊಂಡಿತ್ತು. ಸತತ 3 ಟೆಸ್ಟ್ ಸೋತು ಸರಣಿ ಕಳೆದುಕೊಂಡಿರುವ ಇಂಗ್ಲೆಂಡ್ ತಂಡಕ್ಕೆ ಈ ಗೆಲುವು ಸಮಾಧಾನ ತಂದಿದೆ. ಮೊದಲ ಮೂರು ಟೆಸ್ಟ್ ಪಂದ್ಯಗಳಲ್ಲಿ ಇಂಗ್ಲೆಂಡ್ ಹೀನಾಯವಾಗಿ ಸೋಲು ಕಂಡಿತ್ತು.

ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಿದ ಇಂಗ್ಲೆಂಡ್ ತಂಡ ಆತಿಥೇಯ ಆಸ್ಟ್ರೇಲಿಯಾವನ್ನು 152 ರನ್‌ಗಳಿಗೆ ಆಲೌಟ್ ಮಾಡಿತ್ತು. ಆದರೆ ಆಸೀಸ್ ಬೆಂಕಿ ದಾಳಿಗೆ ತತ್ತರಿಸಿದ ಆಂಗ್ಲಪಡೆ ತನ್ನ ಸರದಿಯ ಮೊದಲ ಇನ್ನಿಂಗ್‌ನಲ್ಲಿ ಕೇವಲ 110 ರನ್‌ಗಳಿಗೆ ಸರ್ವಪತನ ಕಂಡಿತು. ಬಳಿಕ ಮೊದಲ ದಿನವೇ 2ನೇ ಇನ್ನಿಂಗ್ಸ್ ಶುರು ಮಾಡಿದ್ದ ಆಸೀಸ್ 4 ರನ್‌ಗಳಿಸಿ 2ನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿತು. ಶನಿವಾರ 46 ರನ್‌ಗಳ ಮುನ್ನಡೆ ಯೊಂದಿಗೆ ಆಟ ಆರಂಭಿಸಿದ ಆಸ್ಟ್ರೇಲಿಯಾ 2ನೇ ಇನ್ನಿಂಗ್ಸ್‌ನಲ್ಲಿ ಕೇವಲ 132 ರನ್‌ಗಳಿಗೆ ಆಲೌಟ್ ಆಯಿತು. ಈ ಮೂಲಕ ಎದುರಾಳಿ ಇಂಗ್ಲೆಂಡ್‌ಗೆ 175 ರನ್ ಗುರಿ ನೀಡಿತ್ತು. ಸ್ಪರ್ಧಾತ್ಮಕ ಗುರಿ ಪಡೆದ ಇಂಗ್ಲೆಂಡ್ 32.2 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 178 ರನ್ ಗಳಿಸಿ ಗುರಿ ತಲುಪಿ ವಿಜಯ ನಗು ಬೀರಿತು.

ಮೆಲ್ಬೋರ್ನ್ ಪಿಚ್ ವೇಗದ ಬೌಲರ್‌ಗಳಿಗೆ ಅನುಕೂಲಕರವಾಗಿತ್ತು. ಇಂಗ್ಲೆಂಡ್ ವೇಗದ ಬೌಲರ್ ಜೋಶ್ ಟಂಗ್ 5 ವಿಕೆಟ್ ಪಡೆದು ಆಸ್ಟ್ರೇಲಿಯಾ ತಂಡವನ್ನು ಮೊದಲ ಇನ್ನಿಂಗ್ಸ್‌ನಲ್ಲಿ 152 ರನ್‌ಗಳಿಗೆ ಆಲೌಟ್ ಮಾಡಿದರು. ಆದರೆ ತಿರುಗೇಟು ಕೊಟ್ಟ ಆಸ್ಟ್ರೇಲಿಯಾ ಬೌಲರ್‌ಗಳು ಇಂಗ್ಲೆಂಡ್ ತಂಡವನ್ನು 110 ರನ್‌ಗಳಿಗೆ ಆಲೌಟ್ ಮಾಡಿ 42 ರನ್‌ಗಳ ಮುನ್ನಡೆ ತಂದುಕೊಟ್ಟರು. ಮೈಕಲ್ ನೇಸರ್ 4 ವಿಕೆಟ್ ಮತ್ತು ಸ್ಕಾಟ್ ಬೋಲ್ಯಾಂಡ್ 3 ವಿಕೆಟ್ ಪಡೆದು ಮಿಂಚಿದರು. ಆಸ್ಟ್ರೇಲಿಯಾ ಪರ ಎರಡನೇ ಇನ್ನಿಂಗ್ಸ್‌ನಲ್ಲಿ ಟ್ರಾವಿಸ್ ಹೆಡ್ (46 ರನ್) ಮಾತ್ರ ಉತ್ತಮ ಪ್ರದರ್ಶನ ನೀಡಿದರು. ಬ್ರೈಡನ್ ಕಾರ್ಸ್ ಅವರು ಹೆಡ್ ಅವರನ್ನು ಔಟ್ ಮಾಡಿ ಆಸ್ಟ್ರೇಲಿಯಾ ಕುಸಿತಕ್ಕೆ ಕಾರಣರಾದರು. ಹೆಡ್ ಹೊರತು ಪಡಿಸಿದರೆ ಸ್ಟೀವ್ ಸ್ಮಿತ್ 24 ರನ್ ಬಾರಿಸಿ ಅಜೇಯರಾಗಿ ಉಳಿದು 2ನೇ ಗರಿಷ್ಠ ಸ್ಕೋರರ್ ಆದರು. ಗ್ರೀನ್ (19) ಎರಡಂಕಿ ದಾಟಿದ ಮತ್ತೊಬ್ಬ ಆಟಗಾರರಾದರು. ಉಳಿದವರೆಲ್ಲರೂ ಒಂದಂಕಿ ಮೊತ್ತಕ್ಕೆ ಔಟ್ ಆದರು.

ಗೆಲುವು ತಂದುಕೊಟ್ಟ ಬಾಜ್ ಬಾಲ್: ಇಂಗ್ಲೆಂಡ್ ಚೇಸಿಂಗ್‌ನಲ್ಲಿ ತಮ್ಮ 'ಬಾಜ್‌ಬಾಲ್' ತಂತ್ರವನ್ನು ಬಳಸಿತು. ಓಪನರ್‌ಗಳಾದ ಬೆನ್ ಡಕೆಟ್ (34 ರನ್, 26 ಎಸೆತಗಳು) ಮತ್ತು ಜಾಕ್ ಕ್ರಾಲೆ (37 ರನ್, 48 ಎಸೆತ) ಆಕ್ರಮಣಕಾರಿ ಆಟ ಆಡಿದರು. ಡಕೆಟ್ ಮಿಚೆಲ್ ಸ್ಟಾರ್ಕ್ ಯಾರ್ಕರ್‌ಗೆ ಔಟಾದರು. ನಂತರ ಬಡ್ತಿ ಪಡೆದು ಬಂದ ಬ್ರೈಡೆನ್ ಕಾರ್ಸ್ 9ಕ್ಕೆ ಔಟ್ ಆದರೆ, ಜೇಕಬ್ ಬೆಥೆಲ್ 46 ಎಸೆತಗಳಲ್ಲಿ 40 ರನ್ ಗಳಿಸಿ ಸ್ಕೋರ್ ಹೆಚ್ಚಿಸಿ ಔಟ್ ಆದರು. ಅನುಭವಿಗಳಾದ ಜೋ ರೂಟ್ (15 ರನ್) ಮತ್ತು ಬೆನ್ ಸ್ಟೋಕ್ಸ್ (2 ರನ್) 2ನೇ ಇನ್ನಿಂಗ್ಸ್ ನಲ್ಲೂ ಕೈಕೊಟ್ಟರು. ಆದರೆ ಹ್ಯಾರಿ ಬ್ರೂಕ್ (18★ ಅಜೇಯ) ಇಂಗ್ಲೆಂಡ್ ಅನ್ನು ಗೆಲುವಿನ ಗಡಿ ದಾಟಿಸಿದರು. ಒಟ್ಟಾರೆ ಇಂಗ್ಲೆಂಡ್ ಇಂಗ್ಲೆಂಡ್ 32.2 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

ಮೊದಲ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ಪರ ಗಸ್ ಅಟ್ಕಿನ್ಸನ್ 2 ವಿಕೆಟ್, ಬ್ರಾಂಡನ್ ಕರ್ಸ್ 1 ವಿಕೆಟ್, ಜೋಶ್ ಟಂಗ್ 5 ವಿಕೆಟ್, ಬೆನ್ ಸ್ಟೋಕ್ಸ್ 1 ವಿಕೆಟ್ ಪಡೆದರೆ, ಆಸ್ಟ್ರೇಲಿಯಾ ಪರ ಮಿಚೆಲ್ ಸ್ಟಾರ್ಕ್ 2 ವಿಕೆಟ್, ಮೈಕೆಲ್ ನೆಸರ್ 4 ವಿಕೆಟ್, ಸ್ಕಾಟ್ ಬೋಲೆಂಡ್ 3 ವಿಕೆಟ್, ಕ್ಯಾಮರೂನ್ ಗ್ರೀನ್ 1 ವಿಕೆಟ್ ಪಡೆದರು.

2ನೇ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ ಪರ ಗಸ್ ಅಟ್ಕಿನ್ಸನ್ 1 ವಿಕೆಟ್, ಬ್ರಾಂಡನ್ ಕರ್ಸ್ 4 ವಿಕೆಟ್, ಜೋಶ್ ಟಂಗ್ 2 ವಿಕೆಟ್, ಬೆನ್ ಸ್ಟೋಕ್ಸ್ 3 ವಿಕೆಟ್ ಪಡೆದರೆ, ಆಸೀಸ್ ಪರ ಮಿಚೆಲ್ ಸ್ಟಾರ್ಕ್, ಜೇ ರಿಚರ್ಡ್ಸನ್, ಸ್ಕಾಟ್ ಬೋಲೆಂಡ್ ತಲಾ 2 ವಿಕೆಟ್ ಕಿತ್ತರು.

ಎಲ್ಲ ವಿಕೆಟ್ ವೇಗಿಗಳ ಪಾಲು

ಎರಡೇ ದಿನಕ್ಕೆ ಮಗಿದ ಈ ಪಂದ್ಯದಲ್ಲಿ ಒಬ್ಬ ಸ್ಪಿನ್ನರ್ ಕೂಡ ಬೌಲ್ ಮಾಡಲಿಲ್ಲ, ಎಲ್ಲಾ ವಿಕೆಟ್‌ಗಳನ್ನು ವೇಗದ ಬೌಲರ್‌ಗಳು ಪಡೆದರು. ಪಿಚ್ ವೇಗದ ಬೌಲರ್‌ಗಳಿಗೆ ಮಾತ್ರ ಅನುಕೂಲಕರ ವಾಗಿತ್ತು, ಆದರೆ ಇದು ವಿವಾದಕ್ಕೆ ಕಾರಣವಾಗಿದೆ. ಆ್ಯಶಸ್‌ನಂತಹ ಪ್ರಸಿದ್ಧ ಸರಣಿಯ ಪಂದ್ಯ ಕೇವಲ ಎರಡು ದಿನಗಳಲ್ಲಿ ಮುಗಿದಿರುವುದು ತೀವ್ರ ಚರ್ಚೆಗೆ ಕಾರಣವಾಗುತ್ತಿದೆ. ಇನ್ನು ಬೆನ್ ಸ್ಟೋಕ್ಸ್ ಮತ್ತು ಜೋ ರೂಟ್ ಅವರ ವೃತ್ತಿಜೀವನದಲ್ಲಿ ಆಸ್ಟ್ರೇಲಿಯಾ ನೆಲದಲ್ಲಿ ಇದು ಮೊದಲ ಟೆಸ್ಟ್ ಗೆಲುವು ಎಂಬುದು ಗಮನಾರ್ಹ. ಇಂಗ್ಲೆಂಡ್ ಕೊನೆಯದಾಗಿ 2010-11ರಲ್ಲಿ ಆಂಡ್ರ್ಯೂ ಸ್ಟ್ರಾಸ್ ನೇತೃತ್ವದಲ್ಲಿ ಆಸ್ಟ್ರೇಲಿಯಾದಲ್ಲಿ ಗೆಲುವು ಪಡೆದಿತ್ತು. ಈ ಗೆಲುವು ಸ್ಟೋಕ್ಸ್ ಮತ್ತು ಕೋಚ್ ಬ್ರೆಂಡನ್ ಮೆಕಲಮ್ ಮೇಲಿನ ಒತ್ತಡವನ್ನು ಕಡಿಮೆ ಮಾಡಿದೆ. ಆಸ್ಟ್ರೇಲಿಯಾ ತಂಡ ಹಿಂದೆಂದಿಗಿಂತ ದುರ್ಬಲವಾಗಿದೆ ಎನ್ನುವ ಮಾತಿದ್ದರೂ ಇಂಗ್ಲೆಂಡ್ ಸರಣಿ ಯನ್ನು ಗೆಲ್ಲಲು ಸಾಧ್ಯವಾಗಲಿಲ್ಲ ಎಂಬ ಟೀಕೆಗೆ ತುತ್ತಾಗಿತ್ತು.

ಬಾಕ್ಸಿಂಗ್ ಡೇ ಹೆಸರು ಯಾಕೆ?

ಇಂಗ್ಲೆಂಡ್ ಹಾಗೂ ಹಲವು ದೇಶಗಳಲ್ಲಿ ಕ್ರಿಸ್‌ಮಸ್ ಮರುದಿನ ಅಂದರೆ ಡಿಸೆಂಬರ್ 26ರ ರಜಾ ದಿನವನ್ನು ಬಾಕ್ಸಿಂಗ್ ಡೇ ಎಂದು ಕರೆಯಲಾಗುತ್ತದೆ. ಆಸ್ಟ್ರೇಲಿಯಾ ಹಿಂದೆ ಬ್ರಿಟಿಷರ ವಸಾಹತು ಆಗಿತ್ತು. ಈ ಸಮಯದಲ್ಲಿ ಇಂಗ್ಲೆಂಡ್ ರಾಜಮನೆತನದವರು ಕ್ರಿಸ್ಮಸ್ ಸಮಯದಲ್ಲಿ ಕೆಲಸ ಮಾಡಿದ ನೌಕರರಿಗೆ ಡಿ.26 ರಂದು ಬಾಕ್ಸ್ ಮೂಲಕ ಉಡುಗೊರೆ ನೀಡುತ್ತಿದ್ದರು. ಬಾಕ್ಸ್‌ಗಳಲ್ಲಿ ಸಿಹಿ ತಿಂಡಿ ಸೇರಿದಂತೆ ಹಲವು ಉಡುಗೊರೆ ಡಿ.26ರಂದು ಸಿಗುತ್ತಿದ್ದ ಕಾರಣ ಈ ದಿನಕ್ಕೆ 'ಬಾಕ್ಸಿಂಗ್ ಡೇ' ಎಂಬ ಹೆಸರು ಬಂತು. ಹೀಗಾಗಿ ಈ ದಿನ ನಡೆಯುವ ಟೆಸ್ಟ್ ಪಂದ್ಯಕ್ಕೆ ಬಾಕ್ಸಿಂಗ್ ಡೇ ಟೆಸ್ಟ್' ಪಂದ್ಯ ಎಂಬ ಹೆಸರು ಬಂದಿದೆ.

ದ. ಆಫ್ರಿಕಾ ಸರಣಿಗೆ ವೈಭವ್, ವಿಶ್ವಕಪ್‌ಗೆ ಆಯುಷ್ ಮ್ಹಾತ್ರೆಗೆ ನಾಯಕತ್ವ

ಅಂಡರ್-19 ವಿಶ್ವಕಪ್‌ಗೆ ಭಾರತ ತಂಡ ಪ್ರಕಟ

ದೆಹಲಿ: ದಕ್ಷಿಣ ಆಫ್ರಿಕಾ ವಿರುದ್ಧ ಮೂರು ಪಂದ್ಯಗಳ ಏಕ ದಿನ ಸರಣಿಗೆ ಹಾಗೂ ನಮೀಬಿಯಾ ಮತ್ತು ಜಿಂಬಾಬ್ವೆ ಜಂಟಿ ಆತಿಥ್ಯದಲ್ಲಿ 2026 ಜನವರಿ 15 ರಿಂದ ಫೆಬ್ರವರಿ 6 ರವರೆಗೆ ನಡೆಯುವ 2026ರ ಅಂಡರ್-19 ವಿಶ್ವಕಪ್ ಟೂರ್ನಿಗೆ ಭಾರತ ಕಿರಿಯರ ತಂಡವನ್ನು ಬಿಸಿಸಿಐ ಶನಿವಾರ ಪ್ರಕಟಿಸಿದೆ. ಚೆನ್ನೈ ಸೂಪರ್ ಹಾಗೂ ಮುಂಬೈನ ಯುವ ಬ್ಯಾಟ್ಸ್‌ಮನ್ ಆಯುಷ್ ಮ್ಹಾತ್ರೆಗೆ ತಂಡದ ನಾಯಕತ್ವವನ್ನು ನೀಡಲಾಗಿದೆ. ಉದಯೋನ್ಮುಖ ಆಟಗಾರ ವೈಭವ್ ಸೂರ್ಯವಂಶಿಗೂ ತಂಡದಲ್ಲಿ ಸ್ಥಾನವನ್ನು ಕಲ್ಪಿಸಲಾಗಿದೆ.

ಐಸಿಸಿ ಪುರುಷರ ಅಂಡರ್ 19 ವಿಶ್ವಕಪ್ ಟೂರ್ನಿಯಲ್ಲಿ 16 ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ, ನಂತರ ಸೂಪರ್ ಸಿಕ್ಸ್ ಹಂತ, ಸೆಮಿಫೈನಲ್ ಮತ್ತು ಹರಾರೆಯಲ್ಲಿ ಫೈನಲ್ ಪಂದ್ಯ ನಡೆಯಲಿದೆ. ಐದು ಬಾರಿಯ ಚಾಂಪಿಯನ್ ಭಾರತ (2000, 2008, 2012, 2018 ಹಾಗೂ 2022) ತಂಡ, ನ್ಯೂಜಿಲೆಂಡ್, ಯುಎಸ್‌ಎ ಹಾಗೂ ಬಾಂಗ್ಲಾದೇಶ ತಂಡಗಳ ಜತೆಗೆ ಬಿ ಗುಂಪಿನಲ್ಲಿ ಸ್ಥಾನವನ್ನು ಪಡೆದಿದೆ.

ವಿಶ್ವಕಪ್ ಟೂರ್ನಿಗೂ ಮುನ್ನ ಭಾರತದ ಕಿರಿಯರು ಜ.3,5 ಮತ್ತು 7ರಂದು ದಕ್ಷಿಣ ಆಫ್ರಿಕಾದಲ್ಲಿ ಮೂರು ಏಕದಿನ ಪಂದ್ಯಗಳಲ್ಲಿ ಆಡಲಿದ್ದಾರೆ. ಈ ಸರಣಿಗೆ ಗಾಯದಿಂದ ಗುಣಮುಖರಾಗುತ್ತಿರುವ ಆಯುಷ್ ಮ್ಹಾತ್ರೆ ಹಾಗೂ ಉಪನಾಯಕ ವಿಹಾನ್ ಮಲ್ಹೋತ್ರಾ ಅಲಭ್ಯರಾಗಿದ್ದಾರೆ. ಒಡಿಐ ಸರಣಿಯಲ್ಲಿ ಭಾರತ ತಂಡವನ್ನು ವೈಭವ್ ಸೂರ್ಯವಂಶಿ ಮುನ್ನಡೆಸಲಿದ್ದಾರೆ.

ದ.ಆಫ್ರಿಕಾ ಸರಣಿ: ವೈಭವ್ ಸೂರ್ಯವಂಶಿ (ನಾಯಕ), ಆರೋನ್ ಜಾರ್ಜ್ (ಉಪ ನಾಯಕ), ವೇದಾಂತ ತ್ರಿವೇದಿ, ಅಭಿಜ್ಞಾನ್ ಕುಂಡು (ವಿ.ಕೀ), ಹಾರ್ವಂಶ್ ಸಿಂಗ್ (ವಿ.ಕೀ), ಆರ್‌ಎಸ್ ಅಂಬರೀಶ್, ಕಾನಿಷ್ಕಾ ಚೌಹಾಣ್ , ಖಿಲಮ್ ಎ ಪಟೇಲ್, ಮೊಹಮ್ಮದ್ ಎನಾನ್, ಹೆನಿಲ್ ಪಟೇಲ್, ದೀಪೇಶ್, ಕಿಶನ್ ಕುಮಾರ್ ಸಿಂಗ್, ಉಧವ್ ಮೋಹನ್, ಯುವರಾಜ್ ಗೋಹಿಲ್, ರಾಹುಲ್ ಕುಮಾರ್

ವಿಶ್ವಕಪ್ ಟೂರ್ನಿ ಟೂರ್ನಿಗೆ ಆಯುಷ್ ಮ್ಹಾತ್ರೆ (ನಾಯಕ), ವಿಹಾನ್ ಮಲ್ಹೋತ್ರಾ (ಉಪ ನಾಯಕ) ಸೇರಿಕೊಳ್ಳಲಿದ್ದು ಯುವರಾಜ್ ಗೋಹಿಲ್ ಮತ್ತು ರಾಹುಲ್ ಕುಮಾರ್ ಸ್ವದೇಶಕ್ಕೆ ಮರಳಲಿದ್ದಾರೆ.

ಗೆಲುವಿನಲ್ಲಿ ಇತಿಹಾಸ ಬರೆದ ಕೌರ್



ತಿರುವನಂತಪುರ: ಭಾರತ ಮಹಿಳಾ ಕ್ರಿಕೆಟ್ ತಂಡ ಶ್ರೀಲಂಕಾವನ್ನು ಮೂರನೇ ಟಿ20 ಪಂದ್ಯದಲ್ಲೂ ಸೋಲಿಸಿ ಐದು ಪಂದ್ಯಗಳ ಸರಣಿಯನ್ನು ಇನ್ನೂ 2 ಪಂದ್ಯಗಳು ಬಾಕಿ ಉಳಿದಿರುವಂತೆಯೇ ಗೆದ್ದು ಕೊಂಡಿದೆ. ಈ ಗೆಲುವಿನೊಂದಿಗೆ ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ಮಹಿಳಾ ಟಿ20ಐ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಗೆಲುವು ಸಾಧಿಸಿದ ನಾಯಕಿ ಎಂಬ ವಿಶ್ವದಾಖಲೆ ಬರೆದಿದ್ದಾರೆ. ಶೆಫಾಲಿ ವರ್ಮಾ ಮತ್ತು ರೇಣುಕಾ ಸಿಂಗ್ ಅವರು ಭಾರತದ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದರು. ಕೌರ್ ಅವರು ಟಿ20 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ನಾಯಕಿ ಯಾಗಿ 77ನೇ ಗೆಲುವು ಸಾಧಿಸುವ ಮೂಲಕ ವಿಶ್ವ ದಾಖಲೆ ಬರೆದಿದ್ದಾರೆ. ಈ ಮೂಲಕ ಅವರು ಆಸ್ಟ್ರೇಲಿಯಾದ ಮೆಗ್ ಲ್ಯಾನಿಂಗ್ (76 ಗೆಲುವು) ಅವರ ಸುದೀರ್ಘ ಕಾಲದ ದಾಖಲೆಯನ್ನು ಮುರಿದಿದ್ದಾರೆ. ಹರ್ಮನ್‌ಪ್ರೀತ್ ಕೌರ್ ಅವರು ಒಟ್ಟು 130 ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದಾರೆ.

ಅತಿ ಹೆಚ್ಚು ಪಂದ್ಯ

ಮಹಿಳಾ ಟಿ20 ಕ್ರಿಕೆಟ್ ಇತಿಹಾಸದಲ್ಲಿ ಅತಿ ಹೆಚ್ಚು ಪಂದ್ಯಗಳನ್ನು ಆಡಿದ ಆಟಗಾರ್ತಿ ಎಂಬ ಹೆಗ್ಗಳಿಕೆಯೂ ಹರ್ಮನ್‌ಪ್ರೀತ್ ಕೌರ್ ಅವರದ್ದಾಗಿದೆ. ಅವರು ಭಾರತ ತಂಡಕ್ಕಾಗಿ 185 ಟಿ20 ಪಂದ್ಯಗಳನ್ನು ಆಡಿದ್ದಾರೆ. ಅವರ ನಂತರದ ಸ್ಥಾನಗಳಲ್ಲಿ ಡ್ಯಾನಿ ವ್ಯಾಟ್ (178), ಸುಜಿ ಬೇಟ್ಸ್ (177) ಮತ್ತು ಎಲಿಸ್ ಪೆರ್ರಿ (168) ಇದ್ದಾರೆ.

ವಿಟಾಕೀಸ್

2025 ಚಂದನವನಕ್ಕೆ ಸ್ವಲ್ಪ ಕಹಿ-ಸ್ವಲ್ಪ ಸಿಹಿ

ಪ್ರಶಾಂತ್.ಟಿ.ಆರ್

ಹೊಸ ವರ್ಷ ಕನ್ನಡ ಚಿತ್ರರಂಗಕ್ಕೆ ಹರುಷ ತರಲಿದೆ ಎಂಬ ನಿರೀಕ್ಷೆ ಯಿತ್ತು. ಹಾಗಾಗಿಯೇ ವರ್ಷದ ಆರಂಭದಲ್ಲಿಯೇ ಹಲವು ಸಿನಿಮಾಗಳು ರಿಲೀಸ್ ಆದವು. ಆದರೆ ಅದ್ಯಾಕೋ ಆರಂಭದಲ್ಲಿಯೇ ಚಿತ್ರರಂಗ ಕೊಂಚ ಮಂಕಾಗಿತ್ತು. ಆದರೂ ನಿರ್ದೇಶಕರು, ನಿರ್ಮಾಪರು ಹಿಂಜರಿಯ ಲಿಲ್ಲ. ಪ್ರೇಕ್ಷಕರು ಚಿತ್ರಮಂದಿಗಳಿಗೆ ಬಂದೇ ಬರುತ್ತಾರೆ ಎಂಬ ನಂಬಿಕೆಯಲ್ಲಿ ತಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡಿದರು. ವರ್ಷಾರಂಭದಲ್ಲಿ ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬಂದರಾದರು, ಅವರಿಗೆ ಸಿನಿಮಾಗಳೇ ರುಚಿಸಲಿಲ್ಲ. ಇದರಿಂದ ಥಿಯೇಟರ್‌ಗಳಲ್ಲಿ ಸಿನಿಮಾ ಗಳಿದ್ದರೂ ಸಿನಿಪ್ರಿಯರು ಮಾತ್ರ ಕಾಣಲೇ ಇಲ್ಲ. ಹೀಗಾಗಿಯೇ ಹೊಸಬರ ಸಿನಿಮಾಗಳು ಚಿತ್ರಮಂದಿರಗಳಲ್ಲಿ ಹೆಚ್ಚು ದಿನ ಉಳಿಯಲೇ ಇಲ್ಲ, ಅದೆಷ್ಟೋ ಸಿನಿಮಾಗಳು ರಿಲೀಸ್ ಆಗಿದ್ದರೂ ತಿಳಿಯಲೇ ಇಲ್ಲ.

ಈ ವರ್ಷ ಸುಮಾರು ಇನ್ನೂರ ಇಪ್ಪತ್ತೊಂಬತ್ತು ಸಿನಿಮಾಗಳು ತೆರೆಗೆ ಬಂದಿವೆ. ಆದರೆ ಅದರಲ್ಲಿ ಗೆಲುವು ಕಂಡಿದ್ದು, ಸದ್ದು ಮಾಡಿದ್ದು ಮಾತ್ರ ಬೆರಳೆಣಿಕೆಯ ಚಿತ್ರಗಳು ಮಾತ್ರ, ಉಳಿದವು ಬಂದ ಹಾದಿಗೆ ಸುಂಕವಿಲ್ಲ ಎಂಬಂತೆ ಮರೆಯಾದವು. 2024ರ ಅಂತ್ಯದಲ್ಲಿ ಕಾಟೇರ, ಮಾರ್ಕ್ ಸಿನಿಮಾಗಳು ಗಳಿಸಿದ ಭರ್ಜರಿ ಯಶಸ್ಸು ಹಾಗೆಯೇ ಮುಂದುವರಿಯಬಹುದು ಎಂಬ ನಿರೀಕ್ಷೆ ಹುಸಿಯಾಯಿತು.

ಜನವರಿಯಲ್ಲಿ ಮೂವತ್ತು ಚಿತ್ರಗಳು ಬಿಡುಗಡೆಯಾದರೆ, ಫೆಬ್ರವರಿ ಯಲ್ಲಿ ಮೂವತ್ತಕ್ಕೂ ಹೆಚ್ಚು ಸಿನಿಮಾಗಳು ಬಿಡುಗಡೆಯಾದವು. ಆದರೆ ಯಾವ ಸಿನಿಮಾಗಳು ಅಷ್ಟಾಗಿ ಪ್ರೇಕ್ಷಕರನ್ನು ಸೆಳೆಯಲಿಲ್ಲ. ಆರಂಭದಲ್ಲಿ ಶರಣ್ ಅಭಿನಯದ ಛೂಮಂತರ್ ತೆರೆಗೆ ಬಂದಿತು. ಹಾರರ್ ಥ್ರಿಲ್ಲರ್ ಜತೆಗೆ ಕಾಮಿಡಿ ಕಥೆಯನ್ನು ಹೊತ್ತ ಈ ಸಿನಿಮಾ ತಕ್ಕ ಮಟ್ಟಿಗೆ ಕಲೆಕ್ಷನ್ ಮಾಡಿತು.

ಈ ವರ್ಷ ನವ ನಿರ್ದೇಶಕರು ಹೊಸ ಹೊಸ ಪ್ರಯೋಗಗಳನ್ನು ಮಾಡಲು ಮುಂದಾದರು. ಆ ನಿಟ್ಟಿನಲ್ಲಿ ಮೂಡಿ ಬಂದ ಸಿನಿಮಾ ಫೈರ್ ಫ್ಲೈ. ಈ ಚಿತ್ರ ಹೊಸತನದ ಕಥೆಯ ಜತೆಗೆ ಹೊಸ ನಿರ್ಮಾಪಕರನ್ನು ಚಿತ್ರರಂಗದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿತು. ಶಿವಣ್ಣ ಅವರ ಪುತ್ರಿ ನಿವೇದಿತಾ ಶಿವರಾಜ್ ಕುಮಾರ್ ಈ ಚಿತ್ರವನ್ನು ನಿರ್ಮಾಣ ಮಾಡುವ ಮೂಲಕ ನಿರ್ಮಾಪಕರಾಗಿ ಗುರುತಿಸಿಕೊಂಡರು. ಹೊಸ ಪ್ರತಿಭೆ ಗಳಿಗೆ ವೇದಿಕೆ ಕಲ್ಪಿಸಿದರು. ಆದರೂ ಈ ಚಿತ್ರ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಪಡೆಯಲಿಲ್ಲ.

ನಿರ್ದೇಶಕ ಯೋಗರಾಜ್ ಭಟ್, ಈ ಬಾರಿ ಮನದ ಕಡಲು ಕಥೆ ಹೊತ್ತು ಬಂದರು. ಒಂದು ಅದ್ಭುತ ತ್ರಿಕೋನ ಪ್ರೇಮ ಕಥೆಯ ಈ ಚಿತ್ರದಲ್ಲಿ ಹೊಸಬರೇ ಕಾಣಿಸಿಕೊಂಡಿದ್ದರು. ಹಾಡಿನ ಮೂಲಕ ಮನಗೆದ್ದ ಮನದ ಕಡಲು ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಾಣಬಹುದು ಎಂಬ ನಂಬಿಕೆ ಇತ್ತು. ಅಂತೆಯೇ ಸಿನಿಮಾ ತಕ್ಕ ಮಟ್ಟಿಗೆ ಕಲೆಕ್ಷನ್ ಮಾಡಿತು. ಆದರೆ ದೊಡ್ಡ ಮಟ್ಟದಲ್ಲಿ ಯಶಸ್ಸು ಸಿಗಲಿಲ್ಲ. ಅಜಯ್ ರಾವ್, ಲವ್ವರ್ ಬಾಯ್ ಇಮೇಜಿನಿಂದ ಹೊರ ಬಂದು ಹೊಸ ಕಥೆಗಳತ್ತ ಹೊರಳಿದರು. ಅವರು ಈ ಬಾರಿ ಗೆಲ್ಲಲೇಬೇಕು ಎಂದು ನಿರ್ಧರಿಸಿ ಯುದ್ಧಕಾಂಡ ಹೊಕ್ಕು ಅಬ್ಬರಿಸಿದರು. ಅಲ್ಲಿವರೆಗೆ ಮಂಕಾಗಿದ್ದ ಚಿತ್ರ ರಂಗ ಯುದ್ಧಕಾಂಡ ಸಿನಿಮಾದಿಂದ ಕೊಂಚ ಚೇತರಿಸಿ ಕೊಳ್ಳುವಂತೆ ಕಂಡಿತು. ಅದ್ಯಾಕೋ ಬರುಬರುತ್ತಾ ಯುದ್ಧ ಕಾಂಡವೂ ಮಂಕಾಯಿತು.

ದ್ವಿತೀಯಾರ್ಧದಲ್ಲಿ ಹೊಸ ತಿರುವು

ಅಂತು ಚಿತ್ರರಂಗ ಚೇತರಿಕೊಳ್ಳಲು ಜೂನ್‌ವರೆಗೆ ಕಾಯಲೇಬೇಕಾಯಿತು. ಜೂನ್‌ನಲ್ಲಿ ತೆರೆಗೆ ಬಂದ ಮಾದೇಶ, ಚಿತ್ರರಂಗದಲ್ಲಿ ಹೊಸ ಕಳೆ ತಂದ. ಆ್ಯಕ್ಷನ್, ಸೆಂಟಿಮೆಂಟ್ ಬೆರೆತ ಮಾದೇಶ ಪ್ರೇಕ್ಷಕರ ಮನಸೆಳೆಯಿತು. ಪ್ರೇಕ್ಷ ಕರು ಚಿತ್ರಮಂದಿಗಳಿಗೆ ಮರಳಿ ಬಂದರು. ಮಾದೇಶನಾಗಿ ವಿನೋದ್ ಪ್ರಭಾ ಕರ್ ಅಕ್ಷರಶಃ ಅಬ್ಬರಿಸಿದರು. ನಿರ್ದೇಶಕರ ಅಚ್ಚಿ ಮೆಚ್ಚಿನನಟನಾಗಿಯೂ ಹೊರ ಹೊಮ್ಮಿದರು. ಮಾದೇಶ ಗೆಲುವಿನ ನಂತರ ಮತ್ತಷ್ಟು ಸ್ಟಾರ್ ನಟರ ಚಿತ್ರಗಳು ರಿಲೀಸ್ ಆದರೆ ಕ್ನನಡ ಚಿತ್ರರಂಗದಲ್ಲಿ ಹಳೆಯ ವೈಭವ ಮರಳಿ ಬರುತ್ತದೆ ಎಂಬ ಮಾತುಗಳು ಕೇಳಿ ಬಂದವು. ಅಂತೆಯೇ ಆಗಸ್ಟ್‌ನಲ್ಲಿ ದೊಡ್ಮನೆ ಮೊಮ್ಮಗ ಯುವರಾಜ್ ಕುಮಾರ್ ಅಭಿನಯದ ಎಕ್ಕಾ ಅದ್ದೂರಿಯಾಗಿ ತೆರೆಗೆ ಬಂತು. ಈ ಹೊತ್ತಿನಲ್ಲಿ ಎಲ್ಲರ ಬಾಯಲ್ಲೂ ಬ್ಯಾಂಗಲ್ ಬಂಗಾರಿ.. ಹಾಡಿನದ್ದೇ ಸದ್ದು. ಭೂಗತ ಲೋಕದ ಜತೆಗೆ ತಾಯಿ ಮಗನ ಬಾಂಧವ್ಯದ ಸ್ಟೋರಿ ಹೊತ್ತ ಎಕ್ಕಾ ಗಮನಸೆಳೆದು, ಉತ್ತಮ ಗಳಿಕೆಯನ್ನು ಕಂಡಿತು. ಈ ಚಿತ್ರದ ಜತೆಗೆ ಜೂನಿಯರ್ ಸಿನಿಮಾ ಕೂಡ ರಿಲೀಸ್ ಆಯಿತು. ಜೂನಿ ಯರ್ ಚಿತ್ರದ ಮೂಲಕ ಕಿರೀಟಿ ಚಿತ್ರರಂಗಕ್ಕೆ ಪರಿಚಿತರಾದರು. ಈ ಎರಡು ಸಿನಿಮಾಗಳನ್ನು ಪ್ರೇಕ್ಷಕರು ಪ್ರೀತಿ ಯಿಂದ ಸ್ವೀಕರಿಸಿದರು.

ದಾಖಲೆ ಬರೆದ ಕಾಂತಾರ



ದ್ವಿತೀಯಾರ್ಧದಲ್ಲಿ ಚಿತ್ರರಂಗ ಪುಟಿದೇಳುತ್ತಿತ್ತು. ಅದಾಗಲೇ ಕಾಂತಾರ ಚಾಪ್ಟರ್ 1 ತೆರೆಗೆ ಸಿದ್ಧವಾಗಿದ್ದರಿಂದ ದಸರಾಗೆ ಚಂದನವನ ರಂಗೇರಲಿತ್ತು. ಎಲ್ಲರೂ ಕಾಂತಾರದ ದರ್ಶನಕ್ಕೆ ಕಾದು ಕುಳಿತ್ತಿದ್ದರು. ಅಂತು ಅದ್ದೂರಿಯಾಗಿ ಕಾಂತಾರದ ಸವಾರಿ ಆರಂಭವಾಯಿತು. ಕಾಂತಾರ ಬಿಡುಗಡೆಯಾಗಿದ್ದೇ ತಡ, ಪರಭಾಷೆಯ ಸಿನಿಮಾಗಳು ಇದರ ಮುಂದೆ ನಿಲ್ಲಲಾಗದೆ ಬಿಡುಗಡೆಯಾದ ಎರಡೇ ದಿನಕ್ಕೆ ಚಿತ್ರಮಂದಿರದಿಂದ ಕಾಲ್ಕಿತ್ತವು. ಈ ಹೊತ್ತಿನಲ್ಲಿಯೇ ಮುಚ್ಚಿದ್ದ ಚಿತ್ರಮಂದಿರಗಳು ತೆರೆಯುವ ಜತೆಗೆ ಕೆಲವೆಡೆ ಹೊಸ ಚಿತ್ರಮಂದಿರಗಳು ಪ್ರದರ್ಶನ ಆರಂಭಿಸಿದವು. ವಿಶ್ವಾದ್ಯಂತ ರಿಲೀಸ್ ಆದ ಕಾಂತಾರ ಹದಿನೈದು ದಿನಗಳ ಕಾಲ ಹೌಸ್‌ಫುಲ್ ಪ್ರದರ್ಶನ ಕಂಡು ಬರೋಬ್ಬರಿ ಎಂಟು ನೂರು ಕೋಟಿಗೂ ಹೆಚ್ಚು ಗಳಿಕೆ ಮಾಡಿತು. ಆ ಮೂಲಕ ಕಾಂತಾರ ಮತ್ತೊಮ್ಮೆ ಬಾಕ್ಸ್ ಆಫೀಸ್‌ನಲ್ಲಿ ದಾಖಲೆ ಬರೆಯಿತು.

ಕಾಂತಾರದ ಯಶಸ್ಸು ಭಾರತೀಯ ಚಿತ್ರರಂಗದಲ್ಲಿ ಮತ್ತೊಮ್ಮೆ ಕನ್ನಡ ಸಿನಿಮಾಗಳನ್ನು ಗುರುತಿಸಿವುದರ ಜತೆಗೆ ಮಾರುಕಟ್ಟೆಯನ್ನು ವಿಸ್ತರಿಸಿಕೊಟ್ಟಿತು. ಕನ್ನಡ ಚಿತ್ರಗಳಿಗೆ ದೇಶಾದ್ಯಂತ ಬೇಡಿಕೆ ಹೆಚ್ಚಿತು. ಹೊಸಬರ ಹೊಸ ಚಿತ್ರಗಳೂ ಕೂಡ ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗಿ ಯಶಸ್ವಿಯಾದವು. ಈ ಹೊತ್ತಿನಲ್ಲಿಯೇ ನಿರ್ದೇಶಕ ಸಿಂಪಲ್ ಸುನಿ ಗತವೈಭವ ಸಾರಲು ಬಂದರು. ಮೇಕಿಂಗ್‌ನಲ್ಲಿ ಮೋಡಿ ಮಾಡಿದ ಗತವೈಭವ, ತಕ್ಕಮಟ್ಟಿಗೆ ಯಶಸ್ಸು ಪಡೆಯಿತು. ಈ ಸಿನಿಮಾದ ಮೂಲಕ ಹೊಸ ಪ್ರತಿಭೆಗಳು ಚಂದನವನಕ್ಕೆ ಪರಿಚಿತರಾದರು.

ಡಿಸೆಂಬರ್‌ನಲ್ಲಿ ಸ್ಟಾರ್ ಧಮಾಕಾ



ಡಿಸೆಂಬರ್ ಕನ್ನಡ ಚಿತ್ರರಂಗದ ಪಾಲಿಗೆ ಲಕ್ಕಿ ಮಾಸ, ಹಾಗಾಗಿ ಸ್ಟಾರ್ ನಟರ ಸಾಲು ಸಾಲು ಸಿನಿಮಾಗಳು ರಿಲೀಸ್‌ಗೆ ರೆಡಿಯಾಗಿರುತ್ತವೆ. ಈ ವರ್ಷವೂ ಕೂಡ ಸ್ಟಾರ್ ನಟರ ಚಿತ್ರಗಳು ತೆರೆಗೆ ಬಂದು, ಭರ್ಜರಿ ಪ್ರದರ್ಶನ ಕಂಡವು. ದರ್ಶನ್ ಅಭಿನಯದ ಡೆವಿಲ್ ಆರಂಭದಿಂದಲೂ ಕುತೂಹಲ ಮೂಡಿಸಿತ್ತು. ಹಾಗಾಗಿಯೇ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಚಿತ್ರವನ್ನು ಕಣ್ತುಂಬಿಕೊಳ್ಳಲು ತುದಿಗಾಲಲ್ಲಿ ನಿಂತಿದ್ದರು, ಅಂತು ರಾಜ್ಯಾದ್ಯಂತ ಡೆವಿಲ್ ಅಬ್ಬರಿಸಿತು. ಕೋಟಿ ಕೋಟಿ ಗಳಿಕೆ ಕಂಡಿತು.

ಕಳೆದ ಬಾರಿ ಕಿಚ್ಚ ಸುದೀಪ್ ಮ್ಯಾಕ್ಸ್ ಅವತಾರದಲ್ಲಿ ತೆರೆಗೆ ಎಂಟ್ರಿಕೊಟ್ಟಿದ್ದರು, ಈ ಬಾರಿ ಮಾರ್ಕ್ ಆಗಿ ಮಿಂಚುತ್ತಿದ್ದಾರೆ, ಕ್ರಿಸ್‌ಮಸ್ ಹಬ್ಬದಂದೇ ಮಾರ್ಕ್ ಎಂಟ್ರಿ ಕೊಟ್ಟಿದ್ದು, ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ. ಕಿಚ್ಚನನ್ನು ಮಾಸ್ ಅವತಾರದಲ್ಲಿ ಕಣ್ತುಂಬಿಕೊಂಡ ಸಿನಿಪ್ರಿಯರು ಬಹುಪರಾಕ್ ಎನ್ನುತ್ತಿದ್ದಾರೆ.

ಈ ವರ್ಷಾಂತ್ಯದಲ್ಲಿ ಚಿತ್ರ ಪ್ರೇಮಿಗಳಿಗೆ ಭರ್ಜರಿ ಉಡುಗೊರೆಯೂ ಸಿಕ್ಕಿದೆ. ಅದೇ 45 ಸಿನಿಮಾ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ರಿಯಲ್ ಸ್ಟಾರ್ ಉಪೇಂದ್ರ ಈ ಚಿತ್ರದಲ್ಲಿ ಒಟ್ಟಿಗೆ ನಟಿಸಿರುವುದು ವಿಶೇಷವಾಗಿತ್ತು. ಬಹುದಿನಗಳ ಬಳಿಕ ಇಬ್ಬರು ದಿಗ್ಗಜರನ್ನು ತೆರೆಯಲ್ಲಿ ಕಣ್ತುಂಬಿಕೊಂಡ ಪ್ರೇಕ್ಷಕರು ಸಂತಸಗೊಂಡರು. ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ 45 ಪ್ರೇಕ್ಷಕರನ್ನು ಹೊಸ ಪ್ರಪಂಚಕ್ಕೆ ಹೊಂಡೊಯ್ಯುತ್ತಿದೆ. 45 ವಿಶ್ವಾದ್ಯಂತ ಪ್ರದರ್ಶನ ಕಾಣುತ್ತಿದ್ದು, ಇನ್ನೇನು ನೂರು ಕೋಟಿ ಕ್ಲಬ್ ಸೇರಲಿದೆ. ಒಟ್ಟಾರೆ ಈ ವರ್ಷಾಂತ್ಯವೂ ಕನ್ನಡ ಚಿತ್ರರಂಗಕ್ಕೆ ಅದೃಷ್ಟ ತಂದುಕೊಟ್ಟಿದೆ. ಅದೇ ಖುಷಿಯಲ್ಲಿ ಹೊಸ ವರ್ಷಕ್ಕೆ ಮತ್ತಷ್ಟು ಸಿನಿಮಾಗಳು ಪ್ರೇಕ್ಷಕರಿಗೆ ದರ್ಶನ ಕೊಡಲಿವೆ.

ಏಳುಮಲೆಗೆ ಉಘೇ ಉಘೇ

ಕಳೆದ ವರ್ಷ ಕಾಟೇರ ಚಿತ್ರವನ್ನು ನಿರ್ದೇಶನ ಮಾಡಿದ್ದ ತರುಣ್ ಸುಧೀರ್ ಈ ವರ್ಷ ನಿರ್ಮಾಣಕ್ಕೂ ಮುಂದಾ ದರು. ಅವರ ನಿರ್ಮಾಣದಲ್ಲಿ ಏಳುಮಲೆ ಸಿನಿಮಾ ಮೂಡಿಬಂದಿತ್ತು. ಪುನೀತ್ ರಂಗಸ್ವಾಮಿ ನಿರ್ದೇಶನದ ಈ ಚಿತ್ರ ಭರ್ಜರಿ ಯಶಸ್ಸು ತಂದು ಕೊಟ್ಟಿತು. ಕರ್ನಾಟಕ-ತಮಿಳುನಾಡಿನ ಗಡಿಯಲ್ಲಿ ನಡೆಯುವ ರೋಚಕ ಕಥೆಯ ಜತೆಗೆ ನವಿರಾದ ಪ್ರೇಮ್ ಕಹಾನಿಯೂ ಸಿನಿಪ್ರಿಯರ ಮನಸೂರೆಗೊಂಡಿತು. ನಟ ರಾಣಗೆ ಏಳುಮಲೆ ಬಿಗ್ ಬ್ರೇಕ್ ನೀಡಿತು.

ಬಲಗಾಲಿಟ್ಟು ಬಂದ ಸುಲೋಚನ

ಈ ವರ್ಷದಲ್ಲಿ ಕರಾವಳಿ ತೀರದಿಂದ ಚಂದನವನಕ್ಕೆ ಬಲಗಾಲಿಟ್ಟು ಬಂದ ಸುಲೋಚನ ಸಿನಿಪ್ರಿಯರನ್ನು ಅಕ್ಷರಶಃ ಮಂತ್ರಮುಗ್ಧಗೊಳಿಸಿತು. ಮೊದಲ ಮೊದಲು ಟೈಟಲ್ ನೋಡಿ ಯಾವುದು ಈ ಸಿನಿಮಾ ಎನ್ನುತ್ತಿದ್ದ ವರು. ಆ ಬಳಿಕ ದಂಡು ದಂಡಾಗಿ ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡಿ, ನಕ್ಕು ನಕ್ಕು ಸುಸ್ತಾದರು. ಸು ಫ್ರಮ್ ಸೋ ರಿಲೀಸ್ ಆಗಿದ್ದೇ ತಡ, ಸತತ ಎರಡು ವಾರಗಳ ಕಾಲ ಇಡೀ ರಾಜ್ಯಾದ್ಯಂತ ಹೌಸ್‌ಫುಲ್ ಪ್ರದರ್ಶನ ಕಂಡಿತು. ರಾಜ್.ಬಿ.ಶೆಟ್ಟಿ ಹೊರತುಪಡಿಸಿ ದರೆ ಬಹುತೇಕ ಹೊಸಬರ ತಂಡವೇ ಇದ್ದ ಸು ಫ್ರಮ್ ಸೋ ಎಲ್ಲೆಡೆ ಸದ್ದು ಮಾಡಿತು. ಮೊದಲು ಕನ್ನಡದಲ್ಲಿ ತೆರೆಗೆ ಬಂದ ಸುಫ್ರಮ್ ಸೋ, ಬಳಿಕ ಪ್ಯಾನ್ ಇಂಡಿಯಾ ಚಿತ್ರವಾಗಿ ಹೊರ ಹೊಮ್ಮಿತು. ಬಾಲಿವುಡ್ ಅಂಗಳದಲ್ಲಿಯೂ ರಂಹಿ ಸಿತು. ಬಿಟೌನ್‌ನ ಸ್ಟಾರ್ ಕಲಾವಿದರೇ ಸು ಫ್ರಮ್ ಸೋ ನೋಡಿ ವಾವ್ ಎಂದು ಮೆಚ್ಚುಗೆ ಸೂಚಿಸಿದರು. ಸು ಫ್ರಮ್ ಸೋ ಇನ್ನೂರ ಇಪ್ಪತ್ತು ಕೋಟಿ ಕಲೆಕ್ಷನ್ ಮಾಡಿತು.

ಕನ್ನಡ ಪ್ರಕಟಣಾ ಪ್ರಪಂಚದಲ್ಲಿ ಹೆಗ್ಗುರುತು ಮೂಡಿಸಿರುವ ಬೆಂಗಳೂರಿನ 'ಅಂಕಿತ ಪ್ರಕಾಶನ' ಈಗ 1000 ಪುಸ್ತಕಗಳನ್ನು ಪ್ರಕಟಿಸಿ ದಾಖಲೆ ಮಾಡುತ್ತಿದೆ. 28.12.2025ರಂದು ಅಂಕಿತ ಅವರು ಹೊರತರುತ್ತಿರುವ 1000ನೆಯ ಪುಸ್ತಕ ಲೋಕಾರ್ಪಣೆಗೊಳ್ಳುತ್ತಿದೆ. ಈ ಸಂದರ್ಭದಲ್ಲಿ, ಅಂಕಿತ ಪ್ರಕಾಶನವನ್ನು ಆರಂಭದಿಂದಲೂ ನೋಡಿರುವ ಕನ್ನಡಾಭಿಮಾನಿಯೊಬ್ಬರ ಬರಹ ಇಲ್ಲಿದೆ.

ವಿಶ್ವವಾಣಿ
28.12.2025
ಭಾನುವಾರ

ಸದಭಿರುಚಿ ಪುಸ್ತಕಗಳೇ ಇವರ ಅಂಕಿತ!

ಸಾವಿರ ಪುಸ್ತಕ ಪ್ರಕಟಿಸಿರುವ ಅಂಕಿತ ಪ್ರಕಾಶನ

» ರಾ.ನಂ. ಚಂದ್ರಶೇಖರ



1995ರಲ್ಲಿ ಬಸವನಗುಡಿಯ ನ್ಯಾಷನಲ್ ಕಾಲೇಜು ಸಭಾಂಗಣದಲ್ಲಿ ಅಂಕಿತ ಪುಸ್ತಕದ ಮೊದಲ ಎರಡು ಪುಸ್ತಕಗಳ ಲೋಕಾರ್ಪಣೆ ಸಮಾರಂಭವಿತ್ತು. ಅಂದು ಪ್ರಕಾಶ್ ಕಂಬತ್ತಳ್ಳಿ ಅವರ 'ರಂಗ ವಿಹಾರ' ಮತ್ತು ಕನ್ನಡ ಅಧ್ಯಾಪಕ ಎಚ್.ಎನ್ ಮುರಳಿಧರ ಅವರ 'ಪ್ರತಿಕ್ರಿಯೆ' ಲೋಕಾರ್ಪಣೆಗೊಂಡ ಪುಸ್ತಕಗಳು. ಮುರಳಿಧರ ಅವರು ಅದಾಗಲೇ ಪರಿಚಿತರು; ಪ್ರಕಾಶ ಕಂಬತ್ತಳ್ಳಿಯವರನ್ನು ಕಂಡದ್ದು ಅದೇ ಮೊದಲು. ಜಿ.ಎಸ್. ಶಿವರುದ್ರಪ್ಪ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ವೇದಿಕೆಯಲ್ಲಿದ್ದ ನೆನಪು. ಅಂದು ಆಕಸ್ಮಿಕವಾಗಿ ಪರಿಚಯವಾದ ಪ್ರಕಾಶ್ ಕಂಪತ್ತಹಳ್ಳಿ ಮತ್ತು ಅಂಕಿತ ಪ್ರಕಾಶನದ ಸಂಪರ್ಕ ಇಂದಿಗೂ ಮುಂದುವರೆದಿದೆ.

ಈ ಮೂರು ದಶಕಗಳಲ್ಲಿ ಅಂಕಿತ ಪುಸ್ತಕ 1000 ಪುಸ್ತಕ ಪ್ರಕಟಿಸಿರುವುದು ಒಂದು ಅಪರೂಪದ ಸಾಧನೆಯೇ ಸರಿ. ಕನ್ನಡದಲ್ಲಿ ಇಂತಹ ಸಾಧನೆ ಮಾಡಿದ ಬೇರೆ ಪ್ರಕಾಶನ ಸಂಸ್ಥೆಗಳು ಎರಡು ಮೂರಿರಬಹುದಷ್ಟೆ.

ಪ್ರಕಾಶ್ ಅವರೇ ಹೇಳುವಂತೆ, ಅವರು ಕನ್ನಡ ಪುಸ್ತಕಗಳ ಪ್ರಕಾಶಕರಾದದ್ದು ಒಂದು ಆಕಸ್ಮಿಕ. ಇವರು ಬರೆದ ನಾಟಕ 'ಅನ್ವೇಷಕರು' ಅದಾಗಲೇ ನೂರಾರು ಪ್ರದರ್ಶನ ಕಂಡಿದ್ದರೂ, ಅವರು ರಂಗಭೂಮಿ ಕುರಿತು ಬರೆದ ಲೇಖನಗಳ ಸಂಕಲನವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು, ಅಂದಿನ ಬೇರೆ ಯಾವ ಪ್ರಕಾಶಕರೂ ಒಪ್ಪದಿದ್ದಾಗ, ಸ್ವತಃ ಪ್ರಕಟಿಸಲು ನಿರ್ಧರಿಸಿದರು; ಬ್ಯಾಂಕ್‌ನಿಂದ ಸಾಲಮಾಡಿ 'ಅಂಕಿತ ಪ್ರಕಾಶನ' ಆರಂಭಿಸಿದರು. ಪುಸ್ತಕ ಪ್ರಕಟಣೆಗೆ ಬ್ಯಾಂಕ್ ಸಾಲ ಪಡೆಯಲು ಬ್ಯಾಂಕ್ ಉದ್ಯೋಗಿ ಮತ್ತು ರಂಗಕರ್ಮಿ, ನಟ ಟಿ.ವಿ ಗುರುಮೂರ್ತಿ ಅವರು ಮಾರ್ಗದರ್ಶನ ನೀಡಿದರು ಅನ್ನುವುದನ್ನು ಪ್ರಕಾಶ್ ನೆನೆಯುತ್ತಾರೆ.

ಕೈಯಲ್ಲಿ ಕಾಸಿಲ್ಲದಿದ್ದರೂ, ಬಾಂಕ್ ಸಾಲದಿಂದ 6 ಪುಸ್ತಕಗಳೇನೋ ಪ್ರಕಟವಾದವು. ಆದರೆ, ಪುಸ್ತಕ ವ್ಯಾಪಾರಿಗಳು ಪ್ರತಿ ಪುಸ್ತಕದ ತಲಾ 5-10 ಪುಸ್ತಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಹೊಸದಾಗಿ ಪ್ರಕಟಿಸಿದ ಆರು ಸಾವಿರ ಪುಸ್ತಕಗಳನ್ನು ಇಡುವುದೆಲ್ಲಿ, ಅವನ್ನು ಓದುಗರಿಗೆ ತಲುಪಿಸುವುದು ಹೇಗೆ ಎಂಬ ಸಮಸ್ಯೆಗೆ ಪರಿಹಾರವಾಗಿ ಆರಂಭವಾದದ್ದೇ, ಇಂದು ಗಾಂಧಿಬಜಾರ್‌ನಲ್ಲಿರುವ 'ಅಂಕಿತ ಪುಸ್ತಕ ಮಳಿಗೆ'. ಅದು ಈಗ ಮೂರು ದಶಕಗಳನ್ನು ಪೂರೈಸಿ ಪುಸ್ತಕ ಪ್ರಿಯರ ನೆಚ್ಚಿನ ತಾಣವಾಗಿದೆ; ಗಾಂಧಿಬಜಾರ್ ಮುಖ್ಯ ರಸ್ತೆಯಲ್ಲಿರುವ ಅಂಕಿತ ಪುಸ್ತಕ ಮಳಿಗೆಯು, ನಾಡಿನ ಪ್ರಮುಖ ಪುಸ್ತಕ ಮಳಿಗೆಗಳಲ್ಲೊಂದಾಗಿ ಬೆಳದ ಪರಿ ಎಂಥವರಲ್ಲೂ ಬೆರಗು ಮೂಡಿಸುವಂತಹದು. ಅಂಕಿತ ಎಂದು ಹೆಸರಿಟ್ಟದ್ದು ಏಕೆ ಅಂದರೆ, ಕಂಬತ್ತಳ್ಳಿ ಹೇಳಿದ್ದು 'ನಮ್ಮದೇ ಆದ ಚಾಪು, ಗುರುತನ್ನು ಮೂಡಿಸುವ ಆಶಯದಿಂದ ಇಟ್ಟ ಹೆಸರು ಅಂಕಿತ'. ಅದು ಈಡೇರಿದೆ ಎಂಬುದನ್ನು ಯಾವ ಸಂಕೋಚವೂ ಇಲ್ಲದೇ ಹೇಳಬಹುದು.

ಮನಸು ಗಾಂಧೀಬಜಾರು!

ಅಚ್ಚಗನ್ನಡದ ಬಸವನಗುಡಿ ಪ್ರದೇಶದಲ್ಲಿ ಕನ್ನಡ ಪುಸ್ತಕ ಮಳಿಗೆ ಇರಲಿಲ್ಲ ಎನ್ನುವುದು ಕನ್ನಡಾಭಿಮಾನಿಗಳನ್ನು ಕಾಡುತ್ತಿತ್ತು. ಸಾಹಿತ್ಯದ ಪುಸ್ತಕ ಬೇಕೆಂದರೆ ಅಂದು ಬಳೆಪೇಟೆಗೋ, ಮೆಜೆಸ್ಟಿಕ್‌ಗೋ ಹೋಗಬೇಕಿತ್ತು. ಗಾಂಧಿ ಬಜಾರ್ ನಗರದ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲೊಂದು. ಇಲ್ಲಿ ಶಾಲಾ ಪುಸ್ತಕದಂಗಡಿಗಳು ಇದ್ದವು. ಆದರೆ, ಸಾಹಿತ್ಯದ ಪುಸ್ತಕ ಇರುತ್ತಿರಲಿಲ್ಲ. ಈ ಕೊರತೆಯನ್ನು ತುಂಬಿದ ಹೆಗ್ಗಳಿಕೆ ಅಂಕಿತ ಪುಸ್ತಕದ್ದು; ಸದಭಿರುಚಿಯ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ ಅಂಕಿತ, ಬಹುಬೇಗನೆ ಸಾಹಿತ್ಯಪ್ರೇಮಿಗಳ ನೆಚ್ಚಿನ ಪ್ರಕಾಶನ ಸಂಸ್ಥೆಯಾಯಿತು, ಓದುಗರ ನೆಚ್ಚಿನ ತಾಣವಾಯಿತು. ಹೀಗೆ ಗಾಂಧೀಬಜಾರು ಮುಖ್ಯರಸ್ತೆಯು ಕನ್ನಡ ಸಾಹಿತ್ಯ ಪೊರೆಯುವ ಹೊಸ ಕೇಂದ್ರವಾಗಿ ರೂಪುಗೊಂಡಿತು.

ಗಾಂಧಿಬಜಾರಿಗೂ, ಕನ್ನಡ ಸಾಹಿತ್ಯಕ್ಕೂ ಬಹು ಹಿಂದಿನ ಆತ್ಮೀಯ ನಂಟು ಇದೆ! 1970ರ ದಶಕದಲ್ಲಿ ಅಮೆರಿಕದಿಂದ ವಾಪಸ್ ಭಾರತಕ್ಕೆ ಬಂದ ಸಾಹಿತಿ ಸುಮತೀಂದ್ರ, ನಾಡಿಗರಿಗೆ, ಬೇರೆ ಎಲ್ಲಿಯೂ ಕೆಲಸ ಸಿಗದಿದ್ದರಿಂದ ಗಾಂಧಿ ಬಜಾರಿಲ್ಲಿ ಒಂದು ಪುಸ್ತಕದಂಗಡಿ ತೆರೆದರು. ಅದು ಸಾಹಿತಿಗಳು ಭೇಟಿ ಮಾಡುವ ಸ್ಥಳವಾಗಿ ರೂಪುಗಪೋಡಿತು. ಖ್ಯಾತ ನವ್ಯಕವಿ ಗೋಪಾಲಕೃಷ್ಣ ಅಡಿಗರೂ ಸೇರಿದಂತೆ ಹಲವು ಸಾಹಿತಿಗಳು ಸಂಜೆ ಅಲ್ಲಿಗೆ ಬರುತ್ತಿದ್ದರು. ಓದುಗರ, ಸಾಹಿತ್ಯ ಪ್ರೇಮಿಗಳ 'ಮನಸು ಗಾಂಧೀಬಜಾರು' ಆಯಿತು!

ಆದರೆ, ಸುಮತೀಂದ್ರ ನಾಡಿಗರಿಗೆ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ವೃತ್ತಿ ದೊರೆತಾಗ ಆ ಪುಸ್ತಕದ ಅಂಗಡಿಯನ್ನು ಮುಚ್ಚಿದರು. ಆ ನಂತರ, 'ಅಂಕಿತ ಪುಸ್ತಕ ಮಳಿಗೆ' ಪ್ರಾರಂಭವಾಗುವವರೆಗೆ ಇಲ್ಲಿ ಒಂದು ಪುಸ್ತಕ ಮಳಿಗೆ ಇರಲಿಲ್ಲ. 1998ರಲ್ಲಿ ಅಂಕಿತ ಗಾಂಧಿ ಬಜಾರ್ ಹತ್ತಿರದ ಮಹಡಿಯ ಮೇಲೆ ಆರಂಭವಾದಾಗ ಅದು ಯಾರ ಕಣ್ಣಿಗೂ ಕಾಣುತ್ತಿರಲಿಲ್ಲ. ನಾನು ಕಷ್ಟಪಟ್ಟು ಹುಡುಕಿಕೊಂಡು ಹೋದಾಗ, ಮಹಡಿಯ ಮೇಲಿರುವ ಆ ಅಂಗಡಿಯನ್ನು ಕಂಡು, ಅಷ್ಟೇನೂ ಸಂತಸ ಎನಿಸಲಿಲ್ಲ; ಜಾಗ ಚೆನ್ನಾಗಿರಲಿಲ್ಲ. ಕನ್ನಡ ಪುಸ್ತಕಗಳನ್ನು ಮಾತ್ರ ಪ್ರಕಟಿಸುವ ನಿರ್ಧಾರ ಮಾಡಿರುವ, ಬೇರೆ ಸ್ಟೇಷನರಿ ವಸ್ತುಗಳನ್ನು ಮಾರುವುದಿಲ್ಲ ಎಂಬ ಸಿದ್ಧಾಂತಕ್ಕೆ ಅಂಟಿಕೊಂಡಿರುವ ಈ ಪುಸ್ತಕ ಮಳಿಗೆಯನ್ನು ಜನಸಾಮಾನ್ಯರು, ಓದುಗರ ಮೆಚ್ಚುವುದಿಲ್ಲ ಅಂದು ಕೊಂಡು ಬಂದೆ. ಆದರೆ, ನನ್ನ ಭವಿಷ್ಯ ಸುಳ್ಳಾಗಿ ಅಂಕಿತ ಪುಸ್ತಕ ಮಳಿಗೆಯು, ಈಗಿರುವ ಸ್ಥಳಕ್ಕೆ ಬದಲಾಗಿ ಮೂರು ದಶಕ ಪೂರೈಸಿ. ಇದು ನನಗೆ ಸಂತೋಷ ತಂದಿದೆ.

ಸ್ವಂತ ಕಾಲಮೇಲೆ ನಿಂತ ಸ್ವಾಭಿಮಾನಿ

ಪ್ರಕಾಶ ಕಂಬತ್ತಳ್ಳಿಯವರಲ್ಲಿ ಕನ್ನಡ ಪ್ರೇಮ ರಕ್ತಗತವಾಗಿದೆ ಎನ್ನಬಹುದು. ಮೊದಲು ಅವರು ಎನ್‌ಜಿಇಎಫ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು; ಆಗಲೇ, ಅಲ್ಲಿನ ಹೌಸ್ ಮ್ಯಾಗಝೀನ್ ಸಹ ಸಂಪಾದಕರಾಗಿದ್ದರು. ನಾಟಕಶಾಸ್ತ್ರದಲ್ಲಿ ಪದವಿಯನ್ನೂ ಗಳಿಸಿದರು. ಆನಂತರ ರಾತ್ರಿಪಾಳಿ ಮಾಡುತ್ತ ಎಂ.ಎ.(ಕನ್ನಡ) ಮಾಡಿದರು. ಇದೇ ಸಮಯದಲ್ಲಿ ಹಲವು ಸಾಹಿತಿಗಳ ಒಡನಾಟ ಬೆಳೆಯಿತು.

ದೂರದ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಾರಂಭವಾದಾಗ ಬೆಂಗಳೂರಿನ ಹಲವು ವಿದ್ವಾಂಸರು ಅಲ್ಲಿಗೆ ಉತ್ಸಾಹದಿಂದ ಹೋದರು; ವೃತ್ತಿನಿರತರಾದರು. ಆದರೆ ಕೆಲವೇ ದಿನಗಳಲ್ಲೇ ಅಲ್ಲಿ ಎಲ್ಲವೂ ಸರಿಯಿಲ್ಲ ಅನ್ನುವ ಸುದ್ದಿ ಕನ್ನಡ ಶಕ್ತಿ ಕೇಂದ್ರದ ವಾರದ ಸಭೆಯಲ್ಲಿ ಕೇಳಿಬರುತ್ತಿತ್ತು. ಇದನ್ನು ದೃಢ ಪಡಿಸಲೋ ಎಂಬಂತೆ ಕ್ರೈಸ್ಟ್ ಕಾಲೇಜಿನಲ್ಲಿ ಪ್ರಾಧ್ಯಾಪಕಾರಾಗಿ ಕನ್ನಡ ಸಾಂಸ್ಕೃತಿಕ ವಲಯದಲ್ಲಿ ಒಳ್ಳೆಯ ಹೆಸರು ಮಾಡಿದ್ದ ಚಿ. ಶ್ರೀನಿವಾಸರಾಜು ಅವರು, ಹಂಪೆ ವಿಶ್ವವಿದ್ಯಾಲಯದ ತಮ್ಮ ಹುದ್ದೆಗೆ ರಾಜಿನಾಮೆ ಕೊಟ್ಟು ಬೆಂಗಳೂರಿಗೆ ಹಿಂದಿರುಗಿದರು. ಅಂದು ಉಪಕುಲಪತಿಗಳಾಗಿದ್ದವರು ಚಂದ್ರಶೇಖರ ಕಂಬಾರರು; ಚಿ.ಶ್ರೀನಿವಾಸರಾಜು ಅವರ ರಾಜಿನಾಮೆಯಿಂದ ತೆರವಾದ ಸ್ಥಾನಕ್ಕೆ ಪ್ರಕಾಶ್ ಕಂಬತ್ತಳ್ಳಿಯವರನ್ನು ಆಯ್ಕೆ ಮಾಡಿದರು. ಆದರೆ, ಕಾರಣಾಂತರದಿಂದ ಅಲ್ಲಿ ಹೆಚ್ಚು ದಿನ ಇರಲಾಗದೆ, ಪ್ರಕಾಶರು ರಾಜಿನಾಮೆ ಕೊಟ್ಟು ಬೆಂಗಳೂರಿಗೆ ಬಂದರು. ನಿರ್ದೇಶಕ ಟಿ. ಎನ್. ಸೀತಾರಾಮ್ ಅವರೊಂದಿಗೆ ಧಾರಾವಾಹಿಗಳಿಗೆ ಕೆಲಸ ಮಾಡಿದರು. ಸಂಭಾಷಣೆ ಬರೆಯುವುದರೊಂದಿಗೆ ಸಹಾಯಕ ನಿರ್ದೇಶಕನಾಗಿಯೂ ಕೆಲಸ ಮಾಡಿದರು. ಕನ್ನಡ ವಿಶ್ವವಿದ್ಯಾಲಯದ ಪ್ರಸಾರಂಗದಲ್ಲಿದ್ದುದರಿಂದ ಪುಸ್ತಕ ಪ್ರಕಟಣೆಯ ಬಗ್ಗೆ ಸ್ವಲ್ಪ ಅನುಭವವಿತ್ತು. ಆ ಅನುಭವವೇ ಪ್ರಕಾಶನ ಮಾಡಲು ಪ್ರೇರಣೆಯಾಗಿರಬಹುದು.

ಪ್ರಕಟಣೆಯಲ್ಲಿ ಪತ್ನಿಯ ಸಹಕಾರ

ಕನ್ನಡ ಪ್ರಕಟಣೆಯಲ್ಲಿ ತಮ್ಮದೇ ಆದ ಚಾಪು ಮೂಡಿಸಬೇಕು ಎಂಬ ಉದ್ದೇಶದಿಂದಲೇ ಪ್ರಕಾಶನಕ್ಕೆ 'ಅಂಕಿತ' ಎಂದು ಹೆಸರಸಿದ ಕಂಬತ್ತಳ್ಳಿ, ಸದಭಿರುಚಿಯ ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿದರು. ಅವರ ಜತೆ ಪುಸ್ತಕ ಪ್ರಕಟಣೆಯಲ್ಲಿ ಕೈಜೋಡಿಸಿದವರು, ಪತ್ನಿ ಪ್ರಭಾ ಕಂಬತ್ತಹಳ್ಳಿಯವರು. ಅವರಿಬ್ಬರೂ ಸೇರಿ, ತಾವು ಪ್ರಕಟಿಸುವ ಪುಸ್ತಕಗಳ ಬಗ್ಗೆ ಆಯ್ಕೆಯಿಂದ ಮುದ್ರಣದವರೆಗೆ ಪ್ರತಿ ಹಂತದಲ್ಲೂ ತೋರುವ ಕಾಳಜಿ ಹೇಳಿ ತೀರದು. ಉತ್ತಮ ವಿನ್ಯಾಸ, ಉತ್ತಮ ಮುದ್ರಣ, ಉತ್ತಮ ಕಾಗದ, ಆಕರ್ಷಕ ಮುಖಪುಟಗಳಿಂದ ಅಂಕಿತ ಕನ್ನಡ ಓದುಗರಲ್ಲಿ ವಿಶೇಷ ಸ್ಥಾನ ಪಡೆದಿದೆ. ಮುದ್ರಣಕ್ಕೆ ಕೊಡುವ ಮುನ್ನ ಪ್ರತಿ ಪುಟವನ್ನು ಓದಿ, ಲೇಖಕರು ಕರಡು ತಿದ್ದ ಕೊಟ್ಟ ನಂತರವೂ ಪ್ರತಿ ಪುಟವನ್ನು ತಿದ್ದುತ್ತಾರೆ. ಇದು ನನ್ನ ಸ್ವಾನುಭವ. ಅಂಕಿತ ನನ್ನದೂ ಒಂದು ಪುಸ್ತಕವನ್ನು ಪ್ರಕಟಿಸಿದೆ. ಆ ಪುಸ್ತಕ ಮರುಮುದ್ರಣ ಕಂಡಿದೆ ಎಂಬುದು ನನಗೆ ತೃಪ್ತಿ ನೀಡಿದೆ.

ಕನ್ನಡದಲ್ಲಿ ಮೊದಲ ಬಾರಿಗೆ ವರ್ಣರಂಜಿತ ಪುಸ್ತಕ ಪಟ್ಟಿ ಪ್ರಕಟಿಸಿದ್ದು, ಪೋಸ್ಟರ್‌ಗಳ ಮೂಲಕ ಪ್ರಚಾರ ಮಾಡಿದ್ದು ಅಂಕಿತದ ಅಗ್ಗಳಿಕೆ. ಸಾವಿರ ಪುಸ್ತಕದ ಪ್ರಕಟಣೆಯ ಸರದಾರಾದ ಪ್ರಭಾ - ಪ್ರಕಾಶ್ ದಂಪತಿಗಳು ಇನ್ನೊಂದು ಸಾವಿರ ಪ್ರಕಟಿಸಲಿ ಎಂದು ಆಶಿಸಿ ಮೊದಲ 1000ಕ್ಕೆ ಸಲಾಂ.

ಇತರರಿಗೆ ಪ್ರೋತ್ಸಾಹ

ಅಂಕಿತ ಪುಸ್ತಕವು, ಪುಸ್ತಕ ಮಾರಾಟದಿಂದ ಬಂದ ಲಾಭದಲ್ಲಿ, ಇತರ ಲೇಖಕ ಪ್ರಕಾಶಕರಿಗೆ ಪ್ರೋತ್ಸಾಹ ನೀಡುವ ಕೆಲಸವನ್ನೂ ಮಾಡುತ್ತಿದೆ. ಕನ್ನಡ ಸಾಹಿತ್ಯ

ಪರಿಷತ್ತಿನಲ್ಲಿ ರು.6 ಲಕ್ಷದಷ್ಟು ಮೊತ್ತದ ದತ್ತಿ ಇಟ್ಟು, ಪ್ರತಿ ವರ್ಷ ಪ್ರಕಾಶಕರಿಗೆ 35 ಸಾವಿರ ನಗದಿನೊಂದಿಗೆ ಅತ್ಯುತ್ತಮ ಪ್ರಕಾಶನ ಸಂಸ್ಥೆ ಪುರಸ್ಕಾರ ನೀಡುತ್ತಿದ್ದಾರೆ; ಕನ್ನಡದ ಪ್ರಕಾಶಕರಿಗೆ ಇರುವ ಏಕೈಕ ಪ್ರಶಸ್ತಿ ಇದು.

ಕರ್ನಾಟಕ ಲೇಖಕಿಯರ ಸಂಘದಲ್ಲಿ ಇಷ್ಟೇ ಮೊತ್ತದ ದತ್ತಿನಿಧಿ ಇಡಲಾಗಿದ್ದು, ವರ್ಷದ ಅತ್ಯತ್ತಮ ಲೇಖಕಿ ಪ್ರಶಸ್ತಿ ಮತ್ತು ಅಥಣಿಯ ಮೋಟಗಿ ಮಠದಲ್ಲಿ 3 ಲಕ್ಷ ದತ್ತಿ ಇಟ್ಟು ಗಡಿನಾಡಲ್ಲಿ ಕನ್ನಡದ ಕೆಲಸ ಮಾಡುವ ಹೋರಾಟಗಾರರಿಗೆ ಪ್ರಶಸ್ತಿ ಸ್ಥಾಪಿಸಿದ್ದಾರೆ. ಯುವ ಬರಹಗಾರರನ್ನು ಬೆಳಕಿಗೆ ತರಲು ಪ್ರಾಂಭಿಸಿದ 'ಅಂಕಿತ ಪ್ರತಿಭೆ ಮಾಲಿಕೆ', ಕನ್ನಡ ದಿನ ಪತ್ರಿಕೆಗಳ ಸಹಯೋಗದಲ್ಲಿ ನಡೆಸುವ ಕಥಾಸ್ಪರ್ಧೆ ಇವೆಲ್ಲ ಇವರ ಉದಾತ್ತ ಧ್ಯೇಯಕ್ಕೆ ನಿದರ್ಶನವಾಗಿವೆ.

ಇಂದು, ಅಂದರೆ, 28.12.2025ರಂದು ಅಂಕಿತದವರು, ತಮ್ಮ 1,000ನೆಯ ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆ. ಕನ್ನಡ ಪ್ರಕಾಶನ ಕ್ಷೇತ್ರದಲ್ಲಿ ಅವರದ್ದು ಒಂದು ಸಾಹಸ, ವಿನೂತನ ಸಾಹಸ. ಅಪರೂಪದ ಹಲವು ಪುಸ್ತಕಗಳನ್ನು ಪ್ರಕಟಿಸುವ ಮೂಲಕ, ಕನ್ನಡ ಸಾರಸ್ವತ ಲೋಕಕ್ಕೂ ಅಂಕಿತ ಪುಸ್ತಕವು ಅಮೂಲ್ಯ ಕೊಡುಗೆ ನೀಡಿದೆ. ಅವರ ಇನ್ನಷ್ಟು ಸದಭಿರುಚಿಯ ಪುಸ್ತಕಗಳನ್ನು ಪ್ರಕಟಿಸಲಿ ಎಂದು ಆಶಿಸೋಣ.

ಪಿಎಚ್‌ಡಿ ಪ್ರಬಂಧವೇ ಮೊದಲ ಪುಸ್ತಕ!

ಪ್ರಕಾಶ ಕಂಬತ್ತಳ್ಳಿ ಅವರು ಪಿಎಚ್‌ಡಿಗಾಗಿ ಅಧ್ಯಯನ ನಡೆಸಿದ್ದು ರಂಗಭೂಮಿಯ ವಿಷಯದ ಮೇಲೆ; ಆದರೆ ಕಾರಣಾಂತರದಿಂದ, ಪ್ರಬಂಧ ಸಲ್ಲಿಸಿ, ಡಾಕ್ಟೊರೇಟ್ ಪಡೆಯಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ಸಿದ್ಧಪಡಿಸಿದ ಲೇಖನಗಳ ಸಂಕಲನವು ಸೊಗಸಾದ ಪುಸ್ತಕವೂ ಆಗಬಲ್ಲದು ಎಂದು ಚಿ.ಶ್ರೀನಿವಾಸರಾಜು ಅವರು ಸೂಚಿಸಿದ್ದರಿಂದ, ಆ ಲೇಖನಗಳ ಗುಚ್ಛವನ್ನು ಹಿಡಿದು ನಾಡಿನ ಹೆಸರಾಂತ ಪ್ರಕಾಶಕರ ಬಳಿ ಸಾರಿದರು; ಆದರೆ, ಅದು ಸ್ವೀಕೃತವಾಗಲಿಲ್ಲ. ಅವೇ ಲೇಖನಗಳ ಸಂಕಲನವು, ಅಂಕಿತದ ಮೊದಲ ಪುಸ್ತಕವಾಗಿ 'ರಂಗವಿಹಾರ' ಎಂಬ ಹೆಸರಿನಲ್ಲಿ ಪ್ರಕಟವಾಯಿತು! ಪ್ರಕಾಶಕರೊಬ್ಬರು ತಮ್ಮ ಪಿಎಚ್‌ಡಿ ಬರಹಗಳನ್ನು ತಮ್ಮ ಪ್ರಕಾಶನದ ಮೊದಲ ಪುಸ್ತಕವಾಗಿ ಪ್ರಕಟಿಸಿದ್ದು, ಕನ್ನಡದ ಮಟ್ಟಿಗೆ ಒಂದು ಅಪರೂಪದ ದಾಖಲೆ!



ರಾಜಕಾರಣಿಯ ಅಭಿಮಾನಿಗಳಿಂದ ಬೆದರಿಕೆ!

ಅಂಕಿತ ಪುಸ್ತಕವು ಸದಭಿರುಚಿಯ ಪುಸ್ತಕಗಳನ್ನು ಪ್ರಕಟಿಸುವಲ್ಲಿ ಸದಾ ಮುಂದು. ಪ್ರಭಾ-ಪ್ರಕಾಶ್ ಕಂಬತ್ತಳ್ಳಿ ದಂಪತಿಯು ಪ್ರತಿ ಪುಸ್ತಕವ ಕರಡನ್ನು ತಿದ್ದುವುದರಿಂದಾಗಿ, ಇವರು ಪ್ರಕಟಿಸುವ ಪುಸ್ತಕಗಳು ವಿವಾದಕ್ಕೊಳಗಾಗುವುದು ಕಡಿಮೆ. ಆದರೆ, 'ಹಳ್ಳಿ ಹಕ್ಕಿ' ಎಂಬ ಪುಸ್ತಕವನ್ನು ಅಂಕಿತ ಪ್ರಕಟಿಸಿದಾಗ, ಕೆಲವು ವಲಯಗಳಲ್ಲಿ ವಿವಾದ ಎದ್ದಿತು. ನಮ್ಮ ರಾಜ್ಯದ ಒಬ್ಬರು ಹೆಸರಾಂತ ರಾಜಕಾರಣಿಯ ಕುರಿತು ಇದ್ದ ಒಂದು ವಿಚಾರವು, ಅವರ ಅಭಿಮಾನಿಗಳನ್ನು ಕೆರಳಿಸಿತು! ಆ ರಾಜಕಾರಣಿಯ ಅಭಿಮಾನಿಗಳು, 'ನಿಮ್ಮ ಅಂಗಡಿಗೆ ಬೆಂಕಿ ಹಾಕುತ್ತೇವೆ' ಎಂದು ಬೆದರಿಕೆ ಒಡ್ಡಿದ್ದರು! ಮೈಸೂರಿನಲ್ಲಿ ಆ ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ರಾದ್ಧಾಂತವಾಗಿ, ಪುಸ್ತಕದ ಪ್ರಕಾಶಕರು ಪೊಲೀಸರ ರಕ್ಷಣೆ ಪಡೆದು, ಬೆಂಗಳೂರಿಗೆ ವಾಪಸಾಗಬೇಕಾಯಿತು.

ಪಕ್ಕದ ದೇಶದಲ್ಲಿ ಮೂರೂಮುಕ್ಕಾಲು ತಾಸು!

» ಕವಿತಾ ಹೆಗಡೆ ಅಭಯಂ

ಧುರಂಧರ್ ಬಂದು ಭೇಟಿಯಾದ: 'ನಮ್ಮ ಪಕ್ಕದ ದೇಶಕ್ಕೆ ಹೋಗೋಣ ಬನ್ನಿ, ಬರೀ ಮೂರೂ ಮುಕ್ಕಾಲು ಗಂಟೆಯೊಳಗೆ ವಾಪಸ್ಸು ಬರೋಣ' ಅಂದ. 'ಓ ಗುಡ್ ಡೀಲ್' ಅಂತ ರಾತ್ರಿ ಒಂಬತ್ತಕ್ಕೆ ಮನೆ ಬಿಟ್ಟೆ. ನಡುರಾತ್ರಿ ಎರಡೂವರೆಗೆ ವಾಪಸ್ಸು ಕರೆದುಕೊಂಡು ಬಂದು ಭಾರತದಲ್ಲಿ ಬಿಟ್ಟು ಹೋದ. ಆಗಿನಿಂದ ಹೊಟ್ಟೇಲಿ, ಎದೇಲಿ, ಮನಸಲ್ಲಿ ಹೇಳಲಾಗದ ಸಂಕಟ.

ನಮ್ಮ ಪಕ್ಕದ ದೇಶದ ಬಣ್ಣವಿಲ್ಲದ, ಬಡತನ ತುಂಬಿದ, ಬಂಜರು ಪ್ರದೇಶಗಳು, 'ಗ್ರಿಮ್' ಅನಿಸೋ ಲ್ಯಾರಿ ಪ್ರದೇಶಗಳು, ಅಂಥಾ ಜಾಗದಲ್ಲೂ ಎದ್ದು ಮುಖಕ್ಕೆ ಹೊಡೆಯುವ 'ದೋ- ನಂಬರಿ' ದಂಧೆಯ ಕರಾಳತೆ, ಮಾಫಿಯಾದವರೇ ತಮ್ಮ ದೇಶದ ರಾಜಕೀಯವನ್ನು ನಿಯಂತ್ರಿಸುವ ಶಕ್ತಿಗಳಾಗಿ ಬೆಳೆಯುವುದು, , ರಾಜಕಾರಣಿಗಳ ಕುತಂತ್ರಗಳು, ಭಾರತದ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುವುದನ್ನೇ ಟಾರ್ಗೆಟ್ ಮಾಡಿಕೊಂಡ ಖೋಟಾ ನೋಟು ಜಾಲ, ನಕಲಿ ಆಯುಧಗಳ ಉತ್ಪಾದನೆ, ಭಯೋತ್ಪಾದಕ ಚಟುವಟಿಕೆ, ಇವೆಲ್ಲವನ್ನೂ ಬಳಸಿಕೊಂಡು ಭಾರತದ ಮೇಲೆ ಆ ನೆರೆಯ ದೇಶ ಆಕ್ರಮಣ ಮಾಡುವುದನ್ನು ಒಂದೊಂದಾಗಿ ತೋರಿಸುತ್ತಾ, 'ಧುರಂಧರ' ಮನಸ್ಸಿಗೆ ತೀರಾ ಮಂಕು ಬಡಿಸಿಬಿಟ್ಟ. ಅಲ್ಲಲ್ಲಿ ಕಾಣುವ ತುಸು ಹಸಿರು ಕೊಂಚ ಉಸಿರು ಕೊಟ್ಟವು ಅಷ್ಟೇ.

ನಮ್ಮ ದೇಶದ ವಿರುದ್ಧ ಭಯೋತ್ಪಾದನೆ ಮಾಡುವವರನ್ನು ಬುಡಸಮೇತ ಎಕ್ಸ್ಪೋಸ್ ಮಾಡಲು ಹೊರಟ ಬೇಹುಗಾರ ರಣವೀರ್ ಸಿಂಗ್, ಹೆಚ್ಚು ಮಾತನಾಡುವ, ಭಾವನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಸ್ಥಿತಿಯಲ್ಲಿಲ್ಲ. ವೈರಿಗಳ ನಡುವೆಯೇ ವರ್ಷಗಳಿಂದ ಬಾಳುತ್ತ, ಅವರಿಗೆ ಅನುಮಾನ ಬರದಂತೆ ವ್ಯವಹರಿಸುತ್ತ, ಆಪ್ತನಂತೆ ನಟಿಸಿ ಅವರ ರಹಸ್ಯ ಕಾರ್ಯಾಚರಣೆಗಳನ್ನು ತಿಳಿದುಕೊಂಡು ಭಾರತಕ್ಕೆ ತಲುಪಿಸುವ ವೀರನಾಗಿ ರಣವೀರ್ ಸಿಂಗ್, ಅಸಾಮಾನ್ಯ ನಟನೆ ಮಾಡಿದ್ದಾನೆ. ಉರಿವ ಮೈಮನವನ್ನು, ಉಕ್ಕಿ ಬರುವ ಕೋಪವನ್ನು ನಿಗ್ರಹಿಸಿಕೊಂಡು ಕಣ್ಣಲ್ಲೇ ಸಂಪೂರ್ಣ ಅಭಿನಯ ಮಾಡಿದ್ದು ಅವನ ಕೌಶಲ್ಯಕ್ಕೆ ಹಿಡಿದ ಕನ್ನಡಿ. ತೆರೆ ತುಂಬ ಎದ್ದು ಕಾಣುವ ಅವನ ಸೆಳೆಯುವ ದೃಢಕಾಯ ಎಷ್ಟು ಜನರ ನಿದ್ದೆಗೆಡಿಸುತ್ತದೆಯೋ ಗೊತ್ತಿಲ್ಲ. ಆಹಾ! 'ಹಂಝಾ ಅಲಿ ಮಸಾರಿ'ಯ ಪಾತ್ರವನ್ನೇ ಜೀವಿಸಿಬಿಟ್ಟಿರುವ ಅವನಿಗೆ ನೂರು ಸಲ ಶಾಭಾಷ್ ಹೇಳಲೇಬೇಕು.

ಅಕ್ಷಯ್ ಖನ್ನಾ ಅವಿಸ್ಮರಣೀಯ

ಆದರೆ, ಶೋ ಸ್ಟೀಲರ್ ಮಾತ್ರ ಆ ರೆಹಮಾನ್ ಡಕಾಯತ್ ಪಾತ್ರ ಮಾಡಿದ ಅಕ್ಷಯ್ ಖನ್ನಾ ಅನ್ನುವುದರಲ್ಲಿ ಸಂಶಯವೇ ಇಲ್ಲ. ತನ್ನ ಮಗನ ಸಾವಿನ ಒಂದು ಸೀನ್ ಸಾಕು, ಅವನ ತಾಕತ್ತು ತೋರಲು. ಏನು ಅಭಿನಯ ಚಾತುರ್ಯ! ಅದೇನು ಅರ್ಥಪೂರ್ಣ ನೋಟ! ಎಂಥಾ ನಗು! ಈ ಅವಿಸ್ಮರಣೀಯ ನಟನೆ ಅಕ್ಷಯ್ ಖನ್ನಾಗೆ ಅವನ ಜೀವಮಾನದ ಅತ್ಯಂತ ಯಶಸ್ವೀ ಪಾತ್ರವನ್ನು ಕೊಟ್ಟಿದೆ ಎನ್ನಬಹುದು. ಇವರಿಬ್ಬರ ಜತೆ, ಅರ್ಜುನ್ ರಾಮ್ ಪಾಲ್, ಸಂಜಯ್ ದತ್ ಥರದ ಸೀನಿಯರ್ ನಟರ ಪಡೆಯೇ ಸೇರಿಕೊಂಡು ನಿಜಕ್ಕೂ ಥಿಯೇಟರನ್ನು ಚಿಂದಿ ಉಡಾಯಿಸುವುದು ಅಂದರೆ ಏನೆಂದು ತೋರಿಸಿಬಿಟ್ಟಿದ್ದಾರೆ.

'ನಾಮ್ ಕ್ಯಾ ಹೈ?' 'ಹಂಝಾ ಅಲಿ ಮಸಾರಿ' ಎಂದು ಶುರುವಾಗುವ ರೀಲ್ಸ್‌ಗಳು ನೂರಾರು ಸಹಸ್ರ ಸಂಖ್ಯೆಯಲ್ಲಿ ಬರುತ್ತಿರುವುದು, ಈ ಚಲನಚಿತ್ರದ ಬಗ್ಗೆ ಯುವ ಜನಾಂಗಕ್ಕಿರುವ ಮೆಚ್ಚುಗೆಯನ್ನು ತೋರುತ್ತಿವೆ.

ಅಲ್ಲಿಯ ಗ್ಯಾಂಗ್ಸ್ಟರುಗಳು ಮತ್ತು ಭಯೋತ್ಪಾದಕರು ಸೇರಿ, ಪಕ್ಕದ ದೇಶದ ವಿಕೃತ ಕಾರನಾಮೆಗಳನ್ನ ಪೂರ್ತಿ ಹೊರಗೆಳೆದು ನಗ್ನಮಾಡಿಬಿಟ್ಟಿದ್ದಾರೆ. ಒಂದೆಡೆ ತಾಂಡವವಾಡುವ ಬಡತನ, ಇನ್ನೊಂದೆಡೆ ಮೋಜಿನ, ಆಡಂಬರದ ಜೀವನ ಮಾಡುವ ರಾಜಕೀಯ ಪುಢಾರಿಗಳ ನಡುವಣ ವೈರುಧ್ಯ ಗಮನ ಸೆಳೆಯುತ್ತದೆ.

ಇಡೀ ಚಲನಚಿತ್ರವನ್ನು ಪಾಕಿಸ್ತಾನದ ನೆಲದಲ್ಲಿಯೇ ನಡೆದ ಕಥೆಯ ಹಾಗೆ ಚಿತ್ರೀಕರಣ ಮಾಡಿದ್ದರಿಂದ ಚಿತ್ರದುದ್ದಕ್ಕೂ ನಾವೇ ಪಾಕಿಸ್ತಾನದಲ್ಲಿದ್ದ ಹಾಗನಿಸುತ್ತದೆ.

ಅಲ್ಲಿನ ಯಾಲೀನಾ ಎಂಬ ಗುಂಗುರು ಕೂದಲ ಸುಂದರಿಯ ಜೊತೆಗೆ ''ಇಷ್ಕ್ ಓರ್ ಐಯ್ಯಾಷಿ?'' ಎಂಬ ಪ್ರಶ್ನೆಗೆ ಹಂಝಾ 'ಇಷ್ಕ್' ಎಂಬ ಉತ್ತರ ಕೊಟ್ಟು ಎಲ್ಲರ ಹೃದಯ ಗೆದ್ದುಬಿಡುತ್ತಾನೆ. ರಣಬೀರನ ಈ ಲವ್ ಸೀನುಗಳು ಮಾತ್ರ ಚಿತ್ರ ಕೊಡುವ ನೋವಿನ ದೃಶ್ಯಗಳಿಂದ ಸ್ವಲ್ಪ ಸುಧಾರಿಸಿಕೊಳ್ಳಲು ಸಹಾಯ ಮಾಡುತ್ತವೆ.

ಅಕ್ಷಯ್ ಖನ್ನಾನ ಎಂಟ್ರಿಯ ಸಂಗೀತ, ಆಂಧಿ ಬನಕೇ ಆಯಾ ಹಾಡುಗಳು ಈಗಾಗಲೇ ಮೀಡಿಯಾದಲ್ಲಿ ಸೂಪರ್ ಹಿಟ್ ಆಗಿವೆ. ಚಿತ್ರದ ಸನ್ನಿವೇಶಕ್ಕೆ ತಕ್ಕ ಹಾಗೆ ಬರುವ ಬಪ್ಪಿ ಲಹರಿಯ ಸೂಪರ್ ಹಿಟ್ ರೆಟ್ರೋ ಹಾಡುಗಳು ಮಾತ್ರ ಅಲ್ಟಿಮೇಟ್ ಎಫೆಕ್ಟ್ ನೀಡುತ್ತವೆ.

ಬಾಲಿವುಡ್ ನಟರ ಅಭಿನಯ ವೈಭವವನ್ನು ನೋಡುವುದೇ ಒಂದು ಅದ್ಭುತ ಅನುಭವ. ಮೇಕಪ್ ಆರ್ಟಿಸ್ಟ್‌ಗಳ ಕೌಶಲ್ಯಕ್ಕೆ, ಸೆಟ್ ತಯಾರಿಸಿದವರ ಜಾಣ್ಮೆಗೆ ಸಾಟಿಯೇ ಇಲ್ಲ. ಇಂಥದ್ದೊಂದು ವಿಶಿಷ್ಟ ಚಿತ್ರ ನೀಡಿದ ಆದಿತ್ಯ ಧರ್ ಅನ್ನೋ ನಿರ್ದೇಶಕ ಎಲ್ಲರ ಹೃದಯ ಗೆದ್ದುಬಿಡುತ್ತಾನೆ.

ಹಿಂಸೆ ಹಿಂಸೆ

ಆದರೆ ಚಿತ್ರದಲ್ಲಿ ವೈಭವೀರಿಸಲಾದ ಹಿಂಸೆ ಮಾತ್ರ, ಎಷ್ಟು ಅತಿ ಎಂದರೆ, ಬಹುಕಾಲ ನಮ್ಮನ್ನು ಡಿಸ್ಟರ್ಬ್ ಮಾಡುತ್ತದೆ. ಕ್ಷಣಕ್ಕೊಮ್ಮೆ ಸಿಡಿಯುವ ದೇಹಗಳು, ಹೋಳಾಗುವ ಬುರುಡೆಗಳು, ಗುಂಡಿಗೆಯನ್ನೇ ಅದುರಿಸುವ ಗುಂಡಿನ ಸದ್ದು, ಮಿತಿ ಮೀರಿದ ರಕ್ತಪಾತ, ದೇಶದ್ರೋಹಿಗಳಿಗೆ ಅಥವಾ ವೈರಿಗಳಿಗೆ ನೀಡುವ ಚಿತ್ರಹಿಂಸೆ, ಹೊಡೆದಾಟ, ರೌಡಿಸಂ - ಉಫ್ 'ಸತ್ತೆ' ಎಂದು ನಾವೇ ಕೂಗಬೇಕು! 'ದೇವ್ರೇ ನಾನೊಲ್ಲೆ' ಎಂದು ಎದ್ದು ಓಡಿ ಹೋಗಬೇಕು. ಬ್ಯಾಕ್ ಟು ಬ್ಯಾಕ್ ಎದೆ ಝಲ್ ಎನಿಸುವ ದೃಶ್ಯಗಳು ಬಂದು ಅಪ್ಪಳಿಸುತ್ತ ಏಳಲಿಕ್ಕೇ ಚೈತನ್ಯ ಇಲ್ಲದ ಹಾಗೆ ಮಾಡುತ್ತವೆ.

ಇದು ತುಂಬಾ ಉದ್ದದ ಸಿನಿಮಾ; ಕಂದಹಾರ್ ಘಟನೆ, ಭಾರತದ ಸಂಸತ್ತಿನ ಮೇಲಿನ ದಾಳಿ, ತಾಜ್ ಹೋಟೆಲ್ ಮೇಲಿನ ಆಕ್ರಮಣ ಮುಂತಾದ ಘಟನೆಗಳನ್ನು ತೋರಿಸುವಾಗ ಟೈಮ್ ಲೈನ್ ಸರಿಯಾಗಿ ಫಾಲೋ ಮಾಡಿಲ್ಲ, ಒಂದೆರಡು ಕಡೆ ಡಾಕ್ಯುಮೆಂಟರಿ ಅನಿಸುತ್ತದೆ ಅನ್ನುವ ದೂರುಗಳ ನಡುವೆಯೂ ತನ್ನ ಶಕ್ತಿಯಿಂದಾಗಿ, ಇದು ಇತ್ತೀಚೆಗೆ ಬಂದ 'ಮೋಸ್ಟ್ ಡಿಸ್ಟರ್ಬಿಂಗ್ ಬಟ್ ಅ ಮಸ್ಟ್ ವಾಚ್ ಮೂವಿ' ಅಂತ ಅನಿಸದೇ ಇರದು. ಚಿತ್ರ ಎಷ್ಟು ಎಂಗೇಜಿಂಗ್ ಆಗಿತ್ತು ಅಂದರೆ ತೆಗೆದುಕೊಂಡ ಪಾಪ್ ಕಾರ್ನ್, ನ್ಯಾಚೋಸ್ ಒಂದೇ ಒಂದು ಕೂಡ ಗಂಟಲಲ್ಲಿ ಇಳಿಯಲಿಲ್ಲ. ನೀರು ಕುಡಿಯುವುದು ಕೂಡ ಸಾಧ್ಯವಾಗಲಿಲ್ಲ. ಅಷ್ಟೊಂದು ವಿಷಾದ ಚಿತ್ರದುದ್ದಕ್ಕೂ ಕಾಡುತ್ತಿತ್ತು.

ಪಕ್ಕದ ದೇಶವು ನಮ್ಮ ದೇಶದ ನಿಜವಾದ ವೈರಿ ಇರಬಹುದು, ಆದರೆ ಅದಕ್ಕಿಂತ ಮಿಗಿಲಾದ ವೈರಿಗಳು ನಮ್ಮ ದೇಶದಲ್ಲೇ ಇದ್ದಾರೆ. ಇಲ್ಲೇ ಇದ್ದುಕೊಂಡು ನೆರೆಯ ದೇಶ 'ಪಾಪ' ಅನ್ನೋ ಪಾಪಿಗಳು, ದೇಶ ಮಾರಲು ಹೊರಟ ರಾಜಕಾರಣಿಗಳು, ದೇಶ ಪ್ರೇಮ ಬೆಳೆಸುವವರನ್ನು ನಿಂದಿಸುವ ಮಾತೃಭೂಮಿ ಭಂಜಕರು, ತಾಯಿ ಭಾರತಿಗೆ ವಂದೇ ಎನ್ನಲು ನಾಲಿಗೆ ಇಲ್ಲದವರು, ನಿಜವಾದ ಖಳರು ಅನ್ನುವುದು ಮಾತ್ರ ಸತ್ಯ. ಇಂಥವರ ಮುಖವಾಡ ಬಯಲು ಮಾಡುವ ಇಂಥ ಚಿತ್ರಗಳು ಇನ್ನಷ್ಟು ಬರಲೇಬೇಕು, ಜನ ನೋಡಲೇಬೇಕು.

'ನಾಮ್ ಕ್ಯಾ ಹೈ?'

'ಹಂಝಾ ಅಲಿ ಮಸಾರಿ' ಎಂದು ಶುರುವಾಗುವ ರೀಲ್ಸ್‌ಗಳು ನೂರಾರು ಸಹಸ್ರ ಸಂಖ್ಯೆಯಲ್ಲಿ ಬರುತ್ತಿರುವುದು, ಈ ಚಿತ್ರ ಬಗ್ಗೆ ಯುವ ಜನಾಂಗಕ್ಕಿರುವ ಮೆಚ್ಚುಗೆಯನ್ನು ತೋರುತ್ತಿವೆ. ಇನ್ನಷ್ಟು ಧುರಂಧರರು ಹುಟ್ಟಿಬರಲಿ, ನಮ್ಮ ದೇಶವನ್ನು ಕಾಪಾಡಲಿ ಎಂದು ಪ್ರೇಕ್ಷಕ ಹಾರೈಸಿದರೆ, ಅದರಲ್ಲಿ ಅಚ್ಚರಿಯೇನೂ ಇಲ್ಲ!

ಪುಸ್ತಕ ವಿಮಾನ

ಬರೆಯುವ ಮುನ್ನ ಬರೆಯುವಾಗ

» ಕೆ. ಸತ್ಯನಾರಾಯಣ

ಸಾಹಿತಿ ಕೆ. ಸತ್ಯನಾರಾಯಣ ಅವರ 'ನಮಗೊಂದು ಸೊಸೆ ಬೇಕು' ಕಾದಂಬರಿ ಇದೀಗ ಹೊರಬಂದಿದೆ. ಅದರಲ್ಲಿ ಲೇಖಕರ ಮಾತುಗಳ ಆಯ್ದ ಭಾಗವಿದು. ಕಾದಂಬರಿಯೊಂದು ಹೇಗೆ ರೂಪುಗೊಳ್ಳುತ್ತದೆ, ಅಕ್ಷರ ರೂಪ ಪಡೆಯುತ್ತದೆ ಎಂದು ಓದುಗರಿಗೂ, ಹಲವು ಲೇಖಕರಿಗೂ ಬಹಳ ಕುತೂಹಲದ ಪ್ರಶ್ನೆಯಾಗಿಯೇ ಇರುತ್ತದೆ. ತಮ್ಮ ಹೊಸ ಕಾದಂಬರಿ ಹೇಗೆ ರೂಪುಗೊಂಡಿತು ಎಂದು ಹೇಳಲು ಯತ್ನಿಸಿರುವ ಈ ಬರಹ, ಸೃಜನಶೀಲ ಪ್ರಕ್ರಿಯೆಯ ಮೇಲೆ ಹೊಸ ಬೆಳಕನ್ನು ಚೆಲ್ಲಬಲ್ಲದು.

ಹತ್ತು ಹಲವು ದಿಕ್ಕುಗಳಲ್ಲಿ ಹರಿಯುವ ನನ್ನ ಬರವಣಿಗೆಯು ತನ್ನದೇ ಆದ ಒಂದು ಗತಿ-ವಿನ್ಯಾಸವನ್ನು ರೂಪಿಸಿಕೊಂಡಿದೆ. ಇದಕ್ಕೆ ವಿಧೇಯನಾಗಿಯೇ ನಾನು ಬರವಣಿಗೆಯನ್ನು ಮಾಡುತ್ತಾ ಬಂದಿದ್ದೇನೆ. ಕಾದಂಬರಿಯೊಂದನ್ನು ಬರೆಯುವ ಒತ್ತಡ ನಾಲ್ಕೈದು ವರ್ಷಗಳಿಗೊಮ್ಮೆ ಬಾಧಿಸುತ್ತದೆ. ಸಹಜವಾಗಿ ರೂಪುಗೊಳ್ಳುತ್ತದೆ.

ಸೃಜನಶೀಲ ಬರವಣಿಗೆಯು ಯಾವ ಮಾದರಿಯನ್ನೂ ಮನ್ನಿಸುವುದಿಲ್ಲ. ಲೇಖಕನೇ ಬಯಸುವ ಮಾದರಿಯನ್ನು ಕೂಡ. ಕಳೆದ (2024) ಡಿಸೆಂಬರ್‌ನಲ್ಲಿ ನಾನು 'ಅಂಪೈರ್ ಮೇಡಂ' ಕಾದಂಬರಿಯನ್ನು ಪ್ರಕಟಿಸಿದೆ. ಬರವಣಿಗೆ, ತಿದ್ದುವಿಕೆ ಸುಮಾರು ನಾಲ್ಕಾರು ತಿಂಗಳು ತೆಗೆದುಕೊಂಡಿತು. ಕತೆಗಳನ್ನು ಬರೆಯುವಾಗ ಕತೆಯ ಸ್ವರೂಪಕ್ಕೆ ಅನುಕೂಲವಾಗಲೆಂದು ಕೆಲವು ಪಾತ್ರಗಳನ್ನು, ಸನ್ನಿವೇಶಗಳನ್ನು ಹೊರಗಿಡುತ್ತಿದ್ದೆ. ಅಂತಹ ಪಾತ್ರಗಳೆಲ್ಲ ನನ್ನನ್ನು ತರಾಟೆಗೆ ತೆಗೆದುಕೊಳ್ಳಲು ಪ್ರಾರಂಭಿಸಿದ್ದರಿಂದ, ಆ ಕಾದಂಬರಿಯನ್ನು ಬರೆಯಬೇಕಾಯಿತು. ಹಾಗೆ ಬರೆದಾದ ಮೇಲೆ, ಆ ಪಾತ್ರಗಳು ವಾಸಿಸುತ್ತಿದ್ದ ಗ್ರಾಮಗಳು, ಬೀದಿಗಳಲ್ಲೆಲ್ಲಾ ನಿರಾಳವಾಗಿ ಓಡಾಡಿ ಬಂದೆ. ಅದೃಷ್ಟ ಚೆನ್ನಾಗಿತ್ತು. ಆತ್ಮೀಯರ, ಓದುಗರ ವಿಶ್ವಾಸಕ್ಕೆ ಕಾದಂಬರಿ ಪಾತ್ರವಾಯಿತು.

ಸದರಿ ಕಾದಂಬರಿಯ ವಸ್ತು-ವಿನ್ಯಾಸ, ಪಾತ್ರಗಳ ತಳಮಳಗಳನ್ನು ನಿಜಜೀವನದಲ್ಲಿ ಎದುರಿಸುವ, ಬರವಣಿಗೆಯಲ್ಲಿ ದಾಖಲಿಸುವ ಧೈರ್ಯವಿಲ್ಲದೆ ಒಳಗಡೆಯೇ ಕೊಳೆ ಹಾಕುತ್ತಿದ್ದೆ. ಇದರಿಂದ ತಪ್ಪಿಸಿಕೊಳ್ಳಲು ಬೇರೆ ರೀತಿಯ ಓದು-ಬರಹ, ಚಟುವಟಿಕೆಗಳಲ್ಲಿ ಸುಳ್ಳು ಸುಳ್ಳೇ ತೊಡಗಿಸಿಕೊಳ್ಳುತ್ತಿದ್ದೆ. ಇದು ಆತ್ಮವಂಚನೆ ಎಂಬ ಒತ್ತಡ ಶುರುವಾಯಿತು. ಇದೇನಿದು ಒಂದು ವರ್ಷದೊಳಗೆ ಮತ್ತೊಂದು ಕಾದಂಬರಿ ಬರೆಯುವುದು

ಎಂದು ಆತ್ಮನಿಯಂತ್ರಣಕ್ಕೆ ಪ್ರಯತ್ನಿಸಿದೆ. ಮನೆಯ ನವೀಕರಣದ ಒತ್ತಡ ನನಗೆ ನೆರವಾಗಬಹುದೆಂದು ಭಾವಿಸಿದೆ. ಬದಲಾಗಿ ಅದೂ ಕೂಡ ಬರವಣಿಗೆಗೆ ಬೇಕಾದ ಒತ್ತಡವನ್ನು ಇನ್ನಷ್ಟು ಹೆಚ್ಚಿಸಿತು. ಇದರ ತಂಟೆಯೇ ಬೇಡವೆಂದು 11-7-25 ರಂದು ಸುಮಾರು ಮೂವತ್ತು ಪುಟಗಳ ಟಿಪ್ಪಣಿ ಮಾಡಿ, ಅಲ್ಲಿಗೇ ಕೈ ತೊಳೆದುಕೊಳ್ಳೋಣವೆಂದು ನಿರ್ಧರಿಸಿದೆ.



ನಮಗೊಂದು ಸೊಸೆ ಬೇಕು
ಕಾದಂಬರಿ
ಲೇ: ಕೆ. ಸತ್ಯನಾರಾಯಣ
ಪ್ರ: ಅಮೂಲ್ಯ ಪುಸ್ತಕ
9448676770
ಬೆಲೆ ರು.200/-

ಏನು ಮಾಡಿದರೂ ಕಾದಂಬರಿಯ ವಿನ್ಯಾಸ ಸ್ಪಷ್ಟವಾಗಿ ರೂಪುಗೊಳ್ಳಲು ಪ್ರಾರಂಭಿಸಿತು. ಪಾತ್ರಗಳು, ಸನ್ನಿವೇಶ, ಸಂಭಾಷಣೆ, ಎಲ್ಲವೂ ನನ್ನೆದುರಿಗೆ ನೃತ್ಯ ಮಾಡಲು ಪ್ರಾರಂಭಿಸಿದವು. ನಾನು ಬಿಡುಗಡೆ ಪಡೆಯುವ ಜೊತೆಗೆ, ನನ್ನೊಳಗಿನ ಪ್ರಪಂಚವೂ ಬಿಡುಗಡೆ ಪಡೆಯತೊಡಗಿತು. ಈ ಸ್ವಾತಂತ್ರ್ಯದಲ್ಲಿ 21-7-2025ರಿಂದ 04-08-2025ರ ತನಕ ಇಡೀ ಕಾದಂಬರಿಯ ಮೊದಲ ಕರಡು ಬರೆದೆ. ಅಂತರ್ಜಲದ ಪ್ರವಾಹ ಈ ಬರವಣಿಗೆಗೆ ಬೇಕಾದ ಏಕಾಗ್ರತೆ, ತನ್ಮಯತೆ, ಚೈತನ್ಯವನ್ನು ಕೂಡ ಒದಗಿಸಿತು.

'ಗೌರಿ' ಕಾದಂಬರಿಯನ್ನು ಹೀಗೆ ಹದಿನಾಲ್ಕು ದಿನಗಳ ಒತ್ತಡದಲ್ಲಿ ಬರೆದಿದ್ದೆ. 'ಕಾಲಜಿಂಕೆ' ಕಾದಂಬರಿಯನ್ನು ದೆಲ್ಲಿಯಲ್ಲಿ ಕುಳಿತು ಮೂರು ವಾರಗಳಲ್ಲಿ ಬರೆದಿದ್ದೆ-ಮೊದಲ ಕರಡನ್ನು-ಅದೆಲ್ಲ ಮೂವತ್ತೂರು ವರ್ಷಗಳ, ಇಪ್ಪತ್ತು ವರ್ಷಗಳ ಹಳೆಯ ಸಮಾಚಾರ. ಸೃಜನಶೀಲ ಬರವಣಿಗೆಯ ಒಂದು ವರವೆಂದರೆ, ಬರೆಯುವಾಗಲೇ ಬರವಣಿಗೆ ಹೇಗಿದೆ ಎಂಬುದು ಬರೆಯುವವನಿಗೆ ಗೊತ್ತಾಗುವುದು. ಚೆನ್ನಾಗಿದೆ, ಚೆನ್ನಾಗಿಲ್ಲ ಎಂಬ ಅರ್ಥದಲ್ಲಲ್ಲ, ಒಳಗಿನಿಂದ ಪುಟಿಯುತ್ತಾ ಅಂತರ್ಜ ಲದಂತೆ ಬರುವ ಕಥನ, ಪಾತ್ರವಿನ್ಯಾಸ, ವೈಚಾರಿಕತೆ, ಎಲ್ಲವೂ ಬಿಡುಗಡೆಗಾಗಿ, ಅಕ್ಷರ ಸಾಕ್ಷಾತ್ಕಾರಕ್ಕಾಗಿ ಹಾತೊರೆ ಯುತ್ತದೆ. ಆ ಹಾತೊರೆಯುವಿಕೆಗೆ ಬರಹಗಾರನು ಶರಣಾ ಗುವ ರೀತಿಯೇ ಅಪೂರ್ವವಾದುದು.ಕಾದಂಬರಿಯ ಓದುಗರಿಗೆ ಕಾದಂಬರಿ ಹೇಗೆ ರೂಪುಗೊಂಡಿತು ಎಂದು ತಿಳಿಯುವ ಹಕ್ಕಿದೆ ಎಂಬ ನಂಬಿಕೆ ನನ್ನದು. ಆ ನಂಬಿಕೆಗನುಗುಣವಾಗಿ ಇಷ್ಟು ಮಾತುಗಳು. ಓದುಗರು ಮನ್ನಿಸಬೇಕು. ನನ್ನನ್ನು ಪ್ರೀತಿಸಲು ಪ್ರಯತ್ನಿಸಬೇಕು.

ಸಮಕಾಲೀನ ಕಥೆಗಳ ಸಂಕಲನ

» ಶಶಾಂಕ್

ಲೇಖಕರೂ, ಕಾದಂಬರಿಕಾರರೂ ಆಗಿರುವ ದ್ವಾರನಕುಂಟೆ ಪಾತಣ್ಣ ಅವರ ಸಂಪಾದಕತ್ವದಲ್ಲಿ ಹೊರಬಂದಿರುವ 'ತೊರೆ' ಕಥಾ ಸಂಕಲನದಲ್ಲಿ ಒಟ್ಟು 27 ಕಥೆಗಳಿವೆ. ಒಬ್ಬೊಬ್ಬ ಕಥೆಗಾರರ ಹಿನ್ನೆಲೆ, ಪರಿಶ್ರಮ, ವಿಷಯದ ಆಯ್ಕೆ, ಕಥೆಕಟ್ಟುವ ಕಲೆ ವಿಭಿನ್ನವಾಗಿರುವುದರಿಂದ, ಇಲ್ಲಿನ 27 ಕಥೆಗಳನ್ನು ಓದಿದಾಗ, ಸಮಕಾಲೀನ ಕನ್ನಡ ಕಥೆಗಳ ವಿಶಾಲ ಹರಹಿನ ಪರಿಚಯವಾಗುತ್ತದೆ; ಜತೆಗೆ, ಎಷ್ಟೊಂದು ವೈವಿಧ್ಯಮಯವಾಗಿ ಸಣ್ಣಕಥೆಗಳು ಒಡಮೂಡಿಬರಬಲ್ಲವು ಎಂಬ ಗ್ರಹಿಕೆಯೂ ಸಿಗುತ್ತದೆ. ಈ ನಿಟ್ಟಿನಲ್ಲಿ, ಈ ಕಥಾಸಂಕಲನದ ಮಹತ್ವವನ್ನು ಗುರುತಿಸಬೇಕಾಗುತ್ತದೆ. ಹಾಗೆ ನೋಡಹೋದರೆ, ಈಗಾಗಲೇ ಪ್ರಸಿದ್ಧರಾಗಿರುವ ಕಥೆಗಾರರ ಕಥೆಗಳು ಈ ಸಂಕಲನದಲ್ಲಿ ಕಡಿಮೆ ಸಂಖ್ಯೆಯಲ್ಲಿವೆ; ಆದರೆ, ಸಾಹಿ ತ್ಯದ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವವರ ಹಲವು ಬರಹಗಾರರ ಕಥೆಗಳು ಅಡಕಗೊಂಡಿದ್ದು, ಒಟ್ಟಾರೆ ಈ ಕಥಾ ಸಂಕಲನದ ಮೌಲ್ಯವನ್ನು ಹೆಚ್ಚಿಸಿವೆ.

ಈ ಕಥಾ ಸಂಕಲನ ರೂಪುಗೊಳ್ಳುವಲ್ಲಿ, ಇದರ ಸಂಪಾದಕರ ಶ್ರಮದ ಕುರಿತು ಮೆಚ್ಚುಗೆ ವ್ಯಕ್ತಪಡಿಸಲೇಬೇಕು. ಸುಂದರ ಮುದ್ರಣ, ಆಕರ್ಷಕ ಮುಖಪುಟ ಒಂದು ಆಯಾಮದ ವೈಶಿಷ್ಟ್ಯ ಎನಿಸಿದರೆ, ಸಂಪಾದಕರ ವೈಯಕ್ತಿಕ ಪರಿಶ್ರಮವು ಇನ್ನೊಂದೇ ಆಯಾಮದ ವೈಶಿಷ್ಟ್ಯ ಎನಿಸಿದ್ದು, ಒಟ್ಟಾರೆ, ಕಥಾ ಸಂಕಲನವನ್ನು ಉತ್ತಮಗೊಳಿಸುವಲ್ಲಿ ತಮ್ಮದೇ ಕೊಡುಗೆ ನೀಡಿವೆ. ದ್ವಾರನಕುಂಟೆ ಪಾತಣ್ಣ ಅವರು ಕ್ರಿಯಾಶೀಲರು; ಸಾಹಿತ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತಲೇ ಇರುತ್ತಾರೆ. ತಾವೇ ಸ್ವತಃ ಬರೆಯುವುದರ ಜತೆಯಲ್ಲೇ, ಸಾಹಿತ್ಯ ಪರಿಚಾರಿಕೆಯ ಕೈಂಕರ್ಯವನ್ನೂ ನಿರಂತರವಾಗಿ ನಡೆಸುತ್ತಿದ್ದಾರೆ. ಕಾರ್ಖಾನೆಯೊಂದರಲ್ಲಿ ದುಡಿದು, ನಿವೃತ್ತರಾಗಿರುವ ಇವರು, ಒಬ್ಬ ಸಂವೇದನಾಶೀಲ ನಾಗರಿಕನು ಹೇಗೆ ನಾಡಿನ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗೆ ಕೊಡುಗೆ ನೀಡಬಹುದು ಎಂಬುದಕ್ಕೆ ಒಂದು ಉದಾಹರಣೆ ಎನಿಸಿದ್ದಾರೆ. 'ತೊರೆ' ಕಥಾ ಸಂಕಲನವನ್ನು ರೂಪಿಸುವ ಮೂಲಕ, ನಮ್ಮ ನಾಡಿನ 27 ಕಥೆಗಾರರ ಹೊಸ ಕಥೆಗಳನ್ನು ಬೆಳಕಿಗೆ ತರುವುದರ ಮೂಲಕ, ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಈ ಸಂಕಲನಕ್ಕಾಗಿಯೇ ಬರೆದ ಕಥೆಗಳೇ ಈ ಸಂಕಲನದ ಜೀವಾಳ ಎನಿಸಿದ್ದು, ಆ ಮೂಲಕ, ಈ ಕಥಾ ಸಂಕಲನಕ್ಕೆ ಸಮಕಾಲೀನತೆ ಒದಗಿಬಂದಿದೆ.



ತೊರೆ
ಕಥಾಸಂಕಲನ
ಸಂ: ದ್ವಾರನಕುಂಟೆ ಪಾತಣ್ಣ
ಪ್ರ: ಸ್ನೇಹಾ ಪ್ರಕಾಶನ
ಬೆಂಗಳೂರು
9686073837
ರು.325/-

ಸಹಬಾಳ್ವೆಯ ಕಥೆಗಳು



ಅಬ್ರಕಡಬ್ರ
ಲೇ: ಮಿರ್ಜಾ ಬಷೀರ್
ಪ್ರ: ಬಹುರೂಪಿ
ಬೆಂಗಳೂರು
7019182729
ಬೆಲೆ ರು.150/-

» ಅಜಯ್ ಅಂಚೆಪಾಳ್ಯ

ತಮ್ಮ ಆಪ್ತ ಎನಿಸುವ ಬರಹಗಳಿಂದ ಕನ್ನಡದ ಓದುಗರಿಗೆ ಈಗಾಗಲೇ ಪರಿಚಿತರಾಗಿರುವ ಪಶುವೈದ್ಯ ಮಿರ್ಜಾ ಬಷೀರ್ ಅವರ ಹೊಸ ಕಥಾ ಸಂಕಲನ 'ಅಬ್ರಕಡಬ್ರ', ಹಲವು ಕಾರಣಗಳಿಂದಾಗಿ ವಿಶಿಷ್ಟ ಎನಿಸಿದೆ. ಲಲಿತ ಪ್ರಬಂಧಶೈಲಿಯ ಹದದಲ್ಲಿ ಬರೆಯುತ್ತಿರುವ, ಈಗಾಗಲೇ ಹಲವು ಪ್ರಶಸ್ತಿಗಳನ್ನು ಪಡೆದಿರುವ ಮಿರ್ಜಾ ಬಷೀರ್ ಅವರ ಬರಹಗಳು ವಿಶಿಷ್ಟವಾಗಿವೆ; ನಮ್ಮ ದೇಶದ ಜೀವನಾಡಿ ಎನಿಸಿದ ಕೃಷಿಕರು ಮತ್ತು ಕೃಷಿಕರು ಸಾಕುವ ಜಾನುವಾರುಗಳ ನಡುವೆ ಬದುಕಿನ ಬಹುಪಾಲು ದಿನಗಳನ್ನು ಕಳೆದಿರುವ ಮಿರ್ಜಾ ಬಷೀರ್ ಅವರು, ತಮ್ಮ ವಿಭಿನ್ನ ಅನುಭವಗಳ ತಳಹದಿಯಲ್ಲಿ ರೂಪಿಸಿರುವ ಕಥೆಗಳು ಆಪ್ತ, ಆಕರ್ಷಕ. ಹಸುವಿನ ಹೊಟ್ಟೆಯಲ್ಲಿ ಪ್ಲಾಸ್ಟಿಕ್ ಸೇರಿಕೊಂಡು, ಕೃಷಿಕ ಮಹಿಳೆಯನ್ನು ಕಾಡುವ ಕಥೆಯನ್ನು ಅವರಲ್ಲದೆ ಬೇರಾರೂ ಬರೆಯಲು ಅಸಾಧ್ಯ ಎನಿಸುವಂತಿದೆ. ಅವರ ಕಥನ ಶೈಲಿಯಲ್ಲಿ ಲಲಿತಪ್ರಬಂಧದ ಧಾಟಿಯೂ ಮಿಳಿತಗೊಂಡಿರುವುದರಿಂದಾಗಿ, ಸುಲಲಿತ ಓದಿನ ಸೊಗಸನ್ನು ನೀಡುತ್ತವೆ. ಈ ಸಂಕಲನದಲ್ಲಿ ಒಂಬತ್ತು ಕಥೆಗಳಿವೆ; ಪಿಂಜಾರ ಹಟ್ಟಿ, ದಲಿತರ ಕೇರಿ, ಮುಸ್ಲಿಂ ಹುಡುಗ, ರಸಪುರ ಮಾವಿನ ಹಣ್ಣು ಇವೆಲ್ಲವುಗಳನ್ನೊಳಗೊಂಡ 'ಚಂದನ ಗಾಂಧಿ' ಯಂತಹ ಕಥೆಯನ್ನು ಮಿರ್ಜಾ ಬಷೀರ್ ಮಾತ್ರ ಬರೆಯಬಲ್ಲರು ಎನಿಸುತ್ತದೆ. ಇವರ ಕಥೆಗಳಲ್ಲಿ ಸಾಮರಸ್ಯ ಮತ್ತು ಸಹಬಾಳ್ವೆಯ ಮಹತ್ವಗಳು ಎದ್ದು ಕಾಣುತ್ತವೆ; ಅವೇ ಇಂದಿನ ಭಾರತದ ತುರ್ತು ಅಗತ್ಯಗಳಾಗಿವೆ ಅಲ್ಲವೆ!

ಪ್ರೀತಿಯೇ ದೇವರು



ನನ್ನ ಜೀವನ (ಕವಿತೆಗಳು)
ಲೇ: ಡಾ. ಎ. ಪಿ. ಜೆ. ಅಬ್ದುಲ್ ಕಲಾಂ
ಕನ್ನಡಕ್ಕೆ:ಪ್ರೊ. ಷಾಕಿರಾ ಖಾನಂ (ಸಾಬಿ)
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು - 560 001.
ಬೆಲೆ. ರು.95/-

» ಬೇದ್ರೆ ಮಂಜುನಾಥ, ಮೈಸೂರು

ಪ್ರತಿಯೊಂದನ್ನೂ ಪ್ರಶ್ನಿಸು, ಎನ್ನುತ್ತದೆ ವಿಜ್ಞಾನ. ಪ್ರತಿಯೊಂದನ್ನೂ ವಿಜ್ಞಾನಿ ಪ್ರಶ್ನಿಸುತ್ತಲೇ ಕಲಿಯುತ್ತಿರುತ್ತಾನೆ. 'ನನ್ನ ಜೀವನ' ಸಂಕಲನದಲ್ಲಿನ 26 ಕವಿತೆಗಳಲ್ಲಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಪ್ರತಿ ಯೊಂದನ್ನೂ ಪ್ರಶ್ನಿಸಿ, ತಮಗೆ ದೊರೆತ ಕಾಣ್ಕೆಯನ್ನು ಪದಗಳಲ್ಲಿ ಹಿಡಿದಿಟ್ಟಿದ್ದಾರೆ. 'ದೇವರೆಲ್ಲಿದೆ/ದೇವರೆಲ್ಲಿದ್ದಾನೆ?' ಎಂಬ ಪ್ರಶ್ನೆಯ ಕವಿತೆಯೊಂದಿಗೆ ಆರಂಭಗೊಳ್ಳುವ ಈ ಸಂಕಲನ ನಾನು ಹಾರುವೆ ಎಂಬ ಆತ್ಮವಿಶ್ವಾಸದಿಂದ ಮುಕ್ತಾಯಗೊಳ್ಳುತ್ತದೆ. ಕಲಾಂ ಅವರು ಕಂಡುಂಡ ಅನುಭ ವಗಳನ್ನು ಆಯಾಯ ಸನ್ನಿವೇಶ ಮತ್ತು ಪರಿಸರದ ನಡುವೆ ಕವಿತೆಯಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಭೂಮಿ, ಅಂತರಿಕ್ಷ, ವಿಮಾನ, ಉದ್ಯಾನವನ, ಮಂಗಳನ ಅಂಗಳ ಹೀಗೆ ಎಲ್ಲೆಲ್ಲಿ ಅವರ ಕಲ್ಪನೆ ಸುತ್ತಾಡಿತ್ತೋ, ಅಲ್ಲಲ್ಲಿಯೇ ಅವು ಕವನಗಳಾಗಿ ಅಕ್ಷರಗಳಲ್ಲಿ ಪಡಿಮೂಡಿವೆ. ಓ ನನ್ನ ಮಾನವ ಜನಾಂಗವೆ,

ನಾವು ಹೇಗೆ ಹುಟ್ಟಿದೆವು,
ಸಂಬಂಧಗಳ ಅನಂತತೆಯ ವಿಶ್ವದಲ್ಲಿ
ನಾವು ಒಂಟಿಯೇ?

ಎಂದು ಪ್ರಶ್ನಿಸುತ್ತ ನಾವೆಲ್ಲರೂ ಒಂದಲ್ಲಾ ಒಂದು ಬಗೆಯಲ್ಲಿ ಪರಸ್ಪರ ಸಂಬಂಧಿಗಳು ಹೇಗಾದೆವು ಎಂಬ ಉತ್ತರವನ್ನು ಸಂವಾದ ರೂಪದಲ್ಲಿ ಹಿಡಿದಿಟ್ಟಿದ್ದಾರೆ. ದೇವರೇ ಪ್ರೀತಿ, ಪ್ರೀತಿಯೇ ದೇವರು.... ಎನ್ನುವ ಕಲಾಂ 'ನೀವೆಲ್ಲ ತಿಳಿದುಕೊಳ್ಳಿ; ಖುದಾ ಮತ್ತು ರಾಮ ಇಬ್ಬರೂ ಒಂದೇ, ಪ್ರೀತಿಯಲ್ಲಿ ಅರಳುತ್ತಿದ್ದಾರೆ' ಎಂಬ ಸರ್ವ ಸಮಾನತೆಯನ್ನು ಒಪ್ಪುತ್ತಾರೆ.

''ಓ!'' ಕನಸುಗಳ ಸೃಷ್ಟಿಕರ್ತನೆ
ದೇವರನ್ನು ಏಕೆ ಹುಡುಕಬೇಕು?
ಅವನು ಎಲ್ಲೆಲ್ಲೂ ಇದ್ದಾನೆ
ಪ್ರಕೃತಿ ಅವನ ಮನೆ, ಪರಿಶುದ್ಧತೆ
ಅವನ ವಾಸಸ್ಥಾನ
ಜೀವನ ಅವನ ಆಶೀರ್ವಾದ
ಪ್ರಕೃತಿಯನ್ನು ಪ್ರೀತಿಸು ಮತ್ತು ಅದರ ಎಲ್ಲಾ ಜೀವಿಗಳನ್ನು ನೋಡಿಕೋ
ನೀನು ಎಲ್ಲೆಡೆ ದೇವರನ್ನು ಕಾಣುವೆ, ಎನ್ನುವ ಪ್ರಶ್ನೋತ್ತರ ನಿಸರ್ಗ ಮತ್ತು ದೇವರೆಲ್ಲಿದೆ ಕವನಗಳ ಹೂರಣವಾಗಿದೆ.

ಕ್ಷಿಪಣಿ ವಿಜ್ಞಾನಿ, ಶಿಕ್ಷಕ, ರಾಷ್ಟ್ರಪತಿ, ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಎಲ್ಲ ಕೃತಿಗಳಲ್ಲಿ ಅಪರೂಪದ ವಿಚಾರಧಾರೆಯಿದೆ. ಅಗ್ನಿಯ ರೆಕ್ಕೆಗಳು ಅವರ ಆತ್ಮಕಥೆಯ ಸಂಕ್ಷಿಪ್ತ ರೂಪವಾಗಿದ್ದರೆ ಅವರ ಇತರ ಕೃತಿಗಳು ಮನುಕುಲ ಸಾಧಿಸಬೇಕಿರುವ ಔನ್ನತ್ಯದ ಕುರಿತ ಚಿಂತನೆಗಳಾಗಿವೆ. ಪ್ರಸ್ತುತ ಕವನ ಸಂಕಲದಲ್ಲಿರುವ 26 ಕವಿತೆಗಳೂ ಅವರ ಮುಗ್ಧತೆಯನ್ನು, ಕವಿಹೃದಯವನ್ನು ಪರಿಚಯಿಸುತ್ತವೆ.

ಶ್ರೀಹರ್ಷನನ್ನು ಕುರಿತ ಕಾದಂಬರಿ



ಆರ್ಯಾವರ್ತ
ಲೇ: ಉಷಾ ನರಸಿಂಹನ್
ಪ್ರ: ಅಂಕಿತ ಪುಸ್ತಕ
ಬೆಲೆ ರು.450/-

ಆರು ಮತ್ತು ಏಳನೆಯ ಶತಮಾನದಲ್ಲಿ ಆಳಿದ ಶ್ರೀ ಹರ್ಷನ ಬದುಕು, ಸಾಧನೆಯನ್ನು ಬಿಂಬಿಸುವ ಈ ಕಾದಂಬರಿಯು, ಉಷಾ ನರಸಿಂಹನ್ ಅವರ ಆರನೆಯ ಕಾದಂಬರಿ. ಸುಮಾರು 350 ಪುಟಗಳಿಗಳಷ್ಟು ವ್ಯಾಪ್ತಿಯ ಈ ಕಾದಂಬರಿಯ ಕಾಲಘಟ್ಟದಲ್ಲಿ, ಪ್ರಸಿದ್ಧ ಚೀನಾ ಯಾತ್ರಿಕ ಹೂಯನ್‌ತ್ಸಾಂಗ್ ನಮ್ಮದೇಶಕ್ಕೆ ಭೇಟಿಕೊಟ್ಟು, ಇಲ್ಲಿನ ಸ್ಥಿತಿಗಳನ್ನು ದಾಖಲಿಸಿದ್ದ. ''ಆರ್ಯಾವರ್ತ-ಎಂಬುದು ಉತ್ತರದ ಸೀಮೆಗಳನ್ನು ಒಳಗೊಂಡಿದ್ದು ಎಂಬ ಅರ್ಥ ಇರುವಂತೆ; ಶ್ರೇಷ್ಠಾತಿಶ್ರೇಷ್ಠರು ಓಡಾಡಿದ ಸ್ಥಳವೆಂಬ ಅರ್ಥವುಂಟು. ಬುದ್ಧ ಮತ್ತು ಹರ್ಷರಂಥ ಶ್ರೇಷ್ಠರೂ ಮಾನ್ಯರೂ ಇದ್ದದ್ದು ಆರ್ಯಾವರ್ತದಲ್ಲೇ. ಉಷಾ ನರಸಿಂಹನ್ ಶ್ರೀಹರ್ಷವರ್ಧನನನ್ನು ಕೇಂದ್ರವಾಗಿಟ್ಟುಕೊಂಡು ಕಾದಂಬರಿಯನ್ನು ರಚಿಸಿದ್ದಾರೆ. ಶ್ರೀಹರ್ಷನು ಬುದ್ಧನ ತತ್ತ್ವಗಳನ್ನು ಒಪ್ಪಿಕೊಂಡವನು. ಅವನ ಕಾಲದಲ್ಲಿ ಚೀನೀ ಪ್ರವಾಸಿಗ ಹೂಯನ್ ತ್ಸಾಂಗ್ ಬಂದಿದ್ದ. ಇಲ್ಲಿಯ ಕಥಾನಕ ಆರನೆಯ ಶತಮಾನದಿಂದ ಏಳನೆಯ ಶತಮಾನದ ಇತಿಹಾಸದ ಮಧ್ಯ ಕಾಲಾವಧಿಯನ್ನು ಒಳಗೊಂಡಿದೆ. ಕಾದಂಬರಿಕಾರರು ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ನೆಲೆಗಳನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಸೃಜನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಕಾದಂಬರಿಯು ಬುದ್ಧನ ಕರುಣೆ-ದಯಾಭಾವವನ್ನು ವ್ಯಂಜಿಸುವಂತೆ, ಮನುಷ್ಯನ ತೀವ್ರ ಶೋಭೆ-ಈರ್ಷ್ಯೆಗಳನ್ನು ಪ್ರತಿಮಿಸುತ್ತದೆ. ಕಾದಂಬರಿಕಾರರು ವಿವರಗಳನ್ನು ಕಲ್ಪಕತೆಯ ಮೂಸೆಯಲ್ಲಿ ಅದ್ದಿ ನೇಯ್ದಿದ್ದಾರೆ. ಇಲ್ಲಿಯ ವಸ್ತು, ಭಾವ-ಭಾಷೆಗಳೊಡನೆ ಓದುಗರ ಅಂತರಂಗಕ್ಕೆ ನೇರವಾಗಿ ಪ್ರವೇಶಿಸುತ್ತದೆ. ಶ್ರೀಹರ್ಷನನ್ನು ಕುರಿತ ಮೊದಲ ಕನ್ನಡ ಕಾದಂಬರಿ-ಎಂಬುದು ಇದರ ಹೆಚ್ಚುಗಾರಿಕೆ ಮತ್ತು ಹೆಗ್ಗಳಿಕೆ!'' (ಬೆನ್ನುಡಿಯಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ)

ಕನ್ನಡದ ಸಾಹಿತ್ಯ ಸಂಸ್ಕೃತಿಯ ಅದೃಷ್ಟ

» ಶಶಿ

ಸುಮಾರು 450 ಪುಟಗಳ 'ಅಲ್ಲಮ ಕಥನ' ಗ್ರಂಥವು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಇತ್ತೀಚಿಗಿನ ಕೃತಿ. ವಿಶೇಷವೆಂದರೆ, ಪ್ರಕಟಗೊಂಡ ಕೆಲವೇ ವಾರಗಳಲ್ಲಿ ಮೊದಲ ಮುದ್ರಣದ ಪ್ರತಿಗಳು ಮಾರಾಟಗೊಂಡು, ಮರುಮುದ್ರಣಕ್ಕೆ ಒಳಪಟ್ಟ ಗ್ರಂಥವಿದು. ಅಧ್ಯಾತ್ಮ ವಿಷಯದ ಕುರಿತಾದ ಗಂಭೀರ ಗ್ರಂಥವೊಂದು ಬಹುಬೇಗನೆ ಮರುಮುದ್ರಣಕ್ಕೆ ಒಳಪಟ್ಟಿರುವುದು ಸಹ ಗಮನಾರ್ಹ.



ಅಲ್ಲಮ ಕಥನ
ಲೇ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಅಂಕಿತ ಪುಸ್ತಕ
ಬೆಂಗಳೂರು
9019190502
ಬೆಲೆ ರು. 595/-

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಅಲ್ಲಮನ ಕುರಿತು ಪತ್ರಿಕೆಯೊಂದರಲ್ಲಿ 2021ರಿಂದ ಅಂಕಣ ಸ್ವರೂಪದ ಬರಹಗಳನ್ನು ಬರೆಯುತ್ತಾ ಬಂದಿದ್ದು, ಇನ್ನೂ ಕೆಲವು ವಾರಗಳ ಕಾಲ ಆ ಅಂಕಣವು ಮುಂದುವರಿಯುತ್ತಲಿದೆ. ಆ ಬರಹಗಳನ್ನು ಉತ್ತಮಗೊಳಿಸಿ, 'ಅಲ್ಲಮ ಕಥನ' ಪುಸ್ತಕದಲ್ಲಿ ಅಳವಡಿಸಲಾಗಿದ್ದು, ನಾಲ್ಕು ಅಧ್ಯಯನಪೂರ್ಣ ಅನುಬಂಧಗಳನ್ನೂ ಇಲ್ಲಿ ಕೊಡಲಾಗಿದೆ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಅಲ್ಲಮ ಪ್ರಭು, ಹನ್ನೆರಡನೆಯ ಶತಮಾನದಲ್ಲಿ ಜೀವಿಸಿದ್ದ ಅಧ್ಯಾತ್ಮ ಕವಿ, ಅನುಭಾವಿ. ಆತನ ಕುರಿತು ಬಹು ವಿಸ್ತೃತವಾಗಿ ಇಲ್ಲಿ ಬರೆಯಲಾಗಿದೆ ಮತ್ತು ಇದು ಕನ್ನಡದ ಅಪರೂಪದ ಗ್ರಂಥವಾಗಿ ರೂಪುಗೊಂಡಿದೆ.

ಈ ಗ್ರಂಥದ 'ಲೇಖಕನ ನಿವೇದನೆ'ಯಲ್ಲಿ, ಮಲ್ಲೇಪುರಂ ಅವರು ನಿವೇದಿಸಿರುವ ವಿಚಾರಗಳು ಗಮನ ಸೆಳೆಯುತ್ತವೆ : ''ಅಲ್ಲಮಪ್ರಭು ದೇವರನ್ನು ಕುರಿತು ನಾನು ಬರೆದಿರುವ ಈ ಕೃತಿಯು ಅಲ್ಲಮನ ಆಧ್ಯಾತ್ಮಿಕ ಯಾನದ ನೆಲೆಗಳನ್ನು ಹಿಡಿಯಲು ಪ್ರಯತ್ನಿಸಿದೆ. ಅಲ್ಲಮನು ಒಬ್ಬ ಯೋಗಿ, ಸಿದ್ಧಪುರುಷ, ಮಹಾ ಸಂತ ಎಂಬುದು ನನಗೆ ಇದರಿಂದ ಖಚಿತವಾಗಿ ಮನವರಿಕೆಯಾಗಿದೆ. ನಮ್ಮ ಕನ್ನಡ ಸಾಹಿತ್ಯ, ಸಂಸ್ಕೃತಿಯ ಅದೃಷ್ಟವಾಗಿ ಅವನು ನಮಗೆ ದೊರಕಿದ್ದಾನೆ. ಅವನು ಯಾವ ಕಾಲಕ್ಕೂ ನಮ್ಮ ನಮ್ಮ ವೈಚಾರಿಕ ವಾಗ್ವಾದಗಳಿಗೆ ಒದಗಿಬರುತ್ತಾನೆ. ಹಾಗೆ ನೋಡಿದರೆ, ಮಧ್ಯಕಾಲೀನ ಕನ್ನಡ ಸಂಸ್ಕೃತಿಯಲ್ಲಿ ಅವನು ಊರಿರುವ ಹೆಜ್ಜೆ ಅನೂಹ್ಯ! ಅವನು ತೋರಿಸಿರುವ ವೈಚಾರಿಕ-ಆಧಾತ್ಮಿಕ ಹಾದಿಯಂತೂ ಯಾವ ಕಾಲಕ್ಕೂ ಒದಗಿಬರುವಂಥದ್ದು. . . . ಅಲ್ಲಮನು ಕಳೆದ ನಾಲ್ವತ್ತು ವರ್ಷಗಳಲ್ಲಿ ನನ್ನಲ್ಲಿ ಬೆಳೆದಿದ್ದಾನೆ; ನನ್ನನ್ನು ಬೆಳೆಸಿದ್ದಾನೆ. ಡಾ. ಎಲ್.ಬಸವರಾಜು ಅವರ 'ಅಲ್ಲಮನ ವಚನಚಂದ್ರಿಕೆ' ಪ್ರಕಟವಾದ ಮೇಲೆ, ಅಲ್ಲಮನ ವಚನಗಳಲ್ಲಿ ನಾನು ಧ್ಯಾನಸ್ಥನಾದೆ. ಆಗ ಅಲ್ಲಮನ ಕೆಲವು ವಚನಗಳು ಮನಸ್ಸಿನಾಳಕ್ಕೆ ಇಳಿಯುತ್ತಿದ್ದವು. ಅವು ತಿಳಿದವು ಎಂಬಷ್ಟರಲ್ಲಿ ತಿಳಿಯದಂತಾಗುತ್ತಿದ್ದವು. ಇನ್ನು ಬೆಡಗಿನ ವಚನಗಳನ್ನು ಟೀಕುಗಳ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಪಟ್ಟೆ. ಅಷ್ಟು ಇಷ್ಟು ತಿಳಿದಂತೆ ಭಾಸವಾಗುತ್ತಿತ್ತು! ಅಂತೂ ಇಮತೂ ಅಲ್ಲಮನ ವಚನಗಳ ಜೊತೆ ಸಕೀಲ ಸಂಬಂಧ ಬೆಳೆಯತೊಡಗಿತು. . . ಒಟ್ಟಿನಲ್ಲಿ ನನ್ನ ನಾಲ್ವತ್ತು ವರ್ಷದ ಬಯಕೆ (ಈ ಗ್ರಂಥದಿಂದಾಗಿ) ತುಸುಮಟ್ಟಿಗೆ ಸಾಕ್ಷಾತ್ಕಾರಗೊಂಡಿದೆಯೆಂದು ತಿಳಿಯುತ್ತೇನೆ!'' ಇಲ್ಲಿನ ಬರಹಗಳನ್ನು ಓದುತ್ತಾ ಸಾಗಿದಂತೆ ಅಲ್ಲಮನ ವಚನಗಳ ಕುರಿತು, ಕವಿಯಾಗಿ ಆತನ ಪ್ರತಿಭೆಯ ಕುರಿತು, ಆತನ ಅಧ್ಯಾತ್ಮ ಸಾಧನೆಯ ಕುರಿತು ಗೌರವ ಮೂಡುತ್ತದೆ. ಕನ್ನಡ ಸಾಹಿತ್ಯ, ಕಾವ್ಯಗಳ ಪರಿಚಯ ಮಾಡಿಕೊಳ್ಳಬಯಸುವ ಎಲ್ಲರೂ ಓದಬಹುದಾದ ಉತ್ತಮ ಗ್ರಂಥವಿದು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ಅಲ್ಲಮ ಕಥನ
(ಅಲ್ಲಮನ ಆಧ್ಯಾತ್ಮಿಕ ಯಾನಕ್ಕೆ ಪುಸ್ತಕ ರೂಪ ಕೊಟ್ಟಿದ್ದಾರೆ ಮಲ್ಲೇಪುರಂ ಅವರು)
ಲೇ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 595/-



2
ಅವಳು ಬದುಕ ಕಲಿಸಿದವಳು
(ಯುವ ಜನತೆಯಲ್ಲಿ ಸಂಚಲನ ಮೂಡಿಸಿದ, ಸತ್ಯಘಟನೆಯಾಧಾರಿತ ಹತ್ತು ಮುದ್ರಣ ಕಂಡ ಪ್ರೇಮ ಕಥೆ)
ಲೇ: ಅರ್ಜುನ್ ದೇವಾಲದಕೆರೆ
ಪ್ರ: ದೇವಾಲದಕೆರೆ ಪ್ರಕಾಶನ, ಸಕಲೇಶಪುರ, ಬೆಲೆ: ರೂ 250/-



3
ಹೊಸ ಓದುಗರಿಗೆ ಕುವೆಂಪು
(ಪ್ರಸಿದ್ಧ ವಿಮರ್ಶಕ ಕೆ.ವಿ. ನಾರಾಯಣ ಅವರು ಬರೆದ ಕುವೆಂಪು ಸಾಹಿತ್ಯ ಕುರಿತ ಬರಹಗಳನ್ನು ಇಲ್ಲಿ ಸಂಕಲಿಸಿದ್ದಾರೆ)
ಲೇ: ಕೆ. ವಿ. ನಾರಾಯಣ
ಪ್ರ: ಆಕೃತಿ ಪುಸ್ತಕ, ಬೆಂಗಳೂರು
ಬೆಲೆ : ರೂ 195/-



4
ವಾತಾಪಿ
(ಕ್ರಿ. ಶ.605-645 ರ ವರೆಗೆ ಚಾಲುಕ್ಯ ಸಾಮ್ರಾಜ್ಯವನ್ನು ಆಳಿದ ದಕ್ಷಿಣಾಪಥೇಶ್ವರ ಇಮ್ಮಡಿ ಪುಲಿಕೇಶಿಯ ರೋಚಕ ಚರಿತ್ರೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು, ಬೆಲೆ: ರೂ 449/-



5
ಹೊಲೆ ಮಾದಿಗರ ಪ್ರಾಚೀನ ಚರಿತ್ರೆ
(ಹೊಲೆ ಮಾದಿಗರ ಹುಟ್ಟು ಎಲ್ಲಿಂದ? ಪುರಾಣ ಕಾಲದಿಂದಲೂ ಇದ್ದಿರಬಹುದೇ? ಅದರ ಸಂಪೂರ್ಣ ವಿಶ್ಲೇಷಣೆ ಇಲ್ಲಿದೆ)
ತೆಲುಗು ಮೂಲ: ಬೋನಿಗಲ ರಾಮರಾವ್
ಕನ್ನಡಕ್ಕೆ: ವೆಂಕಟೇಶ ಬೇವಿನಬೆಂಚಿ
ಪ್ರ: ಕೌದಿ ಪ್ರಕಾಶನ, ಆನೇಕಲ್
ಬೆಲೆ: ರೂ 120/-

6
ಹಂಗರ್
(ನಾರ್ವೆ ದೇಶದ ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ ನಟ್ ಹಾಮ್ಸನ್ ಅವರ ಪ್ರಸಿದ್ಧ ಕೃತಿ 'ಹಂಗರ್'ನ ಕನ್ನಡಾನುವಾದ)
ಮೂಲ: ನಟ್ ಹಾಮ್ಸನ್
ಅನು: ಟಿ.ಡಿ. ರಾಜಣ್ಣ ತಗ್ಗಿ
ಪ್ರ: ದೇಸಿ ಪುಸ್ತಕ, ಬೆಂಗಳೂರು
ಬೆಲೆ: ರೂ 260/-

7
ಮತ್ತೆಲ್ಲೂ ಆಗದಿರಲಿ ಇಂತಹ ಹತ್ಯಾಕಾಂಡ
(ಅಮೆರಿಕದ ಮೂಲ ನಿವಾಸಿಗಳನ್ನು ಹೊಸಕಿ ಹಾಕಿದ ಹತ್ಯಾಕಾಂಡದ ಕಥೆಯಿದು)
ಲೇ: ಮಂಜುನಾಥ ಅಜ್ಜಂಪುರ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಬೆಲೆ: ರೂ 160/-



8
ಪಾರಸಿಕ ದೇಶಕಾಲದಲ್ಲಿ ಭಾರತ
(1000-1765)
(ಪಾರಸಿಕ ದೇಶಕಾಲದ ಭಾರತದ ಚಿತ್ರಣ ಇಲ್ಲಿದೆ)
ಲೇ: ರಿಚರ್ಡ್ ಎಂ. ಈಟನ್
ಅನು: ಓ.ಎಲ್.ನಾಗಭೂಷಣಸ್ವಾಮಿ
ಪ್ರ: ಋತುಮಾನ ಪ್ರಕಾಶನ, ಬೆಂಗಳೂರು
ಬೆಲೆ: ರೂ 749/-



9
ಎತ್ತರೆತ್ತರ ಭೈರಪ್ಪ
(ಡಾ। ಎಸ್.ಎಲ್. ಭೈರಪ್ಪನವರ ಬದುಕಿನ ಅಪರೂಪದ ಪ್ರಸಂಗಗಳು - ಅಗೆದಷ್ಟು ಆಳ ಮೊಗೆದಷ್ಟು ಬೆರಗು)
ಲೇ: ದೀಕ್ಷಿತ್ ನಾಯಕ್
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: ರೂ 175/-



10
ಒಲುಮೆ ಒಚ್ಚತವಾಗಿ
(ಅಕ್ಕಮಹಾದೇವಿ ವಚನಕಾರ್ತಿಯಾಗಿ ಪ್ರಸಿದ್ಧಳು. ಆಕೆಯ ಆಯ್ದ ವಚನಗಳ ವಿವರಣೆ ಇಲ್ಲಿದೆ)
ಲೇ: ಓ.ಎಲ್. ನಾಗಭೂಷಣಸ್ವಾಮಿ
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ: ರೂ 210/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಮತ್ತೊಂದು ಸ್ಲೀಪರ್ ಬಸ್ ಬೆಂಕಿಗೆ ಆಹುತಿಯಾಗಿ ನಾಲ್ಕಾರು ಜನರನ್ನು ಬಲಿಪಡೆಯಿತು. ಕಳೆದ ಹತ್ತು ವರ್ಷಗಳ ಅಂಕಿಸಂಕಿ ನೋಡಿದರೆ, ರಾತ್ರಿವೇಳೆ ಚಲಿಸುವ ಸ್ಲೀಪರ್ ಬಸ್‌ಗಳು ಅಲ್ಲಲ್ಲಿ ಬೆಂಕಿಗೆ ಆಹುತಿಯಾಗಿ, ಹಲವು ಪ್ರಯಾಣಿಕರ ಬಲಿ ಪಡೆದಿವೆ. ಪದೇ ಪದೇ ಇಂತಹ ಅನಾಹುತ ಆಗುವುದಕ್ಕೆ ಕಾರಣವೇನು? ಬಸ್‌ಗಳಲ್ಲಿ ಸಾಗಿಸುವ ಟನ್‌ಗಟ್ಟಲೆ ಅನಧಿಕೃತ ಲಗೇಜ್ ಮತ್ತು ಕಾನೂನು ನಿಗದಿಪಡಿಸಿರುವ ಸುರಕ್ಷಾ ಕ್ರಮಗಳನ್ನು ಗಾಳಿಗೆ ತೂರಿದ್ದೇ ಇಂತಹ ಅನಾಹುತಕ್ಕೆ ಮುಖ್ಯ ಕಾರಣವೇ?

ಜೀವ ಹೆಚ್ಚೋ? ಸರಂಜಾಮು ಹೆಚ್ಚೋ?

» ಸಂತೋಷಕುಮಾರ ಮೆಹೆಂದಳೆ

ಪ್ರತಿ ಬಸ್ಸಿನ ಟಾಪ್ ಮೇಲೆ ನಾಲ್ಕು ಅಡಿ ಜಾಗ, ಜನ ಕುಳಿತುಕೊಳ್ಳುವ ಆಸನಗಳ ಕೆಳಗೆ ಮಾಡಿರುವ ಅರೆಗಳು ಆರು ಅಡಿ ಜಾಗ; ಅದರ ಅಗಲ ಉದ್ದ ಹೆಚ್ಚು ಕಡಿಮೆ ಬಸ್ಸುಗಳ ಶೇ. ಮುಕ್ಕಾಲು ಭಾಗ. ಇಷ್ಟೂ ಜಾಗದಲ್ಲಿ ಪೆಂಟ್ ಬಾಕ್ಸುಗಳು, ವೈರ್ ಬಂಡಲ್ಲು, ಬಟ್ಟೆ, ಮೆಟೀರಿಯಲ್ಸ್, ಬೇಕರಿ ಬಾಕ್ಸುಗಳು, ಸರಕು ಬಾಕ್ಸ್‌ಗಳ ಮಡಿಚಿದ ಕಟ್ಟು, ವಿದ್ಯುತ್ ಕೇಸಿಂಗ್ ಕ್ಯಾಬಿನ್ ಬಂಡಲ್ಲು – ಏನಿಲ್ಲವೆಂದರೂ ನೂರಿನ್ನೂರು, ಕಟ್ಟಡ ನಿರ್ಮಾಣ ಸಾಮಗ್ರಿಗಳು ಏನುಂಟು ಏನಿಲ್ಲ, ಜಗತ್ತಿನ ಎಲ್ಲ ವಸ್ತುಗಳೂ ಈ ಜಾಗದಲ್ಲಿ ಒಪ್ಪವಾಗಿ ಇರುತ್ತವೆ; ಜತೆಗೆ ತರಹೇವಾರಿ ಲಗ್ಗೇಜ್ ಹೇರಿಕೊಂಡು ಹೊರಡುವ ಬಸ್ಸಿನ ಕೆಳಭಾಗದಲ್ಲಿ ಇಂಜಿನ್ ಶಾಫ್ಟ್‌ಗಳು, ಕೇಬಲ್ ಟ್ರೇಗಳು, ಇನ್ನಿತರ ವಾಹನ ಸಂಬಂಧಿ ಸಂಪರ್ಕ ವ್ಯವಸ್ಥೆ, ಆಯಿಲ್ ಲೈನ್‌ಗಳು ಹೀಗೆ ದಹನಾನುಕೂಲಿ ಸಕಲ ವ್ಯವಸ್ಥೆ ಅತ್ತಿಂದಿತ್ತ, ಹಾಯ್ದು ಹೋಗಿರುತ್ತದೆ.

ಇಂಥ, ಭಾರೀ ಲೋಡು ತುಂಬಿಕೊಂಡು ಹೊರಡುವ ಬಸ್ಸಿನ ಇಂಜಿನ್ ಹಿಂಭಾಗದಲ್ಲಿದ್ದರೆ, ಚಾಲಕ ಮುಂಭಾಗದಲ್ಲಿ, ಲೈಟಿಂಗ್ ಪ್ಯಾನಲ್ಲು, ಬ್ಯಾಟರಿ ಸಂಪರ್ಕ, ಗೇರ್ ಬಾಕ್ಸು, ಅದರ ಆಯಿಲ್ ಟ್ಯಾಂಕು, ಇಂಜಿನಿ ಆಯಿಲ್ ಜೊತೆಗೆ ಈ ಎಲ್ಲ ನಿಯಂತ್ರಣಗಳ ಸಹಿತ ಬಸ್ಸಿನ ಎರ್ ಕಂಡಿಶನ್ ಪೂರೈಕೆ ಲೈನ್ ಮತ್ತು ಸಂಪರ್ಕ ಜೊತೆಗೆ, ಅವುಗಳನ್ನು ನಿಯಂತ್ರಿಸುವ ನಾಬ್‌ಗಳು, ಮೇಲ್ಗಡೆ ಪ್ರತಿ ಆಸನಕ್ಕೂ ಲೈಟ್ ವ್ಯವಸ್ಥೆಗಾಗಿ ವಿದ್ಯುತ್ ಸಂಪರ್ಕ ವ್ಯವಸ್ಥೆ, ಮೊಬೈಲ್ ಚಾರ್ಜರ್ ಪಾಯಿಂಟ್, ಅದಕ್ಕಾಗಿ ಕೇಬಲ್ ಕೇಸಿಂಗ್ ಕ್ಯಾಬಿನ್ನು, ಹೀಗೆ ಬರೆಯುತ್ತಾ ಹೋದರೆ ಪ್ರಯಾಣಿಕ ಕುಳಿತು ಅಥವಾ ಮಲಗುವ ಸೀಟಿನ್ ಕೆಳಗೂ ನಾನಾ ರೀತಿಯ ದಹನಾನುಕೂಲಿ ವಸ್ತುಗಳು! ಅಕಸ್ಮಾತ್ ಕಡ್ಡಿ ಗೀರಿದರೆ ಮೂವತ್ತೇ ಸೆಕೆಂಡ್‌ನಲ್ಲಿ ದಾವಾನಲವಾಗಲು ಏನು ಬೇಕೋ ಅದೆಲ್ಲ ಇಲ್ಲಿ ಬೆರಳಂಚಿಗೆ ಲಭ್ಯ. ಜೀವ ಮಾತ್ರ ದಕ್ಕುವುದಿಲ್ಲ. ಇದು ಸಣ್ಣ ಸರಳ ವಿವರಣೆ; ಮೊನ್ನೆ ಚಿತ್ರದುರ್ಗದ ಸನಿಹ ಮತ್ತು ಕಳೆದ ಹತ್ತು ವರ್ಷದಲ್ಲಿ ಹೀಗೆ ಉರಿದು ಬಲಿಯಾದ ಸುಮಾರು ನೂರಾರು ಹೆಚ್ಚು ಜೀವ ಪಡೆದ ಬಸ್ಸುಗಳ ಮಾಹಿತಿ.

ಆದರೂ ಯಾವುದೇ ಅಧಿಕಾರಿ, ಜನನಾಯಕ 'ನಿಮ್ಮ ಬಸ್ಸಿನಲ್ಲಿ ಜನರ ಹೊರತಾಗಿ ಇದೆಲ್ಲ ವಸ್ತು ಸಾಗಾಟ ಯಾಕಯ್ಯ ಮಾಡ್ತೀರಿ?' ಎಂದು ಕೇಳಿ, ಸುದ್ದಿ ಮಾಡಿದ ಉದಾಹರಣೆ ಒಂದೇ ಒಂದೂ ಇಲ್ಲ! ಈ ರೀತಿ ಟನ್‌ಗಟ್ಟಲೆ ಲಗೇಜನ್ನು ಪ್ರಯಾಣಿಕರ ಬಸ್ಸಿನಲ್ಲಿ ಸಾಗಿಸುವುದು ಕಾನೂನು ಬಾಹಿರ! ಆದರೂ, ಕಾನೂನು ಕ್ರಮ ಜರುಗಿಸಿ, ಸುದ್ದಿ ಮಾಡಿದ ಅಧಿಕಾರಿಯೋ, ನಾಯಕರೋ ಇಲ್ಲ!

ಇದರ ಹೊರತಾಗಿಯೂ, ಹಿಂದಿನ ಇಂಜಿನ್‌ನಿಂದ ಮುಂದಿನ ಚಾಲನೆಗೆ ಸಂಪರ್ಕ ಕಾರಣ ಬಸ್ಸು ಯಾವಾಗಲೂ ಕುಲುಮೆಯ ರೇಂಜ್‌ನ ಶಾಫ್ಟ್‌ಗಳ ಮೇಲೆ ಚಲಿಸುತ್ತಿದ್ದರೆ, ಬಸ್ಸಿನ ಪ್ರತಿ ಬಾಗಿಲು ಕಿಟಕಿಗಳು ಮಾತ್ರ ಯಾವಾಗಲೂ ಜಾಮ್. ಇನ್ನು ನಿಯಂತ್ರಕನ ಅಕ್ಕ ಪಕ್ಕದ ಪ್ಯಾನೆಲ್ ಮತ್ತು ಅದರ ಸಂವಹನ ಮಾಧ್ಯಮವೆಲ್ಲ ಬಸ್ಸಿನ ಪೂರ್ತಿ ಸುತ್ತು ಆವರಿಸಿರುತ್ತದೆ. ಈಗೀಗ ಪ್ರತಿ ಆಸನದ ಮುಂದೆ ಟಿ.ವಿ. ಪ್ಯಾನೆಲ್ ಸ್ಕ್ರೀನು, ಅದರ ಪ್ರತ್ಯೇಕ ಕೇಬಲ್ ಸಂಪರ್ಕ, ಅದರ ನಿಯಂತ್ರಣದ ಮತ್ತೊಂದು ವೈರು ಜಾಲ, ಹಿಂಭಾಗದ ಲೈಟುಗಳು, ಬ್ರೆಕ್ ಲೈಟು, ಶೋಕಿಗಾಗಿ ಮಾಡಿಸಿರುವ ಪುಕುಪುಕು ಲೈಟುಗಳು, ಬ್ರೇಕ್ ಅದುಮಿದಾಗ ಮತ್ತು ಇನ್ನಿತರ ಕಾರಣಕ್ಕೆ ವಿಭಿನ್ನವಾಗಿ ಜೋಡಿಸಿದ ಆಯಾ ಬಣ್ಣದ ಲೈಟುಗಳ ಸುತ್ತುವರಿದ ಕೇಬಲ್ ಕೇಸಿಂಗ್‌ನ ದೊಡ್ಡ ಸರಪಳಿ ನಮ್ಮ ಸುತ್ತ ಬಿಗಿದೇ ಇರುತ್ತದೆ. ಪ್ರತಿಯೊಂದು ವಿದ್ಯುತ್ ಪ್ರವಹಿಸುವ ಜೀವಂತ ಜಾಲಕ್ಕೆ ಅಗ್ನಿ ಸಿಕ್ಕರೆ ಸೆಕೆಂಡ್ ಕಾಲಾವಧಿ ಸಾಕು ಆವರಿಸಿಕೊಳ್ಳಲು.

ಮುಖ್ಯ ಬಾಗಿಲು ಲಾಕ್!

ಸುಲಭಕ್ಕೆ ತೆರೆದುಕೊಳ್ಳಲಾಗದ ಈ ವ್ಯವಸ್ಥೆ, ಅಕಸ್ಮಾತ್ ಅಪಘಾತವಾದರೆ, ಆಟೋಮೋಡ್‌ಗೆ ಹೋಗುವ ವ್ಯವಸ್ಥೆಯಿಂದ ಮುಖ್ಯ ದ್ವಾರವೇ ಲಾಕ್ ಆಗಿ ಬಿಡುತ್ತದೆ. ಕಾರಣ, ಮೊದಲು ಸ್ಥಗಿತಗೊಳ್ಳುವುದೇ ಬ್ಯಾಟರಿ! ಅದರ ಬಲವಿಲ್ಲದೆ ಹೈಡ್ರಾಲಿಕ್ ವ್ಯವಸ್ಥೆಯ ಬಾಗಿಲು ಸೇರಿದಂತೆ ಎಲ್ಲ ಸಂಪರ್ಕಗಳು ಕಡಿತಗೊಂಡು ಬಸ್ಸು ಉರಿಯಲು ಸಿದ್ಧವಾದ ಕುಲುಮೆಯ ಪೆಟ್ಟಿಗೆಯಂತಾಗಿ ಬಿಡುತ್ತದೆ. ಇದಕ್ಕೆ ಬೆಂಕಿ ತಗುಲಿದರೆ ಮೂವತ್ತರಿಂದ ನೂರೆಂಭತ್ತು ಸೆಕೆಂಡು ಸಾಕು ಪೂರ್ತಿ ಆವರಿಸಲು.

ಅಷ್ಟರೊಳಗೆ ಕನಿಷ್ಠ ಮೂವತ್ತೆರಡು ಜೀವಗಳು, ತಾವಿರುವ ಸೀಟಿನಿಂದ ಎದ್ದು, ಕಿಟಕಿ ತೆರೆಯಲಾಗುತ್ತಿಲ್ಲ, ಎಂದು ಗೊತ್ತಾಗಿ ಇರುವ ಸಲಕರಣೆ ಹುಡುಕಿ, ಕಿಟಕಿ ಬಡಿದಾಡಿ ಅಂತೂ ದಕ್ಕುವ ಮಾರ್ಗದಲ್ಲಿ ಹೊರಕ್ಕೆ ಬರಬೇಕು. ಇದರ ಸಾಧ್ಯತೆ ಶೇ.ಕಾಲು ಭಾಗ ಮಾತ್ರ. ಕಾರಣ ಹಾಗೆ ಬೆಂಕಿ ತಗಲುತ್ತಿದ್ದಂತೆ ಗೂಡಿನಿಂದ ಹೊರಬೀಳುವ ಆತುರದಲ್ಲಿ ಎಲ್ಲರೂ ಮೊದಲು ಕಾಲಿಕ್ಕುವುದೇ ಪ್ಯಾಸೆಜ್ ಗ್ಯಾಪ್‌ನಲ್ಲಿ. ಇದು ಕೇವಲ ಎರಡಡಿಗೂ ಕಮ್ಮಿ ಜಾಗದಲ್ಲಿ, ಉಳಿದೆಲ್ಲ ತಲೆ ಎತ್ತಲಾಗದ ಅರೆಗಳೆ. ಅಲ್ಲಿ ಒಮ್ಮೆ ಆಗುವ ಟ್ರಾಫಿಕ್ ಜಾಮ್‌ನಿಂದಾಗಿ ಬದುಕು ಉಳಿಸಿಕೊಳ್ಳಬಹುದಾದ ಅವಕಾಶ ಕೇವಲ ಶೇ. ಹತ್ತು ಮಾತ್ರ. ಈ ಪ್ಯಾಸೆಜ್‌ನಲ್ಲಿ ಸಾಲಾಗಿ ನಿಂತರೆ ಹೆಚ್ಚೆಂದರೆ ಹದಿನೈದು ಹದಿನಾರು ಜನ ನಿಲ್ಲಬಹುದು. ಮಾಡಿಕೊಳ್ಳಿ ಉಳಿದವರ ಕತೆ?

ದಹನಾನುಕೂಲಿ ಸಾಮಾನು ಸರಂಜಾಮು

ಈಗ ಹೇಳಿ, ಬಸ್‌ಗೆ ಬೆಂಕಿ ಹತ್ತಲು ಡಿಸೈಲ್ ಟ್ಯಾಂಕಿಗೇ ಬೆಂಕಿ ಬೀಳಬೇಕೆ? ಒಂದು ಗೊತ್ತಿರಲಿ. ಯಾವುದೇ ವಾಹನದ ಫ್ಯೂಯೆಲ್ ಬಾಕ್ಸ್ ಅಥವಾ ಇಂಧನ ಪೆಟ್ಟಿಗೆ ಎಲ್ಲದಕ್ಕಿಂತ ಹೆಚ್ಚಿನ ಸುರಕ್ಷಿತ ಜಾಗದಲ್ಲಿರುತ್ತದೆ. ಅದು ಉರಿಯುವುದೇ ಕೊನೆಯ ಹಂತದಲ್ಲಿ. ಅದಕ್ಕೂ ಮೊದಲೇ ಹೊರಟು ಅರ್ಧ ಗಂಟೆಯಲ್ಲೇ ಕುಲುಮೆಯಂತಾಗುವ ವಾಹನದ ಯಾವುದೇ ಭಾಗಕ್ಕೆ ಬೆಂಕಿ ಕಿಡಿ ಬಿದ್ದರೂ ಉರಿಯಲು ಸಿದ್ಧವಾಗಿರುವಷ್ಟು ತೀವ್ರ ಉಷ್ಣ ಉತ್ಪನ್ನ ಆಗುತ್ತಲೇ ಇರುತ್ತದೆ. ಅದರಲ್ಲೂ ಇಂಜಿನ್‌ನ ಯಾವುದೇ ಭಾಗ ನೋಡಿ ನಿಗಿನಿಗಿ ಎನ್ನುತ್ತಿರುತ್ತದೆ. ಹೀಗಿದ್ದಾಗ ಪ್ರತಿಯೊಬ್ಬರೂ ಡಿಸೆಲ್ ಟ್ಯಾಂಕ್‌ನಿಂದ ಬೆಂಕಿ ಎನ್ನುವ ಮೊದಲು, ಈ ಅರೆಗಳಲ್ಲಿ ಕೂಡಿಡುವ ಸಾಮಾನು ಸರಂಜಾಮುಗಳ ಕಡೆಗೊಮ್ಮೆ ಗಮನ ಹರಿಸಿ.

ತಾನಾಗಿಯೇ ಪುಡಿಯಾಗುವ ಕಿಟಕಿ?

ಕಾರಣ ಹೀಗೆ, ಬೆಂಕಿಗೆ ಸಿಲುಕುವ ಪಯಣದಲ್ಲಿ ಸುಲಭಕ್ಕೆ ಒಡೆಯಬಲ್ಲ ಗಾಜುಗಳ ಬಳಕೆ ಆಗದಿರುವುದು ಸೇರಿದಂತೆ ಸರಕಾರಿ ವಾಹನ ಸೌಲಭ್ಯಗಳು ಸಾಕಷ್ಟು ಅನುಕೂಲಕಾರಿ ಆಗಿಲ್ಲದಿರುವುದು ಈ ಕುಲುಮೆ ಬಸ್‌ಗಳನ್ನು ಜನ ಕಾಯ್ದು ನಿಲ್ಲುವ ಕೆಂಡದ ಮೇಲೆ ಮಲಗಿ ಪಯಣಿಸುತ್ತಿದ್ದಾರೆ. ಫೈರ್ ಎಕ್ಸ್ಟಿಂಗ್ವಿಶರ್ ನಮ್ಮಲ್ಲಿ ಎಷ್ಟು ಬಸ್‌ನಲ್ಲಿ ಎಷ್ಟು ಪ್ರಮಾಣದಲ್ಲಿದೆ? 2013 ರಲ್ಲಿ ಕೋರ್ಟೊಂದು ಪ್ರತಿ ಬಸ್ಸಿನ ಕಿಟಕಿಗಳೂ ಮತ್ತು ಗಾಜಿನ ಬಾಗಿಲು ಇತ್ಯಾದಿ ನಿರ್ದಿಷ್ಟ ಅಘಾತದ ಹೊಡೆತಕ್ಕೆ ತಾನಾಗೇ ಪುಡಿಯಾಗಿ ಉದುರುವ ಗಾಜುಗಳನ್ನೇ ಹೊಂದಿರಬೇಕು ಎಂದು ಆದೇಶ ಜಾರಿ ಮಾಡಿತ್ತು. ಇದನ್ನು ಪಾಲಿಸುವವರು ಕಡಿಮೆ.

ವರ್ಷಕ್ಕೊಮ್ಮೆಯಾದರೂ ಹೆದ್ದಾರಿಯಲ್ಲಿ ಬೆಂಕಿಗೆ ಆಹುತಿಯಾಗುವ ಬಸ್ ಪ್ರಕರಣ ಆದಾಗಲೆಲ್ಲ ನಾವು ಎದ್ದು ಕೂರುತ್ತೇವೆ; ಆದರೆ ದಿನವಿಡಿ ನಮ್ಮೆದುರೇ ಮೇಲೂ ಒಳಗೂ ನಾಲ್ಕು, ಆರು ಅಡಿ ಮಿಕ್ಕಿ

ಲಗೇಜು ಹೇರುವ ಬಗ್ಗೆ ಸರಕಾರದ ಯಂತ್ರ ಕುಂಯ್ ಎನ್ನುವುದೇ ಇಲ್ಲ. ಅಸಲಿಗೆ, ಕೇವಲ ಪಯಣಕ್ಕಾಗಿ ಮಾತ್ರ ಇರುವ ಪರ್ಮಿಟ್‌ನಲ್ಲಿ ನಮ್ಮ ಖಾಸಗಿ ಲಗ್ಗೇಜ್ ಬಿಟ್ಟರೆ ಬೇರೆ ಸಾಗಾಣಿಕೆಗೆ ಅನುಮತಿ ಇಲ್ಲವೇ ಇಲ್ಲ. ಪೋಲಿಸ್ ಅಥವಾ ಸಾರಿಗೆ ಇಲಾಖೆ ಮನಸ್ಸು ಮಾಡಿದರೆ ದನ್ನು ತಡೆಯಬಹುದು. ದಿನವೊಂದಕ್ಕೆ ಬೆಂಗಳೂರಿನಿಂದ ಹೊರಹೋಗುವ ಒಂದೊಂದು ಬಸ್‌ಗೂ ಕೇವಲ ಐದೇ ಟನ್ ಲೆಕ್ಕಿಸಿದರೂ, ರಾತ್ರಿ ಒಂದು ಹೊತ್ತಿನಲ್ಲಿ ಅನಾಮತ್ತು ಹನ್ನೆರಡರಿಂದ, ಹದಿನೈದು ಸಾವಿರ ಟನ್ ಕುಲುಮೆಗಳು ನಮ್ಮನ್ನು ಉರಿಸಲು ಸತತವಾಗಿ ಎಂಭತ್ತರಿಂದ ನೂರರ ವೇಗದಲ್ಲಿ ಚಲಿಸುತ್ತಲೇ ಇರುತ್ತವೆ. ನಮ್ಮ ಅದೃಷ್ಟ ಚೆನ್ನಾಗಿದ್ದಷ್ಟೂ ನಾವು ಬದುಕುತ್ತಿದ್ದೇವೆ, ಅಷ್ಟೆ!

ಕೇಬಲ್ ಟ್ರೇಗೆ ಮೊದಲು ಬೆಂಕಿ

ಮೂಲತ: ಯಾವುದೇ ವಾಹನ ಅಪಘಾತವಾದಾಗ ತತಕ್ಷಣ ಡಿಸೆಲ್ ಟ್ಯಾಂಕಿಗೆ ಹೋಗಿ ಬೆಂಕಿ ಬೀಳುವುದೇ ಇಲ್ಲ. ಅದು ಬಲಿಯಾಗುವುದು ಮತ್ತು ತನ್ನ ಕೊಡುಗೆ ಸೇರಿಸುವುದು ತುಸು ಹೊತ್ತಿನ ನಂತರ. ಆದರೆ ಅದಾಗಲೇ ಹಿಂದಿನ ಭಾಗ ಮತ್ತು ಮುಂದಿನ ಭಾಗಕ್ಕೆ ಸಂಪರ್ಕವಾಗಿ ಕಾರ್ಯನಿರ್ವಹಿಸುವ ಹಲವಾರು ಶಾಫ್ಟ್ ಮತ್ತು ಕೇಬಲ್ ಟ್ರೇಗಳು ಬೆಂಕಿಯನ್ನು ಸುಲಭಕ್ಕೆ ದಾಟಿಸಲು ಕಾಯ್ದು ನಿಂತಿರುತ್ತವೆ. ಅದಕ್ಕೆ ಸರಿಯಾಗಿ ಲಗೇಜ್ ರೂಪದಲ್ಲಿ ಹೇರಿರುವ ವಸ್ತುಗಳಲ್ಲಿರುವ ದಹನಾನುಕೂಲಿ ವಸ್ತುಗಳು ಸರಕ್ಕನೆ ಬೆಂಕಿ ಕಚ್ಚಿಕೊಂಡು ಅದನ್ನು ಡಿಸೆಲ್ ಟ್ಯಾಂಕು ಮತ್ತು ಇತರ ಇಂಜಿನ್ ಆಯಿಲ್‌ವರೆಗೂ ಒಯ್ಯುತ್ತವೆ. ಇದೆಲ್ಲ ಮೊದಲೆ ಒಂದೆರಡು ಅಥವ ಹೆಚ್ಚೆಂದರೆ ಐದು ನಿಮಿಷದಲ್ಲಾಗುವ ಅಗ್ನಿ ಪಲ್ಲಟ.

ಅಷ್ಟರಲ್ಲಿ ಬಾಗಿಲು ಜಾಮ್ ಆಗಿ ಲಾಕ್ ಆಗುತ್ತದೆ. ಗ್ಲಾಸು ಒಡೆಯಲು ಬರುವುದಿಲ್ಲ. ಅದು ಕೆಲವೊಮ್ಮೆ ಗಂಡಸರಿಗೂ ಆಗದಿರುವ ಕೆಲಸ! ಇನ್ನು ಮಕ್ಕಳು ಹೆಂಗಸರು ಎಲ್ಲಿಂದ ಸುತ್ತಿಗೆ ತಂದು ಕಿಟಕಿ ಹಾರಿ ಬದುಕು ಕಟ್ಟಿಕೊಂಡಾರು. ಮಾಡಿದರೂ ಪ್ಯಾಸೆಜ್‌ನಲ್ಲಿ ಎಲ್ಲರೂ ಒಮ್ಮೆ ತುಂಬಿಕೊಂಡು ತಳ್ಳಾಡುವಾಗ ಕೇವಲ ಆರೆಂಟು ಜನ ಹಾರಿಕೊಂಡಾರು. ಅದರ ನಂತರ ಮತ್ತೊಂದು ಸಾಲು ಜಿಗಿಯುತ್ತದೆ ಎಂದಿಟ್ಟುಕೊಂಡರೂ ಎರಡನೆಯವರಿಗೆ ಶೇ.20 ಸುಡುವ ಗಾಯ ಖಂಡಿತ. ಆದರೆ ಆ ಹೊತ್ತಿಗೆ ಬೆಂಕಿಯ ಕೆನ್ನಾಲಿಗೆ ಮತ್ತು ಹೊಗೆ ಯಾವ ಪರಿ ಏರಿ ಬಿಡುತ್ತದೆ ಎಂದರೆ 'ಗೋಲ್ಡನ್ ಅವರ್' ಮುಗಿದ ಅಪಾಯಕಾರಿ ಸಮಯದಲ್ಲಿ ಹೆಚ್ಚೆಂದರೆ ಬದುಕುವ ಅವಕಾಶ ಶೇ.ಒಂದು ಮಾತ್ರ. ಕಾರಣ ಹೊರಕ್ಕೆ ಜಿಗಿದರೂ ಬೆಂಕಿಯ ಬಾಯಿಗೆ, ಅದರಲ್ಲೂ ಸುಡುವ ಚರ್ಮ ಲೆಕ್ಕಿಸದೆ ಆಚೆಗೆ ದೌಡಾಯಿಸಲು ನಾವೆಲ್ಲ ಏನು ಸಿನೇಮಾ ನಾಯಕರಾ? ಶ್ವಾಸಕೋಶದ ಹೊಗೆ ತುಂಬಿ ಉಸಿರು ಚೆಲ್ಲಿ ಅಲ್ಲೆ ಆಹುತಿ. ಮೇಲೂ ಕೆಳಗೂ ಇದ್ದ ಸರಂಜಾಮು ತಮ್ಮ ಕೆಲಸ ಮುಗಿಸುತ್ತವೆ. ದೂರದಲ್ಲಿ ನಿಂತವರು ವಿಡಿಯೋ ಮಡುತ್ತಿರುತ್ತಾರೆ. ರೋದನೆ ಮುಗಿಲು ಮುಟ್ಟುತ್ತದೆ.

ಅನಧಿಕೃತ ಹೇರಿಕೆ

ಡಿಸೆಲ್ ಟ್ಯಾಂಕ್ ನೀಡುವ ಕೊಡುಗೆ ಎಂದರೆ ಅದು ಕೊನೆಯ ಉರಿಗೆ ತನ್ನ ಕೊಡುಗೆ ನೀಡುತ್ತದೆ. ಅದಕ್ಕೂ ಮೊದಲೇ, ಹೇರಿರುವ ಸರಂಜಾಮು ನಮ್ಮನ್ನು ಮುಕ್ಕಾಲು ಭಾಗ ಉರಿಸಿ ಹಾಕಿರುತ್ತದೆ. ಈ ಅನಧಿಕೃತ ಹೇರಿಕೆಯ ಬಗ್ಗೆ ಒಬ್ಬರೂ ಉಸಿರೆತ್ತುತ್ತಿಲ್ಲ! ವಾಹನಗಳಲ್ಲಿ ದಹನಾನುಕೂಲಿ ವಸ್ತುಗಳ ಸಾಗಣೆ ನಡೆಯುತ್ತಿರುವುದು, ಅದೂ ತೀರ ಪಟಾಕಿ, ಬಾಂಬು, ಮದ್ದು ಇಂಥವೇ ಆಗಬೇಕೆಂದೇನಿಲ್ಲ. ಸಿಂಥೇಟಿಕ್ ಬಣ್ಣಗಳು, ಕೂದಲು, ರಸಾಯನಿಕ ಪದಾರ್ಥಗಳು (ಇವುಗಳಲ್ಲಿ ಪ್ರತಿಯೊಂದು ವಸ್ತುವು ಅದರದ್ದೇ ಆದ ಶೈಲಿಯಲ್ಲಿ ದಹನಾನು ಕೂಲಿ ಎನ್ನುವುದನ್ನು ಗಮನಿಸಬೇಕು) ಪಾಲಿಯೆಸ್ಟರ್ ಬಟ್ಟೆಗಳ ಬಾಕ್ಸುಗಳು, ಇಲೆಕ್ಟ್ರಿಕಲ್ ಕೇಬಲ್ ಬಂಡಲ್ ಗಳು, ಪ್ಲಾಸ್ಟಿಕ್ ಸುರುಳಿಗಳು, ಒಣಪದಾರ್ಥಗಳ ರಟ್ಟಿನ ಪೆಟ್ಟಿಗೆಗಳು, ಇವನ್ನೆಲ್ಲ ಅವರಿಸಿರುವ ಪ್ಯಾಕಿಂಗ್ ಮೆಟೀರಿಯಲ್ಲು ಬೆಂಕಿಗೆ ತುಪ್ಪ ಸುರಿಯುವ ಪದಾರ್ಥಗಳೆ.

ಇನ್ನೊಂದೆಂದರೆ, ಅಪಘಾತವಾಗುತ್ತಲೇ ಕಿಟಕಿ ಗ್ಲಾಸ್ ಒಡೆಯುವುದಂತೂ ಸಾಧ್ಯವೇ ಇರುವುದಿಲ್ಲ. ಎಂಜಿನ್ ಆಫ್ ಆಗುತ್ತಲೇ, ಇಂದಿನ ತಂತ್ರಜ್ಞಾನ ಕೈಕೊಡುವುದರಿಂದ, ಮುಖ್ಯ ಬಾಗಿಲು ಆಟೋ ಲಾಕ್ ಆಗುವುದರಿಂದ ಪ್ರಯಾಣಿಕರಿಗೆ ಉಳಿಯುವ ಏಕೈಕ ದಾರಿ ಗಾಜು ಒಡೆಯುವುದೆ. ಆದರೆ ಅದಕ್ಕೆ ಬೇಕಾದ ಸಲಕರಣೆ ಇರುತ್ತದೇಯೇ ?

ಇದರ ಜೊತೆಗೆ ಬಸ್ ಆಪರೇಟರ್‌ಗಳು ಹಣಕ್ಕಾಗಿ ಕಂಡು ಕೊಂಡಿರುವ ಇನ್ನೊಂದು ಮಾರ್ಗ ರಜಾವಧಿಯಲ್ಲಿ ರೇಟನ್ನು ಬೇಕಾಬಿಟ್ಟಿ ಏರಿಸುವುದು. ಒಬ್ಬೊಬ್ಬರೇ ಮಲಗುವ ಆಸನಕ್ಕೆ ಶೇ.20 ಜಾಸ್ತಿ. ಕೆಳಗಾದರೆ ಮತ್ತೇ ಶೇ10 ಜಾಸ್ತಿ. ಅರೆ ಇದೇನಿದು? ಒಂದೇ ಬಸ್ಸು ಒಂದರೆ ದಾರಿ.. ತರಹೇವಾರಿ ರೇಟು... ಮೈಯೆಲ್ಲಾ ಉರಿದುಕೊಳುವ ಪ್ರಯಾಣಿಕ ಮಾತ್ರ ದವಡೆ ಕಚ್ಚಿಕೊಂಡು ಕುಳಿತಿರುತ್ತಾನೆ. ಇನ್ನು ಬ್ಯಾಗೇಜ್ ಚಾರ್ಜುು ಎಂದು, ಬ್ಯಾಗನ್ನು ಕೆಳಗಿನ ಅರೆಯಲ್ಲಿಡಲು ಪ್ರತಿ ಬ್ಯಾಗಿಗೆ 10 ರೂಪಾಯಿ ಕೊಡಬೇಕು. ಕೊಡುವ ಬೆಡ್‌ಶೀಟ್‌ಗಳು ಕನಿಷ್ಟ ನಾಲ್ಕಾರು ಬಾರಿ ಉಪಯೋಗಿಸಿದ್ದು! ಇಷ್ಟೆಲ್ಲಾ ಲಾಭದತ್ತಲೆ ದೃಷ್ಟಿ ನೆಡುವ ಬಸ್‌ಗಳು, ಪ್ರಯಾಣಿಕರ ಸುರಕ್ಷತೆಯತ್ತ ಯಾವ ಗಮನ ನೀಡುತ್ತದೆ? ಉತ್ತರ ಸೊನ್ನೆ.

ಪ್ರತಿ ಬಸ್‌ಗೆ ಸ್ವಯಂ ಚಾಲಿತ ಅಗ್ನಿ ಸುರಕ್ಷಾ ವ್ಯವಸ್ಥೆ ಕೊಡದೆ ಹೋದರೆ, ವರ್ಷಕ್ಕೊಮ್ಮೆ ಒಂದೆರಡು ಡಜನ್ ಲೆಕ್ಕದಲ್ಲಿ ಜೀವ ಆಹುತಿ ಪಕ್ಕ. ಎರಡು ದಿನ ಮಾಧ್ಯಮಗಳು ಬಾಯಿ ಬಡಿದುಕೊಂಡು ಸುಮ್ಮನಾಗುತ್ತವೆ. ಮುಂದೆ ಮತ್ತೊಂದು ಬಸ್ ಆಹುತಿಯಾಗುವವರೆಗೆ.

ಇಡ್ಲಿಯನ್ನು ಮೃದು ಮಾಡುವುದು ಯಾರು?

ಈ ಜಗತ್ತಿನಲ್ಲಿ ಸೂಕ್ಷ್ಮಜೀವಿಗಳಲ್ಲಿದಿದ್ದಲ್ಲಿ ಹಾಲು ಮೊಸರಾಗುವುದಿಲ್ಲ, ದೋಸೆಯಲ್ಲಿ ತೂತು ಬೀಳುವುದಿಲ್ಲ, ಇಡ್ಲಿ ಮೃದುವಾಗುವುದಿಲ್ಲ, ಬ್ರೆಡ್ ತಯಾರಾಗುವುದಿಲ್ಲ! ಕೊಳೆಯುವಿಕೆ ಇಲ್ಲದೆ ಸಸ್ಯಗಳಿಗೆ ಬೇಕಾದ ಪೋಷಕಾಂಶಗಳು ಸಿಗುತ್ತಿರಲಿಲ್ಲ!

» ಡಾ. ಎಸ್. ಶಿಶುಪಾಲ

ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗುವ ಜಾಹೀರಾತುಗಳಲ್ಲಿ ಸೂಕ್ಷ್ಮಜೀವಿಗಳನ್ನು 'ಕೀಟಾಣು' ಎಂದು ಸಂಭೋಧಿಸಿ, ಅವು ರೋಗಕಾರಕ ಜೀವಿಗಳೆಂದು ಬಿಂಬಿಸಲಾಗಿದೆ. ಆದರೇ ಈ ಜೀವ ಜಗತ್ತಿನಲ್ಲಿ ಸೂಕ್ಷ್ಮಜೀವಿಗಳದ್ದು ವಿಶೇಷ ಮಹತ್ವದ ಸ್ಥಾನ. ಕಣ್ಣಿಗೆ ಕಾಣಿಸದ ಜೀವಿಗಳನ್ನು ಸೂಕ್ಷ್ಮಜೀವಿಗಳು ಎಂದು ಕರೆಯುತ್ತಾರೆ. ಅಂತಹ ಜೀವಿಗಳನ್ನು ಅಧ್ಯಯನ ಮಾಡಲು ಸೂಕ್ಷ್ಮದರ್ಶಕ ಯಂತ್ರದ ಅವಶ್ಯಕತೆಯಿರುತ್ತದೆ.

ಜೀವವೈವಿಧ್ಯದಲ್ಲಿ ಸೂಕ್ಷ್ಮಜೀವಿಗಳದ್ದೇ ಅಗ್ರಸ್ಥಾನ. ಕೆಲವು ಸೂಕ್ಷ್ಮಜೀವಿಗಳು ಸಸ್ಯಗಳಂತೆ ನಿರ್ದಿಷ್ಟ ಸ್ಥಳದಲ್ಲಿರಬಲ್ಲವು ಮತ್ತೆ ಕೆಲವು ಪ್ರಾಣಿಗಳಂತೆ ಓಡಾಡಬಲ್ಲವು. ಹಾಗಾಗಿ ಸೂಕ್ಷ್ಮಜೀವಿಗಳ ವರ್ಗೀಕರಣ ಒಂದು ಸಂಕೀರ್ಣ ವಿಷಯ. ಜೀವಕೋಶವಿರುವ ಎಲ್ಲಾ ಜೀವಿಗಳನ್ನು ಮೊದಲಿಗೆ ಎರಡು ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿದೆ. ಭೂಮಿಯಲ್ಲಿ ಮೊದಲು ವಿಕಾಸಗೊಂಡ ಕೆಲವು ಏಕಕೋಶ ಜೀವಿಗಳಲ್ಲಿ ಸಂಪೂರ್ಣವಾಗಿ ರೂಪುಗೊಂಡ ಕೋಶಕೇಂದ್ರವಿರುವುದಿಲ್ಲ. ಅಂತಹ ಜೀವಿಗಳನ್ನು ಪ್ರೊಕ್ಯಾರಿಯೋಟ (ಪ್ರೊ ಎಂದರೆ ಪ್ರಾಚೀನ ಮತ್ತು ಕ್ಯಾರಿಯೋಟ ಎಂದರೆ ಕೋಶಕೇಂದ್ರ) ಎಂಬ ಗುಂಪಿಗೆ ದಂಡಾಣುಗಳನ್ನು (ಬ್ಯಾಕ್ಟಿರಿಯಾ) ಸೇರಿಸಲಾಗಿದೆ. ಇನ್ನುಳಿದಂತೆ ಜೀವಕೋಶದಲ್ಲಿ ವ್ಯವಸ್ಥಿತವಾಗಿ ರೂಪುಗೊಂಡ ಕೋಶಕೇಂದ್ರವಿರುವ ಜೀವಿಗಳನ್ನು ಯೂಕ್ಯಾರಿಯೋಟ (ಯೂ ಎಂದರೆ ನಿಜವಾದ ಕ್ಯಾರಿಯೋಟ ಎಂದರೆ ಕೋಶಕೇಂದ್ರ) ಎಂಬ ಗುಂಪಿಗೆ ಸೇರಿಸಲಾಗಿದೆ. ಶಿಲೀಂಧ್ರಗಳು, ಶೈವಲಗಳು, ಕಲ್ಲು ಹೂಗಳು, ಸಸ್ಯಗಳು ಮತ್ತು ಪ್ರಾಣಿಗಳು ಈ ಗುಂಪಿನಲ್ಲಿವೆ. ಇವೆರೆಡು ಗುಂಪಿಗೂ ಸೇರದ ನಿರ್ಜೀವ ಕಣಗಳಾದ ವೈರಸ್,



ವೈರಾಯ್ಡ್ ಮತ್ತು ಪ್ರಯಾನ್‌ಗಳೂ ಸಹ ರೋಗಕಾರಕಗಳಾಗಿ ಪ್ರತ್ಯೇಕ ಗುಂಪಿನಲ್ಲಿವೆ.

ಸೂಕ್ಷ್ಮಜೀವಿಗಳ ಗಾತ್ರ

ಭೂಮಿಯಲ್ಲಿ ವಿಕಾಸಗೊಂಡ ಮೂಲ ಜೀವಿಗಳೇ ಸೂಕ್ಷ್ಮಜೀವಿಗಳು. ಹಾಗಾಗಿ ಈಗಿರುವ ಎಲ್ಲಾ ಜೀವಿಗಳ ಪೂರ್ವಿಕರೂ ಹೌದು. ಸಾಮಾನ್ಯವಾಗಿ ಬರೀ ಕಣ್ಣಿಗೆ ಗೋಚರಿಸದ ಜೀವಿಗಳನ್ನು ಸೂಕ್ಷ್ಮಜೀವಿಗಳೆನ್ನುತ್ತಾರೆ. ಗಾತ್ರದಲ್ಲಿ 0.2 ಮಿಮೀ. ಗಿಂತ ಸಣ್ಣದಿರುವ ಜೀವಿಗಳಿವು. ಇವುಗಳನ್ನು ರೂಪುರೇಶೆಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದ ಸಾವಿರ ಪಟ್ಟು ಗಾತ್ರ ಹೆಚ್ಚಳ ಮಾಡಿ ನೋಡಬಹುದು. ವೈರಸ್‌ಗಳನ್ನು ನೋಡಲು ಎಲೆಕ್ಟ್ರಾನ್ ಸೂಕ್ಷ್ಮದರ್ಶಗಳ ಮೂಲಕ ಲಕ್ಷದಷ್ಟು ಗಾತ್ರ ಹೆಚ್ಚಳ ಮಾಡಿ ನೋಡಬೇಕು.

ಸೂಕ್ಷ್ಮಜೀವಿ ವೈವಿಧ್ಯ

ಸೂಕ್ಷ್ಮಜೀವಿಗಳಲ್ಲಿರುವ ವೈವಿಧ್ಯ ಉಳಿದೆಲ್ಲಾ ಜೀವಿಗಳಿಗಿಂತ ಅತೀ ಹೆಚ್ಚು. ಸೂಕ್ಷ್ಮಜೀವಿಗಳ ಸಮೂಹದಲ್ಲಿ ಜೀವಕೋಶವಿರುವ ದಂಡಾಣುಗಳು (ಬ್ಯಾಕ್ಟಿರಿಯಾ), ಶಿಲೀಂಧ್ರಗಳು (ಬೂಸ್ಟು), ಶೈವಲಗಳು (ಪಾಚಿ), ಆದಿಮ ಪ್ರಾಣಿ (ಪ್ರೊಟೊಜೋವ), ಕಲ್ಲು ಹೂಗಳು ಮತ್ತು ಸಣ್ಣ ಹುಳುಗಳನ್ನು ಸೇರಿಸಲಾಗಿದೆ. ಇವುಗಳಲ್ಲದೆ ಜೀವಿಗಳಲ್ಲಿ ಸೋಂಕು ಉಂಟು ಮಾಡುವ ಯಾವುದೇ ಜೀವಕೋಶವಿರದ ವೈರಸ್‌ಗಳು, ವೈರಾಯ್ಡ್‌ಗಳು ಮತ್ತು ಪ್ರಯಾನ್‌ಗಳನ್ನು ರೋಗಕಾರಕ ಕಣಗಳೆಂದು ವಿಂಗಡಿಸಿಲಾಗಿದೆ. ಒಟ್ಟು ಇರಬಹುದು ಎಂದು ಅಂದಾಜಿಸಿರುವ ಸೂಕ್ಷ್ಮಜೀವಿಗಳ ಸಂಖ್ಯೆಯಲ್ಲಿ ಕೇವಲ ಶೇ.1 ರಷ್ಟು ಜೀವಿಗಳನ್ನು ಮಾತ್ರ ವಿಜ್ಞಾನ ಜಗತ್ತು ಗುರುತಿಸಿದೆ ಎಂದರೆ ಆಶ್ಚರ್ಯವಾಗುತ್ತದೆ!

ಮಣ್ಣು, ನೀರು, ಗಾಳಿಯಲ್ಲದೆ ಉಳಿದ ಜೀವಿಗಳಲ್ಲೂ ಸೂಕ್ಷ್ಮಜೀವಿಗಳನ್ನು ಕಾಣಬಹುದು. ಆಳ ಸಮುದ್ರ ಮತ್ತು ಬಿಸಿನೀರ ಚಿಲುಮೆಯಿಂದ ಹಿಡಿದು ಆರ್ಕ್ಟಿಕ್ ಪ್ರದೇಶದ ಮಂಜುಗಡ್ಡೆಯವರೆಗೆ, ತಿಗಣೆಯಿಂದ ಹಿಡಿದು ತಿಮಿಂಗಿಲಗಳ ತನಕ, ಹುಲ್ಲಿನಿಂದ ಹಿಡಿದು ತೆಂಗಿನಮರದ ತನಕ ಅವುಗಳು ಜೀವಿಸುತ್ತಿವೆ. ಸಕಲ ಚರಾಚರವಸ್ತುಗಳಲ್ಲೂ ಸೂಕ್ಷ್ಮಜೀವಿಗಳಿವೆ. ದೇವರು ಸರ್ವಾಂತರಯಾಮಿ, ಅದೇ ರೀತಿ ಸೂಕ್ಷ್ಮಜೀವಿಗಳೂ ಸಹ. ಸೂಕ್ಷ್ಮಜೀವಿಗಳು ಮಾಡದ ಕೆಲಸವೇ ಇಲ್ಲವೆನ್ನಬಹುದು.

ಸಂತಾನೋತ್ಪತ್ತಿಯಲ್ಲಿ ಸೂಕ್ಷ್ಮಜೀವಿಗಳದ್ದು ಅಗಾಧ ಶಕ್ತಿ. ಕೆಲವು ದಂಡಾಣುಗಳು ಕೇವಲ 20 ನಿಮಿಷಗಳಲ್ಲಿ ತನ್ನ ಸಂತತಿಯನ್ನು ದುಪ್ಪಟ್ಟು ಮಾಡಬಲ್ಲವು. ಮತ್ತೇ 20 ನಿಮಿಷದಲ್ಲಿ ನಾಲ್ಕು ಜೀವಿಗಳಾಗುತ್ತವೆ. ಹೀಗೆ ಸೂಕ್ತ ಪೋಷಕಾಂಶಗಳಿದ್ದರೆ ರಕ್ತಬೀಜಾಸುರನಂತೆ ಸಂಖ್ಯೆಯಲ್ಲಿ ವೃದ್ಧಿಸಬಲ್ಲವು.

ಸೂಕ್ಷ್ಮಜೀವಿಗಳ ಕೆಲಸಗಳು

ಸೂಕ್ಷ್ಮಜೀವಿಗಳು ಭೂಮಿಯ ಪರಿಸರದ ಎಲ್ಲಾ ಜೀವಿಗಳಿಗೆ ಅವಶ್ಯವಾದ ಪೋಷಕಾಂಶಗಳನ್ನು ಒದಗಿಸುವ ಆಹಾರ ಸರಪಳಿ ಮತ್ತು ಜೀವಜಾಲದಲ್ಲಿ ಪ್ರಮುಖವಾದವು. ಭೂಮಿಯಲ್ಲಿನ ಜೀವಿಗಳಲ್ಲಿರುವ ಶೇ.50 ರಷ್ಟು ಇಂಗಾಲವು ಮತ್ತು ಶೇ.90 ರಷ್ಟು ಸಾರಜನಕವು ಸೂಕ್ಷ್ಮಜೀವಿಗಳಲ್ಲಡಗಿವೆ. ಸಾವಯವ ಮಣ್ಣಿನಲ್ಲಿರುವ ಹೆಚ್ಚಿನ ಸೂಕ್ಷ್ಮಜೀವಿಗಳು ಕೃಷಿಯಲ್ಲಿ ಬೆಳೆಗಳಿಗೆ ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುತ್ತವೆ.

ಅವು ಪರಿಸರದ ಜೈವಿಕಭೂರಸಾಯನ ಚಕದ ಅವಿಭಾಜ್ಯ ಅಂಗವಾಗಿದ್ದು ಎಲ್ಲಾ ಜೀವಿಗಳ ಜೈವಿಕ ಕ್ರಿಯೆಗಳು ನಡೆಯುವ ರಾಸಾಯನಿಕ ಘಟಕಗಳನ್ನು ಒದಗಿಸುವಲ್ಲಿ ಬಹುಮುಖ್ಯ ಭೂಮಿಕೆ ನಿರ್ವಹಿಸುತ್ತವೆ. ನದಿ-ಸಮುದ್ರ, ಕೆರೆ-ತೊರೆಗಳಲ್ಲಿರುವ ಹಲವಾರು ಸೂಕ್ಷ್ಮಜೀವಿಗಳು ತಮ್ಮ ಜೀವಕೋಶಗಳಲ್ಲಿನ ಪತ್ರಹರಿತ್ತುನ್ನು ಉಪಯೋಗಿಸಿಕೊಂಡು ದ್ಯುತಿಸಂಶ್ಲೇಷಣೆ ಕ್ರಿಯೆಯ ಮೂಲಕ ಭೂಮಿಯಲ್ಲಿನ ಇಂಗಾಲದ ಡೈ ಆಕ್ಸೈಡ್‌ನ್ನು ಹೀರಿಕೊಂಡು ಆಮ್ಲಜನಕವನ್ನು ಉತ್ಪಾದಿಸಿ ವಾತಾವರಣಕ್ಕೆ ಬಿಡುಗಡೆಗೊಳಿಸುತ್ತವೆ. ಭೂಮಿಯಲ್ಲಿ ಶೇ 79 ರಷ್ಟು ನೀರಿರುವುದರಿಂದ ಅಲ್ಲಿರುವ ಸೂಕ್ಷ್ಮಜೀವಿಗಳು ಎಲ್ಲಾ ಜಲಚರಗಳಿಗೆ ಆಹಾರದ ಮೂಲವೂ ಹೌದು. ವಿಶ್ವದಲ್ಲಿರುವ ಎಲ್ಲಾ ಸಸ್ಯಗಳಿಗಿಂತ ಹೆಚ್ಚು ಆಮ್ಲಜನಕ ನೀರಿನಲ್ಲಿರುವ ಸೂಕ್ಷ್ಮಜೀವಿಗಳಿಂದ ಬರುತ್ತದೆ. ಸಸ್ಯಗಳು ಮತ್ತು ಪ್ರಾಣಿಗಳು ಬದುಕಲು ಆಮ್ಲಜನಕ ಅಗತ್ಯ.

ಕರುಳಿನ ಸೂಕ್ಷ್ಮಜೀವಿಗಳು

ಮಾನವನಲ್ಲಿರುವ ಸೂಕ್ಷ್ಮಜೀವಿ ಸಮೂಹವು ಆತ ತಿಂದ ಆಹಾರವನ್ನು ಜೀರ್ಣಿಸಲು ಸಹಕಾರಿ. ಜತೆಗೆ ವಿಟಮಿನ್-ಬಿ ಮತ್ತು ವಿಟಮಿನ್-ಕೆ ಗಳನ್ನು ಉತ್ಪಾದಿಸುತ್ತವೆ. ಆತನ ದೇಹದ ಪ್ರತಿರೋಧಶಕ್ತಿ ಸಕ್ರಿಯವಾಗಿರುವಂತೆ ನೋಡಿಕೊಳ್ಳುತ್ತವೆ. ಮಾನವನ ನಡೆವಳಿಕೆಯೂ ಸಹ ಅವನ ಕರುಳಿನಲ್ಲಿರುವ ಸೂಕ್ಷ್ಮಜೀವಿಗಳಿಂದ ಪ್ರಭಾವಿತವಾಗಿರುತ್ತದೆ ಎಂಬುದು ಇತ್ತೀಚಿನ ಸಂಶೋಧನೆಗಳಿಂದ ದೃಢಪಟ್ಟಿದೆ.

ಕೆಲವು ಸೂಕ್ಷ್ಮಜೀವಿಗಳು ಇತರೆ ಜೀವಿಗಳಲ್ಲಿ ಸೋಂಕನ್ನು ಉಂಟುಮಾಡಿ ರೋಗಗಳನ್ನು ತರುವುದರಿಂದ ರೋಗಕಾರಕಗಳೆನಿಸಿಕೊಳ್ಳುತ್ತವೆ. ಇವೂ ಸಹ ಭೂಮಿಯಲ್ಲಿ ಜೀವಿಗಳ ಸಂಖ್ಯೆಯನ್ನು ಹತೋಟಿಯಲ್ಲಿಡಲು ಅವಶ್ಯಕ.

ಸೂಕ್ಷ್ಮಜೀವಿಗಳಲ್ಲಿದಿದ್ದಲ್ಲಿ ಹಾಲು ಮೊಸರಾಗುತ್ತಿರಲಿಲ್ಲ, ದೋಸೆಯಲ್ಲಿ ತೂತು ಬೀಳುತ್ತಿರಲಿಲ್ಲ, ಇಡ್ಲಿ ಮೃದುವಾಗುತ್ತಿರಲಿಲ್ಲ, ಬ್ರೆಡ್ ತಯಾರಾಗುತ್ತಿರಲಿಲ್ಲ, ಕೊಳೆಯುವಿಕೆ ಇಲ್ಲದೆ ಸಸ್ಯಗಳಿಗೆ ಬೇಕಾದ ಪೋಷಕಾಂಶಗಳು ಸಿಗುತ್ತಿರಲಿಲ್ಲ, ಸಸ್ಯಗಳನ್ನು ಅವಲಂಬಿಸಿ ಬದುಕುವ ಯಾವ ಜೀವಿಗಳು ಇರುತ್ತಿರಲಿಲ್ಲ. ಹಾಗಾಗಿ ಸಸ್ಯ ಮತ್ತು ಪ್ರಾಣಿಸಂಕುಲಗಳು ಸೂಕ್ಷ್ಮಜೀವಿಗಳಿಲ್ಲದೆ ಬದುಕಲಾರವು. ಸೂಕ್ಷ್ಮಜೀವಿಗಳಿಲ್ಲದಿದ್ದರೆ ನಮ್ಮ ಭೂಮಿಯು, ಬರಡು ಭೂಮಿಯಾಗಿರುತ್ತಿತ್ತು.

ಮಾನವ ಸಮಾಜ ಸೂಕ್ಷ್ಮಜೀವಿಗಳಿಂದ ಬರುವ ಉತ್ಪನ್ನಗಳ ಮೇಲೆ ಬಹುವಾಗಿ ಅವಲಂಬಿತವಾಗಿದೆ. ಸೂಕ್ಷ್ಮಜೀವಿಗಳನ್ನು ಬ್ರೆಡ್, ಚೀಸ್, ಪ್ರತಿಜೀವಕಗಳು, ಲಸಿಕೆಗಳು, ಜೀವಸತ್ವಗಳು, ಕಿಣ್ವಗಳು, ಔಷಧಿಗಳು, ಆಲ್ಕೋಹಾಲ್-ಯುಕ್ತ ಪೇಯಗಳು, ಪಶು ಆಹಾರ, ಜೈವಿಕ-ಗೊಬ್ಬರ, ಜೈವಿಕ- ಕೀಟನಾಶಕ, ಆಹಾರ ಮುಂತಾದ ಉತ್ಪನ್ನಗಳ ತಯಾರಿಕೆಯಲ್ಲಿ ಬಳಸಲಾಗುತ್ತಿದೆ.

ಆಧುನಿಕ ವಿಜ್ಞಾನದ ಶಾಖೆಯಾದ ಜೈವಿಕ ತಂತ್ರಜ್ಞಾನವು ಸೂಕ್ಷ್ಮಜೀವಿಗಳ ತಳಹದಿಯ ಮೇಲೆ ನಿಂತಿದೆ. ತಳಿ-ತಂತ್ರಜ್ಞಾನದಲ್ಲಿಯೂ ಸೂಕ್ಷ್ಮಜೀವಿಗಳು ಬಳಕೆಯಲ್ಲಿವೆ. ಸೂಕ್ಷ್ಮಜೀವಿಗಳಿಲ್ಲದ ಭೂಮಿಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಮನುಷ್ಯನ ಎಷ್ಟೇ ಬುದ್ಧಿವಂತ ಜೀವಿ ಎನಿಸಿಕೊಂಡರೂ ಪ್ರಕೃತಿಯಲ್ಲಿ ಅವನ ಸ್ಥಾನ ಒಂದು ವೈರಸ್ ಕಣ ಅಥವಾ ಒಂದು ಏಕಕೋಶ ಜೀವಿಗೆ ಸಮ. ಕೊರೊನಾದಂತಹ ವೈರಸ್ ಭೂಮಿಯಲ್ಲಿ ಮನುಷ್ಯ ದೌರ್ಬಲ್ಯವನ್ನು ತೋರಿಸಿಕೊಟ್ಟಿದೆ. ಆದ್ದರಿಂದ, ಸೂಕ್ಷ್ಮಜೀವಿಯೂ ಸೇರಿದಂತೆ, ಜಗತ್ತಿನ ಜೀವಜಾಲದ ಉಳಿವಿನ ಮೇಲೆ ಮನುಷ್ಯನ ಭವಿಷ್ಯ ಅಡಗಿದೆ.

ಬಯಸದೇ ಬಂದ ಭಾಗ್ಯ!

ಉತ್ತರಭಾರತದಲ್ಲಿ ತಂದೆ ಮತ್ತು ಮಗ ಬೈಕ್ ಪ್ರವಾಸ ಮಾಡುತ್ತಿರುವಾಗ, ಬಿಹಾರದ ರಾಜಧಾನಿಯಲ್ಲಿ ಗಣ್ಯವ್ಯಕ್ತಿಗಳಿಗೆ ದೊರಕುವ ಸನ್ಮಾನ ದೊರೆತದ್ದು ನಿಜಕ್ಕೂ ವಿಶೇಷ.

» ಜಿ.ನಾಗೇಂದ್ರ ಕಾವೂರು

ಕೆನಡಾ ದೇಶದಲ್ಲಿ ಉದ್ಯೋಗದಲ್ಲಿರುವ ನಮ್ಮ ಕಿರಿಯ ಮಗ ತೇಜೇಂದ್ರ, ಇತ್ತೀಚೆಗೆ ಸ್ವಗ್ರಾಮ ಸಂಡೂರಿಗೆ ಆಗಮಿಸಿದ್ದ. ಅವನು, ಕಳೆದ ಕೆಲವು ವರ್ಷಗಳಿಂದ ಬೈಕ್‌ನಲ್ಲಿ ಸುತ್ತುವ ಹವ್ಯಾಸವನ್ನು ರೂಢಿಸಿಕೊಂಡಿದ್ದಾನೆ. ದೂರದ ಪ್ರಯಾಣ, ವಿವಿಧ ಭೌಗೋಳಿಕ ಪರಿಸ್ಥಿತಿಗಳು ಹಾಗೂ ವಿಶೇಷವಾಗಿ ಹಿಮಾಲಯದಂತಹ ದುರ್ಗಮ ಪ್ರದೇಶಗಳಲ್ಲಿ ಸಂಚರಿಸಲು ಅನುಕೂಲವಾಗುವಂತಹ ಬೈಕನ್ನು ಖರೀದಿಸಿದ್ದಾನೆ.

ಉತ್ತರ ಪ್ರದೇಶ, ಮಧ್ಯ ಪ್ರದೇಶ ಹಾಗೂ ಬಿಹಾರ ರಾಜ್ಯಗಳಲ್ಲಿನ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸುವ ಆಸೆ ಅವನ ಮನಸ್ಸಿನಲ್ಲಿ ಬೇರೂರಿತ್ತು. ದೇಶದ ವೈವಿಧ್ಯತೆಯನ್ನು ನೇರವಾಗಿ ಅನುಭವಿಸುವ ಉದ್ದೇಶದಿಂದ ರೂಪಿಸಿಕೊಂಡ ಈ ಪ್ರಯಾಣ ಕೇವಲ ಪ್ರವಾಸವಲ್ಲ, ಜೀವನಾನುಭವದ ಒಂದು ಭಾಗವೆಂದು ಅವನು ಭಾವಿಸಿದ್ದ. ನಿವೃತ್ತಿಯ ನಂತರ ಚಾರಣ ಹಾಗೂ ಪ್ರವಾಸವನ್ನು ಹವ್ಯಾಸವನ್ನಾಗಿಸಿಕೊಂಡಿರುವ ನನಗೂ, ಈ ದೀರ್ಘ ಪ್ರಯಾಣದಲ್ಲಿ ಜೊತೆಯಾಗಲು ತೇಜೇಂದ್ರ ಆತ್ಮೀಯವಾಗಿ ಆಹ್ವಾನ ನೀಡಿದ. ತಂದೆ-ಮಗ ಇಬ್ಬರೂ ಒಂದೇ ಪ್ರಯಾಣದಲ್ಲಿ, ಒಂದೇ ಗುರಿಯೊಂದಿಗೆ ಹೊರಡುವ ಅವಕಾಶ ಅಪರೂಪ. ಹೀಗಾಗಿ ಈ ಪ್ರವಾಸವು ಕೇವಲ ಸ್ಥಳ ವೀಕ್ಷಣೆಯಲ್ಲ,ಅನುಭವಗಳ ವಿನಿಮಯ, ಚಿಂತನೆಗಳ ಸಂವಾದ ಮತ್ತು ತಲೆಮಾರಿನ ನಡುವಿನ ಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುವ ಸ್ಮರಣೀಯ ಯಾತ್ರೆಯಾಗಿ ರೂಪುಗೊಳ್ಳುವ ನಿರೀಕ್ಷೆ ಮೂಡಿಸಿತು.

ಬಳ್ಳಾರಿ ಜಿಲ್ಲೆಯ ಸಂಡೂರಿನಿಂದ ಹೊರಟ ನಮ್ಮ ಬೈಕ್ ಪ್ರಯಾಣ ಮೂರು ದಿನಗಳ ನಂತರ ಪವಿತ್ರ ನಗರ ವಾರಣಾಸಿಯನ್ನು ತಲುಪಿತು. ನಾಲ್ಕು ದಿನಗಳ ಕಾಲ ಸುತ್ತಮುತ್ತಲ ಪ್ರದೇಶಗಳನ್ನು ವೀಕ್ಷಿಸಿ, ನಂತರ ಗಯಾ, ಬೋಧ್‌ಗಯಾ, ನಲಂದಾ ಮತ್ತು ರಾಜಗೀರ್ ನೋಡಿಕೊಂಡು, ಬಿಹಾರದ ರಾಜಧಾನಿ ಪಾಟ್ನಾ ನಗರವನ್ನು ತಲುಪಿದೆವು.

ಮರುದಿನ ಪಾಟ್ನಾ ಮ್ಯೂಸಿಯಂ ವೀಕ್ಷಣೆಗೆ ಹೊರಟೆವು. ಟಿಕೆಟ್ ಕೌಂಟರ್ ಬಳಿ ಟಿಕೆಟ್ ಖರೀದಿಸುವ ಸಂದರ್ಭದಲ್ಲೇ, ಒಮ್ಮೆಲೇ ಅಲ್ಲಿನ ಗಡಿಬಿಡಿ ಕಂಡು ಬೆರಗಾದೆವು! ಮ್ಯೂಸಿಯಂ ಸಿಬ್ಬಂದಿ ಹಾಗೂ ಹಲವಾರು ಫೋಟೋಗ್ರಾಫರ್‌ಗಳು ನಮ್ಮ ಫೋಟೋಗಳನ್ನು ತೆಗೆದುಕೊಳ್ಳಲು ಮುಂದಾದಾಗ ನಮಗೆ ಸ್ವಲ್ಪ ಗಾಬರಿಯೂ ಆಯಿತು. ಟಿಕೆಟ್ ಪಡೆದು ಒಳಗೆ ತಿರುಗುವಷ್ಟರಲ್ಲಿ ಕೆಲವರು

ನಮ್ಮ ಬಳಿ ಬಂದು ಬಿಹಾರದ ಸಾಂಪ್ರದಾಯಿಕ ಬೊಕೆ ಹಾಗೂ ಉಡುಗೊರೆ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.

ಏಕೆ ಏನು ಎಂದು ವಿಚಾರಿಸಿದಾಗ, ನಮಗೆ ತಿಳಿದುಬಂದದ್ದು, ನವೀಕೃತ ಪಾಟ್ನಾ ಮ್ಯೂಸಿಯಂ ಅದೇ ದಿನ ಮೊದಲ ಬಾರಿಗೆ ಸಾರ್ವಜನಿಕರಿಗೆ ತೆರೆಯಲ್ಪಟ್ಟಿದ್ದು, ನಾನು ಮತ್ತು ನನ್ನ ಮಗ ಈ ವಸ್ತುಸಂಗ್ರಹಾಲಯದ ಮೊದಲ ಸಂದರ್ಶಕರಾಗಿದ್ದೆವು ಎಂಬುದು. ಕರ್ನಾಟಕದಿಂದ ಬೈಕ್ ಮೂಲಕ ಉತ್ತರ ಭಾರತದ ಪ್ರವಾಸ ಕೈಗೊಂಡಿದ್ದ 65 ವರ್ಷದ ತಂದೆ ಮತ್ತು 32 ವರ್ಷದ ಮಗ ಈ ಮ್ಯೂಸಿಯಂನ ಮೊದಲ ಪ್ರೇಕ್ಷಕರಾಗಿರುವ ಅಪರೂಪದ ಗೌರವಕ್ಕೆ ಪಾತ್ರರಾಗಿದ್ದೆವು.

ಈ ಸಂದರ್ಭದಲ್ಲಿ ವಸ್ತುಸಂಗ್ರಹಾಲಯದ ಉಪನಿರ್ದೇಶಕ ಡಾ. ಸುನೀಲ್ ಕುಮಾರ್ ಝಾ ನಮ್ಮನ್ನು ಅಭಿನಂದಿಸಿದರು. ಈ ನವೀಕೃತ ವಸ್ತುಸಂಗ್ರಹಾಲಯವನ್ನು ಬಿಹಾರ ರಾಜ್ಯದ ಮುಖ್ಯಮಂತ್ರಿ ಉದ್ಘಾಟಿಸಿದ್ದು, ನಾವು ಹೋಗಿದ್ದ ದಿನವೇ ಸಾರ್ವಜನಿಕ ವೀಕ್ಷಣೆಗೆ ಮುಕ್ತವಾಗಿತ್ತು.

ಇದಾದ ನಂತರ ನಡೆದ ಘಟನೆಗಳು ಕನಸಿನಂತೆಯೇ ಅನಿಸುತ್ತಿದ್ದವು. ಉಪನಿರ್ದೇಶಕರು ನಮ್ಮನ್ನು ಮ್ಯೂಸಿಯಂನ ಹಿರಿಯ ಅಧಿಕಾರಿಗಳ ಬಳಿಗೆ ಕರೆದೊಯ್ದು ಪರಿಚಯಿಸಿದರು. ಕರ್ನಾಟಕದಿಂದ ಬೈಕ್ ಮೂಲಕ ಉತ್ತರ ಭಾರತದ ಪ್ರವಾಸ ಕೈಗೊಂಡಿರುವ ತಂದೆಮಗನ ಕಥೆಯನ್ನು ಕೇಳಿ ಹಿರಿಯ ಅಧಿಕಾರಿಗಳು ಆಶ್ಚರ್ಯಚಕಿತರಾದರು. ಅವರೊಂದಿಗೆ ಚಹಾ ಸೇವಿಸಿ ಮಾತನಾಡುವ ಅವಕಾಶವೂ ದೊರಕಿತು. ನಂತರ ಉಪನಿರ್ದೇಶಕರು ನಮ್ಮನ್ನು ಬಿಹಾರ್ ಮ್ಯೂಸಿಯಂಗೆ ಕರೆದೊಯ್ದು ಅಲ್ಲಿರುವ ಅಪರೂಪದ ಕಲಾಕೃತಿಗಳು ಹಾಗೂ ಐತಿಹಾಸಿಕ ಸಂಗ್ರಹಗಳನ್ನು ವಿವರಿಸಿದರು. ಸಮಯ ಹೇಗೆ ಕಳೆಯಿತೋ ತಿಳಿಯದೆ, ಮ್ಯೂಸಿಯಂನಿಂದ ಹೊರಬರುವಷ್ಟರಲ್ಲಿ ಸಂಜೆ ನಾಲ್ಕು ಗಂಟೆಯಾಗಿತ್ತು.

ಮರುದಿನ ಬೆಳಿಗ್ಗೆ ಸ್ಥಳೀಯ ಪತ್ರಿಕೆಗಳ ಪುಟಗಳಲ್ಲಿ ನಮ್ಮ ಪ್ರಯಾಣದ ಕಥೆ, ಚಿತ್ರಸಹಿತ ಪ್ರಕಟಗೊಂಡದ್ದನ್ನು ಕಂಡು ಮನಸ್ಸು ಆನಂದದಿಂದ ತುಂಬಿಬಿಟ್ಟಿತು. ಬಯಸದೇ ಬಂದ ಈ ಭಾಗ್ಯವು ನಮ್ಮ ಸರಳ ಬೈಕ್ ಯಾತ್ರೆಗೆ ಅರ್ಥ, ಗೌರವ ಮತ್ತು ಶಾಶ್ವತ ಸ್ಮೃತಿಯನ್ನು ನೀಡಿತು. ಆ ಕ್ಷಣದ ಸಂತೋಷ ಹೃದಯದೊಳಗೆ ಮೌನವಾಗಿ ಅರಳಿದ ಹೂವಿನಂತಿತ್ತು. ಈ ಬೈಕ್ ಪ್ರಯಾಣವು ಕೇವಲ ಪ್ರವಾಸವಾಗದೆ, ನಮ್ಮ ಜೀವನದಲ್ಲಿ ಮರೆಯಲಾಗದ ಅನುಭವವಾಗಿ ಉಳಿಯಿತು.

ಮಗನಿಗೆ ದುಬಾರಿ ವಾಚ್ ಕೊಡಿಸುವುದು ಸರಿಯೇ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ವಿಶ್ವನಾಥ ರಾವ್, ಬೆಂಗಳೂರು

• **ಸಂಪಾದಕರೇ, ನನ್ನ ಮಗ ಅಂತಿಮ ವರ್ಷದ ಎಂಜಿನಿಯರಿಂಗ್‌ನಲ್ಲಿ ಓದುತ್ತಿದ್ದಾನೆ. ಆತನಿಗೆ ದುಬಾರಿ ಬೆಲೆಯ ವಾಚನ್ನು ಕೊಡಿಸು ಎಂದು ಆಗಾಗ ಹಠ ಮಾಡುತ್ತಾನೆ. ಕೊಡಿಸಬಾರದು ಎಂದೇನಿಲ್ಲ. ಆದರೆ ವಾಚಿಗೆ ವಿಪರೀತ ಹಣ ಖರ್ಚು ಮಾಡುವುದು ನನಗೆ ಇಷ್ಟವಿಲ್ಲ. ನೂರು ರುಪಾಯಿ ಕೈಗಡಿಯಾರವೂ ನಿಖರವಾದ ಸಮಯವನ್ನೇ ತೋರಿಸುತ್ತದೆ. ಹೀಗಿರುವಾಗ ದುಬಾರಿ ವಾಚ್ ಏಕೆ ಎಂಬುದು ನನ್ನ ವಾದ. ಅದಕ್ಕೆ ಆತ ಒಪ್ಪುತ್ತಿಲ್ಲ. ನನ್ನ ಮಗನಿಗೆ ಹಣದ ಮತ್ತು ವಸ್ತುವಿನ ಮಹತ್ವವನ್ನು ಹೇಗೆ ಹೇಳುವುದು ಗೊತ್ತಾಗುತ್ತಿಲ್ಲ. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಏನು?**

– ವಿಶ್ವನಾಥ ರಾವ್ ಅವರೇ, ನಿಮ್ಮ ಮಗ ಎಂಜಿನಿಯರಿಂಗ್ ಅಂತಿಮ ವರ್ಷದಲ್ಲಿದ್ದಾನೆ ಅಂದ್ರೆ, ಅವನು ಜೀವನದ ಒಂದು ಪ್ರಮುಖ ಘಟ್ಟದಲ್ಲಿದ್ದಾನೆ. ಈ ವಯಸ್ಸಿನಲ್ಲಿ ಗೆಳೆಯರ ಪ್ರಭಾವ, ಸಾಮಾಜಿಕ ಸ್ಥಾನಮಾನ ಮತ್ತು ಆಧುನಿಕ ಜೀವನಶೈಲಿಯ ಆಕರ್ಷಣೆ ಹೆಚ್ಚಿರುವುದು ಸಹಜ. ನಿಮ್ಮ ವಾದದಲ್ಲಿ ವೈಚಾರಿಕತೆ ಇದೆ, ಆದರೆ ನಿಮ್ಮ ಮಗನ ಹಠದಲ್ಲಿ ಭಾವನಾತ್ಮಕತೆ ಮತ್ತು ಬಯಕೆ ಇದೆ. ಈ ಪರಿಸ್ಥಿತಿಯನ್ನು ಜಗಳವಿಲ್ಲದೇ, ಅವನಿಗೆ ಹಣದ ಮತ್ತು ಜವಾಬ್ದಾರಿಯ ಮಹತ್ವ ತಿಳಿಯುವಂತೆ ನಿರ್ವಹಿಸಲು ಕೆಲವು ಸಲಹೆಗಳನ್ನು ನೀಡಬಹುದು.

ಮೊದಲನೆಯದಾಗಿ, ಸಮಯ ಮತ್ತು ಸಂಕೇತದ ನಡುವಿನ ವ್ಯತ್ಯಾಸ ತಿಳಿಸುವುದು. ನಿಮ್ಮ ವಾದದಂತೆ ನೂರು ರುಪಾಯಿಯ ವಾಚ್ ಸಮಯವನ್ನು ಸರಿಯಾಗಿ ತೋರಿಸುತ್ತದೆ. ಆದರೆ ಯುವಜನತೆಗೆ ವಾಚ್ ಎನ್ನುವುದು ಕೇವಲ ಸಮಯ ನೋಡುವ ಸಾಧನವಲ್ಲ, ಅದು ಅವರ ವ್ಯಕ್ತಿತ್ವದ ಒಂದು ಭಾಗ ಅಥವಾ ಫ್ಯಾಷನ್ ಸ್ಟೇಟ್‌ಮೆಂಟ್. ಇದನ್ನು ನೀವು ಮೊದಲು ಒಪ್ಪಿಕೊಂಡರೆ, ಅವನು ನಿಮ್ಮ ಮಾತನ್ನು ಕೇಳಿಸಿಕೊಳ್ಳುವ ಮನಸ್ಥಿತಿಗೆ ಬರುತ್ತಾನೆ. ನಿನಗೆ ಆ ವಾಚ್ ಇಷ್ಟ ಇರುವುದು ನನಗೆ ಅರ್ಥವಾಗುತ್ತದೆ, ಆದರೆ ಅದರ ಬೆಲೆ ಮತ್ತು ಉಪಯುಕ್ತತೆಯ ಬಗ್ಗೆ ನಾವು ಯೋಚಿಸಬೇಕು ಎಂದು ಮನಾನಾ ಮಾಡಿಕೊಡುವುದು ಮುಖ್ಯ. ಅವನು ಎಂಜಿನಿಯರಿಂಗ್ ಮುಗಿಸಿ ಕೆಲಸಕ್ಕೆ ಸೇರುವ ಹಂತದಲ್ಲಿದ್ದಾನೆ. ಈ ಸಂದರ್ಭವನ್ನು ಅವನಿಗೆ, ನೋಡು ಮಗನೇ, ನೀನು ಈಗ ಅಂತಿಮ ವರ್ಷದಲ್ಲಿದ್ದೀಯಾ. ಉತ್ತಮ ಅಂಕಗಳೊಂದಿಗೆ ಉತ್ತೀರ್ಣನಾಗಿ ಅಥವಾ ಒಂದು ಒಳ್ಳೆಯ ಕಂಪನಿಯಲ್ಲಿ ಕೆಲಸ ಗಿಟ್ಟಿಸು. ಅಂದು ನಿನ್ನ ಸಾಧನೆಗೆ ಉಡುಗೊರೆಯಾಗಿ ಆ ವಾಚ್ ಕೊಡಿಸುತ್ತೇನೆ ಎಂದು ಹೇಳಬಹುದು.

ಇದರಿಂದ ಅವನಿಗೆ ಆ ವಸ್ತು ಸುಲಭವಾಗಿ ಸಿಕ್ಕಂತಾಗುವುದಿಲ್ಲ, ಬದಲಿಗೆ ತನ್ನ ಪರಿಶ್ರಮಕ್ಕೆ ಸಿಕ್ಕ ಗೌರವ ಎಂಬ ಭಾವನೆ ಮೂಡುತ್ತದೆ. ವಸ್ತುವಿನ ಬೆಲೆಗಿಂತ ಅದರ ಹಿಂದಿನ ಶ್ರಮದ ಮಹತ್ವ ಅವನಿಗೆ ತಿಳಿಯುತ್ತದೆ. ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿ ಅವನಿಗೆ ತಾಂತ್ರಿಕ ವಿಷಯಗಳು ಬೇಗ ಅರ್ಥವಾಗುತ್ತವೆ. ಅವನಿಗೆ ಹಣಕಾಸಿನ ಪಾಠವನ್ನು ಹೇಳುವುದು ಮುಖ್ಯ. ಒಂದು ದುಬಾರಿ ವಾಚ್ ಕೊಂಡ ಕ್ಷಣದಿಂದಲೇ ಅದರ ಮೌಲ್ಯ ಕಡಿಮೆಯಾಗುತ್ತಾ ಹೋಗುತ್ತದೆ. ಅದೇ ಹಣವನ್ನು ಅವನ ಮುಂದಿನ ಉನ್ನತ ಶಿಕ್ಷಣಕ್ಕೆ ಅಥವಾ ಯಾವುದಾದರೂ ಹೊಸ ಸ್ಕಿಲ್ ಕಲಿಯಲು ಹೂಡಿಕೆ ಮಾಡಿದರೆ ಅದು ಅವನ ಭವಿಷ್ಯಕ್ಕೆ ಹೇಗೆ ಪೂರಕವಾಗುತ್ತದೆ ಎಂಬುದನ್ನು ವಿವರಿಸಬೇಕು. ಹಣವನ್ನು ಪ್ರದರ್ಶನಕ್ಕಾಗಿ ಬಳಸುವುದಕ್ಕಿಂತ, ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಬಳಸುವುದು ಬುದ್ಧಿವಂತಿಕೆ ಎಂದು ಮನವರಿಕೆ ಮಾಡಿಕೊಡಿ.

ಅವನಿಗೆ ಒಂದು ನಿರ್ದಿಷ್ಟ ಮೊತ್ತವನ್ನು (ಬಜೆಟ್) ನಿಗದಿಪಡಿಸಿ. 'ನನ್ನ ಶಕ್ತಿ ಇಷ್ಟು ಮಾತ್ರ, ಇದರಲ್ಲೇ ನಿನಗೆ ಇಷ್ಟವಾದ ಅತ್ಯುತ್ತಮ ವಾಚ್ ಆರಿಸಿಕೊ' ಎಂದು ಹೇಳಿ. ಆಗ ಅವನಿಗೆ ಹಣದ ಮಿತಿ ಏನೆಂದು ತಿಳಿಯುತ್ತದೆ. ಅವನು ಆ ಮಿತಿಯಲ್ಲೇ ಸಂಶೋಧನೆ ಮಾಡಿ ಒಂದು ಒಳ್ಳೆಯ ವಸ್ತುವನ್ನು ಆರಿಸಿಕೊಳ್ಳುವುದನ್ನು ಕಲಿಯುತ್ತಾನೆ. ಜಗತ್ತಿನ ದೊಡ್ಡ ಶ್ರೀಮಂತರಾದ ವಾರೆನ್ ಬಫೆಟ್ ಅಥವಾ ಬಿಲ್ ಗೇಟ್ಸ್ ಇಂದಿಗೂ ಸಾಮಾನ್ಯ ಬೆಲೆಯ ವಾಚ್‌ಗಳನ್ನೇ ಬಳಸುತ್ತಾರೆ ಎಂಬ ಉದಾಹರಣೆ ನೀಡಿ. ಮನುಷ್ಯನ ಬೆಲೆ ಅವನು ಕಟ್ಟುವ ವಾಚ್‌ನಿಂದ ಅಳೆಯುವುದಿಲ್ಲ, ಅವನು ಸಮಯವನ್ನು ಹೇಗೆ ಸದುಪಯೋಗಪಡಿಸಿಕೊಳ್ಳುತ್ತಾನೆ ಎಂಬುವುದರ ಮೇಲೆ ಅಳೆಯುತ್ತಾರೆ ಎಂಬ ಸತ್ಯವನ್ನು ತಿಳಿಸಿ.

ಒಂದೇ ಸಲಕ್ಕೆ, ಏಕಾಏಕಿ ಬೇಡ ಎನ್ನಬೇಡಿ, ಬದಲಿಗೆ ಸಮಯ ಬರಲಿ ಎಂದು ಮುಂದೂಡಿ. ಆ ಸಮಯವನ್ನು ಅವನ ಯಶಸ್ಸಿನೊಂದಿಗೆ ಜೋಡಿಸಿ. ಅವನು ತನ್ನ ಮೊದಲ ಸಂಬಳದಲ್ಲಿ ಅಂಥ ಹತ್ತು ವಾಚ್‌ಗಳನ್ನು ಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂಬ ಹಂಬಲವನ್ನು ಅವನಲ್ಲಿ ಬಿತ್ತಿ. ಒಂದುವೇಳೆ, ನಿಮಗೆ ಅಂಥ ವಾಚನ್ನು ಖರೀದಿಸುವ ಸಾಮರ್ಥ್ಯ ಇದ್ದರೆ ಜುಗ್ಗನಾಗಬೇಡಿ. ಅಷ್ಟಕ್ಕೂ ನೀವು ಕೊಡಿಸುತ್ತಿರುವುದು ನಿಮ್ಮ ಮಗನಿಗೇ ಅಲ್ಲವೇ?

ಶಾಲಿನಿ, (ಇಮೇಲ್ ಮೂಲಕ)

• **ಭಟ್ರೇ, ನನ್ನ ಗಂಡ ಆಫೀಸಿಗೆ ಹೋದ ನಂತರ ನಾನು ಮೊಬೈಲಿನಲ್ಲಿ ಹೆಚ್ಚು ಹೊತ್ತು ಕಳೆಯುತ್ತೇನೆ. ಕೆಲವೊಮ್ಮೆ ಮೂರು-ನಾಲ್ಕು ಗಂಟೆ ಕಳೆದಿದ್ದು ಗೊತ್ತೇ ಆಗುವುದಿಲ್ಲ. ಯಾಕೋ ಗೊತ್ತಿಲ್ಲ, ನನ್ನ ಮೊಬೈಲನ್ನು ಆಗಾಗ ಬದಲಿಸಬೇಕು ಅಂತ ಅನಿಸುತ್ತಾ ಇರುತ್ತೆ. ಆಗ ನನ್ನ ಯಜಮಾನರು ಹೊಸ ಮೊಬೈಲನ್ನು ಕೊಡಿಸುತ್ತಾರೆ. 'ನನ್ನನ್ನು ಬದಲಿಸಬೇಕು ಅಂತ ನಿನಗೆ ಅನಿಸ್ತಾ ಇಲ್ಲವಲ್ಲ, ನನ್ನ ಪುಣ್ಯ' ಅಂತಾರೆ. ಒಮ್ಮೆ ಎಂಡ್ರಾಯಿಡ್, ಇನ್ನೊಮ್ಮೆ ಐಒಎಸ್... ಹೀಗೆ.. ನಾನು ಈ ಗೀಳನ್ನು ಕಂಟ್ರೋಲ್ ಮಾಡುವುದು ಹೇಗೆ?**

– ಶಾಲಿನಿ ಅವರೇ, ನಿಮ್ಮ ಈ ಮೊಬೈಲ್ ಪ್ರೇಮ ಮತ್ತು ಗೀಳನ್ನು ಕಂಟ್ರೋಲ್ ಮಾಡಲು ಕೆಲವು ಟಿಪ್ಸ್ ಕೊಡಬಹುದು. ನಿಮಗೆ ಪದೇ ಪದೆ ಮೊಬೈಲ್ ಬದಲಿಸಬೇಕು ಅನ್ನಿಸಿದಾಗ, ಹಳೆಯ ಮೊಬೈಲ್‌ಗೆ ಒಂದು ಕಪ್ಪು ಚುಕ್ಕೆ ಇಟ್ಟು ಇದೇ ಬೆಸ್ಟ್ ಮೊಬೈಲ್ ಅಂತ ದಿನಕ್ಕೆ ಮೂರು ಬಾರಿ ಜಪ ಮಾಡಿ. ಯಾಕೆಂದರೆ, ನೀವು ಆಂಡ್ರಾಯ್ಡ್‌ನಿಂದ ಐಫೋನ್‌ಗೆ ಹೋದರೂ ಅಲ್ಲಿಯೂ ಅದೇ ವಾಟ್ಸಾಪ್, ಅದೇ ರೀಲ್ಸ್ ಇರುತ್ತದೆ. ಕೇವಲ ಆಪಲ್ ಲೋಗೋ ಮಾತ್ರ ಇರುತ್ತೆ, ಆದರೆ ಹಣ್ಣು ತಿನ್ನಲು ಬರಲ್ಲ ಎಂಬ ಸತ್ಯ ನೆನಪಿರಲಿ.

ನಿಮ್ಮ ಯಜಮಾನರ ಮಾತನ್ನು ಸೀರಿಯಸ್ ಆಗಿ ತಗೊಳ್ಳಿ. ನಿಮ್ಮ ಗಂಡ ನನ್ನನ್ನು ಬದಲಿಸಲ್ಲವಲ್ಲ ಅಂತ ಹೇಳಿದ್ದಾರೆ ಅಲ್ವಾ? ಮುಂದಿನ ಬಾರಿ ಹೊಸ ಮೊಬೈಲ್ ಬೇಕು ಅಂದಾಗ, ಅವರ ಮುಖ ನೋಡಿ. ಅವರ ಮುಖದಲ್ಲಿ ಅಯ್ಯೋ, ಈ ತಿಂಗಳ ಸಂಬಳವೂ ಈ ಸಿಲಿಕಾನ್ ಚಿಪ್ ಪಾಲಾಯಿತಲ್ಲ ಅನ್ನೋ ಒಂದು ಸಣ್ಣ ವಿಷಾದದ ಭಾವನೆ ಕಂಡರೆ ಸಾಕು, ನಿಮ್ಮ ಮನಸ್ಸು ಬದಲಾಗಬಹುದು. ನಾವು ವಸ್ತುವನ್ನು ಪ್ರೀತಿಸಿದರೆ ಅದನ್ನು ಬದಲಿಸಲ್ಲ. ನಿಮ್ಮ ಮೊಬೈಲ್‌ಗೆ ನಿಮ್ಮ ಅತ್ತೆಯ ಹೆಸರನ್ನೋ ಅಥವಾ ನಿಮಗಿಷ್ಟವಿಲ್ಲದವರ ಹೆಸರನ್ನೋ ಇಡಿ. ಆಗ ಅದನ್ನು ಮುಟ್ಟಲು ಅಸಹ್ಯ ಅನ್ನಿಸಿ, ತಾನಾಗಿಯೇ ಫೋನ್ ಬಳಕೆ ಕಮ್ಮಿಯಾಗುತ್ತದೆ! ಅಥವಾ ಅದಕ್ಕೆ ನಿಮ್ಮ ಯಜಮಾನರ ಹೆಸರೇ ಇಡಿ, ಆಗಲಾದರೂ ಅದರ ಮೇಲೆ ಸ್ವಲ್ಪ ಜಾಸ್ತಿ ಪ್ರೀತಿ ಬಂದು ಇರಲಿ ಬಿಡು, ಯಾಕೆ ಚೇಂಜ್ ಮಾಡೋದು? ಅನ್ನಿಸಬಹುದು.

ಹೊಸ ಫೋನ್ ಬೇಕು ಅನ್ನಿಸಿದಾಗ, ಈಗ ಇರುವ ಫೋನ್ ಬ್ಯಾಟರಿ ಖಾಲಿ ಮಾಡಿ ಸ್ವಿಚ್ ಆಫ್ ಮಾಡಿ ಇಟ್ಟುಬಿಡಿ. ಒಂದು ದಿನ ಫೋನ್ ಇಲ್ಲದೆ ಇದ್ದರೆ, ಮೂರು-ನಾಲ್ಕು ಗಂಟೆಗಳ ಕಾಲ ನಿಮಗೆ ಎಷ್ಟು ಕೆಲಸಗಳಿವೆ ಅಂತ ಗೊತ್ತಾಗುತ್ತದೆ. ಆ ಗ್ಯಾಪ್‌ನಲ್ಲಿ ಒಂದು ಹೊಸ ಅಡುಗೆ ಮಾಡಿದರೆ, ನಿಮ್ಮ ಯಜಮಾನರು ನನ್ನ ಪುಣ್ಯ ಮೊಬೈಲ್ ಸ್ವಿಚ್ ಆಫ್ ಆಗಿದೆ ಅಂತ ನೆಮ್ಮದಿಯಿಂದ ಊಟ ಮಾಡುತ್ತಾರೆ. ಹೊಸ ಫೋನ್ ಕೊಳ್ಳುವ ಬದಲು ಆ ಹಣದಲ್ಲಿ ಪ್ರತಿ ಬಾರಿ ನೀವು ಫೋನ್ ಬದಲಿಸಬೇಕು ಅಂದಾಗಲೆಲ್ಲ ಒಂದೊಂದು ಗ್ರಾಂ ಚಿನ್ನದ ಕಾಯಿನ್ ಕೊಳ್ಳಿ. ಫೋನ್ ಬೆಲೆ ವರ್ಷಕ್ಕೊಮ್ಮೆ ಅರ್ಧ ಆಗುತ್ತೆ, ಆದರೆ ಚಿನ್ನದ ಬೆಲೆ ಏರುತ್ತೆ. ಒಂದು ದಿನ ನಿಮ್ಮ ಹತ್ತಿರ ಮೊಬೈಲ್ ಗಳ ಗುರಿ ಇರುವುದಿಲ್ಲ, ಚಿನ್ನದ ರಾಶಿ ಇರುತ್ತೆ!

ಒಂದು ಕಿವಿಮಾತು... ಫೋನ್ ಚೇಂಜ್ ಮಾಡಿದರೆ ಸಾಫ್ಟ್‌ವೇರ್ ಅಪ್‌ಡೇಟ್ ಆಗುತ್ತೆ, ಆದರೆ ಲೈಫ್ ಅಪ್‌ಡೇಟ್ ಆಗಲ್ಲ. ಆ ಮೂರು ಗಂಟೆಗಳ ಕಾಲ ರೀಲ್ಸ್ ನೋಡುವ ಬದಲು, ನಿಮ್ಮ ಯಜಮಾನರಿಗೆ ಸಂಜೆ ಒಂದು ಸರ್‌ಪ್ರೈಸ್ ಅಡುಗೆ ಮಾಡಿದರೆ, ಅವರು ನೀನು ವರ್ಷಕ್ಕೆ ಎರಡು ಫೋನ್ ಕೇಳಿದ್ರೂ ಕೊಡಿಸ್ತೀನಿ ಅನ್ನೋವಷ್ಟು ಖುಷಿಯಾಗಬಹುದು (ಆದರೆ ಅಷ್ಟು ಖುಷಿಪಡಿಸಬೇಡಿ, ಆಮೇಲೆ ಮತ್ತೆ ಹೊಸ ಫೋನ್ ಕೊಡಿಸಿಬಿಟ್ಟಾರು!).

ಸಂತೋಷ ಮಾನೆ, ಧಾರವಾಡ

• **ಸಂಪಾದಕರೇ, ನಾನು ಓದಿದ್ದು ಸಾಮಾನ್ಯ ಡಿಗ್ರಿ. ಪಠ್ಯಪುಸ್ತಕದ ಹೊರತಾಗಿ ನಾನು ಮತ್ತೇನನ್ನೂ ಓದಿಲ್ಲ. ಜನ ಹೇಗೆ ಕಾದಂಬರಿಯ ರೀತಿಯ ಇಡೀ ಪುಸ್ತಕ ಓದುತ್ತಾರೋ, ನನಗೆ ಅರ್ಥವಾಗೊಲ್ಲ. ನೀವು ಹೇಗೆ ಇಷ್ಟೆಲ್ಲಾ ಬರೆಯುತ್ತೀರಿ? ನನಗೆ ಓದಲು ಕೂಡ ಆಗೊಲ್ಲ. ನನಗೆ ಒಂದು ಪುಸ್ತಕ ಓದಲು ಆಗೊಲ್ಲ, ಇಲ್ಲವೇ ಬಹಳ ಸಮಯ ತೆಗೆದುಕೊಳ್ಳುತ್ತೇನೆ. ಈ ವರ್ಷ ಕನಿಷ್ಠ ಎರಡು ಪುಸ್ತಕಗಳನ್ನಾದರೂ ಓದಬೇಕು ಎಂದು ತೀರ್ಮಾನ ಮಾಡಿದ್ದೇನೆ. ನನಗೆ ನಿಮ್ಮ ಸಲಹೆ ಬೇಕು.**

– ಮಾನೆ ಅವರೇ, ನಿಮ್ಮ ಪ್ರಾಮಾಣಿಕತೆಗೆ ಮೊದಲು ಒಂದು ಸಲ್ಯೂಟ್. ಡಿಗ್ರಿ ಮುಗಿಸಿ ಪಠ್ಯಪುಸ್ತಕಗಳ ಹೊರತಾಗಿ ಬೇರೇನೂ ಓದಿಲ್ಲ ಅಂದರಲ್ಲ, ಅಲ್ಲಿಗೆ ನೀವು ಅರ್ಧ ಭಾರತೀಯರ ಪ್ರತಿನಿಧಿಯಂತೆ ಕಾಣುತ್ತಿದ್ದೀರಿ. ಜನರು ಇಡೀ ಪುಸ್ತಕ ಓದುತ್ತಾರೆ ಅಂದಾಗ ನಿಮಗೆ ಆಶ್ಚರ್ಯವಾಗುವುದು ಸಹಜ, ಅದೂ ಈ ಕಾಲದಲ್ಲಿ ರೀಲ್ಸ್ ನೋಡುವುದೇ ಕಷ್ಟವಾಗಿರುವಾಗ!

ನಾನು ಹೇಗೆ ಇಷ್ಟೆಲ್ಲಾ ಬರೆಯುತ್ತೇನೆ ಎಂದು ಕೇಳಿದಿರಿ... ನೋಡಿ, ಅಡುಗೆ ಮಾಡುವವನಿಗೆ ತಿನ್ನುವುದಕ್ಕಿಂತ ಬಡಿಸುವುದರಲ್ಲಿ ಖುಷಿ ಸಿಗುವಂತೆ, ನನಗೆ ಓದಿದ್ದನ್ನು ಅಥವಾ ಅಂದುಕೊಂಡಿದ್ದನ್ನು ಹಂಚಿಕೊಳ್ಳುವುದರಲ್ಲಿ ಆನಂದ ಸಿಗುತ್ತದೆ. ಅಷ್ಟೇ! ನೀವು ಈ ವರ್ಷ ಕನಿಷ್ಠ ಎರಡು ಪುಸ್ತಕ ಓದಬೇಕು ಎಂದು ನಿರ್ಧರಿಸಿದ್ದೀರಲ್ಲ, ಆ ಮಿಷನ್ ಇಂಪಾಸಿಬಲ್‌ನ್ನು ಸಕ್ಸಸ್ ಮಾಡಲು ಕೆಲವು ಸ್ಮಾರ್ಟ್ ಐಡಿಯಾಗಳನ್ನು ಹೇಳಬಹುದು. ಮೊದಲನೆಯದಾಗಿ, ಪುಸ್ತಕವನ್ನು ದಿಂಬು ಮಾಡಬೇಡಿ. ಬಹಳ ಜನರಿಗೆ ಪುಸ್ತಕ ಹಿಡಿದ ತಕ್ಷಣ ನಿದ್ರಾ ದೇವತೆ ಪ್ರತ್ಯಕ್ಷವಾಗುತ್ತಾಳೆ. ಇದನ್ನು ತಪ್ಪಿಸಲು, ನಿದ್ದೆ ಬಂದಾಗ ಓದಬೇಡಿ, ಬದಲಿಗೆ ಓದುವಾಗ ನಿದ್ದೆ ಬರದಂತೆ ಸ್ವಲ್ಪ ಕಾಫಿ ಕುಡಿಯುತ್ತಾ ಕುಳಿತುಕೊಳ್ಳಿ. ಪುಸ್ತಕ ಓದುತ್ತಾ ನಿದ್ದೆ ಮಾಡುವುದು ಎಂದರೆ ಅದು ಜ್ಞಾನೋದಯ ಅಲ್ಲ, ಅದು ಬರಿ ನಿದ್ರೆಯ ಒಂದು ಭಾಗ ಅಷ್ಟೇ!

ಎರಡನೆಯದಾಗಿ, ಅತಿ ಸಣ್ಣ ಪುಸ್ತಕ ಆರಿಸಿಕೊಳ್ಳಿ. ಮೊದಲನೇ ಬಾರಿಗೆ ಐನೂರು ಪುಟದ ದಪ್ಪ ಪುಸ್ತಕ ಹಿಡಿದರೆ, ಅದು ಪುಸ್ತಕದ ತೂಕಕ್ಕಿಂತ ನಿಮ್ಮ ಮನಸ್ಸಿನ ತೂಕವನ್ನು ಜಾಸ್ತಿ ಮಾಡುತ್ತದೆ. ಬದಲಿಗೆ, ಸಣ್ಣ ಮಕ್ಕಳ ಕಥೆ ಪುಸ್ತಕ ಅಥವಾ ಚುಟುಕುಗಳ ಪುಸ್ತಕದಿಂದ ಆರಂಭಿಸಿ. ಪುಸ್ತಕ ಸಣ್ಣದಾಗಿದ್ದರೆ, ಮುಗಿಸಿದಾಗ ನಾನು ಒಂದು ಸಾಧನೆ ಮಾಡಿದೆ ಅನ್ನೋ ಭಾವನೆ ಬರುತ್ತದೆ.

ಮೂರನೆಯದಾಗಿ, ಆರಂಭದಲ್ಲಿ ಲೈಟ್ ರೀಡಿಂಗ್ ಪುಸ್ತಕ ಓದಿ. ನಿಮಗೆ ಓದಲು ಬೇಸರವಾಗಬಾರದು ಎಂದರೆ ಮೊದಲು ಯಾವುದಾದರೂ ಒಂದು ಹಾಸ್ಯ ಪುಸ್ತಕ ಹಿಡಿಯಿರಿ. ನಗುತ್ತಾ ನಗುತ್ತಾ ಪುಟಗಳು ಕಳೆದುಹೋಗುವುದು ನಿಮಗೆ ಗೊತ್ತೇ ಆಗುವುದಿಲ್ಲ. ಆಗ ಅಯ್ಯೋ, ಮುಗಿದೇ ಹೋಯ್ತಾ? ಅನಿಸುತ್ತದೆ. ನಾಲ್ಕನೆಯದಾಗಿ, ನೀವು ಪುಸ್ತಕ ಓದಲು ಕುಳಿತಾಗ ನಿಮ್ಮ ಮೊಬೈಲ್ ಅನ್ನು ತುಸು ದೂರ ಅಥವಾ ಸ್ವಿಚ್ ಆಫ್ ಮಾಡಿಯೋ ಇಟ್ಟುಬಿಡಿ. ಯಾಕೆಂದರೆ, ಪುಸ್ತಕದ ಒಂದು ಸಾಲು ಓದಿದ ತಕ್ಷಣ ವಾಟ್ಸಾಪ್ ನೋಟಿಫಿಕೇಶನ್ ಬಂದರೆ, ಅಲ್ಲಿಗೆ ಆ ಪುಸ್ತಕದ ಕಥೆ ಮುಗಿಯಿತು!

ಐದನೆಯದಾಗಿ, ಯಾವುದೋ ಒಂದು ಪುಟ ಅರ್ಥವಾಗುತ್ತಿಲ್ಲ ಎಂದರೆ ಅದರಲ್ಲೇ ತಲೆ ಕೆಡಿಸಿಕೊಳ್ಳಬೇಡಿ. ಅದನ್ನು ಬಿಟ್ಟು ಮುಂದಿನ ಪುಟಕ್ಕೆ ಹೋಗಿ. ಅಷ್ಟಕ್ಕೂ ನೀವೇನು ಪರೀಕ್ಷೆ ಬರೆಯುತ್ತಿಲ್ಲ ಅಲ್ವಾ? ಹೀಗಾಗಿ ಓದಿದ ಎಲ್ಲವೂ ಅರ್ಥವಾಗಲೇಬೇಕು ಅನ್ನೋ ಟೆನ್ಷನ್ ಬೇಡ.

ನೆನಪಿಡಿ, ಒಂದು ಪುಸ್ತಕ ಓದುವುದು ಎಂದರೆ ಒಬ್ಬ ಹೊಸ ಗೆಳೆಯನನ್ನು ಮಾಡಿಕೊಂಡಂತೆ. ನೀವು ಈ ವರ್ಷ ಇಬ್ಬರು ಹೊಸ ಗೆಳೆಯರನ್ನು ಮಾಡಿಕೊಳ್ಳುತ್ತಿದ್ದೀರಿ ಅಷ್ಟೇ!

ಸತ್ಯೇಶ ಕೆ.ವಿ., (ಇಮೇಲ್ ಮೂಲಕ)

• **ಸಂಪಾದಕರೇ, ನನ್ನ ಆಫೀಸಿನಲ್ಲಿ ಒಬ್ಬ ಸಹೋದ್ಯೋಗಿಯಿದ್ದಾನೆ. ಆತ ಎಲ್ಲರ ಬಗ್ಗೆಯೂ ಕೀಳಾಗಿ ಮಾತಾಡುತ್ತಾನೆ. ಎಲ್ಲರನ್ನೂ ಟೀಕಿಸುತ್ತಾನೆ. ಈತನಿಗೆ ಬುದ್ಧಿ ಕಲಿಸುವುದು ಹೇಗೆ? ಕೆನ್ನೆಗೆ ಎರಡು ಬಾರಿಸಲಾ ಎಂದು ಹಲವು ಸಲ ಅನಿಸಿದ್ದಿದೆ. ಇಂಥವರನ್ನು ಹೇಗೆ ನಿಭಾಯಿಸಬೇಕು?**

– ಸತ್ಯೇಶ ಅವರೇ, ನಿಮ್ಮ ಆಫೀಸಿನ ಆ ಟೀಕಾಶಾಸ್ತ್ರಿಗೆ ಕೆನ್ನೆಗೆ ಬಾರಿಸಬೇಕು ಅನ್ನೋ ನಿಮ್ಮ ಆಸೆ ನ್ಯಾಯಸಮ್ಮತವಾದದ್ದೇ! ಆದರೆ ಕಾನೂನು ಮತ್ತು ನಿಮ್ಮ ಕೆಲಸದ ಹಿತದೃಷ್ಟಿಯಿಂದ ಆ 'ದೈಹಿಕ ವ್ಯಾಯಾಮ' ಬೇಡ. ಇಂಥವರನ್ನು ನಿಭಾಯಿಸಲು ಕೈಗಿಂತ 'ಬುದ್ಧಿ' ಬಳಸಿ ಕಾಲೆಳೆಯುವುದೇ ಲೇಸು. ಇಂಥವರು ಚರಂಡಿಯಲ್ಲಿ ಹರಿಯುವ ನೀರಿನಂತೆ, ಕಲ್ಲು ಹಾಕಿದರೆ ನಮ್ಮ ಮೇಲೇ ಸಿಡಿಯುತ್ತದೆ. ಅವನನ್ನು ಒಂದು ಕಾಮಿಡಿ ಪೀಸ್ ಥರ ನೋಡಿ ಎಂಜಾಯ್ ಮಾಡಿ. ಅವನ ಮಾತುಗಳಿಗೆ ಬೆಲೆ ಕೊಟ್ಟರೆ ಮಾತ್ರ ಅವನಿಗೆ ಪವರ್, ನೀವು ನಿರ್ಲಕ್ಷಿಸಿದರೆ ಅವನು ಬರೀ ಜೀರೋ!

ರಾಜು, (ಇಮೇಲ್ ಮೂಲಕ)

• **ಭಟ್ರೇ, ನನಗೆ ಇಂಗ್ಲಿಷಿನಲ್ಲಿ ಮಾತಾಡುವ ಚಪಲ. ಆದರೆ ನಾನು ಕನ್ನಡದಲ್ಲಿ ಯೋಚಿಸುತ್ತೇನೆ. ಅಂದ್ರೆ ನಾನು ಇಂಗ್ಲಿಷಿನಲ್ಲಿ ಮಾತಾಡುವುದೆಂದರೆ ನನ್ನ ಕನ್ನಡವನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದಂತೆ. ಇಂಗ್ಲಿಷಿನಲ್ಲಿ ಮಾತಾಡುವುದೆಂದರೆ, ಇಂಗ್ಲಿಷಿನಲ್ಲಿಯೇ ಯೋಚಿಸಬೇಕೇ? ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

– ರಾಜು ಅವರೇ, ನಿಮ್ಮ ಈ ಪ್ರಶ್ನೆ ಬಹುತೇಕ ಭಾರತೀಯರು ಎದುರಿಸುವ ಒಂದು ಸಾಮಾನ್ಯ ಸಮಸ್ಯೆ. ಇಂಗ್ಲಿಷಿನಲ್ಲಿ ಮಾತಾಡುವ ಆ 'ಚಪಲ' ಅಥವಾ ಹಂಬಲ ಇರುವುದು ಒಳ್ಳೆಯದೇ, ಏಕೆಂದರೆ ಅದು ಹೊಸತನ್ನು ಕಲಿಯುವ ಹಸಿವನ್ನು ತೋರಿಸುತ್ತದೆ. ಇಂಗ್ಲಿಷಿನಲ್ಲಿ ಸಹಜವಾಗಿ ಮಾತಾಡಬೇಕೆಂದರೆ ಇಂಗ್ಲಿಷಿನಲ್ಲಿಯೇ ಯೋಚಿಸುವುದು ಅತ್ಯಗತ್ಯ. ಯಾಕೆ ಅಂತ ಹೇಳುತ್ತೇನೆ. ಮೊದಲನೆಯದಾಗಿ, ಅನುವಾದ ಕಷ್ಟ. ನೀವು ಕನ್ನಡದಲ್ಲಿ ಯೋಚಿಸಿ ಅದನ್ನು ಇಂಗ್ಲಿಷಿಗೆ ಅನುವಾದ ಮಾಡುವಾಗ ಎರಡು ಸಮಸ್ಯೆಗಳಾಗುತ್ತವೆ. ನೀವು ಮನಸ್ಸಿನಲ್ಲಿ ಕನ್ನಡ ವಾಕ್ಯ ರಚಿಸಿ, ಪದಗಳನ್ನು ಹುಡುಕಿ, ಇಂಗ್ಲಿಷ್‌ಗೆ ಬದಲಾಯಿಸುವಷ್ಟರಲ್ಲಿ ಸಂಭಾಷಣೆಯ ವೇಗ ಕಡಿಮೆಯಾಗುತ್ತದೆ. ಇದರಿಂದ ನೀವು ಮಾತಾಡುವಾಗ ತಡಬಡಾಯಿಸಿದಂತೆ ಅನ್ನಿಸಬಹುದು. ಇನ್ನೊಂದು, ಕನ್ನಡದ ವಾಕ್ಯರಚನೆಗೂ, ಇಂಗ್ಲಿಷ್ ವಾಕ್ಯರಚನೆಗೂ ವ್ಯತ್ಯಾಸವಿದೆ. ಉದಾಹರಣೆಗೆ, ಕನ್ನಡದಲ್ಲಿ ನಾನು ಶಾಲೆಗೆ ಹೋಗುತ್ತೇನೆ (Subject + Object + Verb) ಎನ್ನುತ್ತೇವೆ. ಅದೇ ಇಂಗ್ಲಿಷ್ ನಲ್ಲಿ 'I go to school' (Subject + Verb + Object) ಎನ್ನುತ್ತೇವೆ. ಕನ್ನಡವನ್ನು ನೇರವಾಗಿ ಇಂಗ್ಲಿಷಿಗೆ ತರ್ಜುಮೆ ಮಾಡಿದರೆ ಅದು 'ಕಂಗ್ಲಿಷ್' ಆಗುತ್ತದೆಯೇ ಹೊರತು ಇಂಗ್ಲಿಷ್ ಆಗುವುದಿಲ್ಲ!

ಹಾಗಾದರೆ ಇಂಗ್ಲಿಷಿನಲ್ಲಿ ಯೋಚಿಸುವುದು ಹೇಗೆ? ಇದು ರಾತ್ರೋರಾತ್ರಿ ಆಗುವ ಕೆಲಸವಲ್ಲ, ಇದಕ್ಕೆ ಸಣ್ಣ ಸಣ್ಣ ಹೆಜ್ಜೆಗಳನ್ನಿಡಬೇಕು. ಸುತ್ತಮುತ್ತಲಿನ ವಸ್ತುಗಳನ್ನು ಇಂಗ್ಲಿಷಿನಲ್ಲಿ ಹೆಸರಿಸುವುದನ್ನು ರೂಢಿ ಮಾಡಿಕೊಳ್ಳಬೇಕು. ಮನೆಯಲ್ಲಿ ಕುಳಿತಾಗ 'ಬಾಗಿಲು' ಅನ್ನಬೇಡಿ, ಮನಸ್ಸಿನಲ್ಲೇ ಈಟಟ್ಟ ಅಂದುಕೊಳ್ಳಿ. 'ನನಗೆ ಹಸಿವಾಗುತ್ತಿದೆ' ಎನ್ನುವ ಬದಲು I am hungry ಎಂದು ಮನಸ್ಸಿನಲ್ಲೇ ಹೇಳಿಕೊಳ್ಳಿ. ನೀವು ಕನ್ನಡಿ ಮುಂದೆ ನಿಂತು ನಿಮ್ಮ ದಿನಚರಿಯನ್ನು ಇಂಗ್ಲಿಷಿನಲ್ಲಿ ಹೇಳಿಕೊಳ್ಳಿ. ಆಗ ನೀವು ಯಾರಿಗೂ ಉತ್ತರಿಸುವ ಒತ್ತಡದಲ್ಲಿ ಇರುವುದಿಲ್ಲ, ಹೀಗಾಗಿ ಆರಾಮವಾಗಿ ಇಂಗ್ಲಿಷ್ ವಾಕ್ಯಗಳು ಮೂಡಿಬರುತ್ತವೆ. ಇಂಗ್ಲಿಷ್ ಸಂಭಾಷಣೆಗಳನ್ನು ಕೇಳಿಸಿಕೊಳ್ಳಿ. ಅವರು ಹೇಗೆ ಒಂದು ಸನ್ನಿವೇಶಕ್ಕೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಗಮನಿಸಿ. ನಾವು ಕನ್ನಡವನ್ನು ಕಲಿತಿದ್ದು ವ್ಯಾಕರಣದಿಂದಲ್ಲ, ಕೇಳಿಸಿಕೊಳ್ಳುವುದರಿಂದ!

ತರ್ಜುಮೆ ಯಿಂದ ಯೋಚನೆಗೆ ಬದಲಾಗುವುದು ಹೇಗೆ? ನೀವು ಮೊದಮೊದಲು ತರ್ಜುಮೆ ಮಾಡುತ್ತಿರುವುದು ಸಹಜ. ಆದರೆ ದಿನಾಲು ಹದಿನೈದಿಪ್ಪತ್ತು ನಿಮಿಷಗಳ ಕಾಲ ಇಂಗ್ಲಿಷ್ ಲೇಖನಗಳನ್ನು ಓದುವುದು ಅಥವಾ ಇಂಗ್ಲಿಷ್ ಸುದ್ದಿಯನ್ನು ಕೇಳುವುದರಿಂದ ನಿಮ್ಮ ಮಿದುಳು ಇಂಗ್ಲಿಷ್ ಪದಗಳ ಜತೆ ಸ್ನೇಹ ಬೆಳೆಸುತ್ತದೆ. ಕ್ರಮೇಣ ತರ್ಜುಮೆ ಮಾಡುವ ಹಂತ ಇಲ್ಲವಾಗಿ, ನೇರವಾಗಿ ಇಂಗ್ಲಿಷ್ ಪದಗಳೇ ಹೊರಬರುತ್ತವೆ.

ಇಂಗ್ಲಿಷಿನಲ್ಲಿ ಯೋಚಿಸುವುದು ಎಂದರೆ ಆಕ್ಸ್ ಫರ್ಡ್ ಡಿಕ್ಷನರಿಯನ್ನು ನುಂಗುವುದು ಎಂದಲ್ಲ! ನೀವು ತಪ್ಪು ಇಂಗ್ಲಿಷ್ ಮಾತನಾಡಿದರೆ ಭೂಕಂಪವೇನೂ ಆಗುವುದಿಲ್ಲ. ತಪ್ಪು ಮಾಡುತ್ತಲೇ ಸರಿಪಡಿಸಿಕೊಳ್ಳುವುದು ಜಾಣತನ. ಇಂಗ್ಲಿಷಿನಲ್ಲಿ ಮಾತಾಡುವಾಗ ನಿಮ್ಮ 'ಕನ್ನಡದ ಸೊಗಡು' (Accent) ಇದ್ದರೆ ಚಿಂತಿಸಬೇಡಿ, ಅದು ನಿಮ್ಮ ಗುರುತು!

ರಂಗಭೂಮಿಯ ರತ್ನಮ್ಮ

» ಈರಣ್ಣ ಬೆಂಗಾಲಿ ರಾಯಚೂರು

ರಾಯಚೂರು ಜಿಲ್ಲೆಯು ಕಲೆಗಳ ನಾಡು, ಕಲಾವಿದರ ಬೀಡು. ಇಲ್ಲಿ ನೂರಾರು ವರ್ಷಗಳಿಂದ ರಂಗಭೂಮಿಯ ಚಟುವಟಿಕೆಗಳು ನಡೆಯುತ್ತಿವೆ. ಅದೆಷ್ಟೋ ಕಲಾವಿದರು ಇಂದಿಗೂ ನಾಟಕಗಳಲ್ಲಿ ಅಭಿನಯಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಸಿರವಾರ ತಾಲೂಕಿನ 74 ವರ್ಷದ ರತ್ನಮ್ಮ ಬಿ.ಎಸ್. ದೇಸಾಯಿ ಕಳೆದ ಐದು ದಶಕಗಳಿಂದ ರಂಗಭೂಮಿ ಕಲಾವಿದೆ! ವಿವಿಧ ಕಂಪನಿಗಳ ನಾಟಕಗಳಲ್ಲಿ ಪಾತ್ರಗಳನ್ನು ನಿಭಾಯಿಸಿದ್ದಾರೆ. ಇವರ ಪತಿ, ಮಕ್ಕಳು ಸಹ ಒಳಗೊಂಡು ಇಡೀ ಕುಟುಂಬವೇ ರಂಗಭೂಮಿ ಕಲೆಗೆ ಅಂಟಿಕೊಂಡಿದೆ.

ಕಲಾವಿದೆ ರತ್ನಮ್ಮ ಅವರು ಓದಿದ್ದು ಏಳನೇ ತರಗತಿ ಮಾತ್ರ. ಬಡತನದ ಕುಟುಂಬ. ಬದುಕಿನ ದಾರಿಯಾಗಿ ಬಣ್ಣ ಹಚ್ಚಿ ಕಲಾವಿದೆಯಾದರು. ಇವರ ಪತಿ ಬಸವಲಿಂಗಪ್ಪ ಸಹ ನಟರು. ಇವರು ಪರಸ್ಪರ ಪ್ರೀತಿಸಿ ಮದುವೆಯಾಗಿದ್ದಾರೆ. ಇವರಿಬ್ಬರೂ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ, ಕೊರವಂಜಿ, ದಾರಿದೀಪ, ಬಸ್ ಕಂಡಕ್ಟರ್ ಮತ್ತಿತರ ನಾಟಕಗಳಲ್ಲಿ ಪಾತ್ರಕ್ಕೆ ಜೀವ ತುಂಬಿ ನಟಿಸುವುದರೊಂದಿಗೆ ನ್ಯಾಯ ಸಲ್ಲಿಸಿ ಪ್ರೇಕ್ಷಕರ ಮನ ಗೆದ್ದಿದ್ದರು. ಮೈಸೂರು, ಭದ್ರಾವತಿ, ಚಾಮರಾಜನಗರ, ತೀರ್ಥಹಳ್ಳಿ, ಶಿವಮೊಗ್ಗ ಹೀಗೆ ಅನೇಕ ಊರಿನ ಜಾತ್ರೆಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಒಂದು ಊರಲ್ಲಿ ನಾಟಕ ಕ್ಯಾಂಪ್ ಹಾಕಿದರೆ ಕನಿಷ್ಟ ಮೂರು ತಿಂಗಳು ಅಲ್ಲಿ ನಾಟಕವಾಡುತ್ತಿದ್ದರು. ಎಲ್ಲಾ ನಾಟಕ ಪ್ರದರ್ಶನಗಳನ್ನು ಮುಗಿಸುವಷ್ಟರಲ್ಲಿ ರಾತ್ರಿ 2 ಗಂಟೆ ಆಗುತ್ತಿತ್ತು! ಬೆಳಿಗ್ಗೆ ನಾಟಕದ ಸಂಭಾಷಣೆಗಳನ್ನು, ಅಭಿನಯವದ ಅಭ್ಯಾಸ ಮಾಡುತ್ತಿದ್ದರು. ರತ್ನಮ್ಮ ಅವರು ಎಂಟು ತಿಂಗಳು ಗರ್ಭಧರಿಸಿದಾಗಲೂ ನಾಟಕವಾಡಿದ್ದಾರೆ. ಜತೆಗೆ, ದಿನಕ್ಕೊಂದು ಶಾಲನ್ನು ಸಿದ್ದಗೊಳಿಸುತ್ತಿದ್ದರು. ಕಂಪನಿಗಳು ಕೆಲವು ಬಾರಿ ಸಂಭಾವನೆ ನೀಡದೇ ಇದ್ದುದುಂಟು. ಸ್ವಂತ ನಾಟಕ ಕಂಪನಿಯನ್ನು ಸ್ಥಾಪಿಸಿ, ನಷ್ಟ ಅನುಭವಿಸಿದರು. ನಡೆಸಲಾಗದೆ ಕೊನೆಗೆ ಮಾರಿಬಿಟ್ಟರು. ಪ್ರಸ್ತುತ ವಯೋಸಹಜವಾಗಿ ದೈಹಿಕವಾಗಿ ಅಶಕ್ತರಾದ ರತ್ನಮ್ಮ ಅವರು ಗಾಲಿ ಕುರ್ಚಿಯನ್ನು ಅವಲಂಬಿಸಿದ್ದಾರೆ. ಜೀವನ ನಿರ್ವಹಣೆಗೆ ಕಷ್ಟಪಡುತ್ತಿದ್ದಾರೆ. ಪತಿಯೂ ಅನಾರೋಗ್ಯಕ್ಕೆ ಈಡಾಗಿದ್ದು, ಜೀವನ ಕಷ್ಟವಾಗಿದೆ. ಕನ್ನಡ ಮತ್ತು ಸಂಸ್ಕೃತಿಯ ಮಾಶಾಸನ ಕೊಂಚ ಆಸರೆಯಾಗಿದೆ. ಇವರ ಮೂರು ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ಹಿರಿಯ ಕಲಾವಿದೆ ರತ್ನಮ್ಮ ದೇಸಾಯಿ ಅವರು 2025ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ರಂಗಭೂಮಿಗೆ ನೀಡಿದ ಗೌರವವಾಗಿದೆ.

ಕೊಡಗಿನ ದೈವ ಮುತ್ತಪ್ಪ

» ವಿ.ಎನ್. ರಜಿತ ಕಾರ್ಯಪ್ಪ, ವಿರಾಜಪೇಟೆ

ಕೊಡಗು ಮತ್ತು ಕೇರಳದ ನಡುವೆ ಗಾಢವಾದ ಸಂಬಂಧವಿದೆ; ಧಾರ್ಮಿಕ ಆಚರಣೆಗಳು (ತೆಯ್ಯಂ), ತೆರೆ, ದೇವರುಗಳು, ದೇವಾಲಯದ ವಾಸ್ತುಶಿಲ್ಪ ಮತ್ತು ಜನಪದ ನಂಬಿಕೆಗಳಲ್ಲಿ ಸಾಮ್ಯತೆಗಳಿವೆ.

ದೈವ ದೇವರ ವಿಚಾರಕ್ಕೆ ಬಂದರೆ ಕೇರಳದ ಮುತ್ತಪ್ಪನ ಬಗ್ಗೆ ಕೊಡಗಿನವರಿಗೆ ಚೆನ್ನಾಗಿ ಗೊತ್ತು. ಪರಶಿನಿಕಡವು ಅಂದರೆ ಮುತ್ತಪ್ಪ ಎಂದೇ ಹೇಳಬೇಕು. ಕೊಡಗಿನಲ್ಲಿಯೂ ಮುತ್ತಪ್ಪನ ಮಡಪುರಕ್ಕೆ ಕೊರತೆ ಇಲ್ಲ. ಸರ್ವರನ್ನು ದಯಾಪಾಲಿಸುವ ದೈವವಾಗಿ ಮುತ್ತಪ್ಪ ಕೊಡಗಿನೆಲ್ಲೆಡೆ ಸ್ಥಿತಗೊಂಡಿದ್ದಾನೆ.

ಈ ಮುತ್ತಪ್ಪನ ನಿಜವಾದ ಮೂಲ ಸ್ಥಾನ ಮತ್ತು ಹಿನ್ನೆಲೆ ಕುತೂಹಲಕಾರಿ. ಪರಶಿನಿಕಡವು ಮುತ್ತಪ್ಪ ಎಲ್ಲರೂ ಕೇಳಿರುತ್ತಾರೆ. ಕುನ್ನತ್ತೂರ್ ಪಾಡಿ ಮುತ್ತಪ್ಪ ಹೆಸರು ಕೇಳಿರುವವರ ಸಂಖ್ಯೆ ಕಡಿಮೆ. ಏಕೆಂದರೆ ಅಲ್ಲಿ ಕೇವಲ ಒಂದು ತಿಂಗಳ ಕಾಲ ಮಾತ್ರ ಪೂಜೆ ವಿಧಿವಿಧಾನಗಳು ನೆರವೇರುತ್ತವೆ. ಇದು ಮುತ್ತಪ್ಪನ ಮೂಲ ವಾಸಸ್ಥಾನವೂ ಹೌದು.

ಕೊಡಗು ಜಿಲ್ಲೆ ಹಾಗೂ ಕೇರಳ ರಾಜ್ಯದ ನಡುವೆ ಪುರಾತನ ಕಾಲದಿಂದಲೂ ಇರುವ ಅವಿನಾಭಾವ ಸಂಬಂಧದ ಒಂದು ನಿದರ್ಶನ ಎಂದರೆ, ಕೊಡಗಿನ ಜನತೆ ಕೇರಳದಲ್ಲಿ ಆಚರಿಸುವ ಬೈತೂರು ಪಯ್ಯವೂರ್ ಉತ್ಸವ. ಇಲ್ಲಿ ವರ್ಷಕ್ಕೆ ಒಂದು ತಿಂಗಳು ಮಾತ್ರ ಆಲಯ ದರ್ಶನ ಮತ್ತು ನೈಸರ್ಗಿಕವಾಗಿ ಮುತ್ತಪ್ಪನಿಗೆ ಪೂಜೆ ನಡೆಯುತ್ತದೆ.

ಕಣ್ಣೂರು ಜಿಲ್ಲೆಯ ಗುಡ್ಡಗಾಡು ಪ್ರದೇಶದಲ್ಲಿರುವ ಕುನ್ನತ್ತೂರ್ ಪಾಡಿಯನ್ನು ಮುತ್ತಪ್ಪನ್ ಆರಾಧನೆಯ ಹೆಚ್ಚು ಪವಿತ್ರ ಸ್ಥಳವೆಂದು ಪರಿಗಣಿಸಲಾಗಿದೆ ಮತ್ತು ಇದನ್ನು ಅವರ ಮೂಲ ವಾಸಸ್ಥಾನ ಎಂದೂ ಹೇಳುತ್ತಾರೆ. ಇದೀಗ

ಮುತ್ತಪ್ಪನ ಪೂರ್ವಜರ ಮನೆ ಕುನ್ನತೂರ್ಪಾಡಿಯಲ್ಲಿ ಹಬ್ಬ ಪ್ರಾರಂಭವಾಗಿದೆ, ಇದನ್ನು ವನ ಉತ್ಸವ ಎಂದೂ ಕರೆಯುತ್ತಾರೆ. ಪಾಡಿಗೆ ಪ್ರವೇಶ ಸಮಾರಂಭವು ಒಂದು ತಿಂಗಳ ಕಾಲ ನಡೆಯುವ ಕಾರ್ಯಕ್ರಮ. ಇದರ ಅಂಗವಾಗಿ ಡಿ.16ರಂದು ತಾಝುಪೋಡಿಕ್ಕಳಂನಲ್ಲಿ ಸಾಮಾನ್ಯ ಪೂಜೆಗಳ ನಂತರ ಸಂಜೆಯ ಪದಿಗೆ ಪ್ರವೇಶ ಸಮಾರಂಭ ನಡೆಯಿತು. ಪಾಡಿಗೆ ತಿರುವಪ್ಪನ ಮತ್ತು ವೆಳ್ಳಟ್ಟಂ, ಕರಕ್ಕಟ್ಟಿದಂ ನಾಯನಾರ್, ಚಾಂತನ್ ಮತ್ತು ಕೋಮರಮ್ ಅವರು ಕಾಡಿನಲ್ಲಿರುವ ಪದಿಗೆ ಪ್ರವೇಶಿಸುವ ಸಮಾರಂಭವಾಗಿದೆ. ಇದು ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಹಬ್ಬವಾಗಿದೆ. ಇದೇ ಸಂದರ್ಭ ತಿರುವಾಭರಣಂ ಪೆಟ್ಟಿಗೆ ಮತ್ತು ಸಂಪತ್ತನ್ನು ಪಾಡಿಗೆ ಸಾಗಿಸಿದರು. ನೂರಾರು ಭಕ್ತರು ಮೆರವಣಿಗೆಯಲ್ಲಿ ಜೊತೆಗೂಡಿದರು.

ಪಾಡಿಯಲ್ಲಿ ಕಬ್ಬಿಣದ ದೀಪವನ್ನು ಕಟ್ಟಿ, ದೀಪ ಬೆಳಗಿದಾಗ, ಹಬ್ಬ ಪ್ರಾರಂಭವಾಯಿತು. ಬಾಲ್ಯವನ್ನು ಪ್ರತಿನಿಧಿಸುವ ಹೊಸ ಮುತ್ತಪ್ಪನನ್ನು, ಯೌವನವನ್ನು ಪ್ರತಿನಿಧಿಸುವ ಹಳೆಯ ಮುತ್ತಪ್ಪನನ್ನು, ಯೌವನವನ್ನು ಪ್ರತಿನಿಧಿಸುವ ನಡುವಳಿಶನ್ ದೇವರನ್ನು ಮತ್ತು ವೃದ್ಧಾಪ್ಯವನ್ನು ಪ್ರತಿನಿಧಿಸುವ ತಿರುವಪ್ಪನ ತೆರೆಯನ್ನು ಕಟ್ಟಲಾಯಿತು.

ಧನು ತಿಂಗಳ ಚಳಿಯಲ್ಲಿ, ಕುನ್ನತ್ತೂರು ಬೆಟ್ಟಗಳಲ್ಲಿ ಹಬ್ಬವು ಒಂದು ತಿಂಗಳು ಇರುತ್ತದೆ. ದೇಶದ ವಿವಿಧ ಭಾಗಗಳಿಂದ ಸಾವಿರಾರು ಜನರು ಪಾಡಿಗೆ ಆಗಮಿಸಿ ಕಾಡಿನ ಸೌಂದರ್ಯ ಮತ್ತು ರಾತ್ರಿ ಉತ್ಸವವನ್ನು ಸವಿಯುತ್ತಾರೆ. ಉತ್ಸವದ ಸಮಯದಲ್ಲಿ ಎಲ್ಲಾ ಭಕ್ತರಿಗೆ ಎರಡು ಹೊತ್ತಿನ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಜನವರಿ 15 ರಂದು ಉತ್ಸವವು ಮುಕ್ತಾಯಗೊಳ್ಳಲಿದೆ.

ಕೇರಳದ ಕಣ್ಣೂರಿನ ಕುನ್ನತ್ತೂರ್ ಪಾಡಿ ದೇವಸ್ಥಾನದಲ್ಲಿ, ಮುತ್ತಪ್ಪನ್ ದೇವರಿಗೆ ಒಂದು ತಿಂಗಳು ಮಾತ್ರ ಪೂಜೆ ಸಲ್ಲಿಸಲಾಗುತ್ತದೆ. ಇದು ಸಮುದ್ರ ಮಟ್ಟದಿಂದ 3,000 ಅಡಿ ಎತ್ತರದಲ್ಲಿದ್ದು ಈ ಸ್ಥಳವು ಸುಂದರವಾಗಿದ್ದು, ಇದನ್ನು ಉಡುಂಬನ್ ಮಾಲಾ ಎಂದು ಕರೆಯಲಾಗುತ್ತದೆ.

ಮುತ್ತಪ್ಪನವರ ಪೂಜೆ ವಿಶಿಷ್ಟವಾಗಿದೆ. ಇಲ್ಲಿ ವಿಗ್ರಹ ಪೂಜೆಯಿಲ್ಲ, ದೇವಾಲಯವಿಲ್ಲ, ಬದಲಾಗಿ ಮುತ್ತಪ್ಪನ ಧಾರ್ಮಿಕ ವಿಧಿವಿಧಾನವನ್ನು ಅನುಸರಿಸುವುದು. ಮೀನನ್ನು ದೇವರಿಗೆ ನೈವೇದ್ಯವಾಗಿ ಬಳಸಲಾಗುತ್ತದೆ. ಇಲ್ಲಿ ಪೂಜೆ ಸಲ್ಲಿಸಲು ಅವಕಾಶವಿದೆ. ಕುನ್ನತ್ತೂರ್ಪಾಡಿಯಲ್ಲಿ ಮುತ್ತಪ್ಪನನ್ನು ಪುರಾಲಿಮಲದಿಂದ ಆವಾಹನೆ ಮಾಡಲಾಗುತ್ತದೆ. ಮುತ್ತಪ್ಪ ದೇವರನ್ನು ನೈಸರ್ಗಿಕ ವಾತಾವರಣದಲ್ಲಿ ಪೂಜಿಸಲಾಗುತ್ತದೆ. ಇಲ್ಲಿ ಮುತ್ತಪ್ಪನ ದೈವಿಕ ರೂಪವು ಭಕ್ತರ ಕುಂದುಕೊರತೆಗಳನ್ನು ಆಲಿಸುತ್ತದೆ, ಮತ್ತು ಆಶೀರ್ವದಿಸುತ್ತದೆ ಎಂದು ನಂಬಿಕೆ ಇದೆ.



ದಂತಕಥೆಯ ಪ್ರಕಾರ ಮುತ್ತಪ್ಪನು ಮಲಬಾರ್‌ನ ಗುಡ್ಡಗಾಡು ಪ್ರದೇಶದಲ್ಲಿ ಅಲೆದಾಡುತ್ತಾ ಕುನ್ನತ್ತೂರು ಪಾಡಿಯ ನೈಸರ್ಗಿಕ ಸೌಂದರ್ಯದಿಂದ ಆಕರ್ಷಿತನಾಗಿ ಸ್ವಲ್ಪ ಕಾಲ ಅಲ್ಲಿಯೇ ಇರಲು ನಿರ್ಧರಿದ್ದ. ಕುನ್ನತ್ತೂರು ಪಾಡಿಯಲ್ಲಿ ಮುತ್ತಪ್ಪ ತನ್ನ ಮೊದಲ ಭಕ್ತರಾದ ಚಂದನ್ ಮತ್ತು ಅವನ ಪತ್ನಿ ಅವರೊಂದಿಗೆ ಅಲ್ಲಿ ಇದ್ದ. ಸ್ವಲ್ಪ ಸಮಯದ ನಂತರ, ಮುತ್ತಪ್ಪನ್ ನಾಗರಿಕತೆಗೆ ಮರಳಲು ನಿರ್ಧರಿಸಿದ. ಈ ಸಂದರ್ಭ ಅವನು ಹೊಡೆದ ಬಾಣವು ಮುತ್ತಪ್ಪನ ಮುಖ್ಯ ಮಡಪು??ರ ಇರುವ ಪರಶಿನಿಯ ಮೇಲೆ ಬಿದ್ದಿತು. ಹಾಗೆ ಅಲ್ಲಿ ದೇವಾಲಯ ನಿರ್ಮಾಣವಾಗಿದೆ ಎನ್ನಲಾಗುತ್ತದೆ.

ಇನ್ನೊಂದು ಕಥೆಯ ಪ್ರಕಾರ ಪಡಿಕುಟ್ಟಿ ಅಮ್ಮ ಎಂಬ ಬ್ರಾಹ್ಮಣ ಮಹಿಳೆ, ಮಗುವಿಗಾಗಿ ಶಿವನನ್ನು ಪ್ರಾರ್ಥಿಸುತ್ತಿದ್ದ ಸಂದರ್ಭ ಹೂವಿನ ಬುಟ್ಟಿಯಲ್ಲಿ ನದಿಯಲ್ಲಿ ಮಗು ತೇಲುತ್ತಿರುವುದನ್ನು ಕಾಣುತ್ತಾಳೆ. ಮಕ್ಕಳಿಲ್ಲದ ಪಡಿಕುಟ್ಟಿ ಅಮ್ಮ ಮತ್ತು ಅವಳ ಪತಿ ಮಗುವನ್ನು ತೆಗೆದುಕೊಂಡು ಬೆಳೆಸುತ್ತಾರೆ. ತನ್ನ ಹದಿಹರೆಯದಲ್ಲಿ, ಮುತ್ತಪ್ಪನ್ ತನ್ನ ದೈವಿಕ ಶಕ್ತಿಯನ್ನು ತೋರಿಸಲು ಪ್ರಾರಂಭಿಸುತ್ತಾನೆ. ಅವನು ತನ್ನ ದತ್ತು ಜಾತಿಯ ಸಾಮಾಜಿಕ ರಚನೆಯನ್ನು ಧಿಕ್ಕರಿಸಿ, ಕಾಡಿನಲ್ಲಿ ಬೇಟೆಯಾಡಲು ಮತ್ತು ಬೇಟೆಯನ್ನು ಸೇವಿಸಲು ಪ್ರಾರಂಭಿಸಿದ್ದ ಮತ್ತು ಅದು ಅವನ ಹೆತ್ತವರನ್ನು ಅವರ ಮನೆಯಿಂದ ಹೊರಹಾಕುವಂತೆ ಮಾಡಿತು. ಹೊರಡುವ ಮೊದಲು, ಮುತ್ತಪ್ಪನ್ ತಂದೆ ತಾಯಿಗಳಿಗೆ ತನ್ನ ದೈವಿಕ ಸ್ವರೂಪವನ್ನು ತೋರಿಸಿದ್ದ ಎಂದು ಸ್ಥಳೀಯರು ವಿವರಿಸುತ್ತಾರೆ.

ವಳಪಟ್ಟಣಂ ನದಿ ಮತ್ತು ಪರಶಿಣಿಯ ಮೂಲದ ಬಳಿ ಇರುವ ಕುನ್ನತ್ತೂರು ಪಾಡಿ, ಪ್ರಾಚೀನ ಕಾಲದಲ್ಲಿ ಪಶ್ಚಿಮ ಸಮುದ್ರದ ಪ್ರಮುಖ ಬಂದರಾದ ವಲಪಟ್ಟಣಂ ನಗರಕ್ಕೆ ಹತ್ತಿರದಲ್ಲಿದೆ. ಹೀಗಾಗಿ, ವಲಪಟ್ಟಣಂ ನದಿಯು ಬೆಟ್ಟ ಪ್ರದೇಶ ಮತ್ತು ಸಮುದ್ರದ ನಡುವಿನ ಕೊಂಡಿಯಾಗಿದೆ.

ಕುನ್ನತ್ತೂರು ಪಾಡಿ ಎನ್ನುವುದೇ ಮುತ್ತಪ್ಪನವರ ಹೆಗ್ಗಳಿಕೆ. ಪ್ರಸಿದ್ಧ ಕುನ್ನತ್ತೂರು ಪಾಡಿ ಉತ್ಸವ ಇಲ್ಲಿ ನಡೆಯುತ್ತದೆ. ಈ ಪ್ರದೇಶವು ಮುತ್ತಪ್ಪನ ವಂಶಸ್ಥರಾದ ಮನ್ನಾನಾರ್ ರಾಜವಂಶದ ರಾಜಮನೆತನದ ಒಡೆತನದಲ್ಲಿತ್ತು. 1902ರಲ್ಲಿ ಮುತ್ತಪ್ಪನ ವಂಶದ ಕೊನೆಯ ರಾಜ ಕುಂಜಿಕೇಳಪ್ಪನ್ ಮನ್ನಾನಾರ್ ಅವರನ್ನು ಬ್ರಿಟಿಷ್ ಸರ್ಕಾರ ಕೊಂದು ಈ ಮನೆತನದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಾಗ ಮನ್ನಾನಾರ ಸಾಮಂತರಾಗಿದ್ದ ಕರಕ್ಕಟ್ಟಿದಂ ನಾಯನಾರ್ ಅವರು ಕುನ್ನತ್ತೂರು ಪಾಡಿ ನಡೆಸುವ ಹಕ್ಕನ್ನು ಪಡೆದರು ಎಂದು ಅದೇ ವಂಶದ ಕುನ್ನತ್ತೂರ್ ಪಾಡಿ ದೇವಾಲಯ ಟ್ರಸ್ಟ್ ಮುಖ್ಯಸ್ಥರು ನೆನಪಿಸಿಕೊಳ್ಳುತ್ತಾರೆ.

ಇದೀಗ ಹಬ್ಬ ಪ್ರಾರಂಭವಾಗಿದ್ದು ರಾತ್ರಿ ವೇಳೆ ಪೂಜಾ ವಿಧಿವಿಧಾನಗಳು ನೆರವೇರಲಿದ್ದು ಜನವರಿ 15ರವರೆಗೆ ಹಬ್ಬ ನಡೆಯಲಿದೆ. ಮುತ್ತಪ್ಪ ನಾಲ್ಕು ವಿಭಿನ್ನ ರೂಪಗಳನ್ನು ಧರಿಸುತ್ತಾನೆ. ಮೊದಲನೆಯದು ನಾದುವಾಳಿಸಂ ದೈವಂ ಎಂದು ಕರೆಯಲ್ಪಡುವ ಮುತ್ತಪ್ಪನ ಶಿಶು ರೂಪ. ದೇವರು ಬಿಲ್ಲು ಮತ್ತು ಬಾಣವನ್ನು ಆಯುಧವಾಗಿ ಹೊಂದಿದ್ದಾನೆ. ಎರಡನೆಯ ರೂಪ, ಪುತಿಯ ಮುತ್ತಪ್ಪನ್ ಎಂದು ಕರೆಯಲ್ಪಡುವವನು – ದೇವರನ್ನು ಚಿಕ್ಕ ಹುಡುಗನಾಗಿ ಗುರುತಿಸುತ್ತಾರೆ.. ನಂತರ ಪುರಾಣಕಲಾ ಮುತ್ತಪ್ಪನ್ ಎಂಬ ಮೂರನೇ ರೂಪ ಬರುತ್ತದೆ. ಮುಂದಿನದು ತಿರುವಪ್ಪನ್ ಎಂದು ಕರೆಯಲ್ಪಡುವ ಸಾಮಾನ್ಯ ರೂಪ. ಈ ರೂಪದಲ್ಲಿ ಮುತ್ತಪ್ಪನದು ಗಂಭೀರವಾಗಿದೆ. ವೇಷಧಾರಿ ಈ ನಾಲ್ಕು ರೂಪಗಳಲ್ಲಿ ನೃತ್ಯ ಮಾಡಬೇಕು.

ಇದೊಂದು ಅಪರೂಪದ ಆಚರಣೆ; ಜನಪದ ಮತ್ತು ಧಾರ್ಮಿಕ ಆಚರಣೆಯ ಅಪರೂಪದ ಸಮಾಗಮ.